UNIVERSAL LIBRARY
OU_202237
UNIVERSAL LIBRARY

ಶ್ರೀ ಗುರುದತ್ತಾತ್ರೇಯೋ ವಿಜಯತೇ.

# BHEEMAMAHIMADARSA

*(Life of Bheemasena with a short History of Mahabharata)*

BY

**M. V. CHANDRASEKHARA SASTRI**

ASSISTANT MASTER

HER HIGHNESS THE MAHARANI VANIVILAS

ARASU GIRLS' SCHOOL, MYSORE.

# ಭೀಮಮಹಿಮಾದರ್ಶ

## ಭಾರತಚರಿತ್ರೆ

ಮೈಸೂರು ಮಹಾರಾಜ್ಞಿ ವಾಣೀವಿಲಾಸ

ಅರಸು ಗರ್ಲ್ಸ್ ಬೋರ್ಡಿಂಗ್ ಸ್ಕೂಲ್ ಮಾಸ್ಟರು

ಎಂ. ವಿ. ಚಂದ್ರಶೇಖರ ಶಾಸ್ತ್ರಿಗಳವರಿಂದ

ರಚಿತವಾಗಿ ಪ್ರಚುರಗೊಳಿಸಲ್ಪಟ್ಟಿತು.

THIRD EDITION

MYSORE

PRINTED AT THE G. T. A. PRESS

1923

*All Rights Reserved.*

ಕ್ರಯ ೧೨ ಅಣೆ ] [PRICE 12 ANNAS.

# ಚಂದ್ರವಂಶಾನುಕ್ರಮಣಿಕೆ

೧. ಶ್ರೀಮನ್ಮಹಾವಿಷ್ಣು.
೨. ಚತುರ್ಮುಖ + [illegible]
೩. ಅತ್ರಿ + ಅನಸೂಯೆ.
೪. ಚಂದ್ರ + ತಾರೆ.
೫. ಬುಧ + ಇಳೆ.
೬. ಪುರೂರವ + ಊರ್ವಶಿ.
೭. ಆಯು + ಇಂದುಮುಖಿ
೮. ನಹುಷ + ಅಶೋಕಸುಂದರಿ.
೯. ಯಯಾತಿ + ಶರ್ಮಿಷ್ಠೆ
೧೦. ಪೂರು + ಕೌಸಲ್ಯೆ.
೧೧. ಜನಮೇಜಯ + ಸುನಂದೆ.
೧೨. ಪ್ರಾಚೀನರ್ವಾ + ವಪುಷ್ಮತಿ.
೧೩. ಶರ್ಯಾತಿ + ವರಾಂಗಿ
೧೪. ಅಹಂಪಾತಿ + ಭಾನುಮತಿ.
೧೫. ಸಾರ್ವಭೌಮ + ಸುಂದರಿ.
೧೬. ಜಯತ್ಸೇನ + ಸುಸುವೆ.
೧೭. ಅರಾಜನ + ಮರ್ಯಾದೆ.
೧೮. ಮಹಾಭೌಮ + ಸುಯಜ್ಞೆ.
೧೯. ಅಯುತನಾ + ಭಾಸೆ.
೨೦. ಅಕ್ರೋಧನ + ಕಂಡೂ.
೨೧. ದೇವಾತಿಥಿ + ಮರ್ಯಾದೆ.
೨೨. ಋಚ + ವಾಮದೇವಿ.
೨೩. ಋಕ್ಷ + ಜ್ವಲಂತಿ.
೨೪. ಅಂತಿನಾರ + ಸರಸ್ವತಿ.
೨೫. ತ್ರಸ್ಸು + ಕಾಳಿಂದಿ.
೨೬. ಇಲಲ + ರಥಂತರಿ
೨೭. ಜನಮೇಜಯ + ಲಕ್ಷ್ಮಣೆ.
೨೮. ದುಷ್ಯಂತ + ಶಕುಂತಲೆ.
೨೯. ಭರತ + ಕೈಕೇಯಿ.
೩೦. ಹುಮನ್ಯು + ಸುವರ್ಣೆ.
೩೧. ಸುಹೋತ್ರ + ಜಯಂತಿ.
೩೨. ಹಸ್ತಿ + ಯಶೋದೆ.
೩೩. ವಿಕುಂಜನ + ಸುಂದರೆ.
೩೪. ಅಜಮೀಢ + ನಳಿನಿ.
೩೫. ಋಕ್ಷ + ಋಕ್ಷೆ
೩೬. ಸಂವರಣ + ತಪತಿ.
೩೭. ಕುರು + ದಶಾರ್ಹೆ.
೩೮. ವಿದೂರಥ + ಸುಪ್ರಿಯೆ.
೩೯. ಅನಶ್ವ + ಅಮೃತೆ.
೪೦ ಪರೀಕ್ಷಿತ್ತು + ಸುವೇಷೆ.
೪೧. ಭೀಮಸೇನ + ಸುಕುಮಾರಿ.
೪೨. ಪ್ರತೀಪ + ಸುನಂದೆ.
೪೩. ಶಂತನು + ಸತ್ಯವತಿ.
೪೪. ವಿಚಿತ್ರವೀರ್ಯ + ಅಂಬಾಲಿಕೆ.
೪೫. ಪಾಂಡು + ಕುಂತಿ.
೪೬. ಭೀಮಸೇನ + ದ್ರೌಪದಿ.

ಶ್ಲೋಕ—ಧರ್ಮೋ ವಿವರ್ಧತಿ ಯುಧಿಷ್ಠಿರ ಕೀರ್ತನೇನ ।
ಪಾಪಂ ಪ್ರಣಶ್ಯತಿ ವೃಕೋದರ ಕೀರ್ತನೇನ ।
ಶತ್ರುರ್ವಿನಶ್ಯತಿ ಧನಂಜಯ ಕೀರ್ತನೇನ ।
ಮಾದ್ರೀಸುತೌ ಕಥಯತಾಂ ನ ಭವಂತಿ ರೋಗಾಃ ॥

ಮಂಗಳಮಸ್ತು.

Checked 1989

# ಅ ವ ತ ರ ಣಿ ಕೆ.

---

ಈ 'ಭೀಮಮಹಿಮಾದರ್ಶ ಭಾರತಚರಿತ್ರೆ' ಎಂಬ ಉಪಾಖ್ಯಾನವು ವ್ಯಾಸಕೃತ ಮಹಾಭಾರತ ಸೂರ್ಯಚಂದ್ರವಂಶಾನುಚರಿತ ಮುಂತಾದ ಪ್ರಾಚೀನ ಗ್ರಂಥಗಳ ಸಂಗ್ರಹವಾಗಿದೆ. ಭೀಮಸೇನನು ವಾಯುದೇವನ ಎರಡನೆಯ ಅವತಾರವೆಂಬುದು ಲೋಕಪ್ರಸಿದ್ಧವು ಭೀಮಸೇನನ ಜೀವನಚರಿತ್ರೆಯೊಡನೆ ಮಹಾಭಾರತದ ಮುಖ್ಯಸಂಗತಿಗಳನ್ನು ಸೇರಿಸಿ ಬರೆದಲ್ಲಿ ಕನ್ನಡಿಗರಿಗೆ ಉಪಯೋಗವಾದೀತೆಂದು, ಅದನ್ನು ಯಥಾಮತಿ ಬರೆದು ವಿದ್ಯಾಪಕ್ಷಪಾತಿಗಳ ಸನ್ನಿಧಿಗೆ ಅರ್ಪಿಸಿರುತ್ತೇನೆ. ಈ ಹೊತ್ತಗೆಯ ೧ನೆಯ ಅಧ್ಯಾಯದಲ್ಲಿ — ಭೀಮನು ಹುಟ್ಟಿ ಬೆಳೆದು ಬಲಿಷ್ಠನಾಗಿ, ಒದಗಿದ್ದ ವಿಪತ್ತುಗಳನ್ನೆಲ್ಲ ಪರಿಹರಿಸಿಕೊಂಡು ವಿವಾಹಿತನಾಗಿ ಸಂತಾನವನ್ನು ಪಡೆದು, ಸುಖವಾಗಿರುವ ವರೆಗಿನ ಆದಿಪರ್ವದ ಚರಿತ್ರೆಯೂ, ೨ನೆ ಅಧ್ಯಾಯದಲ್ಲಿ ರಾಜಸೂಯಯಾಗಾನಂತರ ಹಸ್ತಿನಾವತಿಗೆ ಹೋಗಿ ದ್ಯೂತದಲ್ಲಿ ಸೋತಅಣ್ಣನನ್ನನುಸರಿಸಿ ಅರಣ್ಯಕ್ಕೆ ಹೋಗಿದ್ದಾಗ ವನದಲ್ಲಿ ನಡೆದ ಸಂಗತಿಗಳೂ, ೩ನೆಯ ಅಧ್ಯಾಯದಲ್ಲಿ ಅಜ್ಞಾತವಾಸದ ವೃತ್ತಾಂತಗಳೂ, ೪ನೆಯ ಅಧ್ಯಾಯದಲ್ಲಿ ಸಂಧಿಕಾರ್ಯ ಮುಂತಾದ ವಿಚಾರಗಳೂ, ೫ನೆಯದರಲ್ಲಿ ಕುರುಕ್ಷೇತ್ರದಲ್ಲಿ ನಡೆದ ಯುದ್ಧಪ್ರಮೇಯಗಳೂ, ೬ನೆಯ ಆಶಯದಲ್ಲಿ ಮಿಕ್ಕಪರ್ವಗಳ ಸಂಕ್ಷೇಪಚರಿತ್ರೆಯೂ, ವಿವರಿಸಲ್ಪಟ್ಟಿದೆ. ಚಂದ್ರವಂಶಾನುಕ್ರಮಣಿಕೆಯನ್ನೂ ಪ್ರತ್ಯೇಕವಾಗಿ ಸೇರಿಸಿದೇನೆ. ಅಸಹಾಯಶೂರನಾದ ಭೀಮಸೇನನು ಅಗ್ರಜನಾದ ಆಂಜನೇಯನಂತೆ ಬ್ರಹ್ಮಚರ್ಯದಲ್ಲಿರದೆ, ಗೃಹಸ್ಥಾಶ್ರಮದಲ್ಲಿರುತ, ಭಗವಂತನಾದ ಶ್ರೀಕೃಷ್ಣನಿಗೆ ಪ್ರಿಯನಾಗಿದ್ದು ಶಿಷ್ಟಪರಿಪಾಲನಾರ್ಥವಾಗಿ ಜರಾಸಂಧಾದಿ ದುಷ್ಟರಾಜರನ್ನೂ ಬಕಾಸುರಾದಿ ದೈತ್ಯರನ್ನೂ ನಿಗ್ರಹಿಸಿ ಖ್ಯಾತಿಯಂ ಪಡೆದಿರುವನು. ಭೀಮಸೇನನ ಧೈರ್ಯಶೌರ್ಯೌದಾರ್ಯ ಸತ್ವಸಾಹಸ, ಪ್ರತಿಜ್ಞಾಪಾಲನ ವಿನಯಾದಿ ಸದ್ಗುಣಗಳು ಲೋಕಕ್ಕೆ ಮಾರ್ಗದರ್ಶಕಗಳಾಗಿವೆ. ...... ಈ ಗದ್ಯಗ್ರಂಥವನ್ನು ಓದುವವರಿಗೆ— ಧೈರ್ಯವೇ ಎಲ್ಲಕ್ಕೂ ಮೊದಲನೆಯ ಅವಲಂಬನವೆಂಬುದೂ, ಸರ್ವಪ್ರಕಾರದಿಂದಲೂ ಪ್ರತಿಜ್ಞಾಪಾಲನವು ಉತ್ತಮ ಧರ್ಮವೆಂಬುದೂ, ಗುರುಭಕ್ತಿ ದೈವಭಕ್ತಿಯುಳ್ಳವರಿಗೆ ವಿಪತ್ತುಗಳು ಒಂದರೂ ಬೇಗನೆ ತೊಲಗಿಹೋಗಿ, ಸುಖವು ಪ್ರಾಪ್ತಿಸುವುದೆಂಬುದೂ, ಎಂತಹ ಕಷ್ಟಕಾಲದಲ್ಲಿಯೂ ಸದಾಚಾರ ಸದ್ಗುಣಗಳನ್ನು ಬಿಡದಿರಬೇಕೆಂಬುದೂ, ಸ್ತ್ರೀಯರಿಗೆ ಪಾತಿವ್ರತ್ಯವು ಲೋಕಮಾನ್ಯತೆಯನ್ನು ತರುತ್ತದೆಂಬುದೂ — ವಿದಿತವಾಗುವುದು. ಕರ್ಣಾಟಕಭಾಷೆಯನ್ನು ಅಭಿವೃದ್ಧಿಪಡಿಸುವುದರಲ್ಲಿ ಬದ್ಧಾದರರಾಗಿರುವ ಮೈಸೂರು ಶ್ರೀಮನ್ಮಹಾರಾಜರ ಸರ್ಕಾರದವರು ಪಾಠಶಾಲೆಗಳಲ್ಲಿ ನೀತಿಪ್ರಧಾನವಾದ ಚರಿತ್ರೆಯಮೂಲಕ ಮತವಿಚಾರವು ವಿದ್ಯಾರ್ಥಿ

ಗಳ ಹೃದಯಗಳಲ್ಲಿ ಬೇರೂರಿ ಸನ್ಮಾರ್ಗಪ್ರವರ್ತಕರಾಗಿ ಬೆಳೆಯಲಿ—ಎಂದು ತಕ್ಕ ಏರ್ಪಾಡುಗಳನ್ನು ಮಾಡುತ್ತಿರುವುದರಿಂದ ಅವರ ಉದ್ದೇಶಕ್ಕೆ ಈ ಪುಸ್ತಕವೂ ಸೇರಿದರೆ ಕೃತಾರ್ಥನಾಗುವೆನು. ಇದನ್ನು ಪರಿಶೋಧಿಸುವುದರಲ್ಲಿ ಸಹಾಯಮಾಡಿದ ಅರಮನೆ ಆಸ್ಥಾನಪಂಡಿತರಾದ ಬ್ರಹ್ಮಶ್ರೀ ಚಾ|| ರಾಮಶಾಸ್ತ್ರಿಗಳಿಗೂ, ಇಲ್ಲಿನ ನಾರ್ಮಲ್‌ಸ್ಕೂಲ್ ಪಂಡಿತರಾದ ಬ್ರಹ್ಮಶ್ರೀ ಮೈಸೂರು ಸೀತಾರಾಮಶಾಸ್ತ್ರಿಗಳಿಗೂ ಅತ್ಯಂತ ಕೃತಜ್ಞನಾಗಿದೇನೆ. ಸಜ್ಜನರು ನನ್ನ ಇತರ ಗ್ರಂಥಗಳಿಗೆ ಪ್ರೋತ್ಸಾಹವನ್ನು ದಯಪಾಲಿಸಿರುವಂತೆ ಇದಕ್ಕೂ ಆಶ್ರಯವನ್ನು ಕೊಡಬೇಕಾಗಿ ಪ್ರಾರ್ಥನೆ.

ದೇವಿರಮ್ಮಣ್ಣಿ ಅಗ್ರಹಾರ,<br>ಸೌಮ್ಯ ಆಷಾಢ ಶು|| ೧೩ ಗು. 1909. } ಮೈಸೂರು ವಿದ್ಯಾರ್ಥಿ ಚಂದ್ರಶೇಖರಶಾಸ್ತ್ರಿ.

---

## ಎರಡನೆಯ ಮುದ್ರಣ.

ಈ ಪುಸ್ತಕವು ರಾಜಸೇವಾಧುರೀಣ ಸರ್ದಾರ್ ಎಂ. ಕಾಂತರಾಜ ಅರಸ್, ಬಿ.ಎ, ಸಿ.ಎಸ್.ಐ, ಯವರ ಪ್ರೋತ್ಸಾಹಬಲದಿಂದ ಮತ್ತೆ ಮುದ್ರಣಗೊಂಡಿತು. ಮೈಸೂರು ಸರ್ಕಾರದ ವಿದ್ಯಾಭ್ಯಾಸದ ಇಲಾಖಾಧ್ಯಕ್ಷರವರು ಇದನ್ನು ಮೊದಲು ಬಹುಮಾನ ಪುಸ್ತಕವನ್ನಾಗಿ ಗೊತ್ತುಮಾಡಿ, ಅನೇಕ ಪುಸ್ತಕಗಳನ್ನು ಕೊಂಡು ಪ್ರೋತ್ಸಾಹಿಸಿದರು. ಮಹಾಶಯರಾದ ಟೆಕ್ಸ್ಟುಬುಕ್ ಕಮಿಟಿಯವರು ಮೈಸೂರು ದೇಶದ ಹೈಸ್ಕೂಲ್‌ಗಳಲ್ಲೆಲ್ಲಾ ಪಾಠಪುಸ್ತಕವಾಗಿರುವಂತೆ ನಿಬಂಧನೆಮಾಡಿರುರುತ್ತಾರೆ. ಹೀಗೆ ಪ್ರಥಮಮುದ್ರಣಪ್ರಚಾರದಲ್ಲಿ ಪ್ರೋತ್ಸಾಹಿಸಿ, ೨ನೆಯ ಮುದ್ರಣಕ್ಕೆ ಅವಕಾಶವನ್ನುಂಟುಮಾಡಿದ ಮಹನೀಯರಿಗೆಲ್ಲ ಅತ್ಯಂತ ಕೃತಜ್ಞನಾಗಿರುತ್ತೇನೆ.

ಪಿಂಗಳ ವೈಶಾಖ ಶು|| ೫ ಗು. 1917. ಎಂ. ವಿ. ಚಂ

---

## ಮೂರನೆಯ ಮುದ್ರಣ.

ಈ ಮುದ್ರಣದ ಕ್ಷೇಮಮಹಿಮಾದರ್ಶದಲ್ಲಿ ಕೆಲವು ನೀತಿಶ್ಲೋಕಗಳನ್ನು ಸೇರಿಸಿ ಭಾಷೆಯನ್ನು ಸರಿಮಾಡಿರುತ್ತೆ. ಘನವನ್ನು ಹೊಂದಿದ ಶ್ರೀಮನ್ಮಹಾರಾಜಾ ಸರ್ಕಾರದ ಟೆಕ್ಸ್ಟ್‌ಬುಕ್ ಕಮಿಟಿಯವರು ಈ ವಚನಕಾವ್ಯವನ್ನು 1923-24 ನೆಯ ವರುಷಕ್ಕೆ V ಫಾರಂಗೆ ಪ್ರೋಸ್ ಟೆಕ್ಸ್ಟಾಗಿ ಗೊತ್ತುಮಾಡಿರುವುದರಿಂದ, ಕಮಿಟಿಯನ್ನು ವಂದಿಸಿ ಅತ್ಯಂತ ಕೃತಜ್ಞನಾಗಿದೇನೆ. ಮುಂದೆಯೂ ಹೀಗೆ ಮಹಾಶಯರ ಪ್ರೋತ್ಸಾಹ ಒದಗಿದಲ್ಲಿ ಗ್ರಂಥಕರ್ತನ ಶ್ರಮವು ಸಾರ್ಥಕವಾಗಿ ಇನ್ನೂ ನವೀನಗ್ರಂಥಗಳ ಪ್ರಚಾರಕ್ಕೆ ಅವಕಾಶವಾಗುವುದು.

ದೇವೀರಮ್ಮಣ್ಣಿ ಅಗ್ರಹಾರ ಮೈಸೂರು<br>ರುಧಿರೋದ್ಗಾರಿ, ಅಧಿಕಜ್ಯೇಷ್ಠ, 1923 } ಎಂ. ವಿ. ಚಂದ್ರಶೇಖರಶಾಸ್ತ್ರಿ.

॥ ಶ್ರೀರಸ್ತು ॥

# ಭೀಷ್ಮಮಹಿಮಾದರ್ಶ

## ಭಾರತಚರಿತ್ರೆ.

## ಅಧ್ಯಾಯ ೧.

ವೃತ್ತಂ ॥ ಆವಂ ಲೋಕಮನೆಲ್ಲಮಂ ಸೃಜಿಸುವಂ ಬ್ರಹ್ಮಾಖ್ಯೆಯಿಂದಂ ರಜೋ | ಭಾವಂಬೊರ್ದುತೆ ಸತ್ವಮೊಂದುತೆ ಪಳಂ ವಿಷ್ಣ್ವಾಖ್ಯೆಯಿಂದಂತದಂ ॥ ಕಾವಂ ತಾಂ ತಮಮೊತ್ತಗೊಂಡು ಹರಿಸಂ ರುದ್ರಾಖ್ಯೆಯಿಂದಾವಮಹಾ | ದೇವಂ ಕೃಷ್ಣನೃಪಂಗೆ ಸೀಡುಗೆ ಸಮಸ್ತಾಭೀಷ್ಟಸಂಸಿದ್ಧಿಯಂ ॥

ಸಕಲಮಹೀಮಂಡಲಕ್ಕೂ ಮಂಡನವೆನಿಸಿದ ಭರತಖಂಡವೆಂಬ ಪರ್ಬ್ಬಿಯದ್ವೀಪದ ರಾಜ್ಯಗಳಲ್ಲಿ ಖ್ಯಾತಿಪಟ್ಟ ಕುರುದೇಶದಲ್ಲಿ ಸಕಲ ಸಂಪದಗಳಿಗೂ ತೌರೂರಾದ ಹಸ್ತಿನಾವತಿಯೆಂಬ ರಾಜಧಾನಿಯಿದ್ದಿತು. ಅಲ್ಲಿ ಆಳಿದ ಚಂದ್ರವಂಶದ ನೃಪರಲ್ಲಿ ಪ್ರಖ್ಯಾತನಾದ ಪ್ರತೀಪನೆಂಬ ಮಹಾರಾಜನಿಗೆ ಸುನಂದೆಯೆಂಬ ಪಟ್ಟಮಹಿಷಿಯಲ್ಲಿ ಶಂತನುವೆಂಬ ಪುತ್ರನುದಯಿಸಿ ನರಪತಿಯಾಗಿದ್ದನು. ಆತನು ಮೃಗಯಾವಿಹಾರದಿಂದ ಅರಣ್ಯದಲ್ಲಿ ಸಂಚರಿಸುವಾಗ ಶಾಪಗ್ರಸ್ತೆಯಾಗಿದ್ದ ಗಂಗಾದೇವಿಯನ್ನು ವರಿಸಿದನು. ಆಕೆಯಲ್ಲಿ ಎಂಟನೆಯವಸುವಿನ ಅಂಶದಿಂದ ದೇವವ್ರತನೆಂಬ ಭೀಷ್ಮನು ಜನಿಸಿ ಶುಕ್ಲಪಕ್ಷದ ಚಂದ್ರನಂತೆ ವೃದ್ಧಿಯನ್ನೈದುತಿರ್ದನು. ಕೆಲವು ಕಾಲಾನಂತರ ಶಂತನುವು ತನ್ನಮಗನಾದ ಭೀಷ್ಮನ ವಿದ್ಯಾಬುದ್ಧಿನೈಪುಣ್ಯಕ್ಕೆ ಮೆಚ್ಚಿ ಯುವರಾಜಪದವಿಯನ್ನಿತ್ತು ಸಂತೋಷದಿಂದಿದ್ದನು. ಒಂದು ದಿನ ಶಂತನುವು ಯಮುನಾನದೀತೀರದಲ್ಲಿ ಸತ್ಯವತಿಯೆಂಬ ಕನ್ಯಕೆಯನ್ನು ನೋಡಿ, ಆಕೆಯನ್ನು ಮದುವೆಮಾಡಿಕೊಳ್ಳಬೇಕೆಂದು ಆಶಿಸಿ, ಆಕೆಯ

ತಂದೆಯಾಗ ದಾಶರಾಯನನ್ನು ಪ್ರಾರ್ಥಿಸಲು ; ಆತನು "ಈಕೆಯಲ್ಲಿ ಹುಟ್ಟುವ ಜ್ಯೇಷ್ಠಪುತ್ರನಿಗೆ ನಿನ್ನ ರಾಜ್ಯವನ್ನೀಯುವುದಾದರೆ, ಹಾಗೆ ಆಗಲಿ." ಎಂದನು. ಆದರೆ ಶಂತನುವು ತನ್ನ ಹಿರಿಯಮಗನಾದ ಭೀಷ್ಮನನ್ನು ಬಿಟ್ಟು, ಮತ್ತೊಬ್ಬ ಮಗನಿಗೆ ರಾಜ್ಯಸಂಪದವನ್ನೀಯುವುದು ಅನುಚಿತವೆಂದು ಚಿಂತಿಸಿ, ದಾಶರಾಜನ ಅಭಿಪ್ರಾಯವನ್ನು ಅನುಮತಿಸದೆ ಹಿಂತಿರುಗಿದರೂ, ಸತ್ಯವತಿಯಲ್ಲಿಟ್ಟ ಮನಸ್ಸನ್ನು ಹಿಂತಿರುಗಿಸಲಾರದಿದ್ದನು. ತಂದೆಯ ಅಭಿಪ್ರಾಯವನ್ನರಿತ ದೇವವ್ರತನು ಆ ದಾಶರಾಜನ ಬಳಿಗೆ ಹೋಗಿ "ನಾನು ಯಾವಜ್ಜೀವವೂ ಬ್ರಹ್ಮಚರ್ಯವನ್ನೇ ಕೈಕೊಂಡು, ನನ್ನ ತಂದೆಯಿಂದ ಈಕೆಯಲ್ಲಿ ಉದಯಿಸುವ ಪುತ್ರನಿಗೆ ಸಾಮ್ರಾಜ್ಯಾಧಿಪತ್ಯವನ್ನು ಒಪ್ಪಿಸುವ ವಿಷಯದಲ್ಲಿ ಶಪಥಮಾಡಿದೇನೆ." ಎಂದು ಹೇಳಿ ಆಕೆಯನ್ನು ತನ್ನ ತಂದೆಗೆ ಮದುವೆಮಾಡಿಸಿ ಆ ಬಲಿತಾಯಿಯ ಮೆಚ್ಚಿಕೆಗೆ ಪಾತ್ರನಾಗಿದ್ದನು. ಆಕೆಯಲ್ಲಿ "ಚಿತ್ರಾಂಗದ, ವಿಚಿತ್ರವೀರ್ಯ" ಎಂಬಿಬ್ಬರು ಪುತ್ರರು ಹುಟ್ಟಿ ಏಳಗೆಗೆ ಬರುತಿರುವಾಗ ಶಂತನುವು ಸ್ವರ್ಗಸ್ಥನಾದನು. ಚಿತ್ರಾಂಗದನು ಗಂಧರ್ವನೊಬ್ಬನ ಕೂಡ ಬಾಹುಯುದ್ಧವನ್ನು ಮಾಡಿ ಮಡಿದನು. ಇವನನುಜನಾದ ವಿಚಿತ್ರವೀರ್ಯನು ಭೀಷ್ಮನ ಬುದ್ಧಿಮಾರ್ಗವನ್ನನುಸರಿಸಿ ಸಮರ್ಥನಾಗಿ ರಾಜ್ಯವನ್ನಾಳುತ್ತಿದ್ದನು. ಗಾಂಗೇಯನಿಂದ ಗೆದ್ದುತರಲ್ಪಟ್ಟ ಕಾಶೀರಾಜನ ಪುತ್ರಿಯರಾದ ಮೂವರು ಕನ್ಯಕೆಯರಲ್ಲಿ "ಅಂಬಿಕಾ ಅಂಬಾಲಿಕಾ" ಎಂಬ ಇಬ್ಬರನ್ನು ವಿಚಿತ್ರವೀರ್ಯನು ಮದುವೆಯಾಗಿ ರಾಜಭೋಗಭಾಗ್ಯಗಳನ್ನು ಅನುಭವಿಸುತ ಸುಖವಾಗಿದ್ದನು. ಅಧಿರಾಜನಾದ ವಿಚಿತ್ರವೀರ್ಯನು ಕ್ಷಯರೋಗಪೀಡಿತನಾಗಿ ಗತಿಸಿದುದರಿಂದ ಭೀಷ್ಮನು ತಾಯಿಯ ಇಷ್ಟಾನುಸಾರ ಮದುವೆಯಾಗದಿದ್ದರೂ ರಾಜ್ಯವು ಅನ್ಯಾಕ್ರಾಂತವಾಗದಂತೆ ಕೆಲವು ಕಾಲ ರಾಜಕಾರ್ಯನಿರ್ವಾಹಕನಾಗಿದ್ದನು. ಸತ್ಯವತಿಯು ಕನ್ಯಾವಸ್ಥೆಯಲ್ಲಿ ಪರಾಶರಮಹರ್ಷಿಪ್ರಭಾವದಿಂದ ತನ್ನ ಗರ್ಭದಲ್ಲಿ ಜನಿಸಿದ ವೇದವ್ಯಾಸಯೋಗೀಂದ್ರನನ್ನು ಒಂದುದಿನ ಸ್ಮರಿಸಲು, ಕೂಡಲೆ ಆ ಮುನಿಯು ತನ್ನ ತಾಯಿಯಬಳಿಗೆಹೋಗಿ ವಂದಿಸಿದನು. ಮತ್ತು ಮಾತೃವಾಕ್ಯಪರಿಪಾಲನಾರ್ಥವಾಗಿ ಯುಗಾಂತರದಲ್ಲಿ ಧರ್ಮಶಾಸ್ತ್ರಸಮ್ಮತಿಯಿಂದ ಪ್ರಚಾರದಲ್ಲಿದ್ದ "ದೇವರೇಣಸುತೋತ್ಪತ್ತಿಃ" ಎಂಬ ವಚನಸಿದ್ಧವಾದ ಧರ್ಮವನ್ನನುಸರಿಸಿ, ಧೃತ

ವ್ರತೆಯಾದ ಅಂಬಿಕೆಯಲ್ಲಿ ಧೃತರಾಷ್ಟ್ರನೆಂಬ ಹುಟ್ಟುಕುರುಡನಾದ ಮಗನನ್ನೂ ಅಂಬಾಲಿಕೆಯಲ್ಲಿ ಬಿಳದಾದ ಶರೀರವುಳ್ಳ ಪಾಂಡುವೆಂಬ ಪುತ್ರನನ್ನೂ ಅಂಬಿಕಾ ಪ್ರೇಷಿತೆಯಾದ ದಾಸಿಯಲ್ಲಿ ವಿದುರನೆಂಬ ಕುಮಾರನನ್ನೂ ಉತ್ಪಾದಿಸಿದನು. ಆ ಮೂರುಮಂದಿ ಬಾಲಕರೂ ಗಾಂಗೇಯನಿಂದ ರಕ್ಷಿಸಲ್ಪಡುತ, ಧನುರ್ವೇದವನ್ನೂ ನೀತಿಶಾಸ್ತ್ರಗಳನ್ನೂ ಓದಿ ಪ್ರಧಾನವಾದ ಸಕಲ ವಿದ್ಯೆಗಳಲ್ಲಿಯೂ ಸಮರ್ಥರಾದರು. ಧೃತರಾಷ್ಟ್ರನು ಸುಬಲನೆಂಬ ಗಾಂಧಾರರಾಜನ ಪುತ್ರಿಯಾದ ಗಾಂಧಾರೀದೇವಿಯನ್ನೂ, ಪಾಂಡುಮಹಾರಾಜನು ಭೋಜನಂದಿನಿಯಾದ ಕುಂತೀದೇವಿಯನ್ನೂ, ಮದ್ರಪುತ್ರಿಯಾದ ಮಾದ್ರೀದೇವಿಯನ್ನೂ, ಮದುವೆಯಾಗಿ ಸುಖವಾಗಿದ್ದರು. ದಿವ್ಯಾಸ್ತ್ರಕೋವಿದನಾದ ಪಾಂಡುವು ದುಷ್ಟಪಾರ್ಥಿವರನ್ನೆಲ್ಲ ಸಮರದಲ್ಲಿ ಜಯಿಸಿ, ಬಹುಭಾಗ್ಯವನ್ನು ಸಂಪಾದಿಸಿ, ತನ್ನ ಅಗ್ರಜನಿಗೆ ಒಪ್ಪಿಸಿ, ಅತನಿಂದ ಅಶ್ವಮೇಧ ಮುಂತಾದ ಯಾಗಗಳನ್ನು ಮಾಡಿಸಿ ಉತ್ಸವಮೂರ್ತಿಯಂತೆ ಖ್ಯಾತನಾಗಿದ್ದನು

ಒಂದು ದಿನ ಪಾಂಡುರಾಜನು ಅರಣ್ಯದಲ್ಲಿ ಬೇಟೆಯಾಡುತಿರುವಾಗ, ಹರಿಣರೂಪದಿಂದ ವಿಹರಿಸುತಿರುವ ಮುನಿದಂಪತಿಗಳನ್ನು ಮರವೆಯಿಂದ ಕೊಂದನು. ಅವರು, ಪಾಂಡುವನ್ನು ಕುರಿತು „ ಎಲೈ ರಾಜನೇ, ನೀನು ನಿನ್ನ ಸತಿಯರೊಡನೆ ಬೆರೆದಾಗ ಸಾಯುವೆ." ಎಂದು ಶಾಪವನ್ನಿತ್ತು ಗತಪ್ರಾಣರಾದರು. ಆ ಬಳಿಕ ಪಾಂಡುವು ಚಿಂತಾಕ್ರಾಂತನಾಗಿ ವಿರಕ್ತಿಯಿಂದ ಸಕಲೈಶ್ವರ್ಯವನ್ನೂ ತೊರೆದು ಶತಶೃಂಗವೆಂಬ ಪರ್ವತದಲ್ಲಿ ಪತ್ನಿಯರೊಡನೆ ವಾಸವಾಗಿದ್ದನು. ಸಂತಾನವಿಲ್ಲದ ದುಃಖದಿಂದ ಕುಂತೀದೇವಿಯನ್ನು ಕುರಿತು "ಪ್ರಾಣಕಾಂತೆ, ಧರ್ಮವಿರುದ್ಧವಾಗದಂತೆ ವಂಶಾಭಿವೃದ್ಧಿಗೆ ಯೋಗ್ಯರಾದ ಪುತ್ರರನ್ನು ಪಡೆದು ಗತಿಯನ್ನು ಕಲ್ಪಿಸು." ಎಂದು ಬೆಸಗೆಯ್ದನು. ರಾಣಿಯು ಪತಿಯ ಆಜ್ಞಾನುಸಾರ, ದೂರ್ವಾಸಮುನಿಯ ಮಂತ್ರಪ್ರಭಾವದಿಂದ ಕಾಲಕ್ರಮವಾಗಿ ಯಮನಿಂದ ಯುಧಿಷ್ಠಿರನನ್ನೂ, ವಾಯುವಿನಿಂದ ಭೀಮಸೇನನನ್ನೂ, ದೇವೇಂದ್ರನಿಂದ ಅರ್ಜುನನನ್ನೂ ಪಡೆದಳು ಪತಿಪ್ರೇರಣೆಯಿಂದ ತನ್ನ ಸವತಿಗೂ ಉಳಿದ ಒಂದು ದಿವ್ಯಮಂತ್ರವನ್ನು ಉಪದೇಶಿಸಿದಳು. ಮಾದ್ರಿಯು ಅಶ್ವಿನೀದೇವತೆಗಳನ್ನಾರಾಧಿಸಿ ಅವರಿಂದ ನಕುಲಸಹದೇವರೆಂಬ ಯಮಳರನ್ನು ಹೆತ್ತಳು. ಇವರೈವರಲ್ಲಿ ಭೀಮ

ಸೇನನು ಶೋಭಕೃನ್ನಾಮಸಂವತ್ಸರದ ಫಾಲ್ಗುನಶುದ್ಧ ತ್ರಯೋದಶೀ ಗುರುವಾರ ಮಘಾನಕ್ಷತ್ರಯುಕ್ತವಾದ ಅಭಿಜಿನ್ಮುಹೂರ್ತದಲ್ಲಿ. ಸಿಂಹ ರಾಶಿಸ್ಥಿತನಾದ ಗುರುವು ಉಡುರಾಜನೊಂದಿಗೆ ಲಗ್ನಕೇಂದ್ರದಲ್ಲಿರುವಾಗ, ಸೂರ್ಯನು ಪೂರ್ವದಿಕ್ಕಿನಲ್ಲುದಯಿಸುವಂತೆ ಅವತರಿಸಿದನು ಆಗ ಲೋಕ ವೆಲ್ಲ ತಿಳಿಯುವಂತೆ "ಭೀಮಪರಾಕ್ರಮಿಯಾದ ಈ ಬಾಲಕನು ಸೂರ್ಯ ನಿಗೆ ಸಮವಾದ ತೇಜಸ್ಸುಳ್ಳವನೂ, ಸಮಸ್ತಲೋಕಗಳಲ್ಲಿಯೂ ಬಲಾಧಿ ಕನೂ, ಸಕಲಶತ್ರುಭಂಜಕನೂ ಆಗಿ, ಬುದ್ಧಿ, ಬಲ, ಯಶಸ್ಸು, ಧೈರ್ಯ, ಕಾಂತಿ, ಸಾಹಸ ಮುಂತಾದ ಸದ್ಗುಣಗಳಿಂದ ಲೋಕಪ್ರಸಿದ್ಧನಾಗುವನು" ಎಂದು ಅಶರೀರವಾಣಿಯು ಕೇಳಬಂದುದು. ಭೀಮಸೇನನು ಜನಿಸಿದ ರಾತ್ರಿ ಯೇ ಹಸ್ತಿನಾವತಿಯಲ್ಲಿ ಧೃತರಾಷ್ಟ್ರನಿಗೆ ಗಾಂಧಾರಿಯಲ್ಲಿ ದುರ್ಯೋಧನ ನೇ ಆದಿಯಾಗಿ ನೂರುಮಂದಿ ಪುತ್ರರೂ ದುಶ್ಶಳೆಯೆಂಬೊಬ್ಬ ಮಗಳೂ ಹುಟ್ಟಿದರು. ಆಗ ಭಯಂಕರವಾದ ಮಹೋತ್ಪಾತಗಳು ಕಂಡುಬಂದುದ ರಿಂದ, ದೈವಜ್ಞರು 'ದುರ್ಯೋಧನನನ್ನು ತ್ಯಜಿಸಿದರೆ ಲೋಕಕ್ಕೆ ಕ್ಷೇಮ ವಾಗುವುದು' ಎಂದು ಅಂಧನೃಪತಿಗೆ ಅರಿಕೆಮಾಡಿದರು. ಆ ದೊರೆಯು ಪುತ್ರಮೋಹದಿಂದ ಅದನ್ನು ಗಣನೆಗೆ ತಾರದೆಹೋದನು. ಕೌರವಪಾಂಡವ ರೊಳಗೆ ಈ ಚರಿತ್ರನಾಯಕನಾದ ಭೀಮಸೇನನೇ ಮಹಾಬಲಪರಾಕ್ರಮಶಾ ಲಿಯಾಗಿದ್ದನು

ಭೀಮಸೇನನು ಹುಟ್ಟಿದ ಹನ್ನೊಂದನೆಯದಿನ ಕುಂತೀದೇವಿಯು ಪುತ್ರನೊಡನೆ ಮಂಗಳಸ್ನಾನವನ್ನು ಮಾಡಿ ದೇವತಾದರ್ಶನಕ್ಕಾಗಿ ಶೈಲಾ ಗ್ರಕ್ಕೆ ಹತ್ತಿಹೋಗುವಾಗ ಭಯಂಕರವಾದ ಹೆಬ್ಬುಲಿಯೊಂದು ಆಹಾ ರಾರ್ಥವಾಗಿ ಸಂಚರಿಸುತ ಇವರಿಗಿದಿರಾಗಿ ಬಂದಿತು. ಒಡನೆ ಪಾಂಡುವು ಅದನ್ನು ಹೊಡೆದು ಕೆಡಹಿದರೂ, ಕುಂತೀದೇವಿಯು ಭಯಗ್ರಸ್ತಳಾದಳು, ಎತ್ತಿದ್ದ ಮಗುವು ಜಾರಿ ಕೆಳಗಿರುವ ಕಲ್ಲಿನಮೇಲೆ ಬೀಳಲು, ಆ ಕುಮಾ ರಕನ ದೇಹಸ್ಪರ್ಶದಿಂದ ಆ ಶಿಲೆಯು, ಸಿಡಿಲಿನ ಪೆಟ್ಟಿನಿಂದ ಪುಡಿಯಾಗು ವಂತೆ ತುಮುರುತುಮುರಾಗಿ ಹೋಯಿತು ! ಪಾಂಡುರಾಯನು ಅದನ್ನು ನೋಡಿ ಬಹು ಆಶ್ಚರ್ಯಗೊಂಡನು. ವಸುದೇವನಿಂದ ಕಳುಹಿಸಲ್ಪಟ್ಟಿದ್ದ ಕಾಶ್ಯಪನೆಂಬ ವಿಪ್ರವರ್ಯನ ಮೂಲಕ ಪಾಂಡುಕುಮಾರಕರೈವರಿಗೂ ಜಾತ ಕರ್ಮಾದಿಶುಭಕರ್ಮಗಳು ಸಾಂಗವಾಗಿ ನೆರವೇರಿದುವು. ಪಾಂಡವರು

ಪರಸ್ಪರ ವಯಸ್ಸಿನಲ್ಲಿ ಒಂದೊಂದುವರುಷ ಹೆಚ್ಚು ಕಡಿಮೆಯುಳ್ಳವರಾಗಿ ಜ್ಯೇಷ್ಠಕನಿಷ್ಠಭಾವವನ್ನು ಹೊಂದಿದ್ದರೂ, ಐವರೂ ಸಮಾನ ವಯಸ್ಕರಂತೆ ತೋರುತ ಬಾಲಕ್ರೀಡಾದಿಗಳಿಂದ ಸುಖವಾಗಿ ಬಳೆಯುತ್ತಿದ್ದರು. ಮಹಾರಾಜಲಕ್ಷಣರೂ ವಿಚಕ್ಷಣರೂ ಆದ ಪಾಂಡವರು ಶುಕ್ರಸ್ವಾಮಿಯೆಂಬ ಗುರುವಿನ ಮೂಲಕ ವಿದ್ಯಾಭಿವೃದ್ಧಿಯನ್ನು ಹೊಂದುತ ಅಮಾನುಷವಾದ ಕಲ್ಯಾಣಗುಣಗಳಿಂದ ಸಕಲಲೋಕಕ್ಕೂ ಆನಂದಕರರಾಗಿ ಏಳಗೆಗೆ ಬರುತ್ತಿದ್ದರು. ಸುಪ್ರೀತನಾಗಿದ್ದ ಪಾಂಡುವು ಒಂದು ದಿನ ಕಾಮಪೀಡಿತನಾಗಿ ಮಾದ್ರಿಯ ಸಂಗವನ್ನು ಮಾಡಿ ಋಷಿಶಾಪಬಲದಿಂದ ದೇಹಾವಸಾನವನ್ನು ಹೊಂದಲು, ಆಕೆಯು ಸಹಗಮನವನ್ನು ಮಾಡಿದಳು. ಅಲ್ಲಿದ್ದ ಮುನಿಗಳು ಪಾಂಡವರಿಂದ ಪಿತೃಮೇಧವನ್ನು ಮಾಡಿಸಿ ಬಳಿಕ ಅವರನ್ನು ಕುಂತಿಯೊಡನೆ ಗಜಪುರಿಗೆ ಕರೆದುಕೊಂಡು ಹೋಗಿ ಧೃತರಾಷ್ಟ್ರನಬಳಿಯಲ್ಲಿ ಬಿಟ್ಟು, " ಈ ಪಾಂಡುಪುತ್ರರನ್ನು ಚೆನ್ನಾಗಿ ರಕ್ಷಿಸು " ಎಂದು ಹೇಳಿ ಹೋದರು. ಆಗ ಭೀಮಸೇನನಿಗೆ ೧೪ ವರುಷ ವಯಸ್ಸಾಗಿದ್ದಿತು.

ಪಾಂಡವರು ಹಸ್ತಿನಾವತಿಯಲ್ಲಿ ತಮ್ಮ ತಂದೆಯ ಅರಮನೆಯಲ್ಲಿಯೇ ತಾಯಿಯೊಡನೆ ಇದ್ದುಕೊಂಡು, ಪಿತೃವ್ಯನ ಪ್ರೀತಿಗೆ ಪಾತ್ರರಾಗಿ ವರ್ಧಿಷ್ಣುಗಳಾಗುತ್ತಿದ್ದರು ಕೌರವರೂ ಪಾಂಡವರೂ ಜತೆಯಾಗಿ ವಿದ್ಯಾವ್ಯಾಸಂಗಮಾಡುತ, ಬಾಲಕ್ರೀಡಾದಿಗಳಲ್ಲಿ ಸಮಾನದಿಂದಿದ್ದರು. ಭೀಮನ ಬಾಲ್ಯವ್ಯಾಯಾಮವಿನೋದಗಳು ಅತ್ಯದ್ಭುತವಾಗಿದ್ದುವು. ವೇಗದಲ್ಲಿಯೂ, ಗುರಿತಪ್ಪದೆ ಎಸೆಯುವುದರಲ್ಲಿಯೂ, ಬಾಹುಯುದ್ಧದಲ್ಲಿಯೂ, ಧೂಳಿಕೇಳಿಯಲ್ಲಿಯೂ, ನೀರಿನೊಳಗೆ ಈಜುವುದರಲ್ಲಿಯೂ, ಇವನಿಗೆ ಈಡಾದವರು ಯಾರೂ ಇರಲಿಲ್ಲ. ಮತ್ತೇಭಗಳು ಸಿಕ್ಕಿದರೆ ಅವುಗಳೊಡನೆ ಲೀಲೆಯಾಡುತ ವಶವಾಗದಿದ್ದರೆ ನಾಲ್ಕು ಕಾಲುಗಳನ್ನೂ ಸೇರಿಸಿ ಹಿಡಿದುಕೊಂಡು ಬಿಸಾಡುತ್ತಿದ್ದನು. ಒಡನಾಡಿಗಳು ಹಣ್ಣುಗಳನ್ನು ಕೊಯ್ಯಬೇಕೆಂದು ಮರವನ್ನೇರಿದಾಗ ಅದರ ಬುಡವನ್ನೇ ಹಿಡಿದು ಅಲ್ಲಾಡಿಸುತ್ತಿದ್ದನು. ಅವರನ್ನೆಲ್ಲಾ ಆಟದಲ್ಲಿ ಸೋಲಿಸಿ ಕೌಂಕುಳಲ್ಲಿ ಔಕಿ ಬಂಧಿಸುತ್ತಿದ್ದನು. ಬಾಲ್ಯಚಾಪಲ್ಯದಿಂದ ತನ್ನ ಪೌರುಷವನು

ಕೌರವರಲ್ಲಿ ತೋರಿಸುತ್ತಿದ್ದರೂ ದ್ರೋಹಬುದ್ಧಿಯಿಲ್ಲದೆ ಸ್ನೇಹದಿಂದಲೇ ಇರುತ್ತಿದ್ದನು. ಆದರೆ ಬಾಲ್ಯದಲ್ಲಿ ನಡೆದ ಭೀಮನ ವಿನೋದಕೇಳಿಯು ಮಹಾನರ್ಥಕ್ಕೆ ಕಾರಣವಾದುದರಿಂದ, ಬಾಲಕರು ಆಟಕ್ಕಾದರೂ ತುಂಟಾಟ, ಹಾಸ್ಯ, ಕುಚೋದ್ಯ, ಎಂಬಿವುಗಳನ್ನು ಮಾಡಿ ಯಾರಮನಸ್ಸನ್ನೂ ನೋಯಿಸಬಾರದೆಂಬುದು ಸ್ಪಷ್ಟವಾಗುತ್ತದೆ. ಈ ಗುಣಾತಿಶಯವೆಲ್ಲ ದುರ್ಯೋಧನನಿಗೆ ಸಹ್ಯವಾಗದೆ, ಭೀಮನ ಭುಜಬಲವನ್ನು ನೋಡಿ ಹೇಗಾದರೂ ಅವನನ್ನು ಕೊಂದು ಯುಧಿಷ್ಠಿರಾದಿಗಳನ್ನು ಬಂಧನಕ್ಕೆ ಸಿಕ್ಕಿಸಿ, ಭೂಮಂಡಲವನ್ನೆಲ್ಲ ತಾನೇ ಆಳುತಿರಬೇಕೆಂದು ನಿಶ್ಚಯಿಸಿದನು. ಅದಕ್ಕಾಗಿ ಒಂದು ದಿನ ಗಂಗಾನದೀತೀರದಲ್ಲಿರುವ ಪ್ರಮಾಣಕೋಟ ಎಂಬ ಸ್ಥಳದಲ್ಲಿ ದಿವ್ಯವಾದ ಗುಡಾರಗಳನ್ನು ಹಾಕಿಸಿ, ಪಾಂಡವರೊಡನೆ ವಿಹರಿಸುತಿರಲು; ಭೀಮನು ವೃಕ್ಷಮೂಲದಲ್ಲಿ ಪವಡಿಸಿರುವಾಗ, ಯಾರೂ ಅರಿಯದಂತೆ ಅವನನ್ನು ಬಲವಾಗಿ ಕಟ್ಟಿಸಿ, ಪ್ರವಾಹದಲ್ಲಿ ಹಾಕಿಸಿದನು. ಭೀಮನು ಎಚ್ಚರಗೊಂಡು ಕಟ್ಟುಗಳನ್ನೆಲ್ಲ ಕಿತ್ತುಹಾಕಿ ತೀರಕ್ಕೆ ಈಜಿಕೊಂಡುಬಂದು ಒಂದು ಸ್ಥಳದಲ್ಲಿ ಮತ್ತೆ ನಿದ್ರೆಮಾಡುತ್ತಿದ್ದನು. ಮಾರನೆಯದಿನ ಕುರುಪಾಂಡವರು ಒಂದುಕಡೆ ಸೇರಿದರು. ಭೀಮಸೇನನಿಗೆ ಹಿಂದಿನ ದಿವಸ ದುರ್ಯೋಧನನಿಂದಾದ ಕೇಡು ಗೊತ್ತಾಗಲೇ ಇಲ್ಲ. ಕೌರವರು ಆಶ್ಚರ್ಯಗೊಂಡು ಯೋಚಿಸುತ್ತಿದ್ದರು.

ಮತ್ತೊಂದುದಿನ ಭೀಮನು ಮಲಗಿರುವಾಗ ಕೌರವನ ಕಡೆಯವರು ಘಟಸರ್ಪಗಳನ್ನು ತೆಗೆದುಕೊಂಡುಹೋಗಿ ಅವನನ್ನು ಕಚ್ಚುವ ಹಾಗೆ ಮಾಡಿದರು. ಅವು ಭೀಮನನ್ನು ಬಲವಾಗಿ ಕಚ್ಚಿ ಹರಿದಾಡುತಿರುವಾಗ, ಅವನು ಎಚ್ಚತ್ತವನಾಗಿ ಅವುಗಳ ವಿಷದಂತಗಳನ್ನು ಕಿತ್ತು ಓಡಿಸಿದನು. ದೇವತಾನುಗ್ರಹದಿಂದ ಭೀಮನಿಗೆ ವಿಷಮೂಲಕವಾದ ಅಪಾಯವೇನೂ ಸಂಭವಿಸಲಿಲ್ಲ. ದುರ್ಯೋಧನನು ತನ್ನ ಆಪ್ತಮಿತ್ರರೊಡನೆ ಯೋಚಿಸಿ, ಪಾಚಕರನ್ನು ಕರೆತರಿಸಿ “ಭೀಮನಿಗೆ ಬೇಗ ಯಮದರ್ಶನವಾಗುವಂತೆ, ಅವನ ಆಹಾರದಲ್ಲಿ ಕಾಲಕೂಟವಿಷವನ್ನು ಬೆರಸಿಕೊಡಿ” ಎಂದು ಬೆಸಸಿದನು. ಹಾಗೆ ಮಾಡಿ ತಂದಿತ್ತ ಮೃಷ್ಟಾನ್ನವನ್ನು ಭೀಮನು ಭುಂಜಿಸಿ, ಅಗಸ್ತ್ಯಮುನಿಯು ತನ್ನ ಜಠರದಲ್ಲಿ ವಾತಾಪಿ ಎಂಬ ದಾನವನನ್ನು ಜೀರ್ಣ

ಸಿಕೊಂಡಂತೆ ಜೀರ್ಣಿಸಿಕೊಂಡು, ಸುಖವಾಗಿಯೇ ಇದ್ದನು. ವಿಷಾನ್ನದಿಂದ ಲೂ ಯಾವಕೇಡನ್ನೂ ಹೊಂದದೆ, ಭಯಂಕರನಾಗಿಯೇ ಇರುತಿದ್ದ ಭೀಮ ನನ್ನು ನೋಡಿದ ದುರ್ಯೋಧನನು ಹೆದರಿ, ಬೇರೊಂದು ಉಪಾಯವನ್ನು ಮಾಡಲು ಯತ್ನಿಸಿದನು. ಕೌರವನು ವನವಿಹಾರದಲ್ಲಿ ಭೋಜನವನ್ನು ಮಾಡುವಾಗ, ಭೀಮನನ್ನು ಹತ್ತಿರ ಕುಳ್ಳಿರಿಸಿಕೊಂಡು, ಅತಿಪ್ರೇಮ ವನ್ನು ತೋರಿಸುವಂತೆ ತಾನೇ ಅವನ ಬಾಯಿಗೆ ಕಾಲಕೂಟವಿಷದೊಡ ಗೂಡಿದ ನಾನಾವಿಧವಾದ ಭಕ್ಷ್ಯಗಳನ್ನು ಸಮೃದ್ಧಿಯಾಗಿಕೊಟ್ಟು ವೃಕೋದರನಿಗೆ ಬೇಗನೆ ಮರಣಸಂಭವಿಸುವುದೆಂದು ನಿರೀಕ್ಷಿಸುತ್ತಿದ್ದನು. ಭೀಮನು ಕೌರವನ ಕಪಟವನ್ನರಿಯದೆ, ವಿಷಭಕ್ಷ್ಯಗಳನ್ನನೇಕವಾಗಿ ತಿಂದು ಶಯನಮಾಡಿದನು ! ಅದೇ ಸಮಯದಲ್ಲಿ ದುರ್ಯೋಧನನು ಭೀಮ ನನ್ನು ನೇಣುಗಳಿಂದ ಬಿಗಿಸಿ ದೇವನದಿಯ ಮಧ್ಯದಲ್ಲಿ ಬಲವಾಗಿ ನಡಿಸಿದ್ದ ಅತಿಕ್ರೂರವಾದ ಶೂಲಗಳಮೇಲೆ, ಎತ್ತಿಹಾಕಿಸಿದನು. ದೈವಯೋಗದಿಂದ ಭೀಮನು ಶೂಲಗಳ ಮೇಲೆ ಬೀಳದೆ ಸ್ವಲ್ಪ ಓರೆಯಾಗಿ ಜಲಪ್ರವಾಹದ ತುದಿಯನ್ನು ಮುಟ್ಟಿ ಪಾತಾಳದಲ್ಲಿರುವ ನಾಗಕುಮಾರಕರಮೇಲೆ ಬಿದ್ದನು. ಅಲ್ಲಿದ್ದ ಕ್ರೂರಸರ್ಪಗಳು ಭೀಮನನ್ನು ಕಚ್ಚಿದರೂ, ಅವನ ಉದರದಲ್ಲಿ ಸ್ಥಾವರವಿಷವಿದ್ದುದರಿಂದ, ಜಂಗಮವಾದ ಸರ್ಪವಿಷವು ಪ್ರತಿಹತವಾಯಿತು. ಭೀಮನು ನಿದ್ದೆಯಿಂದೆದ್ದು ಪಾಶಗಳನ್ನೆಲ್ಲ ಹರಿದುಕೊಂಡು, ಸುತ್ತಲಿ ರುವ ಸರ್ಪಗಳನ್ನೆಲ್ಲ ಕೊಂದನು. ಈ ಕಿಂವದಂತಿಯು ಸರ್ಪರಾಜನಿಗೆ ವಿದಿತವಾಯಿತು. ಅಲ್ಲಿ ಪಾಂಡವರ ಹಿರಿಯರಿಗೆ ಪರಮ ಮಿತ್ರನಾಗಿದ್ದ ಆರ್ಯಕನೆಂಬ ಉರಗಪ್ರಧಾನನ ವಾಕ್ಸಹಾಯದಿಂದ ಸರ್ಪರಾಜನು ಭೀಮ ನನ್ನು ಆದರಿಸಿ ದಿವ್ಯರಸಗಳನ್ನು ಕೊಡಿಸಿದನು. ಭೀಮನು ಎಂಟು ಕಲಶ ಗಳಲ್ಲಿದ್ದ ಆದಿವ್ಯರಸವನ್ನು ಪಾನಮಾಡಿ ಅದರ ಪ್ರಭಾವದಿಂದ ಹತ್ತುಸಾ ವಿರ ಆನೆಗಳಷ್ಟು ಬಲವುಳ್ಳವನಾಗಿ ಅಗ್ನಿಯಂತೆ ಪ್ರಕಾಶಿಸುತ್ತಿದ್ದನು ಅವನು ಎಂಟು ದಿನಗಳವರೆಗೂ ನಾಗಲೋಕದಲ್ಲಿಯೇ ಸುಖವಾಗಿದ್ದು ಅಮೃತರಸವನ್ನು ಜೀರ್ಣಿಸಿಕೊಂಡು, ಅವರು ಕೊಟ್ಟ ಪರಮಾನ್ನ ವನ್ನು ಬುಂಜಿಸಿ, ದಿವ್ಯ ಪುಷ್ಪಮಾಲೆಗಳಿಂದಲಂಕೃತನಾಗಿ ಅವರಿಂದ ಸನ್ಮಾನ ವನ್ನು ಹೊಂದಿ, ಭಾಗೀರಥಿಯಿಂದ ಹೊರಟು ಸ್ವಗೃಹಾಭಿಮುಖನಾದನು.

ಒಂಬತ್ತು ದಿನಗಳಿಂದ ಭೀಮನನ್ನಗಲಿದ ಯುಧಿಷ್ಠಿರಾದಿಗಳ ದುಃಖವು ಅನಿರ್ವಚನೀಯವಾಗಿದ್ದಿತು. ಕೌರವರುಮಾತ್ರ ಅತಿಸಂತೋಷದಿಂದ ಹಿಗ್ಗುತ್ತಿದ್ದರು. ಭೀಮನು ತನ್ನ ವಾಸಸ್ಥಾನಕ್ಕೆ ಹೋಗಿ ಅಣ್ಣನಿಗೂ ಜನನಿಗೂ ವಂದಿಸಿ ತನ್ನ ವೃತ್ತಾಂತವನ್ನೆಲ್ಲ ಹೇಳಿ ಆನಂದಗೊಳಿಸಿದನು, ಪುಟಕ್ಕಿಟ್ಟ ಬಂಗಾರದಂತೆ ಅತಿತೇಜಸ್ವಿಯಾಗಿದ್ದ ಭೀಮಸೇನನನ್ನು ಒಡಹುಟ್ಟಿದವರೂ, ತಾಯಿಯೂ. ನೋಡಿ ನೋಡಿ ಹರ್ಷಿತರಾಗಿದ್ದರು, ವಂಚಕನಾದ ದುರ್ಯೋಧನನು ಯಥಾಪ್ರಕಾರ ಭೀಮನನ್ನು ಕಂಡು ಹೊಟ್ಟೆಕಿಚ್ಚುಪಡುತ್ತಿದ್ದನು.

ಕೌಂತೇಯರು ಕೌರವರ ಮುಖ್ಯಮಂತ್ರಿಯಾದ ವಿದುರನ ಪ್ರೇರಣೆಯಿಂದ ದುರ್ಯೋಧನಾದಿಗಳ ಕಪಟಕೃತ್ಯಗಳನ್ನರಿಯದವರಂತೆ ಇರುತ, ಅವರೊಡನೆ ತಾವೂ ವಿಪ್ರವರ್ಯನಾದ ಕೃಪಾಚಾರ್ಯನಲ್ಲಿಯೂ, ಅಬಳಿಕ ಸುಪ್ರಸಿದ್ಧನಾದ ದ್ರೋಣಾಚಾರ್ಯನಲ್ಲಿಯೂ, ಸಾಂಗವಾಗಿ ಧನುರ್ವಿದ್ಯೆಯನ್ನು ಕಲಿಯುತ್ತಿದ್ದರು. ಆಗಲೂ ಭೀಮಸೇನನ ಕಾಯಶಕ್ತಿಯನ್ನೂ, ಅರ್ಜುನನ ಅಸ್ತ್ರಬಲವನ್ನೂ ನೋಡಿದ ಕೌರವರು ದುಷ್ಟಭಾವದಿಂದ ಅಸೂಯೆಯನ್ನೇ ತೋರುತಿದ್ದರು. ಒಂದು ಸಮಯದಲ್ಲಿ ರಾಜಾಜ್ಞೆಯಂತೆ ಪಾಂಡವ ಕೌರವಕುಮಾರಕರ ಧನುರ್ವಿದ್ಯಾಕೌಶಲ್ಯವು ಪರೀಕ್ಷಿಸಲ್ಪಡಬೇಕಾದಾಗ, ದುರ್ಯೋಧನ ಭೀಮಸೇನರಿಗೆ ಗದಾಯುದ್ಧವು ಪ್ರಾಪ್ತಿಸಿತು. ಇವರು ಪರಸ್ಪರ ಮಾತ್ಸರ್ಯದಿಂದ ತಂತಮ್ಮ ಭುಜಬಲಗಳಿಗೆ ತಕ್ಕಂತೆ ಎಡಬಲಗಳನ್ನು ಹೊಕ್ಕು, ಮಂಡಲಾಕಾರಗತಿವಿಶೇಷಗಳಿಂದ ತಿರುಗುತ, ಒಬ್ಬರನ್ನೊಬ್ಬರು ಕೊಲ್ಲಬೇಕೆಂಬ ಉತ್ಸಾಹದಿಂದ ಹೂಂಕರಿಸುತ, ಜಗಳವಾಡುವ ಸಂದರ್ಭದಲ್ಲಿ ಇವರ ದೆಸೆಯಿಂದ ಮತ್ತೇನಾದರೂ ಅನರ್ಥವುಂಟಾದೀತೆಂದು ದ್ರೋಣಾಚಾರ್ಯರು ಯೋಚಿಸಿ, ಶೀಘ್ರವಾಗಿ ಅವರ ಸಾಹಸವನ್ನು ಬಿಡಿಸಿದರು. ಮತ್ತೊಂದುದಿನ, ಅಸ್ತ್ರಾಚಾರ್ಯರು ಶಿಷ್ಯರನ್ನು ಕುರಿತು, "ನೀವು ಗುರುದಕ್ಷಿಣೆಯನ್ನೀಯಬೇಕೆಂದಿದ್ದರೆ, ರಾಜ್ಯಮದದಿಂದಿರುವ ದ್ರುಪದಮಹಾರಾಜನನ್ನು ಕೈಸೆರೆ ಹಿಡಿದುತಂದು ನನಗೆ ಒಪ್ಪಿಸಬೇಕು." ಎಂದು ನಿರೂಪಿಸಿದರು. ಕುರುಪಾಂಡವರು ಗುರ್ವಾಜ್ಞೆಯನ್ನು ಶಿರಸಾವಹಿಸಿ ಚತುರಂಗಸೇನೆಯೊಡನೆ ಹೊರಟು ಪಾಂಚಾಲದೇಶವನ್ನು ಮುತ್ತಿ ಕಾದಿದರು. ಎಲ್ಲರೂ ನೋಡುತ್ತಿರುವಾಗ ಭೀಮಾರ್ಜುನರು ತಮ್ಮ ಶೌರ್ಯದಿಂದ

ದ್ರುಪದರಾಜನನ್ನು ಹಿಡಿದುಕೊಂಡುಹೋಗಿ ದ್ರೋಣಾಚಾರ್ಯನ ವಶಮಾಡಲು; ಆಚಾರ್ಯನು ಆ ದೊರೆಯಿಂದ ಪ್ರತಿವರ್ಷವೂ ಕರದ್ರವ್ಯವು ಬರುವಂತೆ ಸಂಧಿಮಾಡಿಕೊಂಡು. "ನೀನು ಉನ್ನತಪದವಿಯಲ್ಲಿದ್ದ ಮಾತ್ರಕ್ಕೆ ನಿನ್ನ ಸಹಾಧ್ಯಾಯಿಯಾದ ನನ್ನನ್ನು ಬಡಬ್ರಾಹ್ಮಣನೆಂದು ಭಾವಿಸಿ ಸ್ನೇಹವನ್ನೂ ಮರೆತು, ಪ್ರೀತಿಯಿಂದ ಕಾಣದೆ ಬಂದುವೇಳೆ ನನಗೆ ಅವಮಾನ ಮಾಡಿದ್ದಯಾದಕಾರಣ ಹೀಗೆ ಮಾಡಿಸಿದೆನು" ಎಂದು ಬುದ್ಧಿಹೇಳಿ ಕಳುಹಿಸಿದನು. ಲಜ್ಜಾಕ್ರಾಂತನಾದ ಪಾಂಚಾಲದೇಶಾಧಿಪತಿಯು ದ್ರೋಣನನ್ನು ಕೊಲ್ಲುವಂತಹ ಪುತ್ರನನ್ನೂ, ಪಾರ್ಥನನ್ನು ಮದುವೆಯಾಗುವುದಕ್ಕೆ ಅರ್ಹಳಾದ ಪುತ್ರಿಯನ್ನೂ, ಪಡೆದು, ತನ್ನ ಅವಮಾನವ್ಯಸನವನ್ನು ಪರಿಹರಿಸಿಕೊಳ್ಳಬೇಕೆಂದೆಣಿಸಿ, ಮಂತ್ರಸಿದ್ಧನಾದ ಯಾಜನೆಂಬ ಮಹರ್ಷಿಯ ವಿಧಾನವನ್ನನುಸರಿಸಿ, ಪುತ್ರಕಾಮೇಷ್ಟಿಯನ್ನು ಮಾಡಿ ಪಾವಕನ ಪ್ರಸಾದದಿಂದ ಧೃಷ್ಟದ್ಯುಮ್ನನೆಂಬ ಪುತ್ರನನ್ನೂ ಭಂಗಾರದ ಬೊಂಬೆಯಂತೆ ಥಳಥಳಸುತಿದ್ದ ದ್ರೌಪದೀದೇವಿ ಎಂಬ ಕುಮಾರಿಯನ್ನೂ ಅಗ್ನಿಕುಂಡದಲ್ಲಿ ಪಡೆದು ಸುಖವಾಗಿದ್ದನು.

ಭೀಮಸೇನನು ಸಹೋದರರೊಡನೆ ರಣಧೀರನಾಗಿ ವೃದ್ಧಿಗೆ ಬರುತಿರುವುದನ್ನು ಕೌರವನು ಸಹಿಸಲಾರದೆ ಕಳಿಂಗನೀತಿಯನ್ನು ಚೆನ್ನಾಗಿ ಕೇಳಿ, ತನ್ನ ತಂದೆಯೊಡನೆ, ಪಾಂಡವರಿಂದ ತಮಗೆ ತಪ್ಪದೆ ಅಪಾಯವು ಬರುವುದೆಂದು ಯೋಚಿಸಿ, ಅದಕ್ಕೆ ತಕ್ಕ ಪರಿಹಾರವನ್ನು ಚಿಂತಿಸಿದನು. ಕುಂತೀದೇವಿಯು ಕನ್ಯೆಯಾಗಿರುವಾಗಲೇ ಜಗನ್ಮಿತ್ರನಾದ ಸೂರ್ಯನ ಪ್ರಸಾದದಿಂದ ಲಭಿಸಿದ ಕರ್ಣನೆಂಬ ಪುತ್ರನನ್ನು ಪೆಟ್ಟಿಗೆಯಲ್ಲಿಟ್ಟು ಪ್ರವಾಹದಲ್ಲಿ ಬಿಟ್ಟಳಷ್ಟೆ. ಅದು ಒಬ್ಬ ಬೆಸ್ತನಿಗೆ ಸಿಕ್ಕಿತು. ಅವನ ಪತ್ನಿಯಾದ ರಾಧೆ ಎಂಬವಳು ಆ ಪೆಟ್ಟಿಗೆಯಲ್ಲಿದ್ದ ಕವಚಕುಂಡಲಧನುಸ್ಸುಗಳೊಡನೆ ದೇದೀಪ್ಯಮಾನನಾಗಿರುವ ಬಾಲಕನಾದ ಕರ್ಣನನ್ನು ಸಾಕಿ ವೃದ್ಧಿಗೆ ತಂದಳು. ಅದರಿಂದ ಕರ್ಣನು ರಾಧೇಯನೆಂದು ಪ್ರಸಿದ್ಧನಾಗಿ ತನ್ನ ಅಸ್ತ್ರವಿದ್ಯಾಪರಾಕ್ರಮಾದಿಗಳನ್ನು ತೋರಿಸಿ, ದುರ್ಯೋಧನನ ಮೆಚ್ಚಿಕೆಗೆ ಪಾತ್ರನಾಗಿ, ಕೌರವರ ಶತ್ರುಗಳೇ ತನ್ನ ಶತ್ರುಗಳೆಂದು ಹೇಳುತಲಿದ್ದು ಕೊನೆಗೆ ಪ್ರಭುಪ್ರೀತಿಯಿಂದ ಅಂಗದೇಶಾಧಿಪತಿಯಾದನು. ಧೃತರಾಷ್ಟ್ರನು

ಭೀಷ್ಮದ್ರೋಣಾದಿಗಳ ಅಜ್ಞೆಯನ್ನು ಮೀರಲಾರದೆ, ಸದಾಚಾರಸದ್ವೃತ್ತಿಗಳಿಂದ ತಂದೆಗಿಂತಲೂ ಅಧಿಕನೆನಿಸಿದ ಧರ್ಮರಾಯನಿಗೆ ಯುವರಾಜ್ಯಪಟ್ಟಾಭಿಷೇಕವನ್ನು ಶಾಸ್ತ್ರೀಯವಾಗಿ ಮಾಡಿಸಿದನು. ಅದರಿಂದ ಪ್ರಜೆಗಳಿಗೆ ಉಂಟಾದ ಆನಂದವು ಅಪಾರವಾಗಿದ್ದಿತು. ಆ ಬಳಿಕ ಭೀಮಸೇನನು ದ್ವಾರಕಿಗೆ ಹೋಗಿ ಬಲರಾಮನ ಹತ್ತಿರ ಒಂದುವರ್ಷ ಗುರು ಶುಶ್ರೂಷೆಯನ್ನು ಮಾಡುತ್ತಿದ್ದು ಖಡ್ಗಯುದ್ಧದಲ್ಲಿಯೂ, ರಥಯುದ್ಧದಲ್ಲಿಯೂ, ಗದಾಯುದ್ಧದಲ್ಲಿಯೂ, ಅಭ್ಯಾಸಾತಿಶಯದಿಂದ ವಿಶೇಷವಾದ ಬುದ್ಧಿನೈಪುಣ್ಯವನ್ನು ಪಡೆದು ಅತ್ಯಂತಸಮರ್ಥನಾದನು. ಕೂಡಲೆ ಭೀಮನು ಸಹೋದರರೊಡನೆ ಸೇರಿ ಅತಿಸೌಹಾರ್ದದಿಂದ ಸುಖವಾಗಿದ್ದುಕೊಂಡು ರಾಜಕಾರ್ಯಪ್ರವೀಣನಾಗುತ್ತಿದ್ದನು.

ದುರ್ಯೋಧನನು ಪಾಂಡವರನ್ನು ವ್ಯಾಜಾಂತರದಿಂದ ಕೊಲ್ಲಿಸಬೇಕೆಂದು ವಾರಣಾವತವೆಂಬ ಪಟ್ಟಣದಲ್ಲಿ ಬೆಂಕಿಯು ಸೋಕಿದ ಒಡನೆ ಹತ್ತಿಕೊಳ್ಳುವಂತೆ, ಕರ್ಪೂರ ಮೇಣ ಅರಗು ಹುಲ್ಲು ಮುಂತಾದವುಗಳಿಂದ ಅರಗಿನ ಮನೆಯೊಂದನ್ನು ಕಟ್ಟಿಸಿದನು, ಅದು ಬಹುವಸತಿಯುಳ್ಳದಾಗಿಯೂ ರಮಣೀಯವಾಗಿಯೂ ದೇವೇಂದ್ರಭವನದಂತೆ ಕಂಗೊಳಿಸುತಿದ್ದಿತು. ಅಲ್ಲಿ ಪಾಂಡವರು ವಾಸವಾಗಿರುವುದಕ್ಕೆ ಕಾರಣವೊಂದೇರ್ಪಟ್ಟಿತು. ಅದೇನೆಂದರೆ:—ಧೃತರಾಷ್ಟ್ರರಾಜನು ಪಾಂಡವರನ್ನು ಕರೆಯಿಸಿ ‘ ಎಲೈ ಯುಧಿಷ್ಠಿರನೇ, ವಾರಣಾವತಪಟ್ಟಣದಲ್ಲಿ ಈಗ ನಡೆಯಬೇಕಾದ ದೇವತೋತ್ಸವಗಳನ್ನು ಆಗಮಾಡಿಸಿಬರಲು, ಸಹೋದರರೊಡನೆ ನೀನು ಅಲ್ಲಿಗೆ ಹೋಗಿದ್ದು ಬಾ. ಸಕಲ ರಾಜೋಪಕರಣಗಳೂ ಸಿದ್ಧವಾಗಿವೆ. ’ ಎಂದು ಬೆಸಸಿದನು. ಅದನ್ನಂಗೀಕರಿಸಿದ ಧರ್ಮರಾಯನು ಗುರುಹಿರಿಯರ ಅಣತಿಯನ್ನು ಪಡೆದು, ಸೋದರರನ್ನೂ ಜನನಿಯನ್ನೂ ರಮ್ಯವಾದ ತನ್ನ ರಥದಲ್ಲಿ ಕುಳ್ಳಿರಿಸಿಕೊಂಡು ಪ್ರಯಾಣಹೊರಟನು. ಜತೆಯಲ್ಲಿ ಸ್ವಲ್ಪದೂರದವರೆಗೆ ಬಂದಿದ್ದ ಅಭಿಜ್ಞನಾದ ವಿದುರನು ಹೇಳಿದ ಪ್ರಾಣಸಂರಕ್ಷಣೋಪಾಯಗಳನ್ನು ಕೇಳಿ, ಕೌರವರ ಮೋಸದ ಕೃತ್ಯಕ್ಕೆ ವಿಷಾದಿಸುತ, ಭೀಷ್ಮನ ಸಂಗಡ ಆ ಸಂಗತಿಯನ್ನು ಹೇಳಿ, ರೋಹಿಣೀನಕ್ಷತ್ರಯುಕ್ತವಾದ ಫಾಲ್ಗುನಶುದ್ಧಾಷ್ಟಮೀ ಶುಭದಿನ ವಾರಣಾವತದಲ್ಲಿರುವ ಜತುಗೃಹ

ವನ್ನು ಪ್ರವೇಶಿಸಿ ವಾಸವಾಗಿದ್ದನು. ಆಗ ಭೀಮನಿಗೆ ೧೬ನೆಯ ವರುಷ ನಡೆಯುತಿದ್ದಿತು. ರಾಜ್ಯಲೋಭಪರವಶನಾದ ದುರ್ಯೋಧನನ ವಂಚನೆಗೆ ಸಿಕ್ಕಿ ಪೇಚಾಡುತಲಿರುವ ಧರ್ಮರಾಯನು, ತಾವು ಇರುವ ಮನೆಗೆ ಬೆಂಕಿಯನ್ನು ಹೊತ್ತಿಸಿ ಉಪಾಯದಿಂದ ತಪ್ಪಿಸಿಕೊಂಡು ಹೋಗುವುದಕ್ಕೆ ಭೀಮನ ಸಂಗಡ ಆಲೋಚಿಸಿದನು. ಆತನು ಅಗ್ರಜನನ್ನು ಕುರಿತು—' ಅಣ್ಣಯ್ಯ, ನಾವು ಮತ್ತೆ ಗಜಪುರಿಗೆ ಹೋಗಿರೋಣ. ಅಲ್ಲಿ ಏನಾದರೂ ಕೌರವರ ಹಿಂಸೆ ಹೆಚ್ಚಿಬಂದರೆ, ನಾವು ಯುದ್ಧಮುಖದಲ್ಲಿ ಅವರನ್ನು ಜಯಿಸಿ ಪಿತ್ರಾರ್ಜಿತವಾದ ರಾಜ್ಯವನ್ನು ಪಡೆಯೋಣ. ನಮಗೆ ಜಗತ್ಪೂಜ್ಯನಾದ ವಾಸುದೇವನ ರಕ್ಷಣೆಯೂ, ಮಹಾಬುದ್ಧಿಶಾಲಿಯಾದ ವಿದುರನ ಸಾಹಾಯ್ಯವೂ ತಪ್ಪದೇ ಇರುವುದು ' ಎಂದು ಅರಿಕೆಮಾಡಿದುದಕ್ಕೆ, ಧರ್ಮರಾಯನು—ಈಗ ಹಾಗೆ ಮಾಡಬಾರದು. ದುರ್ಯೋಧನನ್ನು ವಂಚಿಸಿ ಅಗ್ನಿಭಯವನ್ನು ತಪ್ಪಿಸಿಕೊಂಡು ಹೋಗೋಣ—ಎಂದು ಭೀಮನಿಗೆ ಹೇಳುತಿರುವಾಗ ಮಹಾಶಯನಾದ ವಿದುರನಿಂದ ಕಳುಹಿಸಲ್ಪಟ್ಟ ಬುದ್ಧಿವಂತನಾದ ಕನಕನೆಂಬ ಬಡಗಿಯು ಬಂದು, ಅರಗಿನಮನೆಯ ಮಧ್ಯದಲ್ಲಿ ಒಂದು ಮಾರ್ಗವನ್ನು ಕಲ್ಪಿಸಿ ಅಲ್ಲಿಂದ ಪಾಂಡವರು ತಪ್ಪಿಸಿಕೊಂಡು ಹೋಗುವಂತೆ ಸ್ವಲ್ಪದೂರ ಕನ್ನವನ್ನು ಕೊರೆದು ಅದು ಯಾರಿಗೂ ಗೊತ್ತಾಗದಂತೆ ಮಾಡಿಟ್ಟನು. ಪಾಂಡವರು ಆ ಊರಿನಲ್ಲಿರುವಾಗ ಪ್ರಜಾಪಾಲಕರಿಗೂ, ಜನರಿಗೂ ತಮ್ಮ ಪ್ರೀತಿ ವಿಶ್ವಾಸಾದಿಗಳನ್ನು ತೋರಿಸುತ, ಸರ್ವರಿಂದಲೂ ಮೆಚ್ಚಿಸಿಕೊಂಡು ಆರು ತಿಂಗಳವರೆಗೂ ಸುಖವಾಗಿದ್ದರು. ಅರ್ಧರಾತ್ರಿಸಮಯದಲ್ಲೊಂದುದಿನ ಭೀಮನು ಯುಧಿಷ್ಠಿರಾದಿಗಳನ್ನು ಸುರಂಗಮಾರ್ಗದಲ್ಲಿ ಮುಂಚಿತವಾಗಿ ಕಳುಹಿಸಿ, ಒಬ್ಬ ಬೇಡಿತಿಯು ತನ್ನ ಐವರು ಪುತ್ರರೊಂದಿಗೆ ಮದ್ಯಪಾನದಿಂದ ಮತ್ತಳಾಗಿ ಆ ಅರಮನೆಯ ಬೇರೊಂದುಕಡೆ ಬಿದ್ದಿರುವುದನ್ನು ತಿಳಿಯದೆ, ಕೌರವನ ಮಂತ್ರಿಯಾದ ಪುರೋಚನನು ಪಾಂಡವನಿವಾಸಕ್ಕೆ ಬೆಂಕಿಯನ್ನು ಹೊತ್ತಿಸುವುದಕ್ಕೆ ಮುಂಚೆ, ತಾನೇ ಆ ಜತುಗೃಹಕ್ಕೆ ಅಗ್ನಿಪ್ರತಿಷ್ಠೆಯನ್ನು ಮಾಡಿ,—ದೀವಿಗೆಯು ಹೆಚ್ಚಾಗಿ ಉರಿದು, ರಾಜಭವನವು ಹೊತ್ತಿಕೊಂಡಿತು—ಎಂಬ ಸಂದೇಹವನ್ನುಂಟುಮಾಡಿ, ಸುರಂಗಮಾರ್ಗದಿಂದ ಆಚೆ ಇರುವ ತನ್ನ ತಾಯಿಯನ್ನು ಮತ್ತು ಸೋದರರನ್ನು ಬೇಗನೆ ಸೇರಿ ಅವರ

ನ್ನೂ ಕರೆದುಕೊಂಡು ಶೀಘ್ರವಾಗಿ ಮುಂದಕ್ಕೆ ಹೋದನು. ಆಕಸ್ಮಿಕವಾಗಿ ಹುಟ್ಟಿದ ಸುಂಟರಘಾಳಿಯದೆಸೆಯಿಂದ ಯಜ್ಞಪುರುಷನು ಆ ಲಾಕ್ಷಾಗೃಹವನ್ನೆಲ್ಲ ಚೆನ್ನಾಗಿ ಸುಡುತ ವಿಜೃಂಭಿಸಿದನು! ಪುರವಾಸಿಗಳು ಅದನ್ನು ಕಂಡು, ಬೆದರಿ ವಿಷಾದಿಸುತಿದ್ದರು. ಇರುಳದು ಹಗಲೆನ್ನುವರೀತಿ ಉರಿಯುತ, ಬಹುದೂರದವರೆಗೂ ಆ ಕಿಚ್ಚು ಹಬ್ಬಿ ಬಂದಿತು. ಮಾರನೆಯದಿನ ಬೆಂಕಿಯನ್ನು ಆರಿಸಿ ಶೋಧಿಸುವಾಗ ಒಬ್ಬ ಹೆಂಗಸು, ಐದುಮಂದಿ ಗಂಡಸರು ಬೆಂದಿರುವದನ್ನು ಕಂಡು, ಕುಂತಿಯು ಕುಮಾರಕನೊಡನೆ ಸುಟ್ಟುಹೋಗಿರುವಳೆಂದು ಪುರೋಚನನು ನಿಶ್ಚಯಿಸಿ, ಮೋದಗೊಂಡು, ಆ ವೃತ್ತಾಂತವನ್ನು ಕುರುಮಹೀಪಾಲನಿಗೆ ಅರಿಕೆಮಾಡುವುದಕ್ಕಾಗಿ ಆಪ್ತರಾದ ನಿಯೋಗಿದಳನ್ನು ಕಳುಹಿಸಿದನು. ಕೌರವರು ಆ ಸಂತೋಷದ ಸುದ್ದಿಯನ್ನು ಕೇಳಿ, ಶತ್ರುನಾಶವಾಯಿತೆಂದು ಮನದಲ್ಲಿ ಆನಂದಗೊಂಡು ಬಹಿಃ ದುಃಖವನ್ನು ತೋರಿಸಿ, ಅವರಿಗೆ ಗಂಗಾತೀರದಲ್ಲಿ ಉದಕಕ್ರಿಯೆಗಳನ್ನು ಮಾಡಿಸಿ ನಿರಾತಂಕರಾಗಿದ್ದರು. ಭೀಷ್ಮನು ಮಾತ್ರ ಪಾಂಡವರನ್ನು ಕುರಿತು ಅತಿಯಾಗಿ ಹಂಬಲಿಸುತಿದ್ದನು.

ಇತ್ತಲು ಭೀಮಸೇನನು ನಿದ್ರಾಭಾರದಿಂದಿರುವ ತನ್ನ ತಾಯಿಯನ್ನೂ ಸೋದರರನ್ನೂ ಎತ್ತಿಕೊಂಡು ವಾಯುವೇಗದಿಂದ ಹೋಗುತ, ಒಂದು ಗಾವುದ ದಾರಿ ನಡೆದು ಗಂಗಾತೀರವನ್ನು ಸೇರಿ, ಅಲ್ಲಿ ವಿದುರನ ಆಜ್ಞೆಯಂತೆ ಸಿದ್ಧವಾಗಿದ್ದ, ಓಡೆಯನ್ನೇರಿ ಭಾಗೀರಥೀ ನದಿಯನ್ನು ದಾಟಿ ಆ ನಿಶಿಯಲ್ಲೇ ಮುಂದಕ್ಕೆ ಹೊರಟು, ಭಯಂಕರವಾದ ಕಾಡಿನಲ್ಲಿ ಸೇರಿ ಕ್ಷುತ್ಪಿಪಾಸಾದಿಗಳಿಂದ ಕಂಗೆಟ್ಟು ವಂಚಕನಾದ ಪುರೋಚನನು ಎಲ್ಲಿ ಬರುವನೋ ಎಂದು ಮುಂದುಮುಂದಕ್ಕೆ ಹೋಗುತಿರಲು ; ಯುಧಿಷ್ಠಿರಾದಿಗಳು ಸ್ವಲ್ಪದೂರವೂ ನಡೆಯಲಾರದೆ, ಮರಳಿ ಭೀಮನು ತಮ್ಮನ್ನು ಎತ್ತಿಕೊಂಡು ಹೋಗಬೇಕೆಂದು ಅಪೇಕ್ಷಿಸಿದರು. ಅವನು ಅವರೈವರನ್ನೂ ಕಾಂಕುಳಲ್ಲಿಯೂ, ಭುಜಶಿರಸ್ಸುಗಳಮೇಲೂ ಕುಳ್ಳಿರಿಸಿಕೊಂಡು ದಾಪುಹೆಜ್ಜೆಯನ್ನಿಡುತ ಹೋಗುತಿರಲು ; ಆತನ ತೊಡೆಗಳ ವೇಗದಿಂದ ಹುಟ್ಟಿದ ವಾಯುವೂ, ಅವನ ಭುಜಬಲಗಳದೆಸೆಯಿಂದ ಹುಟ್ಟಿದ ಚಂಡಮಾರುತವೂ ವೃಕ್ಷಾದಿಗಳನ್ನೆಲ್ಲ ಪುಡಿಪುಡಿಮಾಡುತ ಮಹಾಧ್ವನಿಯನ್ನುಂಟುಮಾಡಿತು.

ಬೆಳಗಿನ ಜಾವದಹೊತ್ತಿಗೆ ಮಹಾನುಭಾವನಾದ ಭೀಮಸೇನನು ಯುಧಿಷ್ಠಿರಾದಿಗಳೊಡನೆ ೨೪ ಗಾವುದ ದಾರಿಯನ್ನು ನಡೆದುಹೋದನು. ಪೃಥೆಯು ಕುಮಾರರೊಡನೆ ಬಹುವಾಗಿ ಬಳಲಿ ಭೀಮನನ್ನು ನಿಷೇಧಿಸುತಿದ್ದರೂ ಆತನು ಅವರನ್ನು ಎತ್ತಿಕೊಂಡು ಬೇಗನೆ ಹೋಗುತ, ಜಲಚರಪ್ರಾಣಿಗಳ ಮತ್ತು ಪಕ್ಷಿಗಳ ಧ್ವನಿಗಳನ್ನು ಕೇಳಿ. ಒಂದು ಆಲದಮರದ ಕೆಳಗೆ ಅವರನ್ನು ಬಿಟ್ಟು, ತಾನುಮಾತ್ರ ಸಮೀಪದಲ್ಲಿರುವ ಕೊಳಕ್ಕೆ ಹೋಗಿ, ಸ್ನಾನಪಾನಗಳನ್ನು ಮಾಡಿ, ತಾವರೆಯೆಲೆಗಳಿಂದ ಶೀತೋದಕವನ್ನು ತೆಗೆದುಕೊಂಡು, ಯುಧಿಷ್ಠಿರಾದಿಗಳಿಗೆ ಕೊಟ್ಟು ಸಂತೈಸಿದನು. ಆದರಿಂದ ಶ್ರಮಪರಿಹಾರವನ್ನು ಹೊಂದಿ ನಿದ್ರೆಮಾಡುತ್ತಿರುವ ಅಣ್ಣ ತಮ್ಮಂದಿರನ್ನೂ ತಾಯಿಯನ್ನೂ ನೋಡಿ:—ಅಕಟಾ ! ರಾಜೋಪಚಾರದಿಂದ ದಿವ್ಯವಾದ ಹಂಸತೂಲಿಕಾ ತಲ್ಪದಲ್ಲಿ ಮಲಗಿದರೂ ಅತಿಯಾಗಿ ನಿದ್ದೆಯನ್ನು ಮಾಡದ ಮಹಾಭಾಗ್ಯಶಾಲಿಗಳಾದ ಇವರು ಪರದೇಶಿಗಳಾದ ಕಡುಬಡವರಂತೆ ಈ ಘೋರವಾದ ಅಡವಿಯಲ್ಲಿ ಪುಲ್ಲೆಲದಮೇಲೆ ಪವಡಿಸಿದಾರಲ್ಲಾ ! ಯಾವಕಾಲಕ್ಕೆ ಏನುಬರುವುದೋ—ಎಂದು ಮರುಗಿ 'ಇಲ್ಲಿಗೆಸಮೀಪವಾಗಿ ಒಂದು ಪಟ್ಟಣವಿರುವಂತೆ ತೋರುತ್ತದೆ ಇವರು ಚೆನ್ನಾಗಿ ನಿದ್ದೆಯನ್ನು ಮಾಡಲಿ. ನಾನು ಜಾಗರೂಕನಾಗಿರುತ್ತೇನೆ.' ಎಂದು ನಿಶ್ಚಯಿಸಿದನು. ಆಗ ಮಹಾಭಯಂಕರವಾದ ಆ ವನದಲ್ಲಿ ವಾಸವಾಗಿದ್ದ ಹಿಡಿಂಬನೆಂಬ ದುಷ್ಟರಾಕ್ಷಸನು ಮನುಷ್ಯಗಂಧವನ್ನು ಆಘ್ರಾಣಿಸಿ, 'ನನಗೆ ಒಳ್ಳೆಯ ಹಬ್ಬದೂಟ ಸಿಕ್ಕುವುದು' ಎಂದು ಯೋಚಿಸಿ, ಮದಾಂಧನಾಗಿ. ತನ್ನ ಒಡಹುಟ್ಟಿದ ಹಿಡಿಂಬಿಯನ್ನು ಕರೆದು, 'ಹತ್ತಿರದಲ್ಲೆಲ್ಲೋ ಮಾನವಸಂಚಾರ ಒದಗಿದೆ. ಹುಡುಕಿಕೊಂಡು ಬೇಗಬಾ." ಎಂದು ಹೇಳಿದನು. ಆಕೆಯು ಆ ವಿಪಿನಮಧ್ಯದಲ್ಲಿರುವ ಅನಂಗಸದೃಶನೂ, ಆಜಾನುಬಾಹುವೂ, ಮಹಾಪರಾಕ್ರಮಶಾಲಿಯೂ ಆದ ಪವಮಾನನಂದನನನ್ನು ನೋಡಿ ಮೋಹಿತಳಾಗಿ ಹೇಗಾದರೂ ಮಾಡಿ ಆತನನ್ನು ವರಿಸಬೇಕೆಂದು ನಿಷ್ಕರ್ಷಿಸಿಕೊಂಡು, ತನ್ನ ಅಣ್ಣನು ಹೇಳಿ ಕಳುಹಿಸಿದ್ದರೀತಿ ಕೆಟ್ಟಯೋಚನೆಯನ್ನು ಮಾಡದೆ, ಮಾನವರೂಪವನ್ನು ಧರಿಸಿದ ರತಿಯಂತೆ ತೋರ್ಪಡುತ, ಆತನ ಸಮೀಪಕ್ಕೆ ಬಂದಳು. ಭೀಮಸೇನನು ಅತಿಕೋಮಲಾಂಗಿಯಾದ ಆ ಸ್ತ್ರೀಯನ್ನೇ

ನೋಡುತ, ಆಶ್ಚರ್ಯದಿಂದಿದ್ದನು. ಆಕೆಯೂ ರಮಣೀಯವಾದ ತನ್ನ ವಿಲಾಸಗಳಿಂದ ಆತನಿಗೆ ಹೃದಯಂಗಮವಾಗುವಂತೆ ಮಾಡಿ, ಸಹಜವಾದ ಲಜ್ಜೆಯಿಂದ “ ಎಲೈ ಮಹಾನುಭಾವನೇ ನೀನು ಯಾರು ? ಎಲ್ಲಿಂದ ಬಂದೆ ? ರಾಕ್ಷಸಭೂಯಿಷ್ಠವಾದ ಈ ಯರಣ್ಯದಲ್ಲಿ ಪಾಪಾತ್ಮನಾದ ಹಿಡಿಂಬನೆಂಬ ರಾಕ್ಷಸನು ನರಮಾಂಸವನ್ನು ತಿನ್ನಲಪೇಕ್ಷಿಸಿದಾನೆ, ಅಣ್ಣನಾದ ಅವನಿಂದ ಕಳುಹಿಸಲ್ಪಟ್ಟ ನಾನು ನಿನ್ನ ರೂಪಾತಿಶಯಕ್ಕೆ ಮೋಹಿಸಿ, ರಾಕ್ಷಸಾಕಾರವನ್ನು ಬಿಟ್ಟು, ಮನೋಹರಾಕಾರನಾದ ನಿನ್ನನ್ನು ನನ್ನ ಪ್ರಾಣಪ್ರಿಯನನ್ನಾಗಿ ವರಿಸುವೆನು ನೀನು ಅದಕ್ಕೆ ಒಡಂಬಟ್ಟು, ವಿವಾಹವಾಗದಿದ್ದರೆ ನಾನು ಉಳಿಯುವುದಿಲ್ಲ ” ಎಂದು ಮೃದುಮಧುರವಾಗಿ ನುಡಿದಳು. ಭೀಮನು ತನ್ನ ಅಣ್ಣನಿಗೆ ಇನ್ನೂ ವಿವಾಹಮಂಗಳಕಾರ್ಯವಾಗದೆ ಇದ್ದುದರಿಂದ, ಅದಕ್ಕೊಪ್ಪದೆ, ಯುಧಿಷ್ಠಿರಾದಿಗಳಿಗೆ ನಿದ್ರಾಭಂಗವಾಗದಂತೆ ಅವಳೊಡನೆ ಮೆಲ್ಲಗೆ ಮಾತನಾಡುತ್ತಿದ್ದನು ತಂಗಿಯ ಆಲಸ್ಯಕ್ಕೆ ಆಗ್ರಹಿಸಿದ ಹಿಡಿಂಬನು ಮಹಾರೋಷದಿಂದ ಹೊರಟು, ನಾನಾವಿಧವಾದ ರಾಕ್ಷಸಚರ್ಯೆಯನ್ನು ತೋರ್ಪಡಿಸುತ ಯಮನಂತೆ ಅತಿಭಯಂಕರಾಕಾರನಾಗಿ ಅಲ್ಲಿಗೆ ಬಂದನು.

ಆ ರಕ್ಕಸನು ಅವರಿಬ್ಬರನ್ನೂ ನೋಡಿ ಬಹುವಾಗಿ ಕೋಪಿಸಿಕೊಂಡು “ ಎಲೆ ರಕ್ಕಸಿ, ರಾಕ್ಷಸವಂಶಕ್ಕೆ ಅಪಯಶಸ್ಸನ್ನು ತರುವುದಕ್ಕೆಣಿಸಿದ ನಿನ್ನನ್ನು ಈ ತುಂಡಾಡಿಯೊಡನೆ ವಧಿಸುವೆನು. ” ಎಂದು ಹೇಳಿ ಅಟ್ಟಹಾಸವನ್ನು ಮಾಡಿದನು. ರಣಕುಶಲನಾದ ಭೀಮನು ತನ್ನವರಿಗೆ ನಿದ್ರಾವಿಘಾತವಾಗದಹಾಗೆಮಾಡಿ, ಸ್ತ್ರೀವಧೆಗೆ ಉದ್ಯುಕ್ತನಾದ ಹಿಡಿಂಬನನ್ನು ಕುರಿತು—ಎಲೋ ಖೂಳ, ಜಗತ್ತಿನಲ್ಲಿ ಪ್ರಾಣಿಮಾತ್ರಕ್ಕೆ ಮನ್ಮಥಾವಸ್ಥೆಯು ಸಹಜವಾದುದರಿಂದ, ಈಕೆಯು ನನ್ನನ್ನು ಕಂಡುವರಿಸಿದಾಳೆ, ಆಕೆಯ ಗೋಜಿಗೆ ಹೋಗದೆ ನಿನಗೆ ಪೌರುಷವಿದ್ದಲ್ಲಿ ನನ್ನೊಡನೆ ಯುದ್ಧವನ್ನುಮಾಡು. ಪಾಪಕೃತ್ಯಗಳ ಬಣ್ಣದಂತೆ ಕರ್‍ರಗಿರುವ ಮೈಬಣ್ಣವುಳ್ಳ ನಿನ್ನನ್ನು ಶೀಘ್ರದಲ್ಲಿ ಯಮಮಂದಿರಕ್ಕೆ ಕಳುಹಿಸಿ, ಈ ವನವು ಸಕಲರಿಗೂ ಉಪಯೋಗವಾಗಿರುವಂತೆ ಮಾಡುವೆನು. ” ಎಂದು ಗರ್ಜಿಸಿದನು. ಮಹಾಪರಾಕ್ರಮಿಯಾದ ಹಿಡಿಂಬನು ಕೋಪಾರುಣನೇತ್ರನಾಗಿ “ ಎಲೋ

ನರಾಧಮ ! ನಿನ್ನ ಶಕ್ತಿಯನ್ನು ನನಗೆ ತೋರಿಸುವುದಕ್ಕೆ ಮುಂಚೆ ಏಕೆ ಹೊಗಳಿಕೊಳ್ಳುವೆ, ಇವರ ನಿದ್ರೆಗೆ ಅಡ್ಡಿಮಾಡದೆ ಮುಂಚಿತವಾಗಿ ನಿನ್ನನ್ನು ಸಂಹರಿಸಿ, ನಿನ್ನ ಕೋಮಲವಾದ ರಕ್ತಮಾಂಸಗಳನ್ನು ಭಕ್ಷಿಸಿ, ಆ ಬಳಿಕ ನಿನ್ನವರನ್ನೂ ಈ ಕುಲಗೇಡಿಯನ್ನೂ ಕೊಲ್ಲುವೆನು" ಎಂದು ಅರ್ಭಟಿಸಿ, ಯುದ್ಧಕ್ಕನುವಾದನು. ಕೋಪಾಟೋಪದಿಂದಿರುವ ಹಿಡಿಂಬನನ್ನು ವಾಯುಸೂನುವು, ಸಿಂಹವು ಕ್ಷುದ್ರಮೃಗವನ್ನು ಹಿಡಿಯುವಹಾಗೆ, ಹಿಡಿದುಕೊಂಡನು. ಅವರಿಬ್ಬರ ಸಿಂಹನಾದವೂ, ವೃಕ್ಷಗಳಿಂದಲೂ, ಪರ್ವತಶಿಖರಗಳಿಂದಲೂ, ಬಾಹುಗಳಿಂದಲೂ, ಮುಷ್ಟಿಗಳಿಂದಲೂ, ನಡೆದ ಯುದ್ಧಸಂಭ್ರಮವೂ, ಪರಸ್ಪರ ಕೊಲ್ಲಬೇಕೆಂಬ ಉತ್ಸಾಹದಿಂದ ಮಹಾಭಯಂಕರವಾಗಿ ಕೂಗುತಿರುವ ಕೂಗಾಟವೂ, ದಿಕ್ಕುಗಳೆನ್ನೆಲ್ಲ ವ್ಯಾಪಿಸಿತು. ವೃಕ್ಷಾಗ್ರದಲ್ಲಿ ಪವಡಿಸಿದ್ದ ಧರ್ಮಾದಿಗಳು ಎದ್ದುಕುಳಿತು, ಭೀಮನ ಕೂಡ ಅತಿಭಯಂಕರವಾಗಿ ಹೋರಾಡುತಿರುವ ಪರ್ವತಾಕೃತಿಯುಳ್ಳ ಆ, ದಾನವನನ್ನು ಕಂಡು ಬೆದರಿ ಸಮೀಪದಲ್ಲಿ ದೇವಕನ್ಯೆಯಂತೆ ನಿಂತಿರುವ ಹಿಡಿಂಬಿಯಮೂಲಕ ಅವನ ವೃತ್ತಾಂತವನ್ನೆಲ್ಲ ಕೇಳಿ, ಭೀಮನ ಅವಸ್ಥೆಗೆ ಕ್ಲೇಶಪಡುತಿದ್ದರು ವೃಕೋದರನು ಅರ್ಜುನಾದಿಗಳು ತನಗೆ ಸಹಾಯವಾಗಿ ಬಾರದಂತೆ ಹೇಳಿ, ಹಿಡಿಂಬನನ್ನು ಕೂಡಲೆ ಸಮವರ್ತಿಯ ಹತ್ತಿರಕ್ಕೆ ಕಳುಹಿಸಲೆಣಿಸಿ, ಪೂರ್ವಕಾಲದಲ್ಲಿ ಲಕ್ಷ್ಮಣನು ಇಂದ್ರಜಿತ್ತಿನ ಮಾಯೆಗೆ ಸಿಕ್ಕದೆ ರಣಕ್ರೀಡೆಯನ್ನು ಮಾಡಿದಂತೆ, ಆ ರಾತ್ರಿಂಚರನಮಾಯೆಯನ್ನೆಲ್ಲ ಅಡಗಿಸಿ, ಮಹಾಭಯಂಕರವಾದ ದ್ವಂದ್ವಯುದ್ಧವನ್ನು ಮಾಡುತ ಕಾದಾಡುತಿದ್ದು, ನಿಜಭುಜಬಲಾಧಿಕ್ಯದಿಂದ ರಕ್ಕಸನ ತೋಳುಗಳನ್ನು ಬಲವಾಗಿ ಹಿಡಿದು, ಅಂಬಿಕಾನಾಥನು ಲೋಕಹಿತಾರ್ಥವಾಗಿ ಅಂಧಕಾಸುರನನ್ನು ಕೊಂದಹಾಗೆ, ಆ ಕೇಡಿಗನಾದ ದೈತ್ಯನನ್ನು ಅನೇಕಾವೃತ್ತಿ ಗಿರಗಿರನೆ ತಿರುಗಿಸಿ ಭೂಮಿಯಲ್ಲಿ ಕೆಡವಿ, ತನ್ನ ಚರಣಗಳಿಂದ ಚೂರ್ಣಮಾಡಿ ಕುತ್ತಿಗೆಯನ್ನು ನುರಿದು ಸಂಹರಿಸಿ, ಲೋಕಕ್ಕೆ ಕ್ಷೇಮವನ್ನುಂಟುಮಾಡಿದನು.

ಸಿದ್ಧಚಾರಣಾದಿಗಳಿಂದ ಸ್ತುತಿಸಲ್ಪಟ್ಟ ಪವಮಾನಸೂನುವು ತನ್ನವರೊಡನೆ ಮುಂದಕ್ಕೆ ಹೋಗುತ್ತಿರುವಾಗ ಶಶಿಮುಖಿಯಾದ ಹಿಡಿಂಬಿಯು

ತನ್ನ ಮನೋರಥವನ್ನು ನೆರವೇರಿಸಿ ಕೊಡಬೇಕೆಂದು ಬೇಡಿಕೊಳ್ಳುತ ಕುಂತೀಯುಧಿಷ್ಠಿರರಿಗೆ ಅಭಿವಂದಿಸಿ ಅವರ ಜತೆಯಲ್ಲಿಯೇ ಬರುತಿದ್ದಳು. ಅವರಿಬ್ಬರ ಮನಸ್ಸೂ ಕರಗಿ—" ಆಪತ್ಕಾಲದಲ್ಲಿ ಸಹಾಯಮಾಡುವುದ ಕ್ಕಿಂತ ಹೆಚ್ಚಿನ ಧರ್ಮವಾವುದಿದೆ ? ಧರ್ಮಶೀಲನು ಧರ್ಮವನ್ನಾಶ್ರಯಿಸಿ ಪ್ರಾಣ ಧಾರಣವನ್ನು ಮಾಡುವನು. ಭೂತದಯೆಯೇ ಪರಮಧರ್ಮವೆನಿಸಿರುವುದು " ಎಂದು ನಿಗದಿಸಿ, ಪ್ರತ್ಯಾರ್ಥಿಯಾದ ಹಿಡಿಂಬಿಯು ಪಾಣಿಗ್ರಹಣವನ್ನು ಮಾಡಲು ಭೀಮಸೇನನಿಗೆ ಆಜ್ಞೆಯನ್ನಿತ್ತರು. ಮತ್ತು ಅವಳನ್ನು ಕುರಿತು—ಆಯು ಷ್ಮತಿ ! ನೀನು ರಾಕ್ಷಸ ಚರ್ಯೆಯನ್ನು ತೊರೆದು ಉತ್ತಮಸ್ತ್ರೀಧರ್ಮವನ್ನಾ ಚರಿಸುತ, ಸಾತ್ವಿಕವೃತ್ತಿಯಿಂದಿರು. ಪ್ರತಿದಿನವೂ ಸಾಯಂಕಾಲಕ್ಕೆ ಮುಂಚೆ ಭೀಮನಕೂಡ ನಮ್ಮ ಬಳಿಗೆ ಬಾ, ನೀನು ಗರ್ಭಿಣಿಯಾದ ಬಳಿಕ ಆತನ ಸಂಕೇತಕ್ಕೆ ಬದ್ಧಳಾಗಿ ಪತಿಶುಶ್ರೂಷೆಯಲ್ಲಿ ನಿರತಳಾಗಿರು " ಎಂದು ಬಿಜಿತ ಮಾಡಿದರು. ಅನಂತರ ಕಮಲಪಾಲಿಕೆ ಎಂಬ ಹಿಡಿಂಬಿಯು ಪಾಂಡವ ರನ್ನು ಕುಂತೀದೇವಿಯೊಡನೆ ಶಾಲಿಹೋತ್ರಾಶ್ರಮಕ್ಕೆ ಬಿಟ್ಟು, ಪ್ರಿಯವಯ ಸ್ಯನಾದ ಭೀಮನೊಡನೆ ಆಕಾಶಮಾರ್ಗಕ್ಕೆ ಹಾರಿ, ಇಷ್ಟವಾದ ಮನೋ ಹರಸ್ಥಳಗಳಲ್ಲಿ ಯಥೇಚ್ಛವಾಗಿ ಗಂಧರ್ವರಂತೆ ಕ್ರೀಡಿಸುತಿದ್ದಳು. ಆ ಯೌವನಸ್ಥರಿಬ್ಬರೂ ಅನ್ಯೋನ್ಯಾನುರಾಗದಿಂದ ಕ್ರೀಡಾವನ ಮುಂತಾದ ದಿವ್ಯಸ್ಥಳಗಳಲ್ಲಿ ನಾನಾವಿಧವಾದ ಸುಖಗಳಿಂದ ದಣಿವಿಲ್ಲದೆ ಆನಂದದಿಂದಿ ದ್ದರು. ಹೀಗೆ ಆರುತಿಂಗಳುಗಳವರೆಗೂ ಅವರು ಸಂತೋಷದಿಂದ ಎಡೆಬಿ ಡದೆ ವಿಹರಿಸುತ್ತಿರುವಲ್ಲಿ ಶೋಭನಾಂಗಿಯಾದ ಹಿಡಿಂಬಿಯು ಬಸಿರಾಗಿ, ಕ್ಷೇತ್ರಬೀಜಪ್ರಭಾವಕ್ಕೆತಕ್ಕಂತೆ ಶೂರಾಗ್ರಗಣ್ಯನೂ ಸದ್ಯಃಪ್ರವೃದ್ಧ ಬಲನೂ ಆದ ಪುತ್ರನನ್ನು ಹೆತ್ತಳು. ಘಟದಂತೆ ನುಣುಪಾದ ತಲೆಯುಳ್ಳ ವನಾದುದರಿಂದ, ಅತಿಮಾನುಷ ಪರಾಕ್ರಮಿಯಾದ ಆ ಭೀಮಪುತ್ರನಿಗೆ ಘಟೋತ್ಕಚನೆಂಬ ಹೆಸರು ಪ್ರಸಿದ್ಧವಾಯಿತು ! ಅವನು ಯೌವನದಿಂದ ವಿಜೃಂಭಿಸಿ, ತನ್ನತಾಯಿತಂದೆಗಳಿಗೂ ಯುಧಿಷ್ಠಿರಾದಿಗಳಿಗೂ ಭಕ್ತಿಭರಿತ ನಾಗಿ ನಮಸ್ಕರಿಸಿ ತನ್ನ ಪರಾಕ್ರಮವನ್ನು ವಿವರಿಸಿ, ಪಾಂಡವ ಹಿತೈಷಿಯಾಗಿ ದ್ದನು. ಆಗ ಭಗವದ್ಬಾದರಾಯಣನು ತನ್ನಸೊಸೆಯನ್ನೂ ಮೊಮ್ಮಕ್ಕಳ ನ್ನೂ ನೋಡುವುದಕ್ಕಾಗಿ ಅಲ್ಲಿಗೆಬಂದು, ಕೌನ್ತೇಯರು ಭಕ್ತಿನಮ್ರರಾಗಿ

ಮಾಡಿದ ಪೂಜೆಯನ್ನು ಸ್ವೀಕರಿಸಿ, ಅವರ ಮುಂದಿನ ಅಭ್ಯುದಯವೇ ಮುಂತಾದುವನ್ನು ಸೂಚಿಸಿ' ಹರಸಿ, ಚಿತ್ತೈಸಿದನು. ಹಿಡಂಬಿಯು ಸಂಕೇತ ಪ್ರಕಾರ ಪ್ರತ್ಯೇಕವಾಗಿರಲು ಪುತ್ರನೊಡನೆ ಹೊರಟು ಹೋದಳು. ಪಾಂಡವರು ವಿಪ್ರವೇಷದಿಂದ ಶಾಲಿಹೋತ್ರಾಶ್ರಮವನ್ನು ಬಿಟ್ಟು ಮುಂದಕ್ಕೆ ಪ್ರಯಾಣಮಾಡಿ, ನದೀನದಗಳನ್ನೂ, ವಿವಿಧವನತಟಾಕಗಳನ್ನೂ ದಾಟಿ ಏಕಚಕ್ರಪುರಕ್ಕೆ ಸುಖವಾಗಿ ಬಂದರು.

ಅಲ್ಲಿ ಅನುಜರೊಡನೆ ಭೀಮನು ಭಿಕ್ಷಾಚರಣವನ್ನು ಮಾಡಿ, ತಾಯಿಯನ್ನೂ ಅಣ್ಣನನ್ನೂ ಪೋಷಿಸುತ, ಕಾಶ್ಯಪನೆಂಬೊಬ್ಬ ಬ್ರಾಹ್ಮಣನ ಮನೆಯಲ್ಲಿ ಅಜ್ಞಾತರಾಗಿರಲು ; ಸರ್ವಲಕ್ಷಣಸಂಪನ್ನನಾದ ಭೀಮನು ಭಿಕ್ಷಾನ್ನಕ್ಕೆ ಹೋದಾಗ ಆತನನ್ನು ನೋಡಿದವರು,—" ಈ ಮಹನೀಯನು ದೇವಕುಮಾರಸದೃಶನೂ, ಮಹಾಸಮರ್ಥನೂ, ಶುದ್ಧಸ್ವಭಾವವುಳ್ಳವನೂ ಆಗಿರುವನು. ಈ ಆಜಾನುಬಾಹುವು ಪ್ರಚ್ಛನ್ನವೇಷವನ್ನಳವಡಿಸಿಕೊಂಡು ಅವುದೋಕಾರಣದಿಂದ ಹೀಗೆ ಬಂದಿರುವನು. ರಾಜಾಧಿರಾಜರಿಗೂ ಈ ಲಕ್ಷಣಗಳು ದುರ್ಲಭಗಳು " ಎಂದು ಹೇಳುತ, ಭಕ್ಷ್ಯಭೋಜ್ಯಗಳನ್ನು ಅಪರಿಮಿತವಾಗಿ ತಂದುಕೊಡುತ್ತಿದ್ದರು. ಒಂದು ಸಂದರ್ಭದಲ್ಲಿ, ಒಬ್ಬ ಕುಂಬಾರನು ಬಹು ಕಷ್ಟದಿಂದ ಮಣ್ಣನ್ನು ಹೊತ್ತು ತರುತ್ತಿದ್ದುದನ್ನು ಭೀಮನು ಕಂಡು, ಅವನಿಗೆ ಬೇಕಾದಷ್ಟು ಜೇಡಿಮಣ್ಣನ್ನು ಬಂದೇಸಲ ತಂದುಕೊಟ್ಟು ಆದರಿಸಿದನು. ಅವನು ಅದಕ್ಕೆ ಸಂತುಷ್ಟನಾಗಿ ಭೀಮನಿಗೆ ದೊಡ್ಡ ಗುಡಾಣವೊಂದನ್ನು ಮಾಡಿ ಒಪ್ಪಿಸಿದನು. ಅವನು ಅದನ್ನೇ ಭಿಕ್ಷಾಪಾತ್ರೆಯನ್ನಾಗಿ ಮಾಡಿಕೊಂಡು ತಾನು ತರುತ್ತಿದ್ದ ಅನ್ನಮುಂತಾದವನ್ನು ಜನನಿಯ ಮುಂದಿಡುತ್ತಿದ್ದನು. ಆಕೆಯು ಅವೆಲ್ಲವನ್ನೂ ಸಮಭಾಗವನ್ನಾಗಿ ಮಾಡಿ ಭೀಮನು ಹೊರತಾದ ತನ್ನ ಪುತ್ರರನ್ನು ಕುರಿತು –" ಅಪ್ಪಾ! ಶತ್ರುಗಳಿಂದ ಕಷ್ಟಸಂಭವಿಸಿ ನಮ್ಮ ಪ್ರಾಣಗಳೇ ಹೋಗುತಿದ್ದಾಗ ಈ ಭೀಮಸೇನನು ಅವುಗಳನ್ನೆಲ್ಲ ತಪ್ಪಿಸಿ ಕಾಪಾಡಿದನು. ಮುಂದೆ ಯಾವ ಕೇಡುಬರುವುದೋ—ಅವುಗಳು ಪ್ರಾಯಶಃ ಈತನಿಂದಲೇ ಪರಿಹಾರವಾಗಬೇಕಾದೀತು. ನಾವೆಲ್ಲ ಬಂದು ತೂಕವಾದರೆ ಭೀಮನೇ ಬಂದುತೂಕ. ಆವನ ದೊಡ್ಡ ದೇಹಕ್ಕೂ ಬಲಕ್ಕೂ ತಕ್ಕಷ್ಟು ಆಹಾರವು ಬೇಕಾಗಿದೆ.

ಎಲ್ಲರಿಗೂ ಆತಂಕ ಬಂದಿತು "—ಎಂದು ದುಃಖದಿಂದ ಹೇಳುತ ಅವರು ತಂದ ಭಿಕ್ಷದಲ್ಲಿ ಒಂದುಭಾಗವನ್ನು ತಾವು ಐವರೂ, ಮತ್ತೊಂದು ಭಾಗವನ್ನು ಭೀಮನೂ ಹೊಂದುವಂತೆ ಮಾಡುತಿದ್ದರೂ ಆತನಿಗೆ ತೃಪ್ತಿಯಾಗದೆ ಉರಿಯುವ ಜ್ವಾಲೆಯಲ್ಲಿ ಹಾಕಿದ ಆಜ್ಯದ ಹನಿಯಂತಾಗಿ, ದಿನೇದಿನೇ ಕೃಶನಾಗುತ ಬಂದನು.

ಹೀಗಿರುವಲ್ಲಿ ಆವೂರಿಗೆ ಸಮೀಪವಾಗಿದ್ದ ಒಂದು ಬೆಟ್ಟದ ಮೇಲೆ ಅತಿಬಲಿಷ್ಠನಾದ ಬಕಾಸುರನೆಂಬವನು ಸೇರಿಕೊಂಡು ೧೩ ವರ್ಷಗಳಿಂದ ಆ ಪುರವಾಸಿಗಳನ್ನೆಲ್ಲ ಬಹುವಾಗಿ ಹಿಂಸಿಸುತಿದ್ದನು. ಅವರೆಲ್ಲ ಒಗ್ಗಟ್ಟಾಗಿ ಸೇರಿ ಆ ರಕ್ಕಸನಿಷ್ಟದಂತೆ ಪ್ರತಿದಿವಸವೂ ಸರದಿಯ ಮೇರ ಗಾಡಿಗಳಲ್ಲಿ ಅಪರಿಮಿತವಾಗಿ ಅಡಕಿದ ಭಕ್ಷ್ಯಭೋಜ್ಯಗಳನ್ನೂ ಒಬ್ಬ ಮಾನವನನ್ನೂ ಅವನಿಗೆ ಬಲಿಯಾಗಿ ತಪ್ಪದೆ ಕಳುಹಿಸುತಿರಬೇಕೆಂದು ನಿಗದಿ ಮಾಡಿಕೊಂಡರು. ಆದರಂತೆ ನಡೆಯುತಿರುವಾಗ, ದೈವಯೋಗದಿಂದ ಪಾಂಡವರಿದ್ದ ಮನೆಯ ಯಜಮಾನನಾದ ವಿಪ್ರಶ್ರೇಷ್ಠನು ಬಕಾಸುರನಿಗೆ ಬೋನವನ್ನು ಮಾಡಬೇಕಾಗಿ ಬಂದಿತು. ಆ ರಾಕ್ಷಸಬಾಧಾಪರಿಹಾರಕ್ಕಾಗಿ ನರಪಶುವನ್ನು ಕೊಡಲು ಆ ಬ್ರಾಹ್ಮಣನಿಗೆ ತನ್ನ ಏಕಪುತ್ರನು ಹೊರತು ಮತ್ತೆ ಯಾವಮಾರ್ಗವೂ ಇರಲಿಲ್ಲ. ಅದಕ್ಕಾಗಿ ಚಿಂತಿಸುತಿದ್ದ ವಿಪ್ರವರ್ಯನನ್ನು ಕರುಣಾರ್ದ್ರಹೃದಯಳಾದ ಕುಂತೀದೇವಿಯು ಕಂಡು, ಆತನಿಗೆ ಒದಗಿರುವ ಕಷ್ಟವನ್ನು ವಿಸ್ತಾರವಾಗಿ ಕೇಳಿ, ತನ್ನ ದ್ವಿತೀಯ ಪುತ್ರನನ್ನು ಬಕಾಸುರನ ಬಳಿಗೆ ಕಳುಹಿಸುವಂತೆ ಹೇಳಿ, ಆತನಿಗೆ ಅಭಯವನ್ನು ಉಂಟುಮಾಡಿದಳು. ಭೀಮನು ತನ್ನ ತಾಯಿಯ ಮೂಲಕ ಆ ಪ್ರಸ್ತಾವವನ್ನು ಕೇಳಿ ಅದಕ್ಕೆ ಒಪ್ಪಿ "ಅಮ್ಮ! ಆ ದುಷ್ಟದೈತ್ಯನನ್ನು ಕೊಂದರೆ ಜಗತ್ತಿಗೆ ಸುಖವಾಗಿ ನನಗೂ ಕೀರ್ತಿಯುಂಟಾಗುವುದು. ಉಪಕಾರಕ್ಕೆ ಪ್ರತ್ಯುಪಕಾರವನ್ನೂ ಮಾಡಿದಂತೆ ಆಗುವುದು" ಎಂದು ಹೇಳಿ ಹಿಗ್ಗುತಿದ್ದನು. ಧರ್ಮರಾಯನು ಭೀಮನ ಮುಖೋಲ್ಲಾಸವನ್ನು ನೋಡಿ, ಅದಕ್ಕೆ ನಿಮಿತ್ತವೇನೆಂದು ಕುಂತೀದೇವಿಯನ್ನು ಕೇಳಿದನು. ಆಕೆಯು ಆ ಪುರವನ್ನೂ, ಅಪಾಯಕ್ಕೆ ಸಿಕ್ಕಿ ಗೋಳಡುತಿರುವ ಬ್ರಾಹ್ಮಣನನ್ನೂ ಕಾಪಾಡುವುದಕ್ಕಾಗಿ ತಾನು ಯೋಚಿಸಿರುವ ಸಂಗತಿಯನ್ನು ಹೇಳಲು: ಅವನು "ಏನಮ್ಮಾ! ಹೀಗೂ ಉಂಟೇ? ಮತ್ತೊಬ್ಬರ ಸಂಸಾರವನ್ನು

ರಕ್ಷಿಸುವುದಕ್ಕಾಗಿ ನೀನು ಪುತ್ರತ್ಯಾಗವನ್ನು ಮಾಡಬಹುದೇ ? ನಾವೆಲ್ಲರೂ ಭೀಮನ ಭುಜಬಲವನ್ನು ನಂಬಿಕೊಂಡು ದಾಯಾದರ ಹಿಂಸೆಗೆ ಸಿಕ್ಕದೆ, ಮುಂದೆ ನಮ್ಮ ರಾಜ್ಯವನ್ನು ಸಾಧಿಸಬೇಕೆಂದು ಇರುವುದರಿಂದ ಆತನನ್ನು ಲೋಕಭಯಂಕರನಾದ ಬಕದೈತ್ಯನ ಬಾಯಿಗೆ ತುತ್ತನ್ನಾಗಿ ಮಾಡುವಿಯಾ ! ದುರ್ಯೋಧನಾದಿಗಳು ನಿರಂತರವೂ ಭೀಮನ ಪರಾಕ್ರಮವನ್ನು ನೆನೆನೆನೆದು ಸ್ವಪ್ನದಲ್ಲಿಯೂ ಬೆಚ್ಚಿಬೀಳುತಿದ್ದಾರೆ. ನಮ್ಮಗಂಡಾಂತರಗಳನ್ನು ತಪ್ಪಿಸಿ ಕಾಪಾಡುತಿರುವ ಭೀಮನನ್ನು ಕೊಡುವುದಕ್ಕೆ ನೀನು ಹೇಗೆ ಒಪ್ಪಿದೆ?" ಎಂದು ದುಃಖದಿಂದ ಕೇಳಿದನು. ಕುಂತೀದೇವಿಯು, "ಎಲೈ ಧರ್ಮರಾಜನೆ ! ಭೀಮನ ವಿಚಾರವಾಗಿ ಹೀಗೆ ಯೋಚಿಸಬಾರದು. ಆತನು ಸಾಕ್ಷಾದ್ವಾಯುದೇವನ ಎರಡನೆಯ ಅವತಾರಪುರುಷನು. ಆತನ ಸತ್ವಸಾಹಸಾದಿಗಳು, ಹುಟ್ಟಿದ ೧೧ ದಿನಗಳಲ್ಲಿಯೇ ಲೋಕಕ್ಕೆಲ್ಲಾ ವಿದಿತವಾಯಿತು. ಭೀಮನು ಶಿಶುವಾಗಿರುವಾಗಲೇ ಅತ್ಯಂತಕಠಿನವಾದ ದೊಡ್ಡ ಅರೆಬಂಡೆಯ ಮೇಲೆ ಬಿದ್ದನು. ಒಡನೆ ಅದು ನೂರುಪಾಲಾಗಲು, ಅಂದಿನಿಂದ ಅದು ಶತಶೃಂಗಪರ್ವತವೆಂಬ ಹೆಸರನ್ನು ಪಡೆಯಿತು. ಆತನ ಶಕ್ತಿ, ಧೈರ್ಯ, ಸಾಹಸ ಮುಂತಾದುವೆಲ್ಲ ಲೋಕವಿಖ್ಯಾತವಾದುದು. ಮಹೇಂದ್ರನೇ ಯುದ್ಧಕ್ಕೆ ಬಂದರೂ ಭೀಮನು ಹೆದರದೆ, ಕಾಳಗವನ್ನು ಮಾಡಿ ಜಯಿಸಬಲ್ಲನು. ನಾನು ಆತನ ಮಹಿಮೆಯನ್ನು ಚೆನ್ನಾಗಿ ಬಲ್ಲೆನು. ಬುದ್ಧಿಮೋಸ ಹೋಗಿ ಆ ವಿಪ್ರನಿಗೆ ಮಾತುಕೊಟ್ಟಿಲ್ಲ. ಭೀಮನು ಆ ರಕ್ಕಸನನ್ನು ಕೊಂದು ಲೋಕೋಪಕಾರವನ್ನು ಮಾಡುವನು" ಎಂದಳು. ಧರ್ಮರಾಯನು ಸುಮ್ಮನಾಗಿ, ಆ ಸಂಗತಿಯನ್ನು ಒಬ್ಬರಿಗೂ ಹೇಳದಂತೆ ಆತನಲ್ಲಿ ಸಂಕೇತವನ್ನು ಮಾಡಿಕೊಂಡನು. ಬಳಿಕ ಬ್ರಾಹ್ಮಣನು ಕಾಲವಿಳಂಬವನ್ನು ಮಾಡದೆ ಭೀಮನಿಗೆ ಮುಂಚಿತವಾಗಿ ಪಂಚಭಕ್ಷ್ಯಪರಮಾನ್ನದೊಡನೆ ಭೋಜನವನ್ನು ಮಾಡಿಸಲು ; ಆತನು ಬಕಾಸುರನ ಬಳಿಗೆ ಹೋಗುವುದಕ್ಕೆ ತವಕಪಡುತಿದ್ದನು ಆ ಮನೆಯವರು ಪದ್ಧತಿಪ್ರಕಾರ ಹತ್ತಿಂಟು ಗಾಡಿಗಳಲ್ಲಿ ತಮ್ಮ ಸರದಿಯಮೇರೆ ಬಕಾಸುರನಿಗೆ ಕಳುಹಿಸಬೇಕಾದ ವಿವಿಧ ಭಕ್ಷ್ಯ ಭೋಜ್ಯಾದಿಗಳನ್ನು ಅಣಿಮಾಡಿ ಆತನೊಡನೆ ಕಳುಹಿಸಿದರು ವಾಯುಪುತ್ರನು ಅವೆಲ್ಲವನ್ನೂ ವಾದ್ಯಧ್ವನಿಸಮೇತ ತೆಗೆಯಿಸಿಕೊಂಡು ಶವರೂಭ

ಯಿಷ್ಟವಾದ ರುದ್ರ ಭೂಮಿಯಲ್ಲಿರುವ ಒಂದು ದೊಡ್ಡ ವೃಕ್ಷದ ಕೆಳಗೆ ಮಡಗಿಸಿ, ಹೆಚ್ಚು ಜನರನ್ನೆಲ್ಲ ಹಿಂದಕ್ಕೆ ಕಳುಹಿಸಿ,—“ ಈ ಬಂಡಿಗಳಲ್ಲಿ ಪರ್ವತದಂತೆ ಒಟ್ಟಿರುವ ಆಹಾರಸಾಮಗ್ರಿಗಳು ನನ್ನ ಹಸಿವಿಗೆ ಅತ್ಯಲ್ಪವಾಗಿದ್ದರೂ, ರಾಕ್ಷಸನು ಅವುಗಳನ್ನೆಲ್ಲ ನೋಡುವುದಕ್ಕೆ ಮುಂಚೆ ನಾನೇ ಭುಜಿಸಿ ; ಅವನೊಡನೆ ಯುದ್ಧಮಾಡುವಾಗ, ಅವನು ನನ್ನನ್ನು ಎಷ್ಟೇಬಲವಾಗಿ ತಳ್ಳಿದರೂ, ಕೆಳಕ್ಕೆ ಬೀಳದೆ ಬಲವಾಗಿನಿಂತು, ಇವುಗಳಲ್ಲಿ ಸ್ವಲ್ಪವೂ ಅವನಿಗೆ ಸಿಕ್ಕದಹಾಗೆ ಮಾಡುವೆನು-" ಎಂದು ಯೋಚಿಸಿದನು, ಪುರಜನರು ಸಂಕೇತಸ್ಥಾನಕ್ಕೆ ಸ್ವಲ್ಪದೂರದಲ್ಲಿರುವ ಎತ್ತರವಾದ ಮರಗಳನ್ನೇರಿ, ಭೀಮಬಕರ ಸಮಾಗಮ ಮುಂತಾದುವನ್ನು ಆತುರತೆಯಿಂದ ನೋಡುತ್ತಿದ್ದರು.

ಭೀಮಸೇನನು ಬಂಡಿಗಳಲ್ಲಿ ಠೀವಿಯಾಗಿ ಕುಳಿತು ವಿವಿಧಾನ್ನಗಳೇ ಮುಂತಾದವುಗಳನ್ನು ಭಕ್ಷಿಸಿ, ಬಕನಿದ್ದತಾವಿಗೆ ಹೋಗಿ, ಅವನನ್ನು ಮಶಕಕ್ಕಿಂತಲೂ ಕಡೆಯಾಗಿ ತಿಳಿದು, “ ಎಲೋ ಬ್ರಹ್ಮದ್ವೇಷಿಯಾದ ಬಕಾಸುರಾ ! ಬೇಗನೆ ಯುದ್ಧಕ್ಕೆ ಬಾ, " ಎಂದು ಕರೆದನು ಅದನ್ನು ಕೇಳಿದ ಬಕನು ತನಗಾಗಿ ಕಳುಹಿಸಿದ್ದುದನ್ನೆಲ್ಲ ನಿರ್ಭಯದಿಂದ ತಿಂದು ತೇಗುತಿರುವ ಭೀಮನನ್ನು ದುರುಗುಟ್ಟಿಕೊಂಡು ನೋಡುತ, ಅತಿಕೋಪಾಟೋಪದಿಂದ ಸಮೀಪದಲ್ಲಿದ್ದ ದೊಡ್ಡ ಹುಣಿಸೆಯಮರವನ್ನು ಸಮೂಲವಾಗಿ ಕಿತ್ತು ಅತಿರಭಸದಿಂದ ಹೊಡೆದರೂ, ವಾಯುಸೂನುವು ಆವೃಕ್ಷವನ್ನೂ ಅವನನ್ನೂ ನೂಕಿಬಿಟ್ಟನು. ಮತ್ತೆ ರಕ್ಕಸನು ಆಗ್ರಹದಿಂದ ಪರ್ವತವಾದರೂ ಪುಡಿಪುಡಿಯಾಗುವಂತೆ ತನ್ನೆರಡು ಹಸ್ತಗಳಿಂದಲೂ ಭೀಮನ ಬೆನ್ನಿನಮೇಲೆ ಬಲವಾಗಿ ಅಪ್ಪಳಿಸಿ ಹಾಕುಹಾಕಿದನು. ಆದಕ್ಕೂ ವೃಕೋದರನು ಸಡ್ಡೆಮಾಡದೆ ಕವಳಿಸುತಿದ್ದನು. ದಾನವನ ಅಂಗೈಪೆಟ್ಟಿನಿಂದ ಅವನ ಶರೀರದಲ್ಲಿ ಅಲ್ಲಲ್ಲಿ ಇದ್ದ ಕವಳಗಳೆಲ್ಲಾ ಸರಿಯಾಗಿ ಕುಳಿತುವು. ಭೋಜನವನ್ನು ಮಾಡುವುದಕ್ಕೆ ಇನ್ನೂ ಸೌಖ್ಯವನ್ನೇ ಕಲ್ಪಿಸಿತು. ಆ ಕ್ರೂರ ರಾಕ್ಷಸನಾದರೋ ಬಹುದುರ್ಬುದ್ಧಿಯಿಂದೊಡಗೂಡಿ ಅವನನ್ನು ಕೊಲ್ಲಬೇಕೆಂದು ಮಾಡಿದ ಯತ್ನಗಳೆಲ್ಲೊಂದೂ ಪ್ರಯೋಜನವನ್ನೀಯದೆ ಹೋಯಿತು. ನೂರಾರು ಗುಡಾಣಗಳಲ್ಲಿದ್ದ ಹಾಲು, ಮೊಸರು, ತುಪ್ಪ, ಜೇನುತುಪ್ಪ, ಚಿಗುಳಿ,

ಮುಂತಾದುವನ್ನು ಕೌಂತೇಯನು ತಿನ್ನುತ, ಪಾನಮಾಡುತ, ಹುಬ್ಬುಗಳನ್ನು ಹಾರಿಸುತ, ನಿರಾಕರಿಸುತಿರುವುದನ್ನು ಬಕನು ನೋಡುತಿದ್ದನು. ವಿಶ್ಯೇಷವಾದ ಬಳಿಕ ಭೀಮನು ಕೈ ಕಾಲುಗಳನ್ನು ತೊಳೆದುಕೊಂಡು ಶುದ್ಧಾಚಮನವನ್ನು ಮಾಡಿ ತೇಟ್ಬನೆ ಎನ್ನು ಸಿಂಹನಾದವನ್ನು ಮಾಡಿ ಭುಜಗಳನ್ನು ಅಪ್ಪಳಿಸುತ—' ಎಲೋ ದುರುಳಾ ! ಬಹುಕಾಲದಿಂದ ಮನುಷ್ಯಮಾಂಸವನ್ನೇ ಹೆಚ್ಚಾಗಿ ತಿನ್ನುತ ಖಂಡಗಳನ್ನು ಬಳೆಯಿಸಿಕೊಂಡು ಮದಿಸಿದ್ದೀಯೆ, ಜವರಾಯನ ಬಳಿಗೆ ಹೋಗುವೆ ಇತ್ತ ಬಾ. ನಿನ್ನನ್ನು ನಾನು ಈ ಕ್ಷಣವೇ ಸಂಹರಿಸುವೆನಾದುದರಿಂದ, ಏಕಚಕ್ರಪುರದಲ್ಲಿ ಸರ್ವರೂ ನಿರ್ಭಯದಿಂದ ಸುಖವಾಗಿರಲಿ,—ಎಂದು ಗರ್ಜಿಸಿದನು ಬಕನು ಭೀಮನೆದುರಿಗೆ ಸಿಂಹ ಬಹುವಾಗಿ ಹೀಯಾಳಿಸಿ ಹೊಡೆದನು. ಮತ್ತು ಅವನ ಕೈಪೆಟ್ಟಿಗೆ ತಾನು ಸಿಕ್ಕದೆ ಅತಿಭಾರವಾದ ಕಲ್ಲುಗುಂಡುಗಳಿಂದಲೂ, ಮೂಲಸಹಿತವಾದ ದೊಡ್ಡ ಗಿಡಮರಗಳಿಂದಲೂ, ದ್ವಂದ್ವಯುದ್ಧದಿಂದಲೂ, ಮುಷ್ಟಿಪ್ರಹಾರಗಳಿಂದಲೂ, ವಿಚಿತ್ರವಾಗಿ ಕಾದಾಡಿದನು. ಭೀಮನು ರಕ್ಕಸನ ಸಾಮರ್ಥ್ಯಕ್ಕೆ ಮೆಚ್ಚಿ, ಉಪಾಯದಲ್ಲಿ ಅವನನ್ನು ಸಿಕ್ಕಿಸಿಕೊಂಡು ನಾನಾವಿಧವಾದ ಬಡಿತಗಳಿಂದ ನೋಯಿಸಿ, ಮರಳಿ ಬಾಹುಯುದ್ಧವನ್ನು ಮಾಡಿ, ಬಿಗಿಹಿಡಿದು, ನಡು ತೊಡೆ ಕೈಕಾಲುಗಳನ್ನು ಬಂಧಿಸಿ, ಗಿರಗಿರನೆ ತಿರುಗಿಸುತ, ನೆಲಕ್ಕೆ ಕೆಡವಿ, ಕುಕ್ಕಿ ತಿಕ್ಕುತ, ಮುಷ್ಟಿಪ್ರಹಾರಾದಿಗಳಿಂದ ಜರ್ಝರಿತಗಾತ್ರನನ್ನಾಗಿ ಮಾಡಿ, ಅವನ ಬಾಹುದ್ವಯಗಳನ್ನು ಬಲವಾಗಿಹಿಡಿದು, ಅಮರರು ಹೊಗಳುತಿರಲು, ದೊಡ್ಡ ಘೋತ್ರಗಳನ್ನು ಬಗೆಯುವಂತೆ ಅವನ ಕೈಕಾಲುಗಳನ್ನು ಸೇರಿಸಿ ಹಿಡಿದು, ದೊಡ್ಡ ಅರೆಬಂಡೆಯಮೇಲೆ ಬಡಿದು ಬಡಿದು ಆ ಬಕಾಸುರನನ್ನು ಲೋಕೋಪಕರಾರ್ಥವಾಗಿ ಕೊಂದು ಗರ್ಜಿಸಿದನು ! ಅಂದು ಜಗತ್ತಿಗೇ ಆನಂದವಾಯಿತು. ಈ ರೀತಿಯಾಗಿ ಬಕಾಸುರನೂ ಅವನ ಪರಿಜನವೂ ಭೀಮನಿಂದ ಯುದ್ಧದಲ್ಲಿ ಮಡಿಯಲು ; ಆವನ ಪ್ರದೇಶವೂ ಆ ನಗರವಾಸಿಗಳೂ ನಿಷ್ಕಂಟಕರಾಗಿದ್ದರು.

ಶತ್ರುಭಂಜಕನಾದ ಭೀಮಸೇನನು ಊರಿಗೆ ಹೋಗಿ,ತನ್ನ ತಾಯನ್ನು ಮತ್ತು ಸೋದರರನ್ನು ಸೇರಿ ಸುಖವಾಗಿದ್ದನು. ಪಾಂಡವರು ವೇದಾಧ್ಯಯನವನ್ನು ಮಾಡುತ್ತಿರುವಾಗ ಒಂದುದಿನ ವಚನಶೂರನಾದ ಅತಿಥಿಯೊಬ್ಬನು

ಅಲ್ಲಿಗೆ ಹೋಗಿ ಅವರಿಂದ ಸತ್ಕೃತನಾಗಿ ತಾನು ದ್ರೌಪದೀದೇವಿಯ ಸ್ವಯಂವರವನ್ನು ನೋಡುವುದಕ್ಕಾಗಿ ಪಾಂಚಾಲಪುರಕ್ಕೆ ತ್ವರೆಯಿಂದ ಹೋಗಬೇಕೆಂದು ಹೇಳಿದನು ಕೌಂತೇಯರು ಆ ಬ್ರಾಹ್ಮಣನ ಜತೆಯಲ್ಲೇ ತಾವೂ ಅಲ್ಲಿಗೆ ಹೋಗಬೇಕೆಂದು ನಿಶ್ಚಯಿಸಿ, ಆ ರಾತ್ರಿಯನ್ನು ಕಳೆದು ಬ್ರಾಹ್ಮಮುಹೂರ್ತದಲ್ಲಿ ಎದ್ದು ಪ್ರಾತಃಕಾಲದಲ್ಲಿ ಮಾಡಬೇಕಾದ ನಿತ್ಯ ಕರ್ಮಾನುಷ್ಠಾನಗಳನ್ನು ಮಮತೆಯಿಂದ ಮಾಡಿ ಅವ್ಯಾತಹೋರೆಯಲ್ಲಿ ಜನನಿಯೊಡನೆ ಹೊರಟರು. ದಾರಿನಡೆದು ಹೋಗುತಿರುವಾಗ ಗಂಗಾ ನದಿಯೊಳಗೆ ನಿಶೆಯಲ್ಲಿ ವಿಹರಿಸುತಿರುವ ಅಂಗಾರವರ್ಮನೆಂಬ ಗಂಧರ್ವನು ಪಾಂಡವರಿಂದ ತನ್ನ ನೀರಾಟಕ್ಕೆ ಅಡ್ಡಿಯಾಯಿತೆಂದು ಕೋಪಿಸಿಕೊಂಡು ಅವರನ್ನು ಕೆಣಕಿದನು. ಸವ್ಯಸಾಚಿಯು ಆ ಗಂಧರ್ವನನ್ನು ಆಜಿಯಲ್ಲಿ ಅಡಗಿಸಲು ! ಪಾಂಡವರು ಶರಣಾಗತನಾದ ಅವನನ್ನು ಮನ್ನಿಸಿ, ಮುಂದೆ ಹೋಗುತಿರುವಾಗ, ದೇವಲಸಹೋದರನೂ ಚತುಶ್ಶಾಸ್ತ್ರಪಂಡಿತನೂ ಷಟ್ಕರ್ಮನಿರತನೂ ಆದ ಧೌಮ್ಯಮುನಿಯನ್ನು ಕಂಡು, ವಂದಿಸಿ ಅವನನ್ನು ತಮ್ಮ ಪುರೋಹಿತನನ್ನಾಗಿ ಮಾಡಿಕೊಂಡು ತ್ವರಿತಗತಿಯಿಂದ ಪ್ರಯಾಣಮಾಡುತಿದ್ದರು ದ್ರುಪದಮಹಾರಾಜನ ಪಟ್ಟಣಕ್ಕೆ ಹೋಗುತಿದ್ದವರಲ್ಲನೇಕರು ಮಾರ್ಗದಲ್ಲಿ ಸಂಧಿಸಿದ ನವಯೌವನಶಾಲಿಗಳೂ ಮಹಾರಾಜಲಕ್ಷಣಗಳಿಂದೊಪ್ಪುವವರೂ ಆದ ವಿಪ್ರವೇಷದ ಪಾಂಡವರನ್ನು ನೋಡಿ ನೋಡಿ, 'ಯಾಜ್ಞಸೇನಿಯು ನಿಮ್ಮೊಳಗೆ ಒಬ್ಬನನ್ನು ವರಿಸಬಹುದು. ಮುಖ್ಯವಾಗಿ ಈತನು (ಭೀಮನು) ನಿಮ್ಮಲ್ಲಿ ಮಹಾಭುಜನಾಗಿ ಕಾಂತಿ ಸಂಪನ್ನನಾಗಿ ಮನ್ಮಥನಂತಿದಾನೆ. ಅಲ್ಲಿರುವ ಪ್ರಖ್ಯಾತರಾದ ಜಟ್ಟಿಗಳೊಡನೆ ಬಾಹುಯುದ್ಧವನ್ನು ಮಾಡಿ, ಅವರ ಸೊಕ್ಕನ್ನಡಗಿಸಿ ದ್ರುಪದ ಮಹೀಪತಿಗೆ ಸಂತೋಷವನ್ನುಂಟುಮಾಡಿದರೆ, ಆತನು ಬೇಕಾದಷ್ಟು ಧನ ಕನಕಗಳನ್ನು ಕೊಟ್ಟಾನು ' ಎಂದು ಹೇಳಿ ಕೊಳ್ಳುತಿರುವುದನ್ನು ಕೇಳುತ ಹೋಗುತಿದ್ದರು. ಆಗ ಷಡ್ಗುಣೈಶ್ವರ್ಯಸಂಪನ್ನನಾದ ವ್ಯಾಸಮಹರ್ಷಿಯು ದಾರಿಯಲ್ಲಿ ಪಾಂಡವರನ್ನು ಸಂಧಿಸಿ, ಅವರ ವಂದನಾದ್ಯುಪಚಾರಗಳನ್ನು ಅಂಗೀಕರಿಸಿ,ಹಿತೋಪದೇಶವನ್ನು ಮಾಡಿ ತೆರಳಿದನು. ಮಾರ್ಗಾಯಾಸ ಲೇಶವೂ ಇಲ್ಲದೆ, ರಮಣೀಯಗಳಾದ ಸರೋವರಾದಿಗಳನ್ನು ನೋಡುತ, ಅಲ್ಲ

ಲ್ಲೀ ಕ್ರೀಡಾಸಕ್ತರಾಗಿದ್ದು ಕೊನೆಗೆ ಪಾಂಚಾಲನಗರವನ್ನು ಗೋಧೂಳಲಗ್ನ ದಲ್ಲಿ ಸೇರಿ, ಸಾಧುವಾದ ಕುಂಬಾರನ ಮನೆಯಲ್ಲಿಳಿದು ತಮ್ಮ ಸಂಗತಿ ಯಾರಿ ಗೂ ತಿಳಿಯದಂತೆ ಜಾಗರೂಕರಾಗಿದ್ದರು. ರಾಜಕೀಯರು ಸ್ವಯಂವರ ಮಹೋತ್ಸವಕ್ಕಾಗಿ ಪಾಂಚಾಲನಗರವನ್ನು ಅಮರಾವತಿಯಂತೆಯೂ ಸ್ವಯಂವರಮಂಟಪವನ್ನು ಲಕ್ಷ್ಮೀದೇವಿಯ ವಾಸಸ್ಥಾನದಂತೆಯೂ, ನೇತ್ರಾ ನಂದಕರವಾಗಿ ಶೃಂಗರಿಸಿ, ವಿವಾಹಕ್ಕೋಸುಗ ಬೇಕಾದುವುಗಳನ್ನೆಲ್ಲ ಒದ ಗಿಸಿಕೊಳ್ಳುತಿದ್ದರು.

ದ್ರುಪದಮಹಾರಾಜನು ತನ್ನ ಮಕ್ಕಳ ದೆಸೆಯಿಂದ ಭೀಷ್ಮದ್ರೋಣಾ ದಿಗಳ ಭಯವನ್ನು ಬಿಟ್ಟು, ತನ್ನ ಸುಪುತ್ರಿಯಾದ ದ್ರೌಪದೀದೇವಿಯನ್ನು ಪಾಂಡವಮಧ್ಯಮನಿಗೆ ಕೊಟ್ಟು ಮದುವೆಯನ್ನು ಮಾಡಿ, ಅಳಿಯನ ಬಲ ದಿಂದ ಕೃತಾರ್ಥನಾಗಬೇಕೆಂದು ಯೋಚಿಸಿದ್ದನಷ್ಟೆ. ಆದರೆ ಪಾಂಡವರ ನೆಲೆ ಯನ್ನು ತಿಳಿಯದೆ ಭಗ್ನಾಶನಾಗಿದ್ದರೂ, ಇತರರಾಜರಿಗಸಾಧ್ಯವಾದ ಲಕ್ಷ್ಯ ಭೇದವನ್ನು ಕಲ್ಪಿಸಲು ಯತ್ನಿಸಿದನು. ಪೂರ್ವಕಾಲದಲ್ಲಿ ದೇವತೆಗಳು ವ್ಯಾಘ್ರಪಾದನ ಮಗನಾದ ಸೃಂಜರಾಯನಿಗೆ ಅನುಗ್ರಹಿಸಿಕೊಟ್ಟಿದ್ದ ಲೋಹಮಯವಾದ ಹೆದೆಯಿಂದಲಂಕೃತವಾಗಿಯೂ ಅತಿದೃಢವಾಗಿಯೂ ಇರುವ ಧನಸ್ಸನ್ನು ತರಿಸಿ ಅಂತರಿಕ್ಷಮಾರ್ಗದಲ್ಲಿ ಒಂದು ಯಂತ್ರವನ್ನು ಮಾಡಿಸಿ—'ಈ ಧನುಸ್ಸನ್ನು ಬಗ್ಗಿಸಿ, ಹೆದೆಯನ್ನೇರಿಸಿ, ಯಂತ್ರವನ್ನು ಭೇಧಿಸುವ ಸಾಮರ್ಥ್ಯವುಳ್ಳವನು, ನನ್ನ ಪುತ್ರಿಯನ್ನು ಮದುವೆಯಾಗತಕ್ಕ ವನು—' ಎಂದು ಪ್ರಚಾರಪಡಿಸಿದನು. ಆ ಸ್ವಯಂವರಕ್ಕಾಗಿ ಬಂದಿದ್ದ ಸರ್ವಾಲಂಕಾರಭೂಷಿತರೂ ಸರ್ವಾಯುಧಸಂಪನ್ನರೂ, ಆದ ನಾನಾ ದೇಶಾಧಿಪತಿಗಳೂ, ಮುಖ್ಯವಾಗಿ ವಾಸುದೇವಸಹಿತರಾದ ಯಾದವರೂ, ಕರ್ಣಸಹಿತರಾದ ಕೌರವರೂ, ಮಹಾವಿದ್ವಾಂಸರಾದ ಅನೇಕ ಭೂಸು ರೋತ್ತಮರೂ, ಮಹಾತ್ಮರಾದ ಋಷಿಶ್ರೇಷ್ಠರೂ ಲಕ್ಷ್ಯಪರೀಕ್ಷಕರೇ ಮುಂತಾದವರೂ. ದಿವ್ಯಮಂಟಪದಲ್ಲಿ ಅಲಂಕೃತವಾಗಿದ್ದ ಶ್ರೇಷ್ಠಾಸನ ಗಳಲ್ಲಿ ಕುಳಿತು, ಆ ಪ್ರೌಢವಿಪತಿಯ ಮಹೈಶ್ವರ್ಯಾದಿಗಳಿಗೆ ಆಶ್ಚರ್ಯ ಗೊಂಡು ನೋಡುತ್ತಿದ್ದರು. ದ್ರೌಪದೀದೇವಿಯು ತಂತಮ್ಮನ್ನೇ ವರಿಸಬೇ ಕೆಂಬ ಆಶೆಯಿಂದಿದ್ದ ಶಿಶುಪಾಲ, ಜರಾಸಂಧ, ಶಲ್ಯ, ಕರ್ಣಮುಂತಾದ ರಾಜಶ್ರೇಷ್ಠರಲ್ಲಿ ಯಾರಿಂದಲೂ ಮತ್ಸ್ಯಯಂತ್ರವನ್ನು ಬಾಣಪ್ರಯೋಗ

ದಿಂದ ಭೇಧಿಸುವುದಕ್ಕಾಗದೆ, ಎಲ್ಲರೂ ಲಜ್ಜಾಕ್ರಾಂತರಾಗಿ ಹಿಂದಕ್ಕೆ ಬಂದರು. ಸಕಲಪ್ರಾಣಿಗಳ ಅಂತರಂಗದಲ್ಲಿಯೂ ನೆಲಸಿರುವ ಪರಮಾತ್ಮನಂತೆ ಬ್ರಾಹ್ಮಣರ ಮಧ್ಯದಲ್ಲಿ ಕುಳಿತಿರುವ ಕೌಂತೇಯರನ್ನು ಭಕ್ತಪ್ರಿಯನಾದ ಶ್ರೀಕೃಷ್ಣನು ನೋಡಿ, ಬಲಭದ್ರನಿಗೆ ಆ ಸಂಗತಿಯನ್ನು ತಿಳುಹಿಸಿ ತನ್ನ ಕಡೆಯವರು ಯಾರೂ ಆ ಯಂತ್ರಲಕ್ಷ್ಯವನ್ನು ಭೇದಿಸುವುದಕ್ಕೆ ಹೋಗದ ಹಾಗೆ ಹೇಳಿ ನೋಡುತ್ತಿದ್ದನು. ಆಗ ಧನುರ್ಧರರಲ್ಲಿ ಶ್ರೇಷ್ಠನಾದ ಅರ್ಜುನನು ಭೀಮನ ಆಜ್ಞಾನುಸಾರ ಆ ಅಚಲಧನುಸ್ಸಿನಲ್ಲಿ ಹೆದೆಯನ್ನೇರಿಸಬೇಕೆಂದು ಎದ್ದನು ! ಎಲ್ಲರೂ-ಈ ಹಾರುವಯ್ಯನಿಗೇಕೆ ಇದರ ಗೋಜು-ಎಂದು ಹೀಯಾಳಿಸುತಿದ್ದರೂ ಅದನ್ನು ಗಣನೆಮಾಡದೆ, ಯಂತ್ರದಬಳಿಗೆ ಹೋಗಿ ಅದರ ರೀತಿಯನ್ನು ತಿಳಿದುಕೊಂಡು ಹೆದೆಯನ್ನೇರಿಸಿ ಐದುಬಾಣಗಳನ್ನು ಪ್ರಯೋಗಿಸಿ ಅದನ್ನು ಭೇದಿಸಿ ನೆಲಕ್ಕೆ ಕೆಡಹಿದನು ! ದೇವತೆಗಳಾದಿಯಾಗಿ ಸರ್ವರೂ 'ಜಯಜಯ' ಎನ್ನುತಿರಲು ; ಪ್ರತ್ಯಕ್ಷದೇವತಾಸ್ವರೂಪಳೂ, ಸಕಲಸುಲಕ್ಷಣಗಳಿಂದ ಕೂಡಿದವಳೂ ಆದ ದ್ರೌಪದೀದೇವಿಯು ದಿವ್ಯವಾದ ವರಣಮಾಲೆಯಿಂದ ಮಹಾನುಭಾವನಾದ ಪಾರ್ಥನ ಕಂಠವನ್ನಲಂಕರಿಸಿದಳು ! ಆಗ ಹಲವು ರಾಜಕುಮಾರರು ತಾಳ್ಮೆಯಿಲ್ಲದವರಾಗಿ ವಿಪ್ರವೇಷದಿಂದಿದ್ದ ವಿಜಯನಮೇಲೆ ಬೀಳಲು, ಒಡನೆ ಭೀಮಾರ್ಜುನರು ತಮಗೆದುರಾಗ ಶಲ್ಯಕರ್ಣರೇ ಮುಂತಾದ ಮಹಾರಥಿಕರಮೇಲೆ ಕಾಣಿಸಿಕೊಂಡು, ದಿವ್ಯಾಸ್ತ್ರಗಳನ್ನುಪಯೋಗಿಸಿ, ಪರಾಜಿತರನ್ನಾಗಿಮಾಡಿದರು. ಮರಳಿಬಂದ ಶಲ್ಯನನ್ನು ಭೀಮನು ಬಿಗಿದೆತ್ತಿ ಮೇಲಕ್ಕೆ ಹಾರಿಸಿ ನೆಲಕ್ಕೆ ಕೆಡವಿದುದನ್ನು ನೋಡಿ, ಅನಿಬರೂ ಆಶ್ಚರ್ಯಪಡುತಿರಲು ವೈರಿಗಳೆಲ್ಲ ಪಲಾಯನಗೊಂಡರು.

ಆಬಳಿಕ ಭೀಮಾರ್ಜುನರು ತಮ್ಮ ಜತೆಯಲ್ಲಿ ಬರುತ್ತಿರುದ್ದ ಪಾಂಚಾಲಿಯೊಡನೆ ತಾವಿಳಿದಿದ್ದ ಮನೆಗೆ ಹೋಗಿ, ತಮ್ಮ ತಾಯಿಯನ್ನು ಕೂಗಿ-ಅಮ್ಮಾ ನಾವು ಬಂದು ಭಿಕ್ಷವನ್ನು ತಂದಿದೇವೆ—ಎನಲು ; ಆಕೆಯು ಆ ಮಾತನ್ನು ಕೇಳಿ "ನೀವೈವರೂ ಅದನ್ನು ಅನುಭವಿಸಿ" ಎಂದು ಹೇಳುತ, ಅಷ್ಟರಲ್ಲಿಯೇ ಅಲ್ಲಿಗೆ ಬಂದು, ಆ ಕನ್ಯಾಮಣಿಯನ್ನು ನೋಡಿ, ತನ್ನ ಅನುಚಿತವಾಕ್ಯಕ್ಕೆ ಚಿಂತಿಸುತ, ಧರ್ಮಭಂಗವಾದೀತೆಲ್ಲಾ ಎಂದು ಭಯಪಡುತ,

ದ್ರೌಪದೀದೇವಿಯೊಡನೆ ಯುಧಿಷ್ಠಿರನಬಳಿ ನಿಂತು, ತಾನು ಪ್ರಮಾದದಿಂದ ಆಡಿದಮಾತಿಗೆ ವ್ಯಥೆಗೊಂಡಳು. ಆತನು ಅನುಜರೊಡನೆ ಆಲೋಚಿಸುತ್ತಿರುವಾಗ ಶ್ರೀವತ್ಸಕೌಸ್ತುಭಧರನಾದ ಶ್ರೀಕೃಷ್ಣನು ಬಲರಾಮನೊಡನೆ ಅಲ್ಲಿಗೆ ಹೋಗಿ ಕೌಂತೇಯರ ಯೋಗಕ್ಷೇಮಾದಿಗಳನ್ನು ವಿಚಾರಿಸಿ ತನ್ನ ಬಿಡಾರಕ್ಕೆ ಚಿತ್ತೈಸಿದನು. ಪಾಂಚಾಲಿಯ ಅಣ್ಣನೂ ಯುವರಾಜನೂ ಆದ ಧೃಷ್ಟದ್ಯುಮ್ನನು ಪಾಂಡವರ ವೃತ್ತಾಂತವನ್ನೆಲ್ಲ ಗೂಢಚಾರರಿಂದ ತಿಳಿದುಕೊಂಡು ಹೋಗಿ, ತನ್ನ ತಂದೆಯೊಡನೆ— ‘ ಪಿತನೇ, ಲಾಲಿಸು ! ಕಾಲನು ಕೋಪದಿಂದ ಲೋಕವನ್ನು ನಾಶಮಾಡುವಂತೆ, ಯಾರನ್ನೂ ಲಕ್ಷ್ಯಮಾಡದೆ, ಕೈಯಲ್ಲಿ ಮಹಾವೃಕ್ಷವನ್ನು ಹಿಡಿದುಕೊಂಡು ಶಲ್ಯ ಮುಂತಾದ ಸುಭಟರನ್ನು ನಿಗ್ರಹಿಸಿದವನೇ ಭೀಮಸೇನನು ! ಪಣವನ್ನು ಗೆದ್ದು ಅದೇ ಧನುಸ್ಸನ್ನು ತೆಗೆದುಕೊಂಡು ಹೋಗಿ ಯುದ್ಧಮಾಡಿ, ಕರ್ಣನೇ ಮುಂತಾದ ವೀರರನ್ನು ಪ್ರಹರಿಸಿ ಓಡಿಸಿದವನೇ ಅರ್ಜುನನು ; ದೈವಾನುಗ್ರಹದಿಂದ ನಮ್ಮ ಇಷ್ಟಾರ್ಥವು ನೆರವೇರಿತು. ’ ಎಂದು ಹೇಳಿ ಆನಂದಗೊಳಿಸಿದನು. ಆ ಬಳಿಕ ಭೂಪತಿಯು ತನ್ನ ಪುತ್ರಿಯನ್ನು ಕೌಂತೇಯರೊಡನೆ ರಾಜಮರ್ಯಾದೆಯಿಂದ ಉತ್ಸವಪೂರ್ವಕವಾಗಿ ತನ್ನ ಅರಮನೆಗೆ ಕರೆಯಿಸಿ, ಪುತ್ರಮಿತ್ರರೊಡನೆ ಪಾದಚಾರಿಯಾಗಿಯೇ ಹೋಗಿ ಇದಿರುಗೊಂಡು, ಅವರು ರತ್ನಖಚಿತವಾದ ಪಲ್ಲಕ್ಕಿಯಿಂದಿಳಿದ ಒಡನೆ ಆಲಂಗಿಸಿ, ಅವರ ಕ್ಷೇಮಲಾಭವನ್ನು ಕೇಳಿ ಸಂತುಷ್ಟನಾಗಿ, ರಾಜೇಂದ್ರಭವನದಲ್ಲಿಳಿಯಿಸಿ, ಉಪಚರಿಸುತ್ತಿದ್ದನು. ಆ ಮಾರನೆಯ ದಿನ ನರೇಂದ್ರನು ಪಾಂಡವಾಗ್ರಜನನ್ನು ಕುರಿತು—ಆರ್ಯನೇ! ನಾಳೆಯ ದಿನ ಪಂಚಾಂಗಶುದ್ಧಿಯಿಂದ ವೃಷಭಲಗ್ನವು ನಿಷ್ಪಂಚಕವಾಗಿರುವುದರಿಂದ, ಲಕ್ಷ್ಯವನ್ನು ಕೆಡಹಿ, ದ್ರೌಪದಿಯನ್ನು ಗೆದ್ದ ಧನಂಜಯನು ಆಕೆಯನ್ನು ವಿವಾಹವಾಗುವುದಕ್ಕೆ ಆಜ್ಞೆಯನ್ನು ಕೊಡಲು ಅಡ್ಡಿ ಏನು ? ಎಂದು ಪ್ರಶ್ನೆಮಾಡಿದನು. ಧರ್ಮರಾಯನು—ಎಲೈ ಪಿತೃಸದೃಶನೇ, ಮಾತೃವಾಕ್ಯಾನುಸಾರ ಜ್ಯೇಷ್ಠಾನುಕ್ರಮವಾಗಿ ನಾವು ಐದುಮಂದಿಯೂ ಆ ಕನ್ಯೆಯನ್ನು ವಿವಾಹವಾಗಬೇಕಾಗಿದೆ—ಎಂದನು. ಪಾಂಚಾಲಭೂಪತಿಯು ಅದಕ್ಕೆ ಒಪ್ಪದೆ ಪಾರಾಶರ್ಯನನ್ನು ಸ್ಮರಿಸಿದನು. ಸ್ಮರಣಮಾತ್ರ ಸಂತುಷ್ಟನಾದ ಆ ಮಹನೀಯನು ಆಗಲೇ ಅವರ ಸಮೀಪಕ್ಕೆ ಬಿಜಯಮಾಡಿ ಪ್ರತ್ಯ

ತ್ಥಾನಾದ್ಯುಪಚಾರಗಳನ್ನು ಹೊಂದಿ ಸುಖಸನಾಸೀನನಾಗಿರುವಲ್ಲಿ, ದ್ರುಪದ ರಾಜನು—' ಎಲೈ ಮಹಾಶಯನೇ ! ಒಬ್ಬ ಸ್ತ್ರೀಗೆ ಬಹುಮಂದಿ ಪತಿಗಳಾದರೆ ಧರ್ಮಸಂಕರವಾಗುವುದಿಲ್ಲವೇ ? ಅಪ್ಪಣೆಯಾಗಬೇಕು—ಎಂದನು. ಅದಕ್ಕೆ ವ್ಯಾಸಮಹರ್ಷಿಯು—ಎಲೈ ರಾಜೋತ್ತಮನೇ ! ನಿನ್ನ ಪತ್ನಿಯು ತನ್ನ ಮಗಳಾದ ಈ ಯಾಜ್ಞಸೇನಿಗೆ ಧರ್ಮಾತ್ಮರಾದ ಐವರು ಪತಿಗಳಾಗಬೇಕೆಂದು ಪೂರ್ವಜನ್ಮದಲ್ಲಿ ಪ್ರಾರ್ಥಿಸಿರುವಂತೆ, ಯಾಜೋಪಯಾಜರು ಅನುಗ್ರಹಿಸಿರುವರು ಈ ಇಂದ್ರಸೇನೆಯು ಪರಮ ಪಾತಿವ್ರತ್ಯಕ್ಕೆ ಮೆಚ್ಚಿದ ಮೌದ್ಗಲ್ಯನೆಂಬ ಪ್ರಾಣಕಾಂತನು ಈಕೆಯ ಇಷ್ಟಾನುಸಾರ ಐದುರೂಪಗಳನ್ನು ಧರಿಸಿ ಕ್ರೀಡಿಸುತ್ತಿದ್ದು ಮುಂದಿನ ಜನ್ಮದಲ್ಲಿಯೂ ಪಂಚಪತಿಗಳಾಗಲಿ, ಎಂದು ವರವನ್ನಿತ್ತಿರುವನು. ಈ ನಾಳಾಯನಿಯು, ಸರ್ವವಿದ್ಯಾನಿಧಿಯೂ ಮೋಕ್ಷಪ್ರದನೂ ಆದ ಪರಮೇಶ್ವರನನ್ನು ಕುರಿತು ತಪಸ್ಸನ್ನು ಮಾಡಿ ಐದುವೇಳೆ ' ಪತಿಂದೇಹಿ ' ಎಂದು ಪ್ರಾರ್ಥಿಸಿದುದರಿಂದ ತ್ರ್ಯಂಬಕಸ್ವಾಮಿಯು ಈಕೆಗೆ ಯಮಾನಿಲೇಂದ್ರಾಶ್ವಿನೀದೇವತೆಗಳ ಅಂಶದಿಂದ ಜನಿಸಿದ ಇಂದ್ರರೂಪರಾದ ಐವರು ಗಂಡಂದಿರಾಗಲೆಂದೂ, ಆ ಐವರೂ ಸಮಾನಭೋಗಗಳಿಂದಲೂ, ಅನ್ಯೋನ್ಯಪ್ರೀತಿಯಿಂದಲೂ, ಕೂಡಿ ದಿವ್ಯರೂಪಸಂಪನ್ನರಾಗಿ ಹುಟ್ಟಿ, ನಿನಗೆ ಪತಿಗಳಾಗುವುದರಿಂದ ನಿನ್ನ ಪಾತಿವ್ರತ್ಯಕ್ಕೆ ಭಂಗವಿಲ್ಲವೆಂದೂ, ವರವನ್ನು ದಯಪಾಲಿಸಿರುವನು. ಈ ಪಾಂಡವಕುಮಾರರೈವರೂ ಚರ್ಮಚಕ್ಷುವಿಗೆ ಪ್ರತ್ಯೇಕವೆಂದು ತೋರಿದರೂ ಏಕಹೃದಯರಾದುದರಿಂದ ಮೇಲೆಹೇಳಿದ ದೇವತೆಗಳ ಪತ್ನಿಯರ ಅಂಶಗಳಿಂದೊಡಗೂಡಿದ ಮಹಾಶಕ್ತಿಯಾದ ದ್ರೌಪದೀದೇವಿಯು ಇವರೈವರನ್ನೂ ವಿವಾಹವಾಗಬೇಕಾದುದು ವಿಧಿವಿಲಾಸವೆಂದು ಹೇಳಿದುದಲ್ಲದೆ ಪಂಚೇಂದ್ರೋಪಾಖ್ಯಾನವನ್ನು ವಿವರಿಸಿ, ತೋರಿಸಿದ ಬಳಿಕ, ಸೋಮಕನ ಸಂಶಯನಿವೃತ್ತಿಯನ್ನು ಹೊಂದಿ ಸಾಕ್ಷಾದ್ವಿಷ್ಣುಸ್ವರೂಪನಾದ ವ್ಯಾಸಋಷೀಶ್ವರನ ಅಭಿಪ್ರಾಯಕ್ಕೆ ಒಪ್ಪಿ, ಆ ಪುಣ್ಯತಮವಾದ ವೃತ್ತಾಂತದಿಂದ ಸಂತುಷ್ಟನಾದನು. ಅನಂತರ ದ್ರೌಪದೀದೇವಿಯ ವಿವಾಹಮಹೋತ್ಸವಕ್ಕಾಗಿ ಸಕಲೋಪಕರಣಗಳೂ ಸಿದ್ಧವಾಗಿ, ಆ ಪುರವು ಇಂದ್ರಪುರಿಯಂತೆ ಮೆರೆಯುತ್ತಿರಲು ; ದ್ರುಪದಮಹಾರಾಜನು ಹೃದಯದಿಂದ ಶ್ರೀಪತಿಯನ್ನೂ

ಕುತೂಹಲದಿಂದ ಕುಲಶೀಲವಿನಯವೃತ್ತಿಗಳಿಂದೊಪ್ಪುವ ಮಹಾತ್ಮರಾದ ಅಳಿಯಂದಿರನ್ನೂ, ಆಜ್ಞೆಯಿಂದ ಪರಿಜನರನ್ನೂ, ಉಪಚಾರಾದಿಗಳಿಂದ ಮದುವೆಗಾಗಿ ಬಂದಿರುವವರನ್ನೂ, ಕಣ್ಣುಗಳಿಂದ ಕೃತಾಕೃತಗಳ ಪರಾಮರ್ಶೆಯನ್ನೂ, ಪುತ್ರರೊಡನೆ ಎಲ್ಲಾಕಾರ್ಯಗಳನ್ನೂ, ತಾನೇ ನೋಡಿಕೊಳ್ಳುತ್ತಿದ್ದನು. ಹೀಗೆ ಆ ರಾಜಕುಲವೆಲ್ಲ ವಿವಾಹಮಂಗಳಕಾರ್ಯದಲ್ಲಿ ನಿರತರಾಗಿರಲು ; ಲಗ್ನಕಾಲವು ಸಮೀಪಿಸಿತು ದ್ರುಪದರಾಜನು ಅಷ್ಟರಲ್ಲಿ ವಿವಾಹಾಂಗವಾದ ಹೋಮಮುಂತಾದುವನ್ನು ಮಾಡಿಸಲು, ಸರ್ವಾಲಂಕಾರಭೂಷಿತರಾದ ಪಾಂಡವರು ವಿವಾಹಮಂಟಪದಲ್ಲಿ ಕುಳಿತು ಒಂದೊಂದುದಿನ ಒಬ್ಬರೊಬ್ಬರು ಕ್ರಮವಾಗಿ, ಸಕಲಾಭರಣಾದಿಗಳಿಂದಲಂಕೃತಳಾದ ಸೌಭಾಗ್ಯವತಿ ದ್ರೌಪದೀದೇವಿಯ ಪಾಣಿಗ್ರಹಣವನ್ನು ಮಾಡಿದರು ! ಲೋಕಕ್ಕೆ ಅತ್ಯಾಶ್ಚರ್ಯಕರವಾದ ಆ ಮದುವೆಯು ಸಕಲಸಂಭ್ರಮಗಳಿಂದ ಗಿರಿಜಾಕಲ್ಯಾಣದಂತೆ ಲೋಕಾಹ್ಲಾದಕರವಾಗಿ ನೆರವೇರಿತು ! ಬಳಿಕ ಭೀಮಸೇನನು ತನ್ನ ತಾಯಿಯೊಡನೆಯೂ ಅಣ್ಣತಮ್ಮಂದಿರೊಡನೆಯೂ ಪಾಂಚಾಲಪಟ್ಟಣದಲ್ಲಿ ರಾಜಭೋಗಗಳನ್ನನುಭವಿಸುತ ಸುಖವಾಗಿದ್ದನು.

ಈ ವರ್ತಮಾನವು ನಾನಾದೇಶಗಳಲ್ಲಿಯೂ ಹಬ್ಬಿ ಪಾಂಡವಪಕ್ಷದವರಿಗೆಲ್ಲ ಆನಂದವೂ ಕೌರವಾದಿಗಳಿಗೆ ಆತಂಕವೂ ಒದಗಿತು. ಕರ್ಣಪ್ರೇರಿತನಾದ ದುರ್ಯೋಧನನು - ನಿರ್ನಾಮರಾಗಿದ್ದ ಪಾಂಡವರು ತಿರಿಗೂ ತಲೆ ಹಾಕಿದರಲ್ಲಾ ! ಏನುಮಾಡಲಿ,—ಎಂದು ರೋದಿಸುತ, ಅಸಂಖ್ಯಾತವಾದ ಚತುರಂಗಬಲದೊಡನೆ ಜೈತ್ರಯಾತ್ರೆ ಹೊರಟು, ಪಾಂಡವರನ್ನು ಹೇಗಾದರೂ ನಿಗ್ರಹಿಸಬೇಕೆಂದು ಅವರನ್ನೆಮುರಿಸಲು ತವಕಪಡುತ್ತಿದ್ದನು. ದ್ರುಪದನ ಪಟ್ಟಣವು ಮರಳಿ ಕೌರವರಿಂದ ಮುತ್ತಿಗೆಹಾಕಲ್ಪಟ್ಟಿತು. ಪಾಂಡವರು ಪಾಂಚಾಲಭೂಪತಿಯೊಡನೆ ಹೊರಟು ಕೌರವರಮೇಲೆ ಕಾಣಿಸಿಕೊಂಡು, ವಿಚಿತ್ರವಾಗಿ ಯುದ್ಧಮಾಡುತ್ತಿರಲು ; ಸಮರದಕ್ಷನಾಗಿದ್ದ ಮಾರುತಿಯು ಕರ್ಣ, ಶಕುನಿ, ಜಯದ್ರಥ, ದುರ್ಯೋಧನರೊಡನೆ ಹೋರುತ್ತಿದ್ದನು. ಭೀಮಾರ್ಜುನರ ಹೊಡೆತಕ್ಕೆ ಸಿಕ್ಕಿದ ಕೌರವೇಂದ್ರನು ಸೋಲಿಸಲ್ಪಟ್ಟು ಸೇನಾಸಮೇತನಾಗಿ ಓಡಿದನು. ಪಾಂಡವರು ಅವನನ್ನು ರಕ್ಷಿಸುವುದಕ್ಕಾಗಿ ಬೆನ್ನಟ್ಟಿಗೆ ಯುದ್ಧಭೂಮಿಯಲ್ಲಿಯೇ ಸ್ವಲ್ಪಹೊತ್ತು ಇದ್ದು, ವಿಜಯ

ಹರ್ಷಾತಿಶಯದಿಂದ ತಮ್ಮ ಅರಮನೆಯನ್ನು ಸೇರಿದರು. ಪಾಂಡವ ಜಯದಿಂದ ಪ್ರತಿಷ್ಠಾಹೀನರಾದ ಕೌರವರು-ಕೌಂತೇಯರೆಂದು ತಿಳಿಯದೆ, ಯುದ್ಧಕ್ಕೆ ನಿಂತು, ಭೀಮಾರ್ಜುನರಪ್ರಹಾರಗಳಿಂದ ಆವರು ಪಾಂಡವ ರೆಂಬುದನ್ನು ತಿಳಿದು, ಅವರನ್ನೆದುರಿಸದೆ ಮರಳಿ ಬಂದೆವೆಂದೂ, ದ್ರೌಪದೀ ದೇವಿಯು ನಮ್ಮಮನೆಗೆ ಸೇರಿದುದು ಬಡವನ ಮನೆಗೆ ಭಾಗ್ಯಲಕ್ಷ್ಮಿಯೇ ಸೇರಿದಂತಾಯಿತೆಂದೂ–ಪುರನಿವಾಸಿಗಳೊಡನೆ ಪ್ರಿಯವಚನಗಳನ್ನು ಹೇಳಿ ಕೊಳ್ಳುತ್ತಿದ್ದರು. ದ್ವಾರಕೆಯಿಂದ ಜಗದ್ಧಿತಾಂತಃಕರಣನಾದ ವಾಸುದೇವನು ಇಷ್ಟಬಂಧುಗಳೊಡನೆ ಪ್ರಯಾಣಹೊರಟು ಪಾಂಚಾಲಪುರವನ್ನು ಸೇರಿ, ತನ್ನ ಪಿತೃಭಗಿನಿಯಾದ ಕುಂತೀದೇವಿಗೆ ನಮಸ್ಕರಿಸಿ, ಪತ್ನಿಸಮೇತರಾದ ಕೌಂತೇಯರಿಗೆ ಅನರ್ಘರತ್ನಾಭರಣಗಳನ್ನು ಕೊಟ್ಟು, ಮನ್ನಿಸಿ ಅವರೊ ಡನೆ ಅಭೀಷ್ಟವಿಹಾರದಿಂದಿದ್ದನು. ಧೃತರಾಷ್ಟ್ರನು ಮಂತ್ರಾಲೋಚನೆ ಯನ್ನು ಮಾಡಿ ಪಾಂಡವರನ್ನು ಹಸ್ತಿನಾವತಿಗೆ ಕರೆತರಲು, ಧರ್ಮಾತ್ಮ ನಾದ ವಿದುರನನ್ನೇ ಕಳುಹಿಸಿದನು. ಆತನು ಮಿತಪರಿವಾರದೊಡನೆ ಪಾಂಚಾ ಲರಾಯನ ಬಳಿಗೈದಿ ಕುಶಲಪ್ರಶ್ನೆಯನ್ನು ಮಾಡಿ ತಾನು ತಂದಿದ್ದ ಭೂಷಣಗಳನ್ನು ಕೊಟ್ಟು,–"ಎಲೈ ರಾಜೇಂದ್ರನೆ, ನೀನು ದಯಮಾಡಿ ಕಳುಹಿಸಿದರೆ, ದ್ರೌಪದೀದೇವಿಯೊಡನೆ ಪಾಂಡವರನ್ನು ಗಜಪುರಿಗೆ ಕರೆದು ಕೊಂಡು ಹೋಗುವೆನು. ನನ್ನನ್ನು ಇಲ್ಲಿಗೆ ಕಳುಹಿಸಿದ ಕುರುರಾಯನು ಯುಧಿಷ್ಠಿರಾದಿಗಳನ್ನು ಎಷ್ಟುಹೊತ್ತಿಗೆ ನೋಡೇನೆಂದು ಎದುರುನೋಡುತ್ತಿ ದಾನೆ. ಅವರನ್ನಗಲಿ ಬಹುಕಾಲವಾಯಿತು. ಲಗ್ನವಾಗಿ ಬಂದುವರ್ಷಕ್ಕೆ ಬಂದಿತಾದರೂ ಸ್ವರಾಜ್ಯಕ್ಕೆ ಬಾರದೆ ಶ್ವಶುರಗೃಹದಲ್ಲಿಯೇ ಇದಾರೆ. ಅವ ರನ್ನು ಕಳುಹಿಸಿಕೊಡು,"– ಎಂದು ಕೇಳಿದನು. ಆದನ್ನಂಗೀಕರಿಸಿದ ದ್ರುಪದರಾಯನು ಶ್ರೀಕೃಷ್ಣನ ಅಪ್ಪಣೆಯನ್ನು ಪಡೆದು, ತನ್ನ ರಾಜ್ಯಸಂಪ ತ್ತಿಗೆ ತಕ್ಕಂತೆ ಬೇಕಾದಷ್ಟು ಬಳುವಳಿಯನ್ನಿತ್ತು ಅಳಿಯಂದಿರನ್ನು ಮಗ ಳನ್ನೂ ಬಹುಸಂಭ್ರಮದಿಂದ ಇಷ್ಟಬಂಧುಗಳೊಡನೆ ಹಸ್ತಿನಾವತಿಗೆ ಕಳು ಹಿಸಿ ಕೊಟ್ಟನು.

ಆ ಬಳಿಕ ಪಾಂಡವರು ವಿದುರನೊಡನೆ ತಮ್ಮ ಪಿತೃವ್ಯನ ಬಳಿಗೆ ಹೋಗಿ ವಂದಿಸಿ, ಕುಶಲಪ್ರಶ್ನೋತ್ತರಗಳು ನಡೆದನಂತರ ರಾಜಾಜ್ಞೆಯಂತೆ ತಮ್ಮ

ಅರಮನೆಗೆ ಹೋಗಿದ್ದರು. ಅಂತಃಪುರದಲ್ಲಿದ್ದ ಮಹಾರಾಜ್ಞಿ ಮಾತೃಶ್ರೀ ಗಾಂಧಾರೀದೇವಿ, ಚಿಕ್ಕಮಹಾರಾಣಿ ಶ್ರೀಮತಿ ಭಾನುಮತಿ ಮುಂತಾದ ಅಬಲಾಜನರು ಸೌಮಂಗಲ್ಯವತಿಯಾದ ದ್ರೌಪದೀದೇವಿಯನ್ನು ನೋಡಿ, ಕೌರವರ ವಿನಾಶಕ್ಕೆ ಬಂದಿರುವ ಮೃತ್ಯುವೆಂದರಿಯದೆ, ಸನ್ಮಾನಿಸಿ, ಪಾಂಡುವಿನ ಅರಮನೆಗೆ ಅತ್ತೆ ಸೊಸೆಯರನ್ನು ಕಳುಹಿಸಿ, ಅಸೂಯೆಯಿಂದಿದ್ದರು. ಪ್ರಜೆಗಳೆಲ್ಲ ಅಗಲಿದ್ದ ಪಾಂಡವರನ್ನು ಕಂಡು, ಪೂರ್ಣಚಂದ್ರೋದಯವಂ ನೋಡಿ ಉಬ್ಬುವ ಸಾಗರದಂತೆ ಆನಂದದಿಂದ ಇದ್ದರು. ಮರಳಿ ಐದುವರುಷ ಪರ್ಯಂತ ವಿದ್ಯಾವಿವೇಕ ಸಂಪನ್ನರಾದ ಪಾಂಡವರು ಹಸ್ತಿನಾವತಿಯಲ್ಲಿಯೇ ಇದ್ದುಕೊಂಡು ರಾಜಕಾರ್ಯಧುರಂಧರರಾಗಿ, ದೀನಾನಾಥವಿಪನ್ನರಿಗೆ ದಿಕ್ಕಾಗಿ ಮತಧರ್ಮವನ್ನು ಮೀರದೆ, ಸುಖವಾಗಿದ್ದರು. ಆ ಬಳಿಕ ಧೃತರಾಷ್ಟ್ರ ಸಾರ್ವಭೌಮನು ಶ್ರೀಕೃಷ್ಣವೇದವ್ಯಾಸರ ಸನ್ನಿಧಿಯಲ್ಲಿ ಯುಧಿಷ್ಠಿರನಿಗೆ ಯಥಾವಿಧಿಯಾಗಿ ಪಟ್ಟಾಭಿಷೇಕವನ್ನು ಮಾಡಿಸಿ, ತನ್ನ ತಮ್ಮನಪಾಲಿನ ಅರ್ಧರಾಜ್ಯವನ್ನು ಪಾಂಡವರಿಗೆ ಕೊಟ್ಟು ರಾಜಧಾನಿಗೆ ೫೭ ಮೈಲು ದೂರದಲ್ಲಿರುವ ಖಾಂಡವ ಪ್ರಸ್ಥದಲ್ಲಿರುವಂತೆ ಹೇಳಿ ಮಹಾರಾಜವೈಭವದಿಂದ ಅಲ್ಲಿಗೆ ಕಳುಹಿಸಿಕೊಟ್ಟನು. ಅಡವಿಯಂತಿದ್ದ ಖಾಂಡವಪ್ರಸ್ಥವು ಶ್ರೀಕೃಷ್ಣನ ಆಜ್ಞಾನುಸಾರ, ವಿಶ್ವಕರ್ಮನಿಂದ ಯಮುನಾನದೀತೀರದಲ್ಲಿ ಇಂದ್ರಪ್ರಸ್ಥ(ದೆಹಲಿ)ವೆಂಬ ದೊಡ್ಡ ಪಟ್ಟಣವಾಗಿ ಮಾಡಲ್ಪಟ್ಟಿತು. ಜಯಲಕ್ಷ್ಮೀದೇವಿಯು ವಾಸವಾಗಿರುವ ಲೋಕರಂಜನ ರಾಜಭವನದಂತೆ ಮನೋಹರವಾದ ದಿವ್ಯಭವನವನ್ನೊಳಕೊಂಡು ಸಕಲಜನಾನಂದಕರವಾಗಿದ್ದಿತು. ಅಲ್ಲಿ ಪಾಂಡವರು ಸೌಖ್ಯವಾಗಿದ್ದುಕೊಂಡು, ವರ್ಣಾಶ್ರಮಗಳಿಗೆ ಯೋಗ್ಯವಾದ ಕರ್ಮಗಳನ್ನು ತಾವೂ ಮಾಡುತ ಇತರರಿಂದಲೂ ಮಾಡಿಸುತ ವೇದವೇದಾಂಗ ಪುರಾಣಮೊದಲಾದ ತತ್ವಗಳನ್ನು ವಿಚಾರಿಸುತ, ರಾಜತಂತ್ರಧುರೀಣರಾಗಿ ಚತುರಂಗಬಲದಿಂದ ಕೂಡಿ, ಯುಕ್ತಾಯುಕ್ತವಿವೇಚನೆಯಿಂದ ಯಾವಾಗಲೂ ಸಕಲಪ್ರಜೆಗಳನ್ನೂ ರಂಜಿಸುತ, ಪ್ರಭುಮಂತ್ರೋತ್ಸಾಹಶಕ್ತಿಗಳನ್ನು ಕಾಲಕಾಲಗಳಲ್ಲಿ ಉಪಯೋಗಿಸುತ, ಮಹೇಂದ್ರನಂತೆ ಸಕಲೈಶ್ವರ್ಯಸಂಪನ್ನರಾಗಿ ರಾಜ್ಯವನ್ನಾಳುತ್ತಿರಲು; ಒಂದುದಿನ ಸರ್ವಜ್ಞನಾದ ನಾರದಮಹರ್ಷಿಯು ಮಹತಿಯೆಂಬ ವೀಣೆಯನ್ನು ನುಡಿಯಿಸಿಕೊಂಡು

ತಂತ್ರೀಲಯಕ್ಕೆ ಸರಿಯಾಗಿ ಶ್ರೀರಾಮನಾಮಸಂಕೀರ್ತನವನ್ನು ಮಾಡುತ ಧರ್ಮರಾಯನ ಆಸ್ಥಾನಕ್ಕೆ ಬಿಜಯಮಾಡಿ, ಕನಕಪೀಠದಲ್ಲಿ ಕುಳಿತು ಪೂಜಿತ ನಾದನು. ಕುಶಲಪ್ರಶ್ನಾನಂತರ,—ಸುಂದೋಪಸುಂದರರು ತಿಲೋತ್ತಮೆ ಎಂಬ ಸ್ತ್ರೀಯ ವಿಲಾಸಕ್ಕೆ ವಶರಾಗಿ, ಪರಸ್ಪರ ಬಡಿದಾಡಿ ಮಡಿದಸಂಗತಿ ಯನ್ನು ವಿವರಿಸಿ, ಪಾಂಡವರಿಗೆ ಸ್ತ್ರೀನಿಮಿತ್ತವಾಗಿ ಎಂದಿಗೂ ವಿರೋಧವು ಬಾರಂದತೆ, ದ್ರೌಪದೀದೇವಿಯು ಪಾಂಡುಕುಮಾರರೈವರೊಳಗೆ ಕ್ರಮ ವಾಗಿ ಬಂದೊಂದುವರ್ಷ ಒಬ್ಬೊಬ್ಬರಲ್ಲಿ ಸಂಸಾರಮಾಡಿಕೊಂಡು ಸುಖ ವಾಗಿರುವಂತೆಯೂ ಆ ಸಂವತ್ಸರ ಸತೀಸಮೀಪದಲ್ಲಿ ಏಕಾಂತವಾಗಿರುವು ದನ್ನು ಮತ್ತೊಬ್ಬನು ನೋಡಿದರೆ, ನಿಯಮಪೂರ್ವಕವಾಗಿ ಒಂದುವರ್ಷ ಕಾಲ ತೀರ್ಥಯಾತ್ರೆ ಮಾಡಿಕೊಂಡಿರುವಂತೆಯೂ, ಸಂಕೇತವನ್ನು ಮಾಡಿ ಕೊಟ್ಟು ಅಂತರ್ಹಿತನಾದನು !

ಈ ಪ್ರಕಾರ ನಿಖಿಲಶಾಸ್ತ್ರಪ್ರವೀಣನಾದ ನಾರದಮಹಾಮುನಿಯ ಸನ್ನಿ ಧಾನದಲ್ಲಿ ಮಾಡಿದ ಪ್ರತಿಜ್ಞೆಯಂಮೀರದೆ, ಯುಧಿಷ್ಠಿರಾದಿಗಳು ದ್ರೌಪದೀ ದೇವಿಯೊಡನೆ ಸೌಖ್ಯವಾಗಿರುವಾಗ ಇವರೈವರ ಪ್ರತಿಬಿಂಬವೆನಿಸಿದ— ಪ್ರತಿವಿಂದ, ಶ್ರುತಸೋಮ, ಶ್ರುತಕೀರ್ತಿ, ಶತಾನೀಕ, ಶ್ರುತಸೇನ—ಎಂಬ ಉಪಪಾಂಡವರು ಹುಟ್ಟಿದರು ! ಭೀಮಸೇನದೇವನು ಸ್ವಯಂವರದಲ್ಲಿ ಕಾಶೀರಾಜ ಪುತ್ರಿಯಾದ ಕಾಳೀದೇವಿಯನ್ನು ವರಿಸಿ ಆಕೆಯಲ್ಲಿ ಸಮಾನ ವಾಯುವಿನ ಅಂಶಭೂತನಾದ ಶರ್ವತ್ರಾತನೆಂಬ ಪುತ್ರನನ್ನು ಪಡೆದು, ವಸು ದೇವಪುತ್ರಿಯರಾದ ಇಪ್ಪತ್ತುಮಂದಿ ರಾಜಸ್ತ್ರೀಯರನ್ನು ಮದುವೆಯಾಗಿ ಸುಖವಾಗಿದ್ದನು. ಈ ರೀತಿ ಪಾಂಡವರಿಗೆ ಪ್ರಿಯಪತ್ನಿಯರು ಕೆಲವರಿ ದ್ದರೂ ದ್ರೌಪದೀದೇವಿಯೇ ಪ್ರಾಣಗಳಿಗೂ, ಪ್ರಣಯಕ್ಕೂ ಧರ್ಮಕ್ಕೂ ವಿಶ್ವಾಸಕ್ಕೂ, ಸುಖಕ್ಕೂ, ಪಾತ್ರಳಾಗಿದ್ದಳು. ಸಾವಿರಸೋಮಯಾಗಗಳು ಮುಗಿದಬಳಿಕ ಭೀಮನಿಂದ ದ್ರೌಪದೀದೇವಿಯಲ್ಲಿ ಹುಟ್ಟಿದ ಪುತ್ರನು ಸೋಮಸೂರ್ಯಸಮಾನ ತೇಜಸ್ಸುಳ್ಳವನಾಗಿದ್ದುದರಿಂದ ಅವನಿಗೆ ಶ್ರುತ ಸೋಮನೆಂದು ನಾಮಕರಣವಾಯಿತು. ಈ ಉಪಪಾಂಡವರೂ ದಿನೇದಿನೇ ವೃದ್ಧಿಗೆ ಬರುತ್ತಿದ್ದರು. ವಿಪ್ರಕಾರ್ಯವಶದಿಂದ ಒರ್ಮೆ ಧನಂಜಯನು ಸಂಕೇತವನ್ನು ಮೀರಿ, ದೇಶಭ್ರಷ್ಟನಾಗಿರುವಾಗ ಗಂಗಾನದಿಯಲ್ಲಿ ಮಾಯು

ತಲಿರುವ ಉಲೂಪಿಯೆಂಬ ನಾಗಕನ್ಯಕೆಯನ್ನು ಕಂಡು ಅವಳಿಷ್ಟದಂತೆ ಪಾಣಿಗ್ರಹಣವನ್ನು ಮಾಡಿ, ಭೋಗವತಿಯಲ್ಲಿದ್ದುಕೊಂಡು ಆಕೆಯಲ್ಲಿ ಇರಾವಂತನೆಂಬ ಮಗನನ್ನು ಪಡೆದನು. ಅಲ್ಲಿಂದ ಮುಂದಕ್ಕೆ ಹೋಗಿ ಮಣಿಪುರ ದೇಶಾಧಿಪತಿಯಾದ ಚಿತ್ರವಾಹನನ ಪುತ್ರಿ ಚಿತ್ರಾಂಗದೆಯನ್ನು ವಿವಾಹವಾಡಿಕೊಂಡು ಬಭ್ರುವಾಹನನೆಂಬ ಪುತ್ರನನ್ನುಪಡೆದು ಕಡಲತಡಿಗೆ ಪ್ರಯಾಣ ಹೊರಟು, ಯತಿವೇಷದಿಂದ ದ್ವಾರಕಾನಗರಕ್ಕೆ ಹೋಗಿದ್ದು ಶ್ರೀಕೃಷ್ಣನ ತಂಗಿಯಾದ ಶ್ರೀಮತಿ ಸುಭದ್ರಾದೇವಿಯನ್ನು ವರಿಸಿ ಆಕೆಯೊಡನೆ ಇಂದ್ರಪ್ರಸ್ಥಕ್ಕೆ ಹಿಂತಿರುಗಿ ಬಂದು, ಸುಖವಾಗಿರಲು, ಶೂರನಾದ ಅಭಿಮನ್ಯುವು ಹುಟ್ಟಿದನು ! ಸಕಲಜೀವಗಳೂ ತಂತಮ್ಮ ದೇಹಗಳನ್ನು ಆಶ್ರಯಿಸಿ ಸುಖವಾಗಿರುವಂತೆ ಸರ್ವರೂ ಪಾಂಡವರನ್ನು ಆಶ್ರಯಿಸಿಕೊಂಡು ಸೌಖ್ಯವಾಗಿದ್ದರು. ಒಂದು ಗ್ರೀಷ್ಮಕಾಲದಲ್ಲಿ ಕೃಷ್ಣಾರ್ಜುನರು ಯಮುನಾನದೀತೀರದಲ್ಲಿ ಸಂಚರಿಸುತ ಸಕಲ ಭೂತಾಶ್ರಯವಾಗಿರುವ ಶಕ್ರನ ಖಾಂಡವ ವನಕ್ಕೆ ಹೋಗಿ ಕ್ರೀಡಾವಿನೋದಗಳಿಂದ ಸುಖವಾಗಿದ್ದರು. ಆಗ ಅವರ ಬಳಿಗೆ ಅಗ್ನಿಪುರುಷನು ಹೋಗಿ—' ಎಲೈ ಮಹಾತ್ಮರುಗಳಿರಾ ! ನಾನು ಖಾಂಡವವನರೂಪವಾದ ಅನ್ನವನ್ನು ಭಕ್ಷಿಸಲು, ಮಹೇಂದ್ರನಿಂದ ಅಡ್ಡಿಯಾಗಿದೆ. ಅದನ್ನು ಪರಿಹರಿಸಿದರೆ ನಿರಾತಂಕವಾಗಿ ಆ ವನವನ್ನು ದಹಿಸಲು ಅವಕಾಶವಾಗುವುದು, ಎಂದು ಅರ್ಥಿಸಲು ! ಶ್ರೀಕೃಷ್ಣಪ್ರೇರಣೆಯಿಂದ ಅರ್ಜುನನು ಅದಕ್ಕೆ ಒಪ್ಪಿದನು. ವೈಶ್ವಾನರನು ಮೋದಗೊಂಡು ಅರ್ಜುನನಿಗೆ—ಕಪಿಧ್ವಜದಿಂದ ರಮ್ಯವಾಗಿ, ಸೂರ್ಯಬಿಂಬಕ್ಕೆ ಸಮಾನವಾದ ಒಂದು ದಿವ್ಯರಥವನ್ನೂ, ಬ್ರಹ್ಮನಿಂದ ನಿರ್ಮಿತವಾದ ಗಾಂಡೀವವೆಂಬ ಮಹಾಧನುಸ್ಸನ್ನೂ, ವಾಯುವೇಗವುಳ್ಳ ದಿವ್ಯವಾದ ಶ್ವೇತಾಶ್ವಗಳನ್ನೂ, ಅಭೇದ್ಯವಾದ ಕವಚವನ್ನೂ—ಅನುಗ್ರಹಿಸಿಕೊಡಲು ; ಪಾರ್ಥನು ಅವುಗಳನ್ನು ಸ್ವೀಕರಿಸಿ ಆ ರತ್ನಖಚಿತವಾದ ರಥವನ್ನೇರಿ ಗಾಂಡೀವದಿಂದ ದಿವ್ಯಬಾಣವರ್ಷಗಳನ್ನು ಕರೆಯುತ ದೇವೇಂದ್ರನಿಂದ ಉಂಟಾದ ಮಹತ್ತಾದ ಮಳೆಯನ್ನು ತಡೆದು, ದೇವದಾನವರೆಲ್ಲ ಒಟ್ಟಿಗೆ ಯುದ್ಧಕ್ಕೆ ಬಂದು ಬಾಣಪ್ರಯೋಗವನ್ನು ಮಾಡುತ್ತಿದ್ದರೂ ಹೆದರದೆ, ಅವರೊಡನೆ ಅತಿಚಮತ್ಕಾರವಾಗಿ ಯುದ್ಧಮಾಡಿ ಜಯಿಸಿ ಯಜ್ಞೇಶ್ವರನನ್ನು ತೃಪ್ತಿಪಡಿಸಿದನು. ಖಾಂಡವ

ವನವು ಉರಿಯುತಿರುವಾಗ ಅಗ್ನಿಜ್ವಾಲೆಗೆ ಸಿಕ್ಕುತಿದ್ದ ಮಯನೆಂಬ ಪ್ರಸಿದ್ಧ ಶಿಲ್ಪಿಯನ್ನು ಶ್ರೀಕೃಷ್ಣನು ಆ ಕಷ್ಟದಿಂದ ತಪ್ಪಿಸಿ ಕಾಪಾಡಿದನು ! ಮನೋವಾಕ್ಕಾಯಗಳಿಂದ ಸದ್ಧರ್ಮನಿರತರಾಗಿದ್ದ ಪಾಂಡವರು ಪರಸ್ಪರ ವಿರೋಧವನ್ನು ತಂದುಕೊಳ್ಳದೆ, ಬೇರೆಬೇರೆಯಾಗಿ ವಾಸಮಾಡದೆ, ಭ್ರಾತೃವತ್ಸಲರಾಗಿ ಐಕಮತ್ಯದಿಂದಿದ್ದುದರಿಂದ ಅವರಸಂಪತ್ತೂ ಕೀರ್ತಿಯೂ ದಿಗಂತವಿಶ್ರಾಂತವಾಗಿದೆ. ಧರ್ಮರಾಯನು ಕುಟುಂಬಕ್ಕೆಲ್ಲಾ ಅಧ್ಯಕ್ಷನಾಗಿ, ತಮ್ಮಂದಿರ ಏಳಿಗೆಯನ್ನೇ ಹಾರೈಸುತ, ಅವರ ಭಯಭಕ್ತಿವಿಶ್ವಾಸಗಳಿಗೆ ಪಾತ್ರನಾಗಿ ಅವರ ಸುಖದುಃಖಗಳನ್ನು ತನ್ನದೆಂದೇ ತಿಳಿದಿದ್ದನು. ಭೀಮಸೇನಮುಂತಾದ ತಮ್ಮಂದಿರೋ ಎಂದರೆ—ಅವರು ಅಣ್ಣನಮಾತನ್ನು ಸ್ವಪ್ನದಲ್ಲಿಯೂ ಮೀರದೆ, ಆತನಿಗಾಗಿ ಅನೇಕಯುದ್ಧಗಳನ್ನು ಮಾಡಿ, ತಾವು ಸಂಪಾದಿಸುವ ಸಕಲೈಶ್ವರ್ಯವನ್ನೂ ಅವನಿಗಾಗಿ ಅರ್ಜಿಸಿದುದೆಂದು ಭಾವಿಸಿ, ಅವನಿಗೇ ಸಮರ್ಪಿಸಿ, ಭಕ್ತಿಗೌರವಗಳಿಂದ ಸನ್ಮಾನಿಸುತ, ಅವನ ದಾಸಾನುದಾಸರಾಗಿ ಸುಖವಾಗಿ ಇರುತಿದ್ದರು.

## ಅಧ್ಯಾಯ ೨.

ಶಾಂತ್ಯೌದಾರ್ಯಸತ್ಯಧರ್ಮಗಳಿಂದಲೂ, ಶೂರಾಗ್ರಗಣ್ಯರಾದ ಅನುಜರ ಸಾಹಾಯ್ಯದಿಂದಲೂ, ಇಂದ್ರಪ್ರಸ್ಥದಲ್ಲಿ ರಾಜ್ಯವನ್ನಾಳುತ್ತಿರುವ ಯುಧಿಷ್ಠಿರ ಮಹಾರಾಜನ ಬಳಿಗೆ ಶ್ರೀಕೃಷ್ಣನ ಆಜ್ಞಾನುಸಾರವಾಗಿ ಮಯನು ಹೋಗಿ ಆತನ ಅಪೇಕ್ಷೆಯಂತೆ ಸುಧರ್ಮೆಗಿಂತಲೂ ಮನೋಹರವೆನಿಸುವ ದಿವ್ಯಸಭಾಭವನವನ್ನು ನಿರ್ಮಿಸಿಕೊಟ್ಟನು. ವಾಯುಪುತ್ರನಿಗೆ ಇಂದ್ರನ ವಜ್ರಾಯುಧಕ್ಕೆ ಸಮವಾದ ಮಾಂಧಾತೃಚಕ್ರವರ್ತಿಯು ಹಿಡಿಯುತ್ತಿದ್ದ ಪ್ರಸಿದ್ಧ ಗದೆಯನ್ನೂ, ಅರ್ಜುನನಿಗೆ ಮಹಾಧ್ವನಿಯುಳ್ಳ ದೇವದತ್ತವೆಂಬ ದಿವ್ಯಶಂಖವನ್ನೂ ಕೊಟ್ಟು ತೆರಳಿದನು. ತ್ರಿಲೋಕಸಂಚಾರಿಯಾದ ನಾರದಮುನಿಯ ಪ್ರೇರಣೆಯಿಂದ ಪಿತೃಪ್ರೀತ್ಯರ್ಥವಾಗಿ ಧರ್ಮರಾಯನು ರಾಜಸೂಯ ಯಾಗವನ್ನು ಮಾಡಬೇಕೆಂದು ನಿಷ್ಕರ್ಷಿಸಿ, ದ್ವಾರಕೆಯಿಂದ ಕಾಮಜನಕನಾದ ಶ್ರೀಕೃಷ್ಣನನ್ನು ಕರೆಯಿಸಿಕೊಂಡು ಯೋಚಿಸಿದನು.

ದೇವಕೀನಂದನನು—' ಎಲೈ ಧರ್ಮಜನೇ ! ಸಕಲರಾಜಸಮೂಹವನ್ನೂ ಗೆದ್ದ ಸಮ್ರಾಜನು ರಾಜಸೂಯಯಾಗವನ್ನು ಮಾಡುವುದನುಕೂಲ. ಈಗ ಮಹಾ ಪರಾಕ್ರಮಿಯಾದ ಜರಾಸಂಧನು ಆರ್ಯಾವರ್ತದಲ್ಲಿ ರಾಜಾಧಿರಾಜನಾಗಿರುವುದರಿಂದ ಅವನನ್ನು ಜಯಿಸಿದ ಹೊರತು ಆ ಯಾಗವನ್ನು ಮಾಡಲಾಗುವುದಿಲ್ಲ '—ಎಂದು ಹೇಳಿದನು. ಯುಧಿಷ್ಠಿರನು ಜರಾಸಂಧವಧೋಪಾಯವನ್ನು ತಿಳಿದು, ಶ್ರೀಕೃಷ್ಣಾರ್ಜುನರೊಡನೆ ಶೌರ್ಯಧುರ್ಯನಾದ ಭೀಮಸೇನನನ್ನು ಮಗಧದೇಶಕ್ಕೆ ಕಳುಹಿಸಿದನು. ಅವರು ಸಕಲ ಸಂಪತ್ಸಮೃದ್ಧವಾದ ಗಿರಿವ್ರಜವೆಂಬ ರಾಜಧಾನಿಯನ್ನು ಸೇರಿ ಕಂಸಾಸುರನ ಮಾವನಾದ ಜರಾಸಂಧನನ್ನು ಕಂಡು,—ನಾವು ಯುದ್ಧಾರ್ಥಿಗಳಾಗಿ ನಿನ್ನ ಬಳಿಗೆ ಬಂದಿದೇವೆ. ನಿನಗೆ ಧೈರ್ಯವಿದ್ದರೆ ಯುದ್ಧವನ್ನು ಮಾಡು. ಇಲ್ಲವೆ ಸೆರೆಯಲ್ಲಿರುವ ಅರಸುಗಳನ್ನೆಲ್ಲ ಬಿಟ್ಟು ನಮ್ಮಲ್ಲಿ ಮಿತ್ರಭಾವದಿಂದಿರು—ಎಂದು ಹೇಳಿದ ಯಾದವೇಂದ್ರನನ್ನು ಅವನು ನಿರಾಕರಿಸಿ—ನೀನು ಗೋಪಾಲನು, ಅರ್ಜುನನು ಬಾಲಕನು, ಅಮುಕಾರಣ ಗದಾಯುದ್ಧದಲ್ಲಿ ಸಮರ್ಥನೆಂದು ಖ್ಯಾತಿಗೊಂಡಿರುವ ಭೀಮನೊಡನೆ ನಾನು ಹೋರಾಡಬೇಕು—ಎಂದು ಹೇಳಿ ವಾಯುಪುತ್ರನನ್ನು ತಾಗಿದನು. ಭುಜಗಳೇ ಆಯುಧಗಳಾಗಿವುಳ್ಳ ಪುರುಷಸಿಂಹರಾದ ಭೀಮಜರಾಸಂಧರಿಬ್ಬರೂ ಮಲ್ಲಯುದ್ಧಕ್ಕೆ ತಗಲಿದರು. ಕಾಲದಂಡದಂತಿರುವ ಭುಜದಂಡಗಳಿಂದ ಅನ್ಯೋನ್ಯವಾಗಿ ಸೆಳೆಯುತ್ತ ಮುಷ್ಟಿಪ್ರಹಾರಗಳಿಂದ ತಿವಿಯುತ್ತ, ಬಲಿಪಾಡ್ಯಮಿ ದಿನ ಯುದ್ಧಪ್ರಾರಂಭವಾದುದಕ್ಕೆ ವೈಕುಂಠಚತುರ್ದಶಿ ಪರ್ಯಂತ ಹದಿನಾಲ್ಕು ದಿನಗಳು ಅತ್ಯಾಶ್ಚರ್ಯಕರವಾಗಿ, ಶ್ರೀಕೃಷ್ಣ ಜಾಂಬವಂತರಂತೆ ಹೋರಾಡಿದರು. ಪ್ರಭಂಜನಸುತನು ಪೌರವಂಶೋತ್ಪನ್ನನಾದ ಆ ಜರಾಸಂಧನ ಬಳಲಿಕೆಯನ್ನು ಕಂಡು, ತನ್ನ ಸರ್ವಶಕ್ತಿಯನ್ನೂ ಉಪಯೋಗಿಸಿ, ಅವನನ್ನು ಮೇಲಕ್ಕೆ ಎತ್ತಿ, ಎಂಟು ಹತ್ತುಸಾರಿ ಬಿರಬಿರನೆ ತಿರುಗಿಸಿ, ಮೋರೆ ಒಡೆಯುವಂತೆ ನೆಲಕ್ಕೆ ಕೆಡವಿ, ಕಾಲಿನಿಂದ ತುಳಿದು ನಾನಾವಿಧವಾಗಿ ಪ್ರಹರಿಸುತ್ತಿರುವಲ್ಲಿ ಅವನು ಭುವನಭಯಂಕರವಾಗಿ ಕೂಗಿಕೊಳ್ಳಲು ; ಭೀಮನು ಬೇಗನೆ ಆ ಕ್ರೂರನನ್ನು ಕೊಂದು, ಎಲ್ಲರಿಗೂ ತಿಳಿಯುವಂತೆ ಅವನ ಶವವನ್ನು ಊರಬಾಗಿಲಲ್ಲಿ ನೇತುಹಾಕಿ ಲೋಕಕ್ಕೆ ನಿರ್ಭಯತೆಯನ್ನುಂಟುಮಾಡಿದನು. ಆ ಬಳಿಕ ಯಜ್ಞಾ

ಶಾಲೆಯಲ್ಲಿ ಪ್ರಜ್ವಲಿಸುವ ಅಗ್ನಿತ್ರಯದಂತೆ ಪ್ರಕಾಶಿಸುವ, ಶ್ರೀಕೃಷ್ಣಭೀಮಾರ್ಜುನರು, ಜರಾಸಂಧನ ಆಸ್ಥಾನಕ್ಕೆ ಹೋಗಿ ಪೂಜಿತರಾಗಿ, ಶರಣಾಗತನಾದ ಅವನ ಮಗ ಸಹದೇವನಿಗೆ ಪಟ್ಟಗಟ್ಟಿ, ಸೆರೆಯಲ್ಲಿದ್ದ ರಾಜರುಗಳನ್ನೆಲ್ಲ ಬಿಡಿಸಿ, ಅವರಿಂದಲೂ ಪೂಜಿಸಲ್ಪಟ್ಟವರಾಗಿ 'ಧರ್ಮರಾಯನು ಮಾಡುವ ರಾಜಸೂಯಯಾಗಕ್ಕೆ ನೀವೆಲ್ಲರೂ ಅವಶ್ಯವಾಗಿಬರಬೇಕು' ಎಂದು ಹೇಳಿ ಅವರಿಂದ ಒಪ್ಪಿಸಲ್ಪಟ್ಟ ಬಹು ಬೆಲೆಯುಳ್ಳ ಕಪ್ಪಕಾಣಿಕೆಗಳನ್ನು ಸ್ವೀಕರಿಸಿ, ದಿವ್ಯರಥದಮೇಲೆ ಮೂವರೂ ಕುಳಿತು ಕರಿನಗರಿಗೆ ಬಂದು, ಯುಧಿಷ್ಠಿರಮಹಾರಾಜನನ್ನು ಕಂಡು ವಂದಿಸಿ, ತಮ್ಮ ವಿಜಯವಿಚಾರವನ್ನೆಲ್ಲ ಅರಿಕೆಮಾಡಿ ಆನಂದಗೊಳಿಸಿದರು. ತರುವಾಯ ಧರ್ಮರಾಯನು ಶ್ರೀಕೃಷ್ಣನನ್ನು ಉಪಚರಿಸಿ ದ್ವಾರಕೆಗೆ ಕಳುಹಿಸಿಕೊಟ್ಟು ಬಂದು, ಆಸ್ಥಾನದಲ್ಲಿ ನೆರೆದಿದ್ದ ಸಾಮಂತನರಪತಿಗಳನ್ನೂ ಅವರವರ ದೇಶಕ್ಕೆ ಹೋಗಿದ್ದು ಬರುವಂತೆ ಕಟ್ಟುಮಾಡಿದನು

ಭೀಮಸೇನನು ಚತುರಂಗಬಲಸಮೇತನಾಗಿ ಮೂಡಣದಿಕ್ಕಿಗೆ ದಂಡಯಾತ್ರೆ ಹೊರಟು, ತನ್ನನ್ನೆದುರಿಸಿದ ರೋಚಮಾನ ಮುಂತಾದ ರಾಜರನ್ನು ಗೆದ್ದು, ಪಗುಪಯನ್ನು ತೆಗೆದುಕೊಂಡು ಪಾಂಚಾಲಚೇದಿರಾಜ್ಯಗಳಿಗೆ ಸ್ನೇಹಭಾವದಿಂದ ಹೋಗಿ ಅವರಿಂದಲೂ ಬೇಕಾದಷ್ಟು ಐಶ್ವರ್ಯವನ್ನು ಪಡೆದು, ಪೌಂಡ್ರ ವಂಗ ಮುಂತಾದ ದೇಶಗಳನ್ನು ಜಯಿಸಿ, ವಶರಾದ ರಾಜರಿಗೆ ಗೌರವವನ್ನು ಕೊಡುತ, ಅವರಾಗಿ ಪ್ರೀತಿಯಿಂದೊಪ್ಪಿಸಿದ ನವರತ್ನಾದಿಗಳನ್ನು ಸ್ವೀಕರಿಸಿ, ಸ್ವದೇಶಕ್ಕೆ ಹಿಂತಿರುಗಿ, ಇಂದ್ರಪ್ರಸ್ಥಕ್ಕೆ ಬಂದು ತಾನು ಗೆದ್ದುತಂದ ಧನಕನಕ ವಸ್ತುವಾಹನಗಳನ್ನೆಲ್ಲ ಅಗ್ರಜನಿಗೆ ಸಮರ್ಪಿಸಿ ವಂದಿಸಿ ಸಂತೋಷಗೊಳಿಸಿದನು. ಬೀಭತ್ಸುವು ಬಡಗಲಿಗೂ ನಕುಲನು ತೆಂಕಲಿಗೂ ಸಹದೇವನು ಪಡುವಲಿಗೂ ಜೈತ್ರಯಾತ್ರೆ ಹೊರಟು, ಮಾರುತಿಯಂತೆ ತಂತಮ್ಮದಿಕ್ಕಿನ ರಾಜರನ್ನೆಲ್ಲ ಚತುರುಪಾಯಗಳಿಂದ ಸಾಧ್ಯಮಾಡಿಕೊಂಡು, ಅಪರಿಮಿತವಾದ ಐಶ್ವರ್ಯವನ್ನು ತೆಗೆದುಕೊಂಡು ಬಂದು ಭಂಡಾರವನ್ನು ತುಂಬಿದರು ಇಂದ್ರಪ್ರಸ್ಥವು ಮರಳಿ ಶೃಂಗರಿಸಲ್ಪಟ್ಟು ಎರಡನೆಯ ಸ್ವರ್ಗದಂತೆ ಮನೋಹರವಾಗಿರಲು ; ರಾಜಸೂಯಯಾಗಕ್ಕೆ ಆಗಬೇಕಾದ ಸಕಲವೂ ಸಿದ್ಧವಾಗಿ, ಧರ್ಮರಾಜನು ದ್ರೌಪದೀದೇವಿಯೊಡನೆ

ಯಜ್ಞದೀಕ್ಷಿತನಾದನು. ಸಕಲರಾಜರೂ ಇಂದ್ರಪ್ರಸ್ಥಪಟ್ಟಣಕ್ಕೆ ಬಂದು ರಾಜಯೋಗ್ಯವಾದ ಬಿಡಾರಗಳಲ್ಲಿಳಿದು, ಯಾಗಕಾರ್ಯಾಸಕ್ತರಾಗಿದ್ದರು. ಅದು ದಿವ್ಯವೈಭವದಿಂದ ತೃಪ್ತಿಕರವಾಗಿ ನಡೆಯಿತು. ಭೀಷ್ಮನ ಆಜ್ಞಾನುಸಾರ ಶ್ರೀಕೃಷ್ಣನಿಗೆ, ಧರ್ಮರಾಯನು ಅಗ್ರಪೂಜೆಯನ್ನು ಮಾಡಿದನು. ಅದನ್ನು ಸೈರಿಸದೆ ಶಿಶುಪಾಲನು ದೂಷಿಸಲಾಗಿ ಶ್ರೀಕೃಷ್ಣನು ಅವನ ಶಿರಸ್ಸನ್ನು ಕತ್ತರಿಸಿದನು. ಅಲ್ಲಿಗೆ ಬಂದಿದ್ದ ಸಮಸ್ತರೂ ಸನ್ಮಾನಿಸಲ್ಪಟ್ಟವರಾಗಿ 'ಜಯಜಯ' ಎಂದು ಸ್ತುತಿಸುತ್ತ ಅವರವರ ದೇಶಕ್ಕೆ ಅಭಿಮುಖರಾದರು. ಬೊಕ್ಕಸದ ಅಧಿಪತಿಯಾಗಿದ್ದ ದುರ್ಯೋಧನನು ಮಾತ್ರ ಸಹೋದರರೊಡನೆ ಅಲ್ಲಿಯೇ ಸುಖವಾಗಿದ್ದುಕೊಂಡಿರುವಲ್ಲಿ ಪಾಂಡವರ ಅರಮನೆಯಲ್ಲೊಂದು ಕಡೆ ಮಯನಿರ್ಮಿತವಾಗಿದ್ದ ಸ್ಫಟಿಕಭೂಮಿಯನ್ನು ಜಲಮಯವಾದುದೆಂದು ಭ್ರಮಿಸಿ, ತನ್ನ ಉಡಿಗೆಗಳನ್ನು ಮೇಲಕ್ಕೆ ಮಾಡಿಕೊಂಡು ಹೋದನು. ಮತ್ತು ಗಟ್ಟಿ ನೆಲದಹಾಗೆ ಕಾಣುತ್ತಿದ್ದ ಸೀನೀರಿನ ಸರಸ್ಸಿಗೆ ಹೋಗಿ ಬಿದ್ದು, ಉಟ್ಟಿದ್ದ ಮತ್ತು ಹೊದ್ದಿದ್ದ ಬಟ್ಟೆಗಳನ್ನೆಲ್ಲ ನೆನೆಯಿಸಿಕೊಂಡುದನ್ನು ಭೀಮನು ನೋಡಿ ಬಹುನಾಗಿ ನಗುತ್ತಿರಲು, ಅತಿಮಾನಿಯಾದ ದುರ್ಯೋಧನನು ಖತಿಗೊಂಡು ಇದಕ್ಕೆ ತಕ್ಕ ಪ್ರತೀಕಾರವನ್ನು ಮಾಡಬೇಕೆಂದು ಯೋಚಿಸಿ, ಪರಿವಾರದೊಡನೆ ಗಜನಗರಿಗೆ ಬಂದನು. ಅಲ್ಲಿ ಶಕುನಿಯೊಡನೆ ತಾನು ಸಭಾಭವನದ ವಿಲಾಸಕ್ಷೇತ್ರದಲ್ಲಿ ಭಂಗಪಟ್ಟುದನ್ನೂ, ಪಾಂಡವರು ತನಗೆ ಸಮಾನವಾದ ಭೋಗಭಾಗ್ಯಗಳನ್ನು ಅನುಭವಿಸುತ್ತಿರುವುದನ್ನೂ ಹೇಳಿ, ಹೊಟ್ಟೆಕಿಚ್ಚಿನಿಂದ ಕೂಡಿ ಚಿಂತಾಕ್ರಾಂತನಾಗಿರಲು; ಆ ಮಾಯಾವಿಯಾದ ಶಕುನಿಯು ಯೋಚಿಸಿ, ಜೂಜಾಡುವುದರಲ್ಲಿ ಪಂಥವನ್ನಿಟ್ಟು ಧರ್ಮರಾಯನನ್ನು ಅವನ ಅನುಜರೊಡನೆ ಸೋಲಿಸಿ ರಾಜ್ಯಭ್ರಷ್ಟರನ್ನಾಗಿ ಮಾಡಬೇಕೆಂದು ಹೇಳಿದನು. ಕೌರವರೆಲ್ಲರೂ ಅದಕ್ಕೆ ಅನುಮೋದಿಸಿ ಸಮಯಪರೀಕ್ಷೆಯನ್ನು ಮಾಡುತ್ತಿದ್ದರು. ಅತ್ತಲು ಯುಧಿಷ್ಠಿರನು ತಮ್ಮಂದಿರೊಡನೆ ಪೃಥುಚಕ್ರವರ್ತಿಯಂತೆ ರಾಜ್ಯಪ್ರಜೆಗಳನ್ನು ರಕ್ಷಿಸುತ್ತ ಸಕಲ ಸೌಭಾಗ್ಯಗಳಿಂದಲೂ ಯುಕ್ತನಾಗಿದ್ದನು.

ಕೌರವನು ತನ್ನ ಉದ್ದೇಶವು ನೆರವೇರುವುದಕ್ಕಾಗಿ ಬಿಲಗಶಾಲೆಯೊಂದನ್ನು ಹೊಸದಾಗಿ ಕಟ್ಟಿಸಿ, ಗೃಹಪ್ರವೇಶೋತ್ಸವದ ನೆವದಿಂದ ತಂದೆಯ

ಮಾತಿನಂತೆ ಪಾಂಡವರನ್ನು ಹಸ್ತಿನಾವತಿಗೆ ಕರೆಯಿಸಿಕೊಂಡು ವಿಭವವಿಸ್ತರದಿಂದ ವಿನೋದವಾಗಿರಲು ; ಧೃತರಾಷ್ಟ್ರನು ಧರ್ಮರಾಯನನ್ನು ಕುರಿತು—ಅಯ್ಯ, ವತ್ಸನೇ ! ನನ್ನ ಮಕ್ಕಳು ನಿಮ್ಮೊಡನೆ ಪಗಡೆಯಾಟವನ್ನು ಆಡಬೇಕೆಂದಿರುವರು. ನೀವು ವಿನೋದವಾಗಿ ಪಗಡೆಯನ್ನಾಡಿ—ಎಂದನು. ಧರ್ಮರಾಯನು—ಪಿತೃವ್ಯನೇ ! ದ್ಯೂತದಿಂದ ಕಲಹವು ಬರುವುದು. ಬಂದುದೆಲ್ಲಾ ಬರಲಿ; ಗೋವಿಂದನದಯೆ ನಮಗಿರಲಿ ; ನಿಮ್ಮ ಆಜ್ಞಾನುಸಾರ ನಡೆಯುತ್ತೇನೆ—ಎಂದು ಅರಿಕೆ ಮಾಡಿದನು. ಆಬಳಿಕ ಒಂದುದಿನ ಕೌರವನು ಧರ್ಮರಾಯನನ್ನು ದ್ಯೂತಕ್ರೀಡೆಗೆ ಕರೆದನು. ಅತನು ರಾಜಧರ್ಮವಾದುದರಿಂದ ಒಲ್ಲೆನೆನ್ನದೆ, ಪಗಡೆಯಾಟಕ್ಕೆ ಸೇರಿ ರಾಜ್ಯವನ್ನೂ, ಐಶ್ವರ್ಯವನ್ನೂ ಸರ್ವಸ್ವವನ್ನೂ ಪಣವಾಗಿಟ್ಟು ಶಕುನಿಯವಂಚನೆಯಿಂದ ಸೋತುದುದಲ್ಲದೆ, ಕೊನೆಗೆ ಸಹೋದರರನ್ನೂ ದ್ರೌಪದೀದೇವಿಯನ್ನೂ ತನ್ನನ್ನೂ ಪಂಥವಾಗಿಟ್ಟು ಸೋತುದರಿಂದ—ಸತ್ಯಂಮಾತಾ ಪಿತಾಜ್ಞಾನಂ ಧರ್ಮೋಭ್ರಾತಾ ದಯಾಸಖಾ | ಶಾಂತಿಃಪತ್ನೀ ಕ್ಷಮಾಪುತ್ರಃ ಷಡೈತೆಮಮಬಾಂಧವಾಃ ||—ಎಂಬ ತನ್ನ ಪ್ರತಿಜ್ಞಾನುಸಾರ ಸತ್ಯವನ್ನು ಮೀರದೆ ಕೌರವರ ವಶನಾಗಿ ನಿರ್ವಿಣ್ಣನಾಗಿದ್ದನು. ದ್ರೋಹಿಗಳಾದ ಕೌರವರ ಸಂತೋಷಕ್ಕೆ ಪಾರವಿಲ್ಲದಂತಾಯಿತು. "ಹಸದ್ಭಿಃ ಕ್ರಿಯತೇ ಕರ್ಮ ರುದದ್ಭಿರನುಭೂಯತೇ" ಎಂಬಂತೆ ನಗುತ ಕೆಟ್ಟಕೆಲಸವನ್ನುಮಾಡಿ, ಅಳುತ ಫಲವನ್ನು ಅನುಭವಿಸುವರು ಅತಿಯಾಗಿ ದ್ರವ್ಯಾಶೆಯುಳ್ಳವನು ನೀಚಕೃತ್ಯವನ್ನು ಲೆಕ್ಕಿಸುವುದಿಲ್ಲ. ಆಗ ಪಾಪಿಯಾದ ದುಶ್ಯಾಸನನು ರಜಸ್ವಲೆಯಾಗಿದ್ದ ದ್ರೌಪದೀದೇವಿಯನ್ನು ಸಭೆಗೆ ಎಳೆತಂದು ವಸ್ತ್ರಾಪಹಾರ ರೂಪವಾದ ಮಾನಭಂಗವನ್ನು ಮಾಡಲೆಣಿಸಿದನು; ಆ ಮಹಾಪತಿವ್ರತೆಯು ಭಕ್ತಪರಾಧೀನನಾದ ಸಕಲಲೋಕೇಶ್ವರನನ್ನು ಧ್ಯಾನಿಸಿ*—ಆಕಟಾ, ಶ್ರೀಕೃಷ್ಣಾ, ದೀನಬಂಧೂ, ಭಕ್ತಪರಾಧೀನಾ, ಈಗ ನೀನೆನ್ನಮಾನವಂಕಾಪಾಡಬೇಕು —ಎಂದು ಮೊರೆಯಿಡಲು; ಸಕಲ ಭಕ್ತಜನರಿಗೂ ಸಕಲಮನೋರಥಗಳನ್ನೂ ಸಫಲಮಾಡುತ್ತಿರುವ ಸರ್ವಭೂತ ಜನಕನಾದ ಶ್ರೀಹರಿಯು ಆಕ್ಷಣದಲ್ಲೇ ಆಕೆಯ ವಸ್ತ್ರಸಂತತಿಯು

* ಶ್ಲೋ|| ಹಾ ಕೃಷ್ಣ ದ್ವಾರಕಾವಾಸಿನ್ ಕ್ವಾಸಿ ಯಾದವನಂದನ |
ಇಮಾಮವಸ್ಥಾಂ ಸಂಪ್ರಾಪ್ತಾಮನಾಥಾಂ ತ್ರಾಹಿ ಮಾಂ ಪ್ರಭೋ||
ಶಂಖಚಕ್ರಗದಾಪಾಣೆ ದ್ವಾರಕಾನಿಲಯಾಚ್ಯುತ |
ಗೋವಿಂದ ಪುಂಡರೀಕಾಕ್ಷ ರಕ್ಷಮಾಂ ಶರಣಾಗತಾಂ || ಸ. ೬೬–೪೧.

‘ಅಕ್ಷಯುವಾಗಲಿ’ ಎಂದು ಅನುಗ್ರಹಿಸಿದನು! ಕೇಡಿಗನಾದ ದುಶ್ಶಾಸನನು ಪರಮಪತಿವ್ರತೆಯಾದ ದ್ರೌಪದೀದೇವಿಯು ಉಟ್ಟಿದ್ದ ವಸ್ತ್ರವನ್ನು ಸೆಳೆದು ಸೆಳೆದು ಬಿಟ್ಟದ ವಿಚಿತ್ರವಸ್ತ್ರವು ಬೆಟ್ಟದಂತೆ ಕಂಗೊಳಿಸಿತು! ಆ ದುಷ್ಟನಿಗೂ ಬಾಹುಬಲವಡಗಿರುದರಿಂದ ಅವನು ನಿಶ್ಚೇಷ್ಟಿತನಾಗಿ ನಾಚಿಕೆಯಿಂದ ತಲೆಯನ್ನೆತ್ತದೆ ನಿಂತಿದ್ದನು. ರೋಷಾವೇಶವಿವಶನಾದ ಭೀಮಸೇನನು "ಸಕಲಕೌರವರನ್ನೂ" ಅವರು ಮಾಡಿದ ಮಹಾಪರಾಧಕ್ಕಾಗಿ ಯುದ್ಧದಲ್ಲಿ ಸಂಹರಿಸುವೆನು ಎಂದು ಪ್ರತಿಜ್ಞೆಯನ್ನು ಮಾಡಿದನು! ತತ್ಕಾಲದಲ್ಲಿ ದ್ರೌಪದೀದೇವಿಯನ್ನು ಬಹುವಾಗಿ ಅಪಹಾಸಮಾಡಿದ ಕರ್ಣನನ್ನು ಕೊಲ್ಲುವುದಾಗಿ ಗಾಂಡೀವಿಯು ಶಪಥಮಾಡಿದನು! ತಾವುಧೀರರಾದರೂ ಕೌರವರನ್ನು ಅಡಗಿಸಲು ಸಮಯವನ್ನು ನಿರೀಕ್ಷಿಸಬೇಕಾಯಿತು. ಕೌರವರ ಅಧರ್ಮದಿಂದ ಮಹೋತ್ಪಾತಗಳು ತಲೆದೋರಿ, ಸಮಸ್ತರೂ ಹಾಹಾಕಾರಪಡುತ್ತಿದ್ದರು. ಆಗ ಮೇಧಾವಿನಿಯಾದ ಗಾಂಧಾರಿಯು ತನ್ನ ಗಂಡನಿಂದ ಪಾಂಡವರಿಗೆ ಯಥಾಪೂರ್ವವಾಗಿ ರಾಜ್ಯಾರ್ಧವನ್ನು ಕೊಡಿಸಿ, ಸಮಾಧಾನಹೇಳಿ ಕಳುಹಿಸಿದಳು. ಆದರೇನು? ನಡುದಾರಿಯಲ್ಲಿದ್ದ ಧರ್ಮರಾಯನು ಮರಳಿ ಕರಿನಗರಿಗೆ ಕರೆಯಲ್ಪಟ್ಟವನಾಗಿ, ಉಪದ್ಯೂತವಾಡತೊಡಗಿದನು. ಆವೊತ್ತಿನ ಪಗಡೆಯಾಟದಲ್ಲಿ ಸೋತವರು ೧೨ ವರ್ಷ ವನವಾಸವನ್ನೂ ೧ ವರ್ಷ ಅಜ್ಞಾತವಾಸವನ್ನೂ ಮಾಡಬೇಕೆಂದೂ, ಅಜ್ಞಾತವಾಸದಲ್ಲಿರುವಾಗ ಗೆದ್ದವರು ನೋಡಿದರೆ ಪುನಃ ಸೋತವರು ವನವಾಸಕ್ಕೆ ಹೋಗಬೇಕೆಂದೂ, ಭಾಷೆಯನ್ನು ಮಾಡಿಕೊಂಡು ಆಡಿದರು. ದುರದೃಷ್ಟದಿಂದ ಆಗಲೂ ಧರ್ಮರಾಯನೇ ಜೂಜಾಟದಲ್ಲಿ ಸೋತು ಸತ್ಯರಕ್ಷಣಕ್ಕಾಗಿ ಸಕಲಭೋಗಭಾಗ್ಯಗಳನ್ನೂ ತೊರೆದು, ತಾಯಿಯಾದ ಕುಂತಿಯನ್ನು ಚಿಕ್ಕಪ್ಪನಾದ ವಿದುರನ ಬಳಿ ಬಿಟ್ಟು, ಪರಿಜನರ ದೈನ್ಯವನ್ನೂ ಬಂಧುಗಳ ಪ್ರೇಮವನ್ನೂ ಎಣಿಸದೆ, ಅನುಜರೊಡನೆಯೂ ಪತ್ನಿಯೊಡನೆಯೂ ವನವಾಸಕ್ಕೆ ಹೊರಟನು.

ದಯಾರಹಿತರಾದ ದುಷ್ಟದುರ್ಯೋಧನಾದಿಗಳ ತಂತ್ರಕ್ಕೆ ಸಿಕ್ಕಿಬಿದ್ದ ಪಾಂಡವರು ಪಗಡೆಯಾಟದಲ್ಲಿ ಸೋತು, ತಂತಮ್ಮ ಆಯುಧಗಳನ್ನು ತೆಗೆದುಕೊಂಡು ಅತ್ಯಂತಶೋಕವ್ಯಾಕುಲೆಯಾದ ದ್ರೌಪದೀ ದೇವಿಯೊಡನೆ ಹಸ್ತಿನಾವತಿಯ ವರ್ಧಮಾನವೆಂಬ ಪುರದ್ವಾರದಿಂದ ಉತ್ತರಮುಖವಾಗಿ

ಅರಣ್ಯಕ್ಕೆ ಹೊರಟರು. ಆಗ ಯುಧಿಷ್ಠಿರನು, ತನ್ನ ಅಗಲಿಕೆಯಿಂದ ಗೋಳಾಡುತ ಜತೆಯಲ್ಲಿ ತಂಡೋಪತಂಡವಾಗಿ ಬರುತ್ತಿದ್ದ ಪ್ರಜೆಗಳನ್ನು ನೋಡಿ, ಮರುಕಗೊಂಡು ಅವರನ್ನು ಕುರಿತು,—ಅಯ್ಯಾ, ಸಾಧುಗಳಿರಾ! ನೀವೆಲ್ಲ ಗಜಪುರಿಗೆ ಹಿಂತಿರುಗಿರಿ, ರಾಜದ್ರೋಹಿಗಳಾಗದೆ ಬಾಳಿರಿ, ಲೋಕಕ್ಕೆ ಸುಖವನ್ನುಂಟುಮಾಡಿರಿ,—ಎಂಬ ಸಾಂತ್ವಕತಗಳಿಂದ ಅವರ ಮನಸ್ಸನ್ನು ಕರಗಿಸಿ ಹಿಂದಕ್ಕೆ ಕಳುಹಿಸಿ, ಗಂಗಾನದೀತೀರಕ್ಕೆ ಹೋಗಿ ಮೊದಲನೆಯ ರಾತ್ರಿಯನ್ನು ಕಳೆದನು. ಮೂರನೆಯದಿನ ಮುಂದಕ್ಕೆ ಹೊರಟು, ಶೌನಕಮುನಿಯಿಂದ ಉಪದೇಶಿಸಲ್ಪಟ್ಟ ಮಹಾಮಂತ್ರದಿಂದ ಜಗಚ್ಚಕ್ಷುವಾದ ಶ್ರೀಸೂರ್ಯನಾರಾಯಣಪರಮಾತ್ಮನನ್ನು ಆರಾಧಿಸಿ, ಅಕ್ಷಯಪಾತ್ರೆಯನ್ನು ಪಡೆದು ಜೀವಿಸುತಿದ್ದರು. ನಾಲ್ಕನೆಯದಿನ ಪಾಂಡವರು ಕಾಮ್ಯಕವನವನ್ನು ಸೇರಿದರು. ಅಲ್ಲಿ ವಾಸವಾಗಿದ್ದ, ಕರ್ರಗಿರುವ ಪರ್ವತಾಕಾರವಾದ ಶರೀರವೂ, ಅತಿಭಯಂಕರವಾದ ಮೋರೆಯೂ, ಉಳ್ಳ ಕಿರ್ಮೀರನೆಂಬ ದೈತ್ಯನನ್ನು ಪಾಂಡವರೊಡನೆ ಇದ್ದ ದ್ರೌಪದೀದೇವಿಯು ನೋಡಿ ಭಯದಿಂದ ನಡುಗುತನಿಂತಳು! ಧರ್ಮರಾಯನು ಅವನು ಯಾರೆಂಬುದನ್ನು ಕೇಳಿ, ಅವನಿಗೆ ತನ್ನ ಉದಂತವನ್ನೆಲ್ಲ ಹೇಳಿದನು. ಭೀಮನನ್ನು ಕೊಲ್ಲಬೇಕೆಂದು ಚಿರಕಾಲದಿಂದ ನಿರೀಕ್ಷಿಸಿಕೊಂಡಿದ್ದ ಆ ರಾಕ್ಷಸನು, "ಈಗ ನನ್ನ ಮನೋರಥವು ಸಿದ್ಧಿಸಿತು." ಎಂದು ಸಂತಸಗೊಂಡವನಾಗಿ ಸಿಂಹನಾದವನ್ನು ಮಾಡಿ, ಎಲ್ಲರನ್ನೂ ಧಿಕ್ಕರಿಸಿ, ವೃಕೋದರನ ಒಡಲು ನೋಯುವಹಾಗೆ ಬಲವಾಗಿ ಬಂದೇಟನ್ನು ಕೊಟ್ಟು ಬೊಬ್ಬಿರಿದನು. ವಾಯುಪುತ್ರನು ಖತಿಗೊಂಡು ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು, ಕಟಕಟನೆ ಹಲ್ಲುಗಳನ್ನು ಕಡಿದು, ನಿನ್ನ ಕೆಟ್ಟತನಕ್ಕೆ ತಕ್ಕುದನ್ನು ಮಾಡುವೆನೆಂದು ಹೇಳಿ, ಆ ರಕ್ಕಸನೊಡನೆ ಕದನಮಾಡುವುದಕ್ಕೆ ಸಿದ್ಧವಾಗಿನಿಂತನು. ಅವರಿಬ್ಬರ ಯುದ್ಧದಲ್ಲಿ ಬಾಹುಗಳ ಸಂಘರ್ಷಣದಿಂದುಂಟಾದ ಶಬ್ದವು ಮಹಾಭಯಂಕರವಾಗಿ ಕೇಳುತಿದ್ದಿತು. ಭೀಮನು ಶತ್ರುವಿನ ಪೆಟ್ಟುಗಳನ್ನೆಲ್ಲ ತಪ್ಪಿಸಿಕೊಂಡು, ಅವನ ನಡುವಿಗೆ ನುಗ್ಗಿ, ಬಲವಾಗಿ ಹಿಡಿದು ನಾನಾವಿಧವಾಗಿ ಬಂಧಿಸಿ, ಮೊಣಕಾಲಿನಿಂದ ತಿವಿದು, ಹೊಸಕಿ, ಕೊರಳನ್ನು ಬಾಕಿ, ದುರ್ಬಲನನ್ನಾಗಿ ಮಾಡಿ, ಅವನ ಶರೀರವನ್ನು ಜಜ್ಜಿ ಶ್ರೀಕೃಷ್ಣನು ಮುರಾ

ಸುರನನ್ನು ಸೀಳಿ ಕೆಡವಿದಂತೆ, ಅವನನ್ನು ಸೀಳಿಕೆಡವಿದನು! ದುಷ್ಟನೂ, ನರಮಾಂಸಭಕ್ಷಕನೂ ಲೋಕಕಂಟಕನೂ ಆದ ಕಿರ್ಮೀರನು ಮಾರುತಿಯಿಂದ ಹತನಾದುದನ್ನು ಯುಧಿಷ್ಠಿರಾದಿಗಳು ನೋಡಿ ಆಶ್ಚರ್ಯಗೊಂಡು ಆತನನ್ನು ಶ್ಲಾಘಿಸುತ ದ್ವೈತವನವನ್ನು ಸೇರಿದರು. ಅಲ್ಲಿಗೆ ಕರುಣಾಪಾರಾವಾರನಾದ ಶ್ರೀಕೃಷ್ಣನೂ, ವ್ಯಾಸಮುನಿಯೂ, ವಿದುರನೂ, ದ್ರುಪದನೂ ಮುಂತಾದ ಬಂಧು ಜನಗಳು ಹೋಗಿ ಪಾಂಡವರನ್ನು ಕಾಣಲು; ಅವರು ಆ ಅಭ್ಯಾಗತರಿಗೆ ಅರ್ಘ್ಯಪಾದ್ಯಾಚಮನಾದಿಗಳನ್ನು ಕೊಟ್ಟು ವನವಸೋಚಿತವಾದ ಫಲಮೂಲಾದಿಗಳಿಂದ ಸತ್ಕರಿಸಿ, ಪಲ್ಲವಾಸನದೊಳ್ಕುಳ್ಳಿರಿಸಿದರು ಅವರು ಕೌಂತೇಯರಿಗೆ ಒದಗಿರುವ ಶೋಚನೀಯವಾದ ಸ್ಥಿತಿಗೆ ಮರುಗಿ, ಅವರನ್ನು ನಾನಾವಿಧವಾಗಿ ಸಂತೈಸಿ, ಕೌರವರ ಮೇಲೆ ಯುದ್ಧಕ್ಕೆ ಹೋಗಿ ಅವರಿಗೆ ಈಗಲೇ ತಕ್ಕುದನ್ನು ಮಾಡಬೇಕೆನಲು; ಅದಕ್ಕೆ ಧರ್ಮರಾಯನು ಒಪ್ಪದೆ,—'ನಾವು ಎಂದಿಗೂ ಸತ್ಯಮಾರ್ಗವನ್ನು ಬಿಡುವುದಿಲ್ಲ'—ಎಂದು ಹೇಳಿದನು. ಆ ಬಳಿಕ ಅವರೆಲ್ಲರೂ ತಮ್ಮ ದೇಶಕ್ಕೆ ತೆರಳಿದರು. ಉಪಪಾಂಡವರು ಮಾತಾಮಹನನ್ನು ಹಿಂಬಾಲಿಸಿದರು. ಪರ್ಣಕುಟೀರದಲ್ಲಿ ವಾಸವಾಗಿದ್ದ ವನಜಗಂಧಿಯಾದ ದ್ರೌಪದೀದೇವಿಯು ಅರಮನೆಯಿಂದ ಅರಣ್ಯಕ್ಕೆ ಹೋಗಿದ್ದರೂ ನೀಚೋಚ್ಚಭಾವಗಳನ್ನು ಲಕ್ಷ್ಯಮಾಡದೆ, ರಾಜಪುತ್ರಿಯೂ, ರಾಜಪತ್ನಿಯೂ, ರಾಜಮಾತೆಯೂ, ಆಗಿದ್ದರೂ ನಿರಾಲಸ್ಯದಿಂದ ತಾನೇ ಮನೆಗೆಲಸಗಳನ್ನೆಲ್ಲ ಮಾಡಿಕೊಂಡು, ಅರಣ್ಯದಲ್ಲಿಯೂ ನಿತ್ಯಸಂತರ್ಪಣೆಯನ್ನು ಮಮತೆಯಿಂದ ಮಾಡುತ, ಸದ್ವಿನಯಾದಿಗಳಿಂದ ಗಂಡಂದಿರ ಕಷ್ಟಸುಖಗಳಿಗೆ ಭಾಗಿನಿಯಾಗಿ, ಒಮ್ಮನದಿಂದ ಪತಿಸೇವೆಯನ್ನು ಮಾಡುತ ಅವರ ಮೆಚ್ಚಿಕೆಗೆ ಪಾತ್ರಳಾಗಿದ್ದಳು!

ಪರರ ಅನುಚಿತವಾದ ಕಜವನ್ನು ಸ್ವಲ್ಪವೂ ಸಹಿಸದಿರುವ ಪರಾಕ್ರಮಧುರೀಣನಾದ ಭೀಮಸೇನನಿಗೂ ಧರ್ಮಸ್ವರೂಪನಾದ ಧರ್ಮರಾಯನಿಗೂ ರಾಜ್ಯಪ್ರಾಪ್ತಿ ವಿಚಾರವಾಗಿ ನಡೆದ ಅನೇಕಸಂವಾದದಲ್ಲಿ, ಭೀಮನು—ಎಲೈ ರಾಜೇಂದ್ರನೆ! ನಮ್ಮರಾಜ್ಯವನ್ನು ಕೌರವರು ಪರಾಕ್ರಮದಿಂದ ತೆಗೆದುಕೊಳ್ಳದೆ, ವಂಚನೆಯಿಂದ ಅಪಹರಿಸಿರುವರು. ಮೀಮಾಂಸಕನ್ಯಾಯವನ್ನನುಸರಿಸಿ ಸಂವತ್ಸರ ಶಬ್ದಕ್ಕೆ ದಿನ ಪರವಾಗಿ ಅರ್ಥವನ್ನು ಹೇಳಿ,

ಶತ್ರುಗಳಾದ ಕೌರವರನ್ನು ನಾಶಮಾಡಲು ಆಣತಿಯನ್ನೀಡು. ಕಾಲವು ನದೀಪ್ರವಾಹದಂತೆ ದಿನದಿನವೂ ಮುಂದುಮುಂದಕ್ಕೆ ಹೋಗತಕ್ಕುದಾಗಿ ನಮ್ಮ ಆಯುಸ್ಸನ್ನು ಹೀರುವುದರಿಂದ ಹೀಗೆ ಕ್ಲೇಶಕ್ಕೆ ಗುರಿಯಾಗಿ ಕ್ಷೀಣಗತಿಯನ್ನು ಹೊಂದುವುದು ತರವಲ್ಲ. ಮೋಸದಲ್ಲಿ ಅಗ್ರಗಣ್ಯರಾದ ಜೂಜುಗಾರರಿಗೆ ಸರ್ವಸ್ವವನ್ನೂ ಸೋತು, ಆ ಕಪಟಿಗಳಿಗೆ ಕೊಟ್ಟ ಮಾತನ್ನು ನೆರವೇರಿಸುತ್ತೇನೆಂಬುದು ಸರಿಯಲ್ಲ. ನಮ್ಮ ರಾಜ್ಯವೂ ಸಕಲೈಶ್ವರ್ಯವೂ ಹೋಯಿತು. ಕ್ಷತ್ರಿಯನು ಹೀಗೆ ವೈರಿಗಳ ಹಾಸ್ಯಾದಿಗಳಿಗೆ ಗುರಿಯಾಗಬಹುದೇ?—ಎಂದು ಬೆಸಗೊಂಡುದಕ್ಕೆ ಧರ್ಮರಾಯನು ನಿಟ್ಟುಸಿರುಬಿಡುತ್ತ.—ವತ್ಸನೇ! ನೀನು ಹೇಳಿದುದೆಲ್ಲ ನಿಜ, ನಿನ್ನಮೇಲೆ ದೋಷ ಹೊರಿಸಲಾಗದು. ನಾನು ಹಾಗೆ ಮಾಡಬಾರದಾಗಿದ್ದಿತು. ಈಗ ಏನೇ ಆಗಲಿ, ನಾನಾ ದೇವತ್ವಕ್ಕಿಂತಲೂ, ಪ್ರಾಣಕ್ಕಿಂತಲೂ ಶ್ರೇಷ್ಠತಮವಾದ ಸತ್ಯಸಂಪತ್ತನ್ನು ಮಾತ್ರ ತೊರೆಯಲಾರೆನು. ನೀನೂ ಯೋಚಿಸುವನಾಗು,—ಎಂದು ಹೇಳಿ ಸಹಿಷ್ಣುತೆಯನ್ನುಂಟುಮಾಡಿದನು! ಪಾಂಡವರು ಅರಣ್ಯದಲ್ಲಿದ್ದರೂ ತಮ್ಮನ್ನು ಅನೇಕಭಿಕ್ಷಾಶನರೂ, ಸ್ನಾತಕವ್ರತಿಗಳೂ, ಶಿಷ್ಯವರ್ಗದೊಡನೆ ಕೂಡಿದ ಬ್ರಹ್ಮರ್ಷಿಗಳೂ ಮಿತ್ರಭಾವದಿಂದ ಉಪಾಶ್ರಯಿಸಿ ಕೊಂಡಿರಲು; ನಿತ್ಯವೂ ಯಾವುದಾದರೊಂದು ವ್ರತ, ತೀರ್ಥಸ್ನಾನ, ಹಬ್ಬಹರಿದಿನಗಳಲ್ಲಿ ಮಾಡಬೇಕಾದವುಗಳನ್ನು ವಿಧಿವತ್ತಾಗಿ ಮಾಡುತ, ವೇದಶಾಸ್ತ್ರಾದಿಗಳಲ್ಲಿ ಪ್ರಸಂಗವನ್ನು ಮಾಡುತ, ಹರಿಶ್ಚಂದ್ರ, ನಳ, ಶ್ರೀರಾಮ ಮುಂತಾದ ಪುಣ್ಯಶ್ಲೋಕರ ಚರಿತ್ರೆಗಳನ್ನು ಕೇಳುತ, ಹವ್ಯಕವ್ಯಗಳಲ್ಲಿ ಶಾಸ್ತ್ರೋಕ್ತವಾಗಿ ನಡೆಯುತ, ಪುಣ್ಯಸಂಪಾದನಕಾರ್ಯಗಳಲ್ಲಿಯೇ ಕಾಲವನ್ನು ಕಳೆಯುತ್ತಿದ್ದರು. ಒಂದುದಿನ ಸೂರ್ಯೋಪರಾಗ ಒದಗಿದ್ದಾಗ ಅರ್ಜುನನು ಧರ್ಮರಾಯನಿಂದ ಉಪದೇಶವನ್ನು ಪಡೆದು, ಪುರಶ್ಚರಣೆಯಿಂದ ಮಂತ್ರಸಿದ್ಧಿಯನ್ನು ಹೊಂದಿ, ತಪಸ್ಸಿಗೆ ಹೋಗಿ ಮಹೇಂದ್ರನ ದರ್ಶನವನ್ನು ಮಾಡಿದ ಬಳಿಕ ಮರಳಿ ಶೀತಾಚಲದ ಹಿಂಭಾಗದಲ್ಲಿ ಊರ್ಧ್ವಬಾಹುವಾಗಿ ನಿಂತು ನೇಮದಿಂದ ತಪವನ್ನಾಚರಿಸುತಿರುವಲ್ಲಿ, ಹಂದಿಯ ರೂಪವನ್ನು ತಾಳಿ ಮೂಕನೆಂಬ ದನುಜನು ಬರಲು, ಅದನ್ನು ಶಬರರೂಪಿಯಾದ ಶಂಕರನೂ, ಅರ್ಜುನನೂ ಏಕಕಾಲದಲ್ಲಿ ಬಾಣಗಳಿಂದ ಹೊಡೆದು ಕೊಂದರು!

ಆಗ ಪಾರ್ಥನು ತನ್ನ ಬಾಣತಾಗಿದ ವರಾಹಕ್ಕೆ ಕಿರಾತನೂ ಪೆಟ್ಟಿಕ್ಕಿದನೆಂದು ಆಗ್ರಹಿಸಿ ಪರಮೇಶ್ವರನ ಮೇಲೆ ತನ್ನ ಶಕ್ತಿಯನ್ನೆಲ್ಲ ತೋರಿಸಿ, ಕೊನೆಗೆ ಅವನಿಂದ ತಾನೇ ಪರಾಜಿತನಾಗಿ ಮೈಮರೆತು ಬಿದ್ದು ಸಂಕಟಪಡುತ್ತ ಅಷ್ಟರಲ್ಲಿಯೇ ಪುನಃ ಚೇತರಿಸಿಕೊಂಡು, ಈಶ್ವರಾನುಗ್ರಹಕ್ಕೆ ಪಾತ್ರನಾಗುವ ಬುದ್ಧಿಯೊದಗಲು, ಪಾರ್ಥಿವಲಿಂಗವನ್ನು ಮಾಡಿ ಅದನ್ನು ಭಕ್ತಿಭರಿತನಾಗಿ ಪೂಜಿಸಿದನು. ಮಳಲಿನಲಿಂಗಕ್ಕೆ ತಾನು ಅರ್ಚಿಸಿದ ಪುಷ್ಪಮಂಜರಿಯು ಕಿರಾತರೂಪಿಯಾದ ದೇವದೇವನ ತಲೆಯಮೇಲೆ ಇದ್ದುದನ್ನು ಕಂಡು, ಆ ಮಹೇಶ್ವರನನ್ನು ವಂದಿಸಿ ಸ್ತುತಿಸಿದನು ಆಗ ಲೋಕಜನನಿಯಾದ ಪಾರ್ವತೀದೇವಿಯೊಡಗೂಡಿದ ಪರಮೇಶ್ವರನು ಪಾರ್ಥನಿಗೆ ತನ್ನ ದಿವ್ಯದರ್ಶನವನ್ನಿತ್ತು ಪಾಶುಪತಾಸ್ತ್ರವನ್ನು ಅನುಗ್ರಹಿಸಿದನು ! ಆ ಬಳಿಕ ಅರ್ಜುನನು ಅಮರಾವತಿಗೆ ಹೋಗಿ ತನ್ನ ತಂದೆಯಾದ ಮಹೇಂದ್ರನಲ್ಲಿ ಅನೇಕ ಮಂತ್ರಾಸ್ತ್ರಗಳನ್ನು ಕಲಿತು, ದಿಕ್ಪಾಲಕರ ದರ್ಶನಾದಿಗಳನ್ನು ಹೊಂದಿ ದೇವಕಾರ್ಯಾರ್ಥವಾಗಿ ಸ್ವರ್ಗದಲ್ಲಿಯೇ ಇದ್ದುಕೊಂಡು ಗಾಂಧರ್ವವೇದವನ್ನು ಓದುತಿದ್ದನು.

ಅರ್ಜುನನ ಅಗಲಿಕೆಯಿಂದ ಯುಧಿಷ್ಠಿರಾದಿಗಳು ಚಿಂತಾಕ್ರಾಂತಮನಸ್ಕರಾಗಿ ತಮ್ಮ ಆಶ್ರಮದಲ್ಲಿರುವಾಗ, ದೈವಯೋಗದಿಂದ ಒಂದುದಿನ ಸಾವಿರದಳಗಳುಳ್ಳ ದಿವ್ಯಕಮಲಪುಷ್ಪವು ಗಾಳಿಯಿಂದ ತರಲ್ಪಟ್ಟಿತು. ದ್ರೌಪದೀದೇವಿಯು ಅದನ್ನು ತನ್ನ ಕೈಯಲ್ಲಿ ತೆಗೆದುಕೊಂಡು ಅದರ ಸೌರಭ್ಯಾದಿಗಳಿಗೆ ಆನಂದಗೊಂಡು ವಾಯುಸುತನನ್ನು ಕುರಿತು, ಮೃದುಮಧುರವಾಗಿ—‘ ಆರ್ಯಪುತ್ರನೆ ! ನಿನಗೆ ನನ್ನಲ್ಲಿ ಪ್ರೀತಿಯಿದ್ದರೆ ಈ ವಿಧವಾದ ಪುಷ್ಪಗಳನ್ನು ತಂದುಕೊಟ್ಟರೆ, ನಿತ್ಯಗೌರೀಪೂಜೆಗೆ ಅನುಕೂಲಿಸುವುದು’—ಎಂದು ಅರ್ಥಿಸಲು ; ಭೀಮನು ‘ ಆಗಲಿ ’ ಎಂದು ಹೇಳಿ ಧನುರ್ಬಾಣಗಳನ್ನು ತೆಗೆದುಕೊಂಡು ಆ ಪುಷ್ಪನಿಮಿತ್ತವಾಗಿ ಹೊರಟು ಬಹುದೂರ ತಿರುಗಿ, ಆ ಮೇಲೆ ಗಂಧಮಾದನ ಪರ್ವತವನ್ನೇರಿ ಅಲ್ಲಿರುವ ಲತಾಮಂಡಪಗಳಲ್ಲಿಯೂ, ದರೀಪ್ರದೇಶಗಳಲ್ಲಿಯೂ, ಗುಹಾಂತರ್ದೇವಾಲಯಗಳ ಬಳಿಯಲ್ಲಿಯೂ, ಸರಸ್ಸುಗಳಲ್ಲಿಯೂ, ಮಿಕ್ಕ ಜಲಪ್ರದೇಶಗಳಲ್ಲಿಯೂ ಅದನ್ನು ಹುಡುಕುತಲಿದ್ದನು. ಕೃಷ್ಣೆಯ ಮನೋರಥವನ್ನು ನೆರವೇರಿಸು

ಪ್ರದಕ್ಕಾಗಿ ಹೋಗುತ ತನ್ನೆದುರಿಗೆ ದಾರಿಯಲ್ಲಿ ಸಿಕ್ಕಿದ ಕಾಡುಗಿಡಗಳೇ ಮುಂತಾದವುಗಳನ್ನು ಅತ್ತಿತ್ತ ಸರಿಗಿಸಿ, ಭಯಸ್ವರೂಪವನ್ನೇ ತಿಳಿಯದ ಜಿಂಕೆಗಳನ್ನು ನೋಡುತ, ಅಲ್ಲಲ್ಲಿ ತಮ್ಮ ಪತಿಗಳೊಡನೆ ಅದೃಶ್ಯೆಯರಾಗಿ ನೋಡುತಲಿರುವ ಗಂಧರ್ವಸ್ತ್ರೀಯರನ್ನು ಕಾಣದೆ, ಹತ್ತಿರಕ್ಕೆ ಬರುತ್ತಿರುವ ಮದದಾನೆಗಳ ಹಿಂಡನ್ನು ಅಟ್ಟಿ ಓಡಿಸುತ, ದುಷ್ಟಮೃಗಗಳನ್ನು ಕಂಡರೆ ಹೊಡೆಯುತ, ಸಿಂಹಶಾರ್ದೂಲಗಳನ್ನು ಹಿಂಬಾಲಿಸಿ ಕೆಡಹುತ, ಆ ಅರಣ್ಯವನ್ನು ಸಕಲಜನ ಸಂಚಾರಯೋಗ್ಯವಾಗುವಂತೆ ಮಾಡುತ ದುರ್ಯೋಧನಾದಿಗಳಿಂದುಂಟಾದ ಅನೇಕ ಕ್ಲೇಶಗಳನ್ನು ಸ್ಮರಿಸಿಕೊಂಡು,—ನಾನು ಪುಷ್ಪನಿಮಿತ್ತವಾಗಿ ಇತ್ತಲು ಬಂದೆನು ; ಕಿರೀಟಿಯು ಅಸ್ತ್ರನಿಮಿತ್ತವಾಗಿ ಅಮರಾವತಿಗೆ ಹೋಗಿದಾನೆ ; ಧರ್ಮಾತ್ಮನಾದ ಅಣ್ಣನು ಬಾಲಕರಾದ ಯಮಳರೊಡನೆಯೂ ಪಾಂಚಾಲಿಯೊಡನೆಯೂ ಪೇಚಾಡುತ ಇರಬಹುದು. ನನ್ನ ಇಷ್ಟಾರ್ಥವು ನೆರವೇರುವ ಬಗೆಹೇಗೆ ?—ಎಂದು ಚಿಂತಿಸುತ, ಪುನಃ ಹುಡುಕಿಕೊಂಡುಹೋದನು. ಆಗ ಆ ಪರ್ವತದ ಅರೆದೊಪ್ಪಲಿನಲ್ಲಿರುವ ಮನೋಹರವಾದ ದೊಡ್ಡ ಕದಲೀವನವು ಗೋಚರವಾಗಲು, ಅಲ್ಲಿಗೆ ಬೇಗನೆ ಹೋಗಿ, ಆಂಜನೇಯನು ಅಶೋಕವನವನ್ನು ಭಂಗಪಡಿಸಿದಂತೆ, ದೊಡ್ಡದೊಡ್ಡ ವೃಕ್ಷಗಳನ್ನೆಲ್ಲ ಕಿತ್ತುಹಾಕಿ, ಗರ್ಜಿಸಿದನು. ಅದಕ್ಕೆ ಅಲ್ಲಿದ್ದ ಮೃಗಪಕ್ಷಿಗಳು ಭಯಭ್ರಮೆಯಿಂದ ಓಡುತ್ತಿರುವ ಮಾರ್ಗದಲ್ಲಿಯೇ ಹೋಗಿ, ಮಂದಮಾರುತದಿಂದ ಒಪ್ಪಿ ರಮಣೀಯವಾಗಿರುವ ಪದ್ಮಸರೋವರ ಒಂದನ್ನು ಕಂಡು, ತನ್ನಲ್ಲಿದ್ದ ಪೌಂಡ್ರಕವೆಂಬ ಜಯಶಂಖವನ್ನು ಊದಿ ಭುಜಗಳನ್ನು ತಟ್ಟಿ, ಅಲ್ಲಿಯೇ ವಿಹರಿಸುತಿದ್ದನು.

ಆಗ ಅಲ್ಲಿದ್ದ ಜಿತೇಂದ್ರಿಯನಾದ ಹನುಮಂತನು ತನ್ನ ಮನಸ್ಸಿನಲ್ಲಿ—' ನನ್ನ ತಮ್ಮನಾದ ಭೀಮಸೇನನು ಈ ಮಾರ್ಗವಾಗಿ ಬರುವನು. ಇದು ಸ್ವರ್ಗಕ್ಕೆ ಹೋಗುವದಾರಿ ಆತನು ಈ ದಾರಿಯಲ್ಲಿ ಹೋದರೆ, ದೇವತೆಗಳು ಶಾಪವನ್ನು ಕೊಡುವರು. ಇಲ್ಲಿಂದ ಮುಂದಕ್ಕೆ ಹೋಗದಂತೆ ಅಡ್ಡಿಮಾಡುವೆನು ' ಎಂದು ಯೋಚಿಸಿ, ಕದಲೀತರುಗಳಿಂದ ರಮ್ಯವಾದ ಆ ಪಥಕ್ಕೆ ತಡೆಯಾಗಿ ಪರ್ವತಶಿಖರದಂತೆ ಉದ್ದವಾಗಿ ಬೆಳೆದು ಅಲ್ಲಿಯೇ ಮಲಗಿಕೊಂಡು ತನ್ನ ನೀಳವಾದ ಬಾಲವನ್ನು ನೆಲಕ್ಕೆ ಅಪ್ಪಳಿಸಿದನು.

ಸಿಡಿಲಿನಂದದ ಆ ಶಬ್ದವನ್ನು ಭೀಮನು ಕೇಳಿ ಆಶ್ಚರ್ಯಗೊಂಡು, ಆ ಧ್ವನಿಯು ಕೇಳಿಬಂದ ಮಾರ್ಗವನ್ನೇ ಹಿಡಿದು ಹೋಗಿ, ಆ ಕನಕಕದಲೀ ವನಮಧ್ಯದಲ್ಲಿ ಮಹತ್ತಾದ ಅರೆಬಂಡೆಯಮೇಲೆ ಮಹೋನ್ನತನಾಗಿ, ನಿದ್ರೆಯ ಮೊಬ್ಬಿನಿಂದಿರುವಂತೆ, ಮಲಗಿರುವ ನವವ್ಯಾಕರಣಪಂಡಿತನಾದ ಆಂಜನೇಯನನ್ನು ಕಂಡನು! ಆತನು ಹೊಂಬಣ್ಣವುಳ್ಳ ತನುಕಾಂತಿ ಯಿಂದಲೂ, ಹೊರಕ್ಕೆ ಹೊರಟಿರುವ ತೀಕ್ಷ್ಣವಾದ ಕೋರೆಹಲ್ಲುಗಳಿಂದಲೂ ಇಂದ್ರಧ್ವಜದಂತೆ ಕಾಣುತಿರುವ ಲಾಂಗೂಲದಿಂದಲೂ, ಪರ್ವತದಂತೆ ತೋರುತಲಿರುವ ದೊಡ್ಡದಾದ ಶರೀರದಿಂದಲೂ, ಯಜ್ಞೇಶ್ವರನಂತೆ ಜಾಜ್ವಲ್ಯಮಾನನಾಗಿ ಪ್ರಕಾಶಿಸುತಿದ್ದನು. ಭೀಮಸೇನನು ಆತನ ಹತ್ತಿ ರಕ್ಕೆಹೋಗಿ ಕೂಗಿಕೊಳ್ಳಲು; ಆಂಜನೇಯನು ಭೀಮನನ್ನು ಅರೆಗಣ್ಣಿನಿಂದ ನೋಡುತ—ಎಲೋ ಬಾಲಕ! ನೀನು ಯಾರು? ವೃದ್ಧನಾದ ನನ್ನನ್ನು ಏಕೆ ಎಬ್ಬಿಸಿದೆ? ಧರ್ಮಸ್ವರೂಪವನ್ನು ತಿಳಿದು ನಡೆದು ಕೃತಾರ್ಥನಾಗು ವುದಕ್ಕೆ ಅನುಕೂಲವಾದ ನಂಜನ್ಮವನ್ನು ಹೊಂದಿದ್ದರೂ ಧರ್ಮದೃಷ್ಟಿ ಯಿಲ್ಲದೆ ಬಾಲಭಾವದಿಂದ ಈ ಪರ್ವತದಲ್ಲಿದ್ದ ಮೃಗಪಕ್ಷಿಗಳನ್ನು ಬೆದ ರಿಸಿ ಅಟ್ಟಿಬಿಟ್ಟೆಯಲ್ಲಾ! ನಿರ್ಜನವಾದ ಈ ದೇವಲೋಕದ ಮಾರ್ಗಕ್ಕೆ ನೀನು ಬರಬಹುದೇ? ಮನೋವಾಕ್ಕಾಯಗಳಿಗೂ ದೋಷವನ್ನುಂಟು ಮಾಡುವಧರ್ಮವಿರುದ್ಧವಾದ ಕ್ರೂರಕಾರ್ಯಗಳಲ್ಲಿ ನಿನ್ನಂತಹ ಬುದ್ಧಿಶಾಲಿಯು ಪ್ರವೇಶಿಸಬಹುದೇ? ಭೂತದಯೆಯನ್ನೇ ಮುಖ್ಯಧರ್ಮವನ್ನಾಗಿಟ್ಟುಕೊಳ್ಳುವ ಮಾನವನು ಪರಮಸುಖವನ್ನೈದುವವನಲ್ಲವೇ? ಇಲ್ಲಿಂದ ಮುಂದಕ್ಕೆ ನೀನು ಹೋಗಬೇಡ. ಇಲ್ಲಿರುವ ಅಮೃತಕ್ಕೆ ಸಮಾನವಾದ ದಿವ್ಯಫಲಗ ಳನ್ನು ತಿಂದು ಹಿಂದಕ್ಕೆ ಹೊರಡು—ಎಂದು ಮೃದುವಾಗಿ ಹೇಳಿದನು. ಅದಕ್ಕೆ ಭೀಮನು ತನ್ನ ಪೂರ್ವೋತ್ತರವನ್ನೆಲ್ಲ ಹೇಳಿ, ನೀನು ಯಾರು? ಇಲ್ಲಿ ಏಕೆ ಇದೀಯೆ—ಎಂದು ಹನುಮಂತನನ್ನು ಕೇಳಿದನು. ನಾನು ಯಾರಾದ ರೇನು? ನಿನ್ನ ಇಚ್ಛೆಯಂತೆ ದಾರಿಯನ್ನು ಬಿಡೆನು. ಹಿಂದಕ್ಕೆ ಹೋಗು— ಎಂದು ಹೇಳಿದ ಕಪಿಶ್ರೇಷ್ಠನನ್ನು ಕುರಿತು,—ನನಗೆ ಕೇಡು ಒದಗಿದರೂ ಒದಗಲಿ. ನಾನು ಅದನ್ನು ಕೇಳುವುದಕ್ಕಾಗಿ ನಿನ್ನ ಬಳಿಗೆ ಬಂದಿಲ್ಲ. ದಾರಿಯನ್ನು ಬಿಟ್ಟು ಮಾತನಾಡು.—ಎಂದು ಹೇಳಿದ ಭೀಮನ ಮಾತಿಗೆ

ಶ್ರೀರಾಮಭಕ್ತನು ನಗುತ, "ಎಲೈ ಪಾಂಡುನಂದನನೇ ! ಏಳುವುದಕ್ಕೆ ಶಕ್ತಿಯಿಲ್ಲದೆ ವ್ಯಾಧಿಯಿಂದ ನರಳುತ ಬಿದ್ದಿದೇನೆ. ನನ್ನನ್ನು ದಾಟಿಕೊಂಡು ಬೇಕಾದರೆ ಹೋಗು. ಕೋಪವಮಾಡಬೇಡ." ಎಂದನು. ಅದಕ್ಕೆ ಕೌಂತೇಯನು "ಎಲೈ ವೃದ್ಧನೇ ! ತ್ರಿಗುಣಾತೀತನಾದ ಪರಬ್ರಹ್ಮನು ಸಕಲ ಪ್ರಾಣಿಗಳಲ್ಲಿಯೂ ವ್ಯಾಪಿಸಿಕೊಂಡು ಇರುವುದನ್ನು ತಿಳಿದು, ನಿನ್ನನ್ನು ದಾಟಿಕೊಂಡು ಹೋದರೆ, ಆ ಪರಮಾತ್ಮನಲ್ಲಿ ಅಪಚಾರಮಾಡಿದಹಾಗೆ ಆಗುವುದಿಲ್ಲವೇ ! ಸಮಸ್ತರಿಂದಲೂ ಭಾವಿಸುವುದಕ್ಕೆ ಅರ್ಹನಾದ ದೇವರ ಮಹಿಮಾತಿಶಯವನ್ನು ವೇದಾನ್ತಶಾಸ್ತ್ರಗಳಿಂದ ನಾನು ತಿಳಿಯದಿದ್ದರೆ, ಮಹಾಪರಾಕ್ರಮಿಯಾದ ಆಂಜನೇಯನು ಸಾಗರವನ್ನು ದಾಟಿ ಲಂಕೆಗೆ ಹೋಗಿಬಂದಂತೆ, ಈ ಪರ್ವತಸಹಿತ ನಿನ್ನನ್ನು ಲಂಘಿಸಿಕೊಂಡು ಮುಂದಕ್ಕೆ ಹೋಗಿ ಬರುತಿದ್ದೆನು" ಎಂದಾಡಿದನು. ಕಡಲನ್ನು ಲಂಘಿಸಿದ ಆ ಆಂಜನೇಯನಾರು ? ನಿನಗೆ ತಿಳಿದಿದ್ದರೆ ಹೇಳು-ಎನಲು ; ಆಗ ಭೀಮನು - ಎಲೈ ವಾನರನೇ ! ಕೇಳು ; ಪ್ರಭಂಜನನಿಂದ ಅಂಜನಾದೇವಿಯಲ್ಲಿ ಜನಿಸಿದ ಹನುಮಂತನೆಂಬಾತನು ಇಂದ್ರಪುತ್ರನಾದ ವಾಲಿಯಿಂದ ತಿರಸ್ಕಾರವನ್ನೈದಿದ ಸೂರ್ಯನ ಮಗನಾದ ಸುಗ್ರೀವನಕೂಡ ಋಶ್ಯಮೂಕಗಿರಿಯಲ್ಲಿ ವಾಸಮಾಡುತಲಿದ್ದನು ಶ್ರೀಮನ್ನಾರಾಯಣನು ದಾಶರಥಿಯಾಗಿ ಅವತರಿಸಿ, ಮೂರುಜನ ತಮ್ಮಂದಿರಿಂದೊಡಗೂಡಿ, ಲೋಕಾಹ್ಲಾದಕರನಾಗಿರುತ, ಪಿತೃವಾಕ್ಯಪರಿಪಾಲನೆಗಾಗಿ ಕೈಕಾದೇವಿಯ ಪ್ರೀತಿನಿಮಿತ್ತ, ಸೀತಾಲಕ್ಷ್ಮಣರೊಡನೆ ದಂಡಕಾರಣ್ಯದಲ್ಲಿದ್ದಾಗ, ಪುಲಸ್ತ್ಯಪೌತ್ರನಾದ ರಾವಣನು, ವರಬಲದಿಂದ ಗರ್ವಿತನಾಗಿ ತನ್ನ ತಂಗಿಯಮಾತಿನಂತೆ, ಮೃಗರೂಪವನ್ನು ತಾಳಿದ ತನ್ನಮಾವ ಮಾರೀಚನ ಮೂಲಕ, ಧರ್ಮಾತ್ಮನಾದ ಶ್ರೀರಾಮನನ್ನು ವಂಚಿಸಿ, ಜನಸ್ಥಾನದಲ್ಲಿ ಒಂಟಿಯಾಗಿದ್ದ ಶ್ರೀಮತೀ ಸೀತಾದೇವಿಯನ್ನು ಹಟದಿಂದ ಬಲತ್ಕಾರವಾಗಿ ಅಪಹರಿಸಿಕೊಂಡು ಲಂಕೆಗೆ ಹೋದನು. ಸತ್ಯಸಂಧನಾದ ಶ್ರೀರಾಘವನು ಅನುಜನೊಡನೆ ಪತ್ನಿಯನ್ನು ಹುಡುಕುತ ಕಬಂಧನನ್ನು ನಾಕಕ್ಕೆ ಕಳುಹಿಸಿ, ಭಕ್ತೆಯಾದ ಶಬರಿಯನ್ನು ಅನುಗ್ರಹಿಸಿ, ಕಿಷ್ಕಿಂಧೆಗೆಬಂದು ವಾಲಿಯನ್ನು ನಿಗ್ರಹಿಸಿ, ಸುಗ್ರೀವನನ್ನು ಕಪಿರಾಜ್ಯದಲ್ಲಿ ಸ್ಥಾಪಿಸಿದನು. ಆ ಹನುಮಂತನು ಸೀತಾನ್ವೇಷಣಕ್ಕಾಗಿ ಕಪಿವೀರರೊಡನೆ

ಹೊರಟು ಕಡಲನ್ನು ದಾಟಿ ಲಂಕೆಗೆ ಹೋಗಿ, ಅಶೋಕವನದಲ್ಲಿ ರಾಕ್ಷಸರ ನಿರ್ಬಂಧದಲ್ಲಿದ್ದರೂ ಶ್ರೀರಾಮಧ್ಯಾನವನ್ನೇ ಮಾಡುತಲಿರುವ ಲೋಕಮಾನ್ಯೆಯಾದ ಜಾನಕೀದೇವಿಯನ್ನು ಕಂಡು, ಕೌಸಲ್ಯಾಪುತ್ರನ ಯೋಗಕ್ಷೇಮಾದಿಗಳನ್ನು ಆಕೆಗೆ ಅರಿಕೆಮಾಡಿ.—

ಶ್ಲೋ || ಸುವರ್ಣಸ್ಯ ಸುವರ್ಣಸ್ಯ ಸುವರ್ಣಸ್ಯ ವರಾನನೇ |
ಪ್ರೇಷಿತಂ ರಾಮಚಂದ್ರೇಣ ಸುವರ್ಣಸ್ಯಾಂಗುಳೀಯಕಂ ||

ಎಲೈ ಸುಂದರಮುಖಿಯೆ ! ಒಳ್ಳೆಯ ಬಣ್ಣವುಳ್ಳ ಶ್ರೇಷ್ಠವಾದ ಅಕ್ಷರಗಳುಳ್ಳ ಸೌರ್ಣತೂಕವುಳ್ಳ ಬಂಗಾರದ ಅಂಗುಳೀಯಕವು ರಾಮಚಂದ್ರನಿಂದ ಕಳುಹಿಸಲ್ಪಟ್ಟಿರುವುದು—ಎಂದು ಹೇಳುತ ಶ್ರೀರಾಮಮುದ್ರಿಕೆಯನ್ನೊಪ್ಪಿಸಿ, ಅನೇಕ ರಾಕ್ಷಸರನ್ನು ಕೊಂದು, ದಶಕಂಠನನ್ನು ಕಂಡು ಬುದ್ಧಿಹೇಳಿ, ರಾಕ್ಷಸರು ಆತನನ್ನು ಕಟ್ಟಿ ಬಾಲವನ್ನು ಉರಿಸಿ ಪೀಡಿಸಿದರೂ, ತನ್ನ ಶೌರ್ಯವನ್ನು ಬಿಡದೆ, ಲಂಕೆಯನ್ನು ಸುಟ್ಟು, ಮರಳಿ ಸೀತಾದೇವಿಗೆ ಭರವಸೆಯನ್ನು ಹೇಳಿ, ಸಾಗರವನ್ನು ಲಂಘಿಸಿ, ರಘುವೀರನ ಬಳಿಗೆಹೋಗಿ ಸೀತಾವೃತ್ತಾಂತವನ್ನು ತಿಳುಹಿಸಿದನು. ಇಕ್ಷ್ವಾಕುಕುಲತಿಲಕನು ಅಸಂಖ್ಯಾತವಾದ ಕಪಿಸೇನೆಯೊಡನೆ ಹೊರಟು, ಲವಣಸಮುದ್ರಕ್ಕೆ ವಿಶ್ವಕರ್ಮಪುತ್ರನಾದ ನಳನೆಂಬ ಕಪಿಯಿಂದ ಸೇತುವನ್ನು ಕಟ್ಟಿಸಿ ಅದರಮೇಲೆ ಲಂಕೆಗೆಹೋಗಿ, ಪುತ್ರಮಿತ್ರಾಮಾತ್ಯಾನುಜಸಹಿತನಾದ ದಶಗ್ರೀವನನ್ನು ಯುದ್ಧದಲ್ಲಿ ಕೊಂದು, ಭಕ್ತನಾದ ವಿಭೀಷಣನಿಗೆ ಲಂಕಾರಾಜ್ಯವನ್ನಿತ್ತು, ಅಗ್ನಿಪ್ರವೇಶವನ್ನುಮಾಡಿ, ತನ್ನ ಪಾತಿವ್ರತ್ಯವನ್ನು ಜಗತ್ತಿಗೆ ಪ್ರಕಾಶಪಡಿಸಿದ ಲೋಕಪಾವನೆಯಾದ ಸೀತಾದೇವಿಯನ್ನು ಕರೆದುಕೊಂಡು, ಪರಿವಾರಸಹಿತ ಪುಷ್ಪಕವಿಮಾನದಮೇಲೆ ಅಯೋಧ್ಯೆಗೆ ಬಂದು ಪಟ್ಟಾಭಿಷಿಕ್ತನಾಗಿ ಪ್ರಜಾಪರಿಪಾಲನನಿರತನಾಗಿದ್ದನಷ್ಟೆ. ಆ ನರವರೇಣ್ಯನೆನಿಸಿದ ಶ್ರೀರಾಮನ ಪತ್ನಿಯ ನಿಮಿತ್ತವಾಗಿ ಶತಯೋಜನವಿಸ್ತಾರವುಳ್ಳ ಸಾಗರವನ್ನು ದಾಟಿದ ಆಂಜನೇಯನು ನನಗೆ ಅಗ್ರಜನಾಗಬೇಕು. ಸ್ಮರಣೀಯನಾದ ಆತನು ಬುದ್ಧಿಪರಾಕ್ರಮದಲ್ಲಿ ಪುರಂದರನಿಗೆ ಸಮಾನನು. ಪರಮಭಾಗವತನು. ವಾಯುವೇಗವುಳ್ಳವನು. ನನ್ನನ್ನೂ ಆ ಮಹನೀಯನಿಗೆ ಸರಿಯಾದವನೆಂದು ಬಲ್ಲವರು ಹೇಳುವರು. ಅದು ಹಾಗಿರಲಿ. ನೀನು

ಬೇಗನೆ ಎದ್ದು ನನಗೆ ದಾರಿಯನ್ನು ಕೊಡು. ಇಲ್ಲವಾದರೆ ನಿನಗೆ ತೊಂದರೆಯಾಗುವುದು—ಎಂದನು. ಅದನ್ನು ಕೇಳಿದ ಶ್ರೀರಾಮದೂತನು ಭೀಮನ ಗರ್ವೋಕ್ತಿಗೆ ನಗುತ,—ಅಯ್ಯಾ ಬಲವೈರಿ, ನಾನು ಮುದುಕ, ಏಳಲಾರೆ. ದಯೆಯಿಟ್ಟು ಈ ನನ್ನ ಬಾಲವನ್ನು ಸ್ವಲ್ಪ ವಾರೆಮಾಡಿಕೊಂಡು ಹೋಗಬಾರದೇ!—ಎಂದನು. ಬಲಗರ್ವಿತನಾದ ಭೀಮನು ಪ್ರಾಕೃತವಾನರನೆಂದು ತಿಳಿದು, ಈ ಮುದಿಕಪಿಯನ್ನು ಕೊಲ್ಲುವೆನೆಂದು ನಿಶ್ಚಯಿಸಿ, ಬಳಿಕ ತನ್ನ ಬಲವನ್ನೆಲ್ಲ ಉಪಯೋಗಿಸಿದರೂ ಅದನ್ನು ಎತ್ತಿಡುವುದಕ್ಕಾಗದೆ, ಲಜ್ಜಿತನಾಗಿ ಹರಿವೀರನ ಪಾದಪದ್ಮಗಳಿಗೆ ವಂದಿಸಿ,—ಆರ್ಯನೇ, ಬಾಲಕನ ಅವಿಜ್ಞತೆಗೆ ಆಕ್ರೋಶಗೊಳ್ಳದೆ ಕ್ಷಮಿಸಿ ನೀನುಯಾರು ಎಂಬುದನ್ನು ಸಮಗ್ರವಾಗಿ ಹೇಳಿ, ಬುದ್ಧಿಕಲಿಸಿ ಕಾಪಾಡು—ಎಂದು ಬೇಡಿಕೊಂಡನು. ಆಗ ಕರುಣಾರ್ದ್ರಹೃದಯನಾದ ಆಂಜನೇಯನು,—ಎಲೈ ವೃಕೋದರನೆ ಕೇಳು. ನಾನೇ ನೀನು ಹೇಳಿದ ಆಂಜನೇಯನು, ನಾನು ವಿಶ್ವಾಮಿತ್ರಪ್ರಿಯನಾದ ಆ ಶ್ರೀರಾಮನನ್ನು ಕುರಿತು—ಸ್ವಾಮಿ, ನಿನ್ನ ವಿಮಲ ಕೀರ್ತಿಯು ಎಲ್ಲಿಯವರೆಗೆ ಲೋಕದಲ್ಲಿ ನೆಲಸಿರುವುದೋ ಅಲ್ಲಿನವರೆಗೂ ನಾನು ಜೀವಂತನಾಗಿರುವಂತೆ, ಅನುಗ್ರಹಿಸಿಬೇಕು—ಎಂದು ಬೇಡಿದೆನು.—

ಶ್ಲೋ|| ಸಕೃದೇವಪ್ರಪನ್ನಾಯ ತವಾಸ್ಮೀತಿಚವಾದಿನೆ |
ಅಭಯಂಸರ್ವಭೂತೇಭ್ಯೋದದಾಮ್ಯೇತದ್ವ್ರತಂ ಮಮ ||

ಎಂದರೆ ಒಂದುಸಾರಿ ಮಾತ್ರವೇ ಶರಣಾಗತಿಯನ್ನು ಹೊಂದಿ ನಿನ್ನವನೆಂದು ಹೇಳುವ ಸಮಸ್ತಪ್ರಾಣಿಗಳಿಗೂ ಸಕಲಭೂತಗಳ ದೆಸೆಯಿಂದಲೂ ಅಭಯವನ್ನು ಕೊಟ್ಟು ರಕ್ಷಿಸುವುದೇ ನನ್ನ ಸತ್ಯವ್ರತವು—ಎಂದು ಹೇಳಿರುವ ಶ್ರೀರಾಮನು "ಹಾಗೆಯೇ ಆಗಲಿ" ಎಂದು ವರವನ್ನಿತ್ತನು. ಸೀತಾರಾಮರ ಅನುಗ್ರಹದಿಂದ ನಾನು ಈಗಲೂ ಬೇಕಾದಭೋಗಗಳನ್ನು ಅನುಭವಿಸುತ್ತಿರುವೆನು. ಈ ಗಂಧಮಾದನಪರ್ವತದಲ್ಲಿರುವ ಗಂಧರ್ವರೂ ಅಪ್ಸರಃಸ್ತ್ರೀಯರೂ ಅನಂತ ಗುಣಗಂಭೀರನಾದ ಶ್ರೀರಾಮನ ಚರಿತ್ರೆಯನ್ನೇ ನಿರಂತರವೂ ಗಾನಮಾಡುತ ನನಗೂ ಆನಂದವನ್ನುಂಟುಮಾಡುತ್ತಿರುವರು. ಎಲೈ ಕುರುಕುಲ ಶ್ರೇಷ್ಠನೇ! ನೀನು ಏತಕ್ಕಾಗಿಬಂದೆಯೋ ಅದು, ಇರತಕ್ಕಸ್ಥಳವು ಇದೇ ಆಗಿರುವುದು,—ಎಂದುಹೇಳಿದನು.

ಗುರುಜನವತ್ಸಲನಾದ ಭೀಮನು ಸಂತುಷ್ಟನಾಗಿ ಆಂಜನೇಯನಿಗೆ ಸಾಷ್ಟಾಂಗನಮಸ್ಕಾರವನ್ನು ಮಾಡಿ ಅಗ್ರಜನೇ, ಈಹೊತ್ತು ಆರ್ಯನಾದ ನಿನ್ನ ದರ್ಶನಸಂಭಾಷಣವು ಪ್ರಾಪ್ತಿಸಿದುದರಿಂದ ಧನ್ಯನಾದೆನು. ನೀನು ಕಡಲನ್ನು ದಾಟುವಾಗ ಯಾವ ರೂಪನ್ನು ಧರಿಸಿದ್ದೆಯೋ ಅದನ್ನು ನೋಡಬೇಕೆಂದು ಬಲು ಆಸೆಯಾಗಿದೆ. ಕೃಪೆಯಿಂದ ನಿನ್ನ ಇಚ್ಛಾರೂಪನ್ನು ತೋರಿಸು. ಅದರಿಂದ ನಿನ್ನ ಮಾತಿನಲ್ಲಿ ನನಗೆ ಇನ್ನೂ ನಂಬಿಕೆಯುಂಟಾಗುವುದು-ಎಂದನು. ಅಂಜನಾಸುತನು ನಗುತ–' ಎಲೈ ವತ್ಸನೇ! ನಾನು ಸಾಗರವನ್ನು ದಾಟುವಾಗ ಧರಿಸಿದ್ದ ಘೋರಾಕೃತಿಯನ್ನು ನೋಡುವುದು ಈಗ ಸರ್ವರಿಗೂ ಅಶಕ್ಯವಾದುದು. ಯುಗಯುಗಕ್ಕೂ ಕಾಲಸ್ಥಿತಿಯೂ, ಅವಸ್ಥಾಶಕ್ತಿಯೂ, ಸಕಲವೂ ಬೇರೆ ವಿಧವಾಗುವುವು ಸಮಸ್ತರೂ ಕಾಲವನ್ನೇ ಅನುವರ್ತಿಸಿ ನಡೆಯುತ್ತಿರುವರು ಈ ಕಾಲದಲ್ಲಿ ನನ್ನ ನಿಜರೂಪವನ್ನು ನೋಡಬೇಕೆಂದು ನೀನು ಏಕೆ ಆಶಿಸುವೆ ?—ಎಂದನು ಅದಕ್ಕೆ ಭೀಮನು— ಎಲೈ ಪೂಜ್ಯನೇ, ಆಯಾಯುಗಸ್ಥಿತಿಕ್ರಮವನ್ನು ನಿನ್ನಮುಖದಿಂದ ಚೆನ್ನಾಗಿ ಅರಿಯಲಿಚ್ಛಿಸುವೆನು. ನೀನು ಇದನ್ನು ಅನುಗ್ರಹಿಸು–ಎಂದು ಪ್ರಾರ್ಥಿಸಿದನು. ಆಗ ಕಪಿವೀರನು—ಎಲೈ ವತ್ಸನೇ ಕೇಳು, ಚತುರ್ಯುಗಗಳಲ್ಲಿ ಮೊದಲನೆಯದಾದ ಯುಗವೇ ಕೃತಯುಗ. ಆಗ ಜನರೆಲ್ಲರೂ ಅಧರ್ಮವಿಮುಖರಾಗಿ ತ್ರಿಕರಣಶುದ್ಧರಾಗಿ ಮನೋವಾಕ್ಕಾಯಗಳಿಂದಲೂ ಧರ್ಮದಲ್ಲಿಯೇ ನಿರತರಾಗಿ ಇದ್ದುದರಿಂದ ಕ್ಷಿಪ್ರವಾಗಿ ಉಪಾಸ್ಯದೇವತಾ ಪ್ರಸಾದವನ್ನು ಹೊಂದಿ ಸಕಲವಾದ ಇಷ್ಟಾರ್ಥಗಳನ್ನೂ ಪಡೆದು ಸುಖಿಗಳಾಗಿ ಇರುತಿದ್ದರು. ಈ ಸ್ಥಿತಿಯು ತ್ರೇತಾಯುಗದಲ್ಲಿ ಪಾದಾಂಶ ನ್ಯೂನವಾಗಿ ಮೂರುಪಾಲು ನೆಲೆಗೊಂಡಿದ್ದಿತು. ಈಗಿನ ದ್ವಾಪರಯುಗದಲ್ಲಿ ಅರ್ಧಾಂಶನ್ಯೂನವಾಗಿ ಅರ್ಧಪಾಲು ನೆಲೆಗೊಂಡಿದೆ. ಮುಂದೆ ಬರುವ ಕಲಿಯುಗದಲ್ಲಿ ಮೂರುಭಾಗ ನ್ಯೂನವಾಗಿ ಒಂದೇಭಾಗವು ನೆಲೆಗೊಳ್ಳುವುದು ಏಕೆಂದರೆ–ಆಗಿನ ಜನಗಳಲ್ಲನೇಕರು ಅಧರ್ಮಭಯವನ್ನು ತೊರೆದು, ಸುಖಮಾತ್ರಲಂಪಟರಾಗಿ ವಿಧಿನಿಷೇಧಗಳನ್ನು ಗಣಿಸದೆ, ಅಮಾರ್ಗಪ್ರವೃತ್ತರಾಗಿ ಸ್ವೇಚ್ಛಾನುಸಾರವಾಗಿ ಇರುತ್ತಾರಾದುದರಿಂದ, ಧರ್ಮಕ್ಷೋಭಮೂಲಕವಾಗಿ ಅಪೂರ್ವವಾದ ಮಹಾವ್ಯಾಧಿವಿಪತ್ತಿಗೆ ಗುರಿಯಾಗಿ ಅಲ್ಪಾಯುಷ್ಕರಾಗಿ ದುಃಖಭಾಜನರಾಗಿರುವರು.

ಭೀಮಸೇನಾ! ನನ್ನ ಮಹತ್ತಾದ ರೂಪವನ್ನು ನೋಡಬೇಕೆಂದು ಅಪೇಕ್ಷಿಸದೆ ಹೋಗಿಬಾ ನಿನಗೆ ಮಂಗಳವಾಗಲಿ—ಎಂದನು. ವೃಕೋದರನು—ಎಲೈ ಸ್ವಾಮಿಯೇ! ನಿನ್ನನುಗ್ರಹಕ್ಕೆ ಪಾತ್ರನಾದುದು ನಿಜವಾದರೆ, ನನಗೆ ನಿನ್ನ ಅದ್ಭುತಾಕಾರವನ್ನು ತೋರಿಸು. ನಾನು ಅದನ್ನು ನೋಡಿದಹೊರತು ಮುಂದಕ್ಕೆ ಹಜ್ಜೆಯಿಡಲು ಮನಸ್ಸು ಬರುವುದಿಲ್ಲ. ನಿನ್ನ ಮಹಿಮೆಯನ್ನು ನಾನು ತಿಳಿಯಬೇಕಾದುದು ನಿರಂತರವಾದ ನಿನ್ನಧ್ಯಾನಾದಿಗಳಿಗೆ ಸಾಧಕವೆಂದು ಭಾವಿಸಿದೇನೆ.—ಎಂದು ಅರ್ಥಿಸಿದನು.

ಆಂಜನೇಯನು ಉಪ್ಪು ಕಡಲನ್ನು ದಾಟುವಾಗ ತಾಳಿದ್ದ ತನ್ನ ಮಹತ್ತಾದ ಶರೀರಾಕೃತಿಯನ್ನು ಭೀಮನಿಗೆ ತೋರಿಸಿದನು. ಅದು ಹೇಗಿದ್ದಿತೆಂದರೆ—ಇದೊಂದು ಶೈಲಶಿಖರವೋ ಎಂಬಂತೆ, ಶರೀರವು ಬಹುದೀರ್ಘವಾಗಿ ಅದಕ್ಕೆ ತಕ್ಕ ವಿಸ್ತಾರವುಳ್ಳದಾಗಿ, ಹುಬ್ಬುಕುಣಿಸುತ್ತಿರುವ ಘೋರವಾದ ಮುಖವೂ, ಕೆಂಪಾದ ಕಣ್ಣುಗಳೂ ಭಯಂಕರವಾದ ಕೋರೆದಾಡೆಗಳೂ ಉಳ್ಳದಾಗಿ ಇದ್ದಿತು. ದಿಕ್ಕುಗಳನ್ನೆಲ್ಲ ವ್ಯಾಪಿಸಿಕೊಂಡು ತೇಜೋವಿಶೇಷದಿಂದ ದೇದೀಪ್ಯಮಾನನಾಗಿ, ಉದ್ದವಾದ ತನ್ನ ಬಾಲವನ್ನು ಭೂಮಿಯ ಮೇಲೆ ಬಡಿದು, ಆ ಮಹಾಚಲವನ್ನು ಮುಚ್ಚಿಕೊಂಡು ಮೆರೆಯುತ—ಭೀಮಸೇನಾ! ಇಷ್ಟುಮಟ್ಟಿನ ನನ್ನ ರೂಪವನ್ನು ನೋಡಲು ನೀನು ಶಕ್ತನು. (ನನ್ನ ಮನಸ್ಸಿಗೆ ತೋರಿದರೆ) ಇದಕ್ಕಿಂತ ಅದ್ಭುತವಾಗಿ ಬಳೆಯತಕ್ಕ ಹುರುಡು ನನಗೆಉಂಟು. ಭಯಭ್ರಾಂತನಾಗಬೇಡ—ಎಂದನು. ಭೀಮನು ರೋಮಾಂಚಿತಗಾತ್ರನಾಗಿ ಅಣ್ಣನನ್ನು ನುತಿಸಿ, ಇಂದಿನ ದಿನವೇ ಸುದಿನವೆಂದು ಹೇಳುತ, ಆ ಅದ್ಭುತರೂಪವನ್ನು ಉಪಸಂಹರಿಸಿಕೊಳ್ಳುವಂತೆಯೂ ಧರ್ಮಾಧಾರವಿವೇಚನೆಯನ್ನು ಬೋಧಿಸುವಂತೆಯೂ, ಪ್ರಾರ್ಥಿಸಿದುದಕ್ಕೆ ಹರೀಶ್ವರನು—ಎಲೈ ವತ್ಸನೇ? ಲಾಲಿಸು. ಲೋಕದಲ್ಲಿ ಮಾನವರಿಗೆ ದೇವತೆಗಳೂ ಪಿತೃಗಳೂ, ಹಿರಿಯರೂ ಪೂಜ್ಯರು. ಅವರನ್ನು ಪೂಜಾಹೋಮತರ್ಪಣ ನಮಸ್ಕಾರಾದಿಗಳಿಂದ ಆರಾಧಿಸಬೇಕು. ಅದರಿಂದ ಅವರು ನಮ್ಮ ಭಕ್ತಿವಿಶ್ವಾಸಗಳಿಗೆ ಮೆಚ್ಚಿ ಅನುಗ್ರಹಿಸುವರು.

ಶ್ಲೋ॥ ಶ್ರೇಯಾನ್ಸ್ವಧರ್ಮೋವಿಗುಣಃ ಪರಧರ್ಮಾತ್ಸ್ವನುಷ್ಠಿತಾತ್ ।
ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ॥ ಭ ಗೀ.

ಸ್ವಧರ್ಮವೆಲ್ಲರಿಗೂ ಉತ್ತಮವಾದುದು. ಈ ಜಗತ್ತಿಗೆಲ್ಲಾ ಕ್ಷಮೆಯೇ

ಆಧಾರ. ವೃಥಾ ಸಾಹಸವನ್ನು ಮಾಡದೆ ಧರ್ಮವನ್ನು ಪರಿಪಾಲಿಸಬೇಕು. ಯಾವನು ಧರ್ಮವನ್ನು ಅಧರ್ಮವಾಗಿಯೂ ಅಧರ್ಮವನ್ನು ಧರ್ಮವಾಗಿಯೂ ತಿಳಿದುಕೊಳ್ಳುವನೋ ಅವನು ಖಂಡಿತವಾಗಿ ಕೆಟ್ಟು ಹೋಗುವನು. ವೇದೋಕ್ತವಾದ ಕರ್ಮದಿಂದ ಆಚಾರವೂ, ಆಚಾರಬೋಧಕವಾದ ಸ್ಮೃತೀತಿಹಾಸಪುರಾಣಗಳ ಆಲೋಡನೆಯಿಂದ ಭಗವಂತನ ಮಾಹಾತ್ಮ್ಯಜ್ಞಾನವೂ, ಅದರಿಂದ ಆಭಗವಂತನಲ್ಲಿ ಪರಮಭಕ್ತಿಯೂ, ಆ ಭಕ್ತಿಯಿಂದ ಅವನ ಸಂತುಷ್ಟಿಯೂ, ಆ ಸಂತುಷ್ಟಿಯಿಂದ ಅವನ ಅನುಗ್ರಹವೂ ಆ ಅನುಗ್ರಹದಿಂದ ತತ್ವಜ್ಞಾನವೂ ಉಂಟಾಗಿ— ಅದೇ ಎಲ್ಲರೂ ಕೃತಾರ್ಥರಾಗುವುದಕ್ಕೆ ಆಧಾರವಾಗುವುದು ಬೃಹಸ್ಪತಿ, ಶುಕ್ರ, ನಾರದ, ಮನು ಮುಂತಾದವರಿಂದ ಸದ್ಧರ್ಮಸದಾಚಾರವಿಚಾರವಾಗಿ ಹೇಳಲ್ಪಟ್ಟಿರುವ ಪ್ರಮಾಣಗ್ರಂಥಗಳನ್ನು ಓದಿ ತಿಳಿದು, ಅದರಂತೆ ನಡೆಯುವ ಮಾನವನು ಲೋಕಸ್ಥಿತಿಯನ್ನು ಅರಿಯುವನು. ಗಣಿಯ ಕೆಲಸ, ಪಶುಪಾಲನೆ, ಕೃಷಿ ಶಿಲ್ಪ, ವಾಣಿಜ್ಯ, ಸಜ್ಜನಸೇವೆ ಎಂಬಿವುಗಳಿಂದ ಲೋಕಸ್ಥಿತಿಯನ್ನು ಕಾಪಾಡಬಹುದು. ಬ್ರಾಹ್ಮಣರು ವೇದಾಧ್ಯಯನವನ್ನು ಮಾಡುತ ಸತ್ಯಸ್ವರೂಪವಾದ ಶುದ್ಧಸಾತ್ವಿಕ ಬ್ರಹ್ಮಜ್ಞಾನವನ್ನು ಪಡೆಯಬೇಕಾದುದೇ ಮುಖ್ಯಧರ್ಮವು. ಇದು ನಿರಾತಂಕವಾಗಿ ನಡೆಯಲು, ಪೃಥ್ವೀಪಾಲಕರೇ ರಕ್ಷಕರಾಗಿರುವರು. ಕ್ಷತ್ರಿಯೋತ್ಪನ್ನನಾದ ನೀನು ಸ್ವಧರ್ಮಪರನಾಗಿ, ಪ್ರಜೆಗಳನ್ನು ಪಾಲಿಸುತ, ಸ್ವಧರ್ಮದೂಷಕರನ್ನು ನಿಗ್ರಹಿಸಿ, ಸ್ವಧರ್ಮನಿರತರನ್ನಾಗಿ ಮಾಡುತ, ಸ್ವಧರ್ಮವಾದ ರಾಜಧರ್ಮವನ್ನು ರಕ್ಷಿಸಬೇಕು. ರಹಸ್ಯವನ್ನು ಚನ್ನಾಗಿ ರಕ್ಷಿಸುವನಾಗು. ಇಂದ್ರಾಗ್ನಿಯಮವರುಣವಾಯುಕುಬೇರಸೂರ್ಯಚಂದ್ರರ ಶಾಶ್ವತಾಂಶಗಳಿಂದ ದೇವರು ರಾಜರನ್ನು ಸೃಷ್ಟಿಸಿರುವುದರಿಂದ ಅವರ ಪ್ರಥಮಕರ್ತವ್ಯವು ಪ್ರಜಾರಕ್ಷಣವೆ, ಆಗಿರುತ್ತದೆ. ಕಾಮಕ್ರೋಧಲೋಭದ್ವೇಷಾಸೂಯೆಗಳಿಲ್ಲದೆ, ಸದಾಚಾರನಿರತನಾಗಿ ಆನೃಶಂಸ್ಯದಲ್ಲಿದ್ದುಕೊಂಡು ತಾಳ್ಮೆ, ಸ್ವಾರ್ಥತ್ಯಾಗ, ಪರಿಶುದ್ಧಾತ್ಮತೆ, ಎಂಬಿವುಗಳನ್ನು ಹೊಂದಿ, ಸನಾತನಧರ್ಮವಾದ ಸತ್ಯವೇ ಪರಮಗತಿ ಎಂದು ತಿಳಿದು, ಸಜ್ಜನರಲ್ಲಿ ನಂಬಿಕೆಯನ್ನಿಟ್ಟುಕೊಂಡು, ಧರ್ಮಪ್ರವೃತ್ತರಾದ ಬುದ್ಧಿಶಾಲಿಗಳೊಡನೆ ಮಂತ್ರಾಲೋಚನೆಯನ್ನು

ಮಾಡುತ, ಬ್ರಹ್ಮದ್ವೇಷಿಯಾಗದೆ, ದಾತೃವಾಗಿ ಇರಬೇಕಾದುದೇ ಕರ್ತವ್ಯವು. ಅಹಂಕಾರವನ್ನು ಗೆದ್ದವನೇ ರಾಜನು. ನಂಬಿದವರನ್ನು ತೊರೆಯದೆ, ಯಾವವೃತ್ತಿಯಲ್ಲಿದ್ದರೂ ಮುಖ್ಯವಾಗಿ ಏಕಭಾವದಿಂದ ಪರಮಕಾರುಣಿಕಸ್ವಭಾವನಾದ ದೇವರನ್ನು ಭಜಿಸುತ್ತಿರುವನಾಗು. ವರ್ಣಾಶ್ರಮಧರ್ಮವನ್ನು ಮೀರದೆ ಗುರುಶುಶ್ರೂಷೆಯಲ್ಲಿ ನಿರತನಾಗಿರು. ವೈಶ್ಯರು ಪಶುಪಾಲನ, ದಾನ, ಪೂಜೆ, ವಾಣಿಜ್ಯ, ಕೃಷಿ, ನಿರ್ವಂಚನೆ, ಎಂಬಿವುಗಳಲ್ಲಿ ನಿರತರಾಗಿರಬೇಕು. ಶೂದ್ರರು ದ್ವಿಜಸೇವಾನಿರತರಾಗಿ ವ್ಯವಸಾಯಗಳಲ್ಲಿ ಅಪ್ರಮತ್ತರಾಗಿರಬೇಕು. ಅಹಿಂಸೆ, ಸತ್ಯ, ಜ್ಞಾನಸಾಧನೋಪಾಯ, ಶೌಚ, ಇಂದ್ರಿಯನಿಗ್ರಹ, ರಾಜಭಕ್ತಿ, ನಿಷ್ಕಾಮಕರ್ಮ, ಏಕಪತ್ನೀವ್ರತ, ಎಂಬಿವು ಚಾತುರ್ವರ್ಣಗಳಿಗೂ ಧರ್ಮದಸಾರ—ಎಂದು ನಿರೂಪಿಸಿ, ತನ್ನ ಇಚ್ಛಾಮಾತ್ರದಿಂದುಂಟಾಗಿದ್ದ ಮಹತ್ತಾದ ರೂಪನ್ನು ಉಪಸಂಹರಿಸಿ, ಪ್ರೀತಿಯಿಂದ ಭೀಮಸೇನನನ್ನು ಆಲಿಂಗಿಸಿಕೊಂಡನ . ಆದರಿಂದ ಅವನ ಆಯಾಸವೆಲ್ಲ ಪರಿಹಾರವಾಯಿತು. ಅಣಿಮಾದಿಭೂತಗಳಿಂದ ಕೂಡಿದ ಅಂಜನೇಯನು—ಎಲೈ ಭೀಮಸೇನನೇ, ನಿನ್ನ ಶರೀರವನ್ನು ನಾನು ಆಲಿಂಗಿಸಿದುದರಿಂವ ಅದು ವ್ಯರ್ಥವಾಗತಕ್ಕುದಲ್ಲ. ನೀನು ಬೇಕಾದ ವರವನ್ನು ಕೇಳು. ನಾನು ಕೊಡುತ್ತೇನೆ—ಎಂದನು. ಭೀಮನು—ಆರ್ಯನೇ ! ನೀನು ನಮಗೆ ನಾಥನಾಗಿದ್ದರೆ, ನಾವು ಸನಾಥರಾಗಿರುವೆವು. ನಮ್ಮ ವಿಚಾರವಲ್ಲಿ ನೀನು ಯಾವಾಗಲೂ ಪ್ರಸನ್ನನಾಗಿರಬೇಕಾಗಿದೆ—ಎಂದುದಕ್ಕೆ ಹನುಮಂತನು ಎಲೈ ಚಂದ್ರವಂಶೋತ್ಪನ್ನನೇ, ನೀನು ಮಹತ್ತಾದ ಶತ್ರುಸೈನ್ಯವನ್ನು ಹೊಕ್ಕು ಸಿಂಹನಾದವನ್ನು ಮಾಡಿದಾಗ, ನನ್ನ ಧ್ವನಿಯಿಂದ ನಿನ್ನ ಧ್ವನಿಯನ್ನು ವೃದ್ಧಿಪಡಿಸಿ, ಅರ್ಜುನನ ರಥಧ್ವಜದ ಮೇಲಿದ್ದುಕೊಂಡು ನಿನ್ನ ಹಗೆಗಳು ನಿರಾಯಾಸವಾಗಿ ಸಂಹೃತರಾಗುವುದಕ್ಕೆ ಪ್ರಾಣಾಪಹಾರಕವಾದ ಶಬ್ದವನ್ನು ಮಾಡುವೆನು ! ನಾನು ತೋರಿಸಿ ಹೇಳುವ ರೀತಿಯಲ್ಲಿ ನೀನು ಸೌಗಂಧಿಕವನಮಾರ್ಗವಾಗಿ ಹೊರಡು. ಪರಸ್ಪರವಿಶ್ಲೇಷಾತಂಕವು ದಿನಕ್ರಮೇಣ ನಿಲ್ಲುವುದು. ನಿನ್ನ ಇಷ್ಟಾರ್ಥಗಳೆಲ್ಲ ನೆರವೇರಿ ಶುಭವುಂಟಾಗಲಿ—ಎಂದು ಹರಿಸಿ, ಅದೃಶ್ಯನಾದನು.

ಬಳಿಕ ಭೀಮನು ದ್ರೌಪದೀದೇವಿಯ ವಾಕ್ಯವೆಂಬ ಪಾಥೇಯ

ವನ್ನಿಟ್ಟುಕೊಂಡು, ಕ್ಷುತ್ಪಿಪಾಸಾದಿಗಳಿಲ್ಲದೆ, ಸಂಜೆಯಾಗುತ ಬಂದಿತೆಂದು ಮುಂದು ಮುಂದಕ್ಕೆ ಹೋಗುತ್ತಿರಲು ; ಇದುರಿಗೆ ಮನೋಹರವಾಗಿ ಹರಿಯುತ್ತಿರುವ ಹೊಳೆಯನ್ನು ನೋಡುತ, ಅದಕ್ಕೆ ಸಮೀಪವಾಗಿಯೂ ಸುವರ್ಣಕದಲೀದ್ರುಮಗಳಿಂದ ಯುಕ್ತವಾಗಿಯೂ ಆನಂದಕರವಾಗಿಯೂ, ಇರುವ ದಿವ್ಯವಾದ ವನವನ್ನು ನೋಡಿ, ಪಾಂಚಾಲಿಯನ್ನು ನೆನೆನೆನೆದು ಮುಂದಕ್ಕೆ ಹೋದನು. ಅಲ್ಲಿ ಹಂಸಸಾರಸಪಕ್ಷಿಗಳಿಂದ ಕೂಡಿ ರಮ್ಯವಾಗಿಯೂ, ಅಮೃತದಂತೆ ಮಧುರವಾದ, ಪಚ್ಚಕರ್ಪೂರದಂತೆ ಶೀತಳವಾದ, ಗಂಗಾನದಿಯಂತೆ ಪುಣ್ಯತಮವಾದ, ತೀರ್ಥವುಳ್ಳದಾಗಿಯೂ, ವೈಡೂರ್ಯದ ಕಾವುಗಳಿಂದ ಯುಕ್ತಗಳಾದ ದಿವ್ಯಸೌಗಂಧಿಕಾಪದ್ಮಗಳುಳ್ಳದಾಗಿಯೂ, ದೇವತೆಗಳಿಂದ ಸೇವಿತವಾಗಿಯೂ, ಮಹರ್ಷಿಗಳಿಂದ ಸನ್ಮಾನಿತವಾಗಿಯೂ ಕುಬೇರನ ಅರಮನೆಗೆ ಸಮೀಪವಾಗಿಯೂ, ಶ್ರೀಗುರುದತ್ತಾತ್ರೇಯರ ಆಶ್ರಮ ಸಮೀಪದಲ್ಲಿರುವ ವೇದಪುಷ್ಕರಿಣಿಯಂತೆ ಮಂಗಳಕರವಾಗಿಯೂ, ಗಂಧಮಾದನ ಪರ್ವತದ ಅರೆತಪ್ಪಲಿನಲ್ಲಿ ಕಂಗೊಳಿಸುವುದಾಗಿಯೂ, ಇರುವ ದಿವ್ಯವಾದ ಪುಷ್ಕರಿಣಿಯೊಂದನ್ನು ಕಂಡನು ! ಆ ಸರೋವರದಲ್ಲಿ ಕಾವಲಿದ್ದ ಕ್ರೋಧವಶರೆಂಬ ಹೆಸರುಳ್ಳ ಸಾವಿರಾರುಮಂದಿ ಯಕ್ಷರಾಕ್ಷಸರು ಭೀಮನನ್ನು ನೋಡಿ ಆಶ್ಚರ್ಯಗೊಂಡು “ ಇದೇನು ? ಈತನು ಕುಂದಣದಂತೆ ತನುಕಾಂತಿಯುಳ್ಳವನೂ, ದಪ್ಪವಾದ ಭುಜಶಿರಸ್ಕಂಧಯುಳ್ಳವನೂ, ತಾಳವೃಕ್ಷದಂತೆ ಉನ್ನತಗಾತ್ರನೂ, ಆಜಾನುಬಾಹುವೂ, ಸಿಂಹಗಮನನೂ, ಕೆಂಪಾದ ವಿಶಾಲನೇತ್ರಗಳುಳ್ಳವನೂ, ಸಿಂಹದಂತೆ ಕೋರೆಹಲ್ಲುಗಳುಳ್ಳವನೂ, ಸರ್ವಾಂಗ ಸುಂದರನೂ, ಅತಿಮಾನಿತನೂ, ತ್ರಿರೇಖಾಯುಕ್ತವಾದ ಕಂಬುಗ್ರೀವನೂ, ಕೃಷ್ಣಾಜಿನವನ್ನುಟ್ಟು ಯಜ್ಞೋಪವೀತವನ್ನು ಧರಿಸಿದವನೂ, ಸುವರ್ಣಭುಜಕೀರ್ತಿಗಳುಳ್ಳವನೂ, ಆಯುಧಪಾಣಿಯೂ, ಆಗಿರುವನು. ಇಲ್ಲಿಗೆ ಏಕೆ ಬಂದನೋ ” ಎಂದು ಮಾತನಾಡಿಕೊಂಡು—ಸ್ವಾಮಿ! ನೀವು ಯಾರು ? ಎಂದು ಕೇಳಲು : ಭೀಮನು ತನ್ನ ವೃತ್ತಾಂತವನ್ನು ಅವರಿಗುಸುರಿದನು. ಅವರಲ್ಲಿ ಮುಖ್ಯನೊಬ್ಬನು,—ಎಲೈ ಪವಮಾನನಂದನನೇ ಕುಬೇರನ ಅಪ್ಪಣೆಯಿಲ್ಲದೆ ಸೌಗಂಧಿಕಪದ್ಮಗಳನ್ನು ತೆಗೆಯಕೂಡದು. ಇದು ಆತನಿಗೆ ಕ್ರೀಡಾವನವು, ಮಾನುಷಪ್ರವೇಶಕ್ಕೆ ಅಡ್ಡಿಯಾಗಿರುವುದು.

ದೇವತೆಗಳು ಯಥೇಚ್ಛವಾಗಿ ಮಧುಪಾನಮಾಡಿ ವಿಹರಿಸತಕ್ಕಸ್ಥಳ—ಎಂದು ತಿಳಿಸಿದನು. ಭೀಮನು “ ಎಲೈಯಕ್ಷಾಧಿಕಾರಿಯೇ ! ಕ್ಷತ್ರಿಯನಾದವನಿಗೆ ಯಾಚನೆಮಾಡದಿರುವುದೇ ಶಾಶ್ವತಧರ್ಮವಾಗಿರುವುದರಿಂದ ಕುಬೇರನನ್ನು ಕಂಡು ನಾನು ಯಾಚಿಸೆನು. ಇದು ಆತನ ಅರಮನೆಗೆ ಸೇರಿದುದಾಗಿಯೂ, ಇಲ್ಲ. ಸಕಲರೂ ಇದನ್ನುಪಡೆಯಲು ಸಮವಾದ ಬಾಧ್ಯತೆಯುಳ್ಳವರಾಗಿರುತ್ತಾರೆ.”ಎಂದು ಹೇಳಿ ಅವರನ್ನುಲಕ್ಷ್ಯಮಾಡದೆ ಆಸರೋವರಕ್ಕೆಹೋದನು! ಆ ಯಕ್ಷರಾಕ್ಷಸರೆಲ್ಲರೂ ಅವನನ್ನು ಸುತ್ತಿಕೊಂಡು ಯುದ್ಧಕ್ಕೆ ನಿಂತರು. ಭೀಮನು ತನ್ನ ಗದೆಯನ್ನು ತಿರುಗಿಸುತ, ಶ್ರೀರಾಮನು ಜನಸ್ಥಾನದ ಉಕ್ಕಡದಲ್ಲಿ ಖರದೂಷಣ ತ್ರಿಶಿರ ಮುಂತಾದ ರಾಕ್ಷಸರನ್ನೆಲ್ಲ ಕೊಂದಂತೆ, ಅವರೆಲ್ಲರನ್ನೂ ಯಮಮಂದಿರಕ್ಕೆ ಕಳುಹಿಸಿ, ಆ ಪುಷ್ಕರಣಿಯುದಕವನ್ನು ಪಾನಮಾಡಿ, ಪರಿಮಳಭರಿತವಾದ ಅನೇಕಸೌಗಂಧಿಕಪದ್ಮಗಳನ್ನು ತೆಗೆದುಕೊಂಡನು ! ಕುಬೇರನಿಗೆ ಆ ವೃತ್ತಾಂತವು ವಿದಿತವಾಗಲು ; ಆನವನಿಧಿನಾಯಕನು ನಗುತ—ಭೀಮಸೇನನು ಅಯೋನಿಜೆಯಾದ ದ್ರೌಪದೀದೇವಿಗೋಸ್ಕರ ಆ ಪುಷ್ಪಗಳನ್ನು ತೆಗೆದುಕೊಂಡು ಹೋಗಲು ಬಂದಿದಾನೆ. ಅದನ್ನು ನಾನು ಬಲ್ಲೆನು. ಆತನು ಬೇಕಾದಷ್ಟು ಸೌಗಂಧಿಕಪುಷ್ಪಗಳನ್ನು ತೆಗೆದುಕೊಳ್ಳಲಿ. ನೀವು ಅಡ್ಡಿಮಾಡಬೇಡಿ -ಎಂದು ತನ್ನ ಸೇವಕರಿಗೆ ಅಣತಿಯನ್ನಿತ್ತನು. ಭೀಮನು ಆ ಪುಷ್ಪಗಳನ್ನು ತೆಗೆದುಕೊಂಡು ವಿಲಾಸದಿಂದ ಹಿಂತಿರುಗಿ ಹೋಗುತ್ತಿರುವಾಗ ಯುಧಿಷ್ಠಿರಾದಿಗಳು ಘಟೋತ್ಕಚನ ಮೇಲೆ ಕುಳಿತು ಬರುತ ಸಂಧಿಸಿದರು. ಆತನು ದ್ರೌಪದೀದೇವಿಗೆ ಸೌಗಂಧಿಕಪುಷ್ಪಮಂಜರಿಯನ್ನು ಕೊಟ್ಟು ಬಹುಮಾನಿಸಿದನು.

ಪಾಂಡವರು ಪದ್ಮಸರೋವರದಲ್ಲಿ ದೇವತೆಗಳಿಗೆ ಸಮಾನರಾಗಿ ವಿಹರಿಸುತಿರುವಾಗ ಯುಧಿಷ್ಠಿರನ ಸಮೀಪದಲ್ಲಿ ವಿಪ್ರವೇಷದಿಂದಿರುತ್ತಿದ್ದ ಜಟಾಸುರನೆಂಬ ನರಾಶನು ಪಾಂಚಾಲಿಯನ್ನಪಹರಿಸಲು ಸಮಯವನ್ನಿರೀಕ್ಷಿಸುತ್ತಿದ್ದನು. ಭೀಮನು ಆಶ್ರಮದಲ್ಲಿ ಇಲ್ಲದಾಗ ಯುಧಿಷ್ಠಿರನಕುಲ ಸಹದೇವರನ್ನು ಲಕ್ಷ್ಯಮಾಡದೆ, ಅವರನ್ನೂ ಕೃಷ್ಣೆಯನ್ನೂ ಹಿಡಿದು ಬಂಧಿಸಿ, ತನ್ನ ವಾಸಸ್ಥಾನಕ್ಕೆ ಹೊತ್ತುಕೊಂಡು ಹೋಗುತ್ತಿದ್ದನು. ದೈವವಶಾತ್ ಭೀಮನು ಜಟಾಸುರನನ್ನು ಸಂಧಿಸಿ, ಅವನ ವಂಚನೆಗೆ ಪ್ರತಿಕ್ರಿಯೆ

ಯನ್ನು ಮಾಡಲು ಸಿದ್ಧನಾಗಿ—ಎಲೈ ಪಾಪಾತ್ಮನೇ ! ಗಜಪುರಿಯಲ್ಲಿರುವಾಗ ಶಸ್ತ್ರವಿದ್ಯಾಪರೀಕ್ಷೆಯ ಕಾಲದಲ್ಲೇ ನಿನ್ನ ಅಯೋಗ್ಯತೆಯನ್ನು ತಿಳಿದಿದ್ದೆನು. ಬ್ರಾಹ್ಮಣರೂಪದಿಂದ ಬಂದು ನಮ್ಮಲ್ಲಿ ಅತಿಥಿಯಾಗಿದ್ದುಕೊಂಡು ನಮಗೆ ಅಪಕಾರವನ್ನು ಮಾಡದೆ, ಋಜುಮಾರ್ಗದಲ್ಲಿ ಇದ್ದೆಯಾದಕಾರಣ, ನಿರಪರಾಧನಾದ ನಿನ್ನನ್ನು ವಧಿಸಿದರೆ ದುರ್ಗತಿ ಬಂದೀತೆಂದು ಯೋಚಿಸಿ, ಕೊಲ್ಲಲಿಲ್ಲ. ಕತ್ತಲೆಯು ಸೂರ್ಯನನ್ನು ತಿರಸ್ಕರಿಸಿದಂತೆಯೂ, ನರಿಯು ಸಿಂಹದ ಕೇಸರವನ್ನು ಹಿಡಿದಂತೆಯೂ, ನೀರು ಹಾವುಗಳು ಗರುಡನ ಕುತ್ತಿಗೆಯನ್ನು ಹಿಡಿದಂತೆಯೂ ಬಾಲಕರು ಹುಲಿಯನ್ನು ಬಲೆಯಲ್ಲಿ ಸಿಕ್ಕಿಸುವಂತೆಯೂ, ಕಪ್ಪೆಯು ಕೃಷ್ಣಸರ್ಪದಮೇಲೆ ಕೈಯಿಟ್ಟಂತೆಯೂ, ನೀರಲ್ಲಿರುವ ಮೀನು ಗಾಳದಲ್ಲಿ ಸಿಕ್ಕಿಬಿದ್ದಂತೆ, ಮೋಸಮಾಡಿ ಸಿಕ್ಕಿ ಬಿದ್ದಿರುವೆ. ಬಕಹಿಡಿಂಬಕಿರ್ಮೀರರು ಹೋದಮಾರ್ಗದಲ್ಲಿ ಹೋಗುವೆ, ನಿಲ್ಲು.—ಎಂದು ಗದರಿಸಿದನು. ಜಟಾಸುರನು ಎಲೋ—ಭೀಮ, ನೀನು ನನ್ನ ಬಳಿಗೆ ಬರುವುದನ್ನೇ ನಿರೀಕ್ಷಿಸುತಿದ್ದೆನು. ಇದುವರೆಗೆ ನೀನು ಕೊಂದವರಿಗೆಲ್ಲ ನಿನ್ನ ರಕ್ತದಿಂದಲೇ ನಾನು ತರ್ಪಣವನ್ನು ಕೊಡಬೇಕೆಂದಿದ್ದೇನೆ, ಯುದ್ಧಕ್ಕೆ ನಿಂತುಕೋ—ಎಂದನು. ಪ್ರಳಯಕಾಲದ ಯಮನಂತೆ ರೌದ್ರಾವೇಶಪೂರ್ಣನಾದ ಭೀಮನು ಭುಜಗಳನ್ನು ತಟ್ಟುತ, ಆ ದುರುಳದೈತ್ಯನನ್ನು ಎದುರಿಸಿ ನಿಂತನು ಸಮರ್ಥರಾದ ಅವರಿಬ್ಬರೂ ಬಾಹುಯುದ್ಧಕ್ಕೆ ಉಪಕ್ರಮಿಸಿ, ವರ್ಷಾಕಾಲದ ಮೇಘದಂತೆ ಘರ್ಜಿಸುತ, ಪರಸ್ಪರ ಮುಷ್ಟಿಪ್ರಹಾರಗಳಿಂದ ಪ್ರಹರಿಸುತ, ವೃಕ್ಷಗಳಿಂದ ಹೊಡೆದಾಡುತ, ಕಲ್ಲುಬಂಡೆಗಳಿಂದ ಎಸದಾಡುತ, ಎಳೆದಾಡುತ, ಪೆಟ್ಟಿಕ್ಕುತ ನೋಟಕರಿಗೆ ಆಶ್ಚರ್ಯವನ್ನುಂಟುಮಾಡುತಿದ್ದರು. ಆಗ ಭೀಮನು ಕ್ರೋಧಾವೇಶದಿಂದ ರಾಕ್ಷಸನ ನೆತ್ತಿಯಮೇಲೆ ಬಿರಿಸಾಗಿ ಹೊಡೆದು ಬಹುಯಾತನೆಯನ್ನುಂಟುಮಾಡಿದನು. ಒಡನೆ ಅವನನ್ನು ಮೇಲಕ್ಕೆ ಎತ್ತಿ ಕುಂಬಳಕಾಯಿಯನ್ನು ಕುಕ್ಕುವಂತೆ ಕಲ್ಲಿನಮೇಲೆ ಬಲವಾಗಿ ಕುಕ್ಕಿ, ಅವನ ಶರೀರವನ್ನೆಲ್ಲ ಜಜ್ಜುಜಜ್ಜಾಗುವಂತೆ ಹೊಸಗಿ, ಕತ್ತನ್ನು ಮುರಿದಿಕ್ಕಿದನು. ! ಹೀಗೆ ವಂಚಕನಾದ ಜಟಾಸುರನನ್ನು ಕೊಂದು, ಲೋಕಕ್ಕೆ ಕ್ಷೇಮವನ್ನುಂಟುಮಾಡಿ, ಸೋದರರನ್ನೂ ದ್ರೌಪದಿಯನ್ನೂ ಸೆರೆಯಿಂದ ಬಿಡಿಸಿದ

ಭೀಮನನ್ನು ಅಲ್ಲಿದ್ದ ಋಷಿಗಳೇ ಮುಂತಾದವರು ಮಹೇಂದ್ರನನ್ನು ಸ್ತುತಿಸುವಂತೆ ಸ್ತುತಿಸಿದರು.

ಭೀಮನು ಸಹೋದರರೊಡನೆ ಆ ಶೈಲದಮೇಲೆ ಕೆಲವು ಕಾಲ ವಿಹರಿಸುತಿರುವಲ್ಲಿ ಮತ್ತೊಂದು ದಿನ ಕೃಷ್ಣೆಯು ಬಯಸಿದ ಫಲಪುಷ್ಪಗಳನ್ನು ತರುವುದಕ್ಕಾಗಿ ಆ ಪರ್ವತಾಗ್ರದಲ್ಲಿ ಸಂಚರಿಸುತ, ಅಲ್ಲಿನ ಸನ್ನಿವೇಶಗಳನ್ನೆಲ್ಲ ನೋಡಿ ವಿಸ್ಮಯಗೊಳ್ಳುತ, ಪೂರ್ವದಲ್ಲಿ ತಾವು ಅನುಭವಿಸುತಿದ್ದ ಐಶ್ವರ್ಯಾದಿಗಳನ್ನು ಸ್ಮರಿಸಿಕೊಂಡು, ಅಲ್ಲಿಯ ದಿವ್ಯವಾದ ಗಾಳಿಯನ್ನು ಆಘ್ರಾಣಿಸುತ ಕುಳಿತಿದ್ದನು. ವೈಶ್ರವಣನ ವಾಸಸ್ಥಾನವು ಅತ್ಯಂತ ಮನೋಹರವಾಗಿಯೂ, ನೋಟಕರಿಗೆ ನಿರ್ಬಂಧಕರವಾಗಿಯೂ ಇದ್ದುದರಿಂದ, ಭೀಮನು ತನ್ನ ಬಲವನ್ನು ಸ್ಮರಿಸಿಕೊಂಡು, ಆಯುಧಗಳನ್ನು ಹಿಡಿದು ಶಂಖವನ್ನೂದಿ, ಅಲ್ಲಿರುವವರಿಗೆ ಪ್ರಸಿದ್ಧಪುರುಷನೊಬ್ಬನು ಬಂದಿದಾನೆಂಬುದನ್ನು ತೋರ್ಪಡಿಸಿಕೊಂಡನು ಆಯುಧಪಾಣಿಗಳಾದ ಯಕ್ಷರಾಕ್ಷಸಗಂಧರ್ವರನೇಕರು ಓಡಿಬಂದು ಭೀಮನಮೇಲೆ ಬೀಳುವುದಕ್ಕಾಗಿ ಕೆಣಕಲು, ಅವನು ಅವರೆಲ್ಲರನ್ನೂ ಯುದ್ಧದಲ್ಲಿ ಕೊಂದು ಬೊಬ್ಬಿರಿದನು. ಆಗ ಕುಬೇರನ ಮಿತ್ರನಾದ ಮಣಿಮಂತನು ತನ್ನ ಸೇನಾನಾಶಕ್ಕೆ ಕ್ರೋಧಗೊಂಡು ಭೀಮನನ್ನು ಎದುರಿಸಿ ಘೋರವಾದ ಯುದ್ಧವನ್ನು ಮಾಡಲು; ಭೀಮನು ಆ ಸುಭಟನನ್ನೂ ಸಮರದಲ್ಲಿ ಸಂಹರಿಸಿದನು. ಹತಶೇಷರ ದೀನಾಲಾಪಗಳನ್ನು ಕೇಳಿದ ಯುಧಿಷ್ಠಿರಾದಿಗಳು ಭೀಮನು ಏನಾದನೋ ಎಂದು ಹುಡುಕುತ, ಅವನ ಬಳಿಗೆ ಸೇರಿ ಅಲ್ಲಿ ಬಿದ್ದಿದ್ದ ಶವರಾಶಿಯನ್ನು ನೋಡಿ ಆಶ್ಚರ್ಯಪಟ್ಟರು ! ಅಷ್ಟರಲ್ಲಿ ಕುಬೇರನು ಭೀಮನಿಂದಾದ ಸಂಗತಿಯನ್ನು ಕೇಳಿ, ಆಕ್ಷಣ ವಿಮಾನದಲ್ಲಿ ಕುಳಿತು ಪಾಂಡವರಿದ್ದ ಸ್ಥಳಕ್ಕೆ ಹೋಗಿ ಇಳಿದನು. ಪಾಂಡವರು ಆ ದಿಕ್ಪಾಲಕನನ್ನು ವಂದಿಸಲು ; ಆತನು ಅವರನ್ನು ಆದರಿಸಿ, ಯುಧಿಷ್ಠಿರನ ಪ್ರಶ್ನೆಗೆ ಉತ್ತರವಾಗಿ—" ಒಂದು ದಿನ. ನಾನು ದೇವತೆಗಳ ಸದಸ್ಸಿಗೆ ಹೋಗುತಿರುವಾಗ, ನನ್ನ ಮಿತ್ರನೂ ರಾಕ್ಷಸಶ್ರೇಷ್ಠನೂ ಆದ ಮಣಿಮಂತನು ಅಜ್ಞಾನದಿಂದ ಅಗಸ್ತ್ಯಮಹಾಮುನಿಯ ಮೇಲೆ 'ಥೂ' ಎಂದು ಉಗುಳಲು, ಆತನು ಕುಪಿತಗೊಂಡು 'ಒಬ್ಬ ಮನುಷ್ಯನಿಂದ ನೀನು ಸೇನೆಯೊಡನೆ ಹತನಾಗು ' ಎಂದು ಶಾಪವನ್ನಿತ್ತಿದ್ದನು. ಅದು

ಈ ದಿನ ಭೀಮಸೇನನಿಂದ ಸಾಫಲ್ಯಗೊಂಡಿತು. ನೀವು ನನ್ನ ವಾಸಸ್ಥಾನಕ್ಕೆ ಸಮೀಪದಲ್ಲಿ ಇನ್ನು ಕೆಲವು ಕಾಲ ಸುಖವಾಗಿರಿ—ಎಂದು ಹೇಳಿ, ಭೀಮಸೇನನನ್ನು ಕುರಿತು—ಅಯ್ಯಾ ಧೀರನೇ! ನಿನ್ನ ಶತ್ರುಗಳೆಲ್ಲರೂ ನಿಶ್ಶೇಷರಾಗಲಿ, ನಿನ್ನ ಹಿತೈಷಿಗಳಾದ ಸಜ್ಜನರೆಲ್ಲರೂ ಅಭಿವೃದ್ಧಿಯುಳ್ಳರಲಿ. ಗರ್ವಾಂಧರಾಗಿದ್ದವರಿಗೆ ತಕ್ಕ ಶಿಕ್ಷೆಯನ್ನು ಮಾಡಿದುದು ನನಗೆ ಸಂತೋಷಕರವಾಗಿದೆ" ಎಂದು ಹೇಳಿ ಸ್ವಗೃಹಾಭಿಮುಖನಾದನು. ಪಾಂಡವರು ಮೇರುದರ್ಶನವನ್ನೂ ಮಹರ್ಷಿಗಳ ದರ್ಶನವನ್ನೂ ಮಾಡುತ, ರಸವತ್ತಾದ ಫಲಗಳನ್ನೂ ಜೇನನ್ನೂ ಆಹಾರಮಾಡಿಕೊಂಡು ಸುಖವಾಗಿರುವಲ್ಲಿ ೫ ವರ್ಷಗಳಿಂದ ಸ್ವರ್ಗದಲ್ಲಿದ್ದ ಅರ್ಜುನನು ತನ್ನ ತಂದೆಯಿಂದ ಸಕಲಾಸ್ತ್ರಗಳನ್ನೂ ಪಡೆದು ಸಹೋದರರಿದ್ದೆಡೆಗೆ ಬಂದು ಅಗ್ರಜರಿಬ್ಬರಿಗೂ ವಂದಿಸಿ, ತಾನು ನಿವಾತಕವಚರನ್ನು ಮತ್ತು ಹಿರಣ್ಯಪುರದ ದೈತ್ಯರನ್ನು ವಧಿಸಿದ ವೃತ್ತಾಂತವನ್ನೂ ಅಲ್ಲಿ ತನಗೆ ನಡೆದ ಸನ್ಮಾನ ಮುಂತಾದ ಸಂಗತಿಗಳನ್ನೂ ಹೇಳಿ ಸಂತಸಗೊಳಿಸಿದನು.

ಶ್ರೀಕೃಷ್ಣನು ಮತ್ತೊಮ್ಮೆ ಕುಂತಿಯಸುತರ ಯೋಗಕ್ಷೇಮವನ್ನು ವಿಚಾರಿಸುವುದಕ್ಕಾಗಿ ದ್ವೈತವನಕ್ಕೆ ಹೋಗಿ, ಪರ್ಣಶಾಲೆಯಲ್ಲಿರುವ ಧರ್ಮರಾಯನ ಕೂಡ ತತ್ವವಿಚಾರವಾಗಿ ಮಾತನಾಡುತ್ತಿದ್ದನು. ಆಗ ನಾರದ ಋಷಿಯು ಅಲ್ಲಿಗೆ ಹೋಗಿ ಮಾರುತಿಯನ್ನು ಕಂಡು—ಏನಯ್ಯಾ, ಭೀಮಸೇನಾ! ಚಿರಕಾಲದಿಂದ ಪರ್ವತಪ್ರಾಂತಗಳಲ್ಲಿಯೂ ದುರ್ಗಮವಾದ ಅರಣ್ಯಗಳಲ್ಲಿಯೂ ವಾಸವಾಗಿದ್ದ ಪ್ರಜಾಕಂಟಕರಾದ ವಿಭಾವರೀಚರರನ್ನೂ ಹಾದಿಗಳ್ಳರನ್ನೂ, ಅಡಗಿಸಿ, ಲೋಕಕ್ಕೆ ಕ್ಷೇಮವನ್ನುಂಟುಮಾಡುತಿರುವ ನೀನು ಸುಖವಾಗಿದೀಯಾ?—ಎಂದನು. ಮಾರುತಿಯು, ಆ ಋಷಿಗೆ ವಂದಿಸಿ—ಪೂಜ್ಯರೇ! ನಮ್ಮ ಸಕಲೈಶ್ವರ್ಯವನ್ನೂ ಜೂಜಿನಲ್ಲಿ ಜ್ಞಾತಿಗಳಿಗೆ ಸೋತು, ವನವಾಸದಲ್ಲಿರುವ ನಮಗೆ ಸೌಖ್ಯವು ಹೇಗೆ ಉಂಟಾದೀತು. ಎಂದಿಗೆ ನಮ್ಮ ಕಷ್ಟವು ತೀರಿ ಪುನಃ ರಾಜ್ಯಪ್ರಾಪ್ತಿಯಾಗುವದೋ ಕಾಣೆನು—ಎಂದನು. ಅದಕ್ಕೆ ಅವರು—ಅಪ್ಪಾ, ನೀವು ಧರ್ಮಿಷ್ಠರು. ಆದರೂ ನಿಮಗೆ ಇಂತಹ ವಿಪತ್ತು ಬಂದಿತು. ಶ್ರೀಕೃಷ್ಣನು ಅನುಗ್ರಹ ಮಾಡಿದರೆ ಈಕ್ಷಣ ನಿಮ್ಮ ಹಗೆಗಳನ್ನೆಲ್ಲ ಕೊಂದು, ನಿಮಗೆ ಬೇಕಾದ

ಅಭೀಷ್ಟಗಳನ್ನು ಕರುಣಿಸಬಹುದು. ಆದರೆ ಆತನಿಗೆ ಅಂತರ್ಯವಾಗಿ ಕೌರವರಲ್ಲಿಯೇ ಅಭಿಮಾನವು ವಿಶೇಷವಾಗಿರುವುದು. ಆದುದರಿಂದ ಅವರು ಸಾರ್ವಭೌಮಪದವಿಯನ್ನನುಭವಿಸುತ್ತ ದೇವತೆಗಳಂತೆ ಸುಖವಾಗಿದ್ದಾರೆ. ಶ್ರೀ ಕೃಷ್ಣನನ್ನು ನಂಬುವದಕ್ಕಾಗದು. ಬಾಯಿಯಲ್ಲಿ ಮಾತ್ರ ನಮ್ಮ ಪಾಂಡವರು. ನಮ್ಮ ಸೋದರತ್ತೆಯ ಮಕ್ಕಳು-ಎಂದು ಹೇಳುತ್ತಾನೆ. ಶಕ್ತನಾದ ನೀನು ಇವುಗಳನ್ನೆಲ್ಲ ಸಹಿಸಿಕೊಂಡಿರಬಹುದೇ?-ಎಂದರು. ಭೀಮನು ಆದೇವರ್ಷಿಯ ಮಾತುಗಳನ್ನು ನಂಬಿ, ಮುನಿವರ್ಯರೇ, ನೀವು ಹೇಳಿದುದು ನಿಜವೆಂದು ತೋರುತ್ತದೆ, ಶ್ರೀಕೃಷ್ಣನು ಈಚೆಗೆ ಬರಲಿ, ಕೇಳುತ್ತೇನೆ ಎನುತಿರುವಾಗ ಆತನು ಹೊರಕ್ಕೆ ಬರಲು ; ಭೀಮನು ರೌದ್ರಾಕಾರದಿಂದ ಆರ್ಭಟಿಸಿಕೊಂಡು ಅವನು ಎತ್ತಹೋದರೂ ಬಿಡದೆ ಅಟ್ಟಿಸಿಕೊಂಡು ಹೋದನು. ಆಗ ವಾಸುದೇವನು-ಭೀಮಾ, ಏಕೆ ಹೀಗೆಮಾಡುವೆ ? ನಿನ್ನ ಮನಸ್ಸಿನಲ್ಲಿರುವುದನ್ನು ಹೇಳು. ನನ್ನಲ್ಲಿ ತಪ್ಪಿದ್ದರೆ ತಿದ್ದಿಕೊಳ್ಳುವೆನು-ಎಂದನು. ಆಗ ಭೀಮನು, 'ಕೃಷ್ಣಾ ! ನಾರದರಿಂದ ನಿನ್ನ ಸಟನೆಯೆಲ್ಲ ಗೊತ್ತಾಯಿತು ' ಎಂದು ಅವರು ಹೇಳಿದುದನ್ನು ತಿಳಿಸಲು; ಶ್ರೀಕೃಷ್ಣನು ಅದಕ್ಕೆ ಭೀಮನನ್ನು ಕುರಿತು—ಅಯ್ಯಾ, ನೀನು ನಾರದರ ಸ್ವಭಾವವನ್ನು ತಿಳಿದಿಲ್ಲವೇ? ಚಾಡಿಯಮಾತುಗಳನ್ನು ಕೇಳಬಾರದು. ಲೋಕವು ಪುಣ್ಯಪಾಪಗಳೆರಡನ್ನೂ ಆಚರಿಸುವುದೇ ಹೊರತು ಒಂದನ್ನೇ ಆಚರಿಸದು. ಅದುಕಾರಣ ಜನರು ಶುಭಾಶುಭಫಲಗಳನ್ನು ಪಡೆಯುವರು. ಕೌರವರ ಪುಣ್ಯಕರ್ಮಕ್ಕೆ ಅನುಗುಣವಾದ ಭೋಗಭಾಗ್ಯಗಳೆಲ್ಲ ಸವೆಯುತ ಬಂದಿರುವಂತೆ, ನಿಮ್ಮ ಕರ್ಮಕ್ಕೆ ತಕ್ಕ ಕಷ್ಟಗಳೆಲ್ಲ ತೀರುತ ಬಂದುವು. ಮಹಾತ್ಮರಾದ ನಿಮಗೆ ಕ್ಷಿಪ್ರದಲ್ಲಿಯೇ ಸಕಲಸೌಖ್ಯವೂ ಶತ್ರುಜಯವೂ ಕೀರ್ತಿಯೂ ಒದಗುವುದು—ಎಂದು ಹೇಳಿ ನೀತಿವಾಕ್ಯಗಳಿಂದ ಸಮಾಧಾನಗೊಳಿಸಿದನು. ಅದರಿಂದ ಭೀಮನಿಗೆ ಕೋಪವಿಳಿದು, ಜಗದ್ರಕ್ಷಕನಾದ ಶ್ರೀಕೃಷ್ಣನಿಗೆ ಎರಗಿ, ಸನ್ಮಾನಿಸಿದನು.

ಯುಧಿಷ್ಠಿರಾದಿಗಳು ವನವಾಸದಲ್ಲಿರುವಾಗ ಭೀಮನು ಬೇಟೆಯಾಡಿಕೊಂಡು ಬರುತ ಘೋರವಾದ ಒಂದು ಹೆಬ್ಬಾವಿನ ನಿರ್ಬಂಧಕ್ಕೆ ಸಿಕ್ಕಿದನು. ಆ ಸರ್ಪವು ಸಾಧಾರಣವಾದುದಲ್ಲ. ಅದೇ ಕುರುವಂಶದಲ್ಲಿ ಆಯುಮಹಾ

ರಾಜನಿಗೆ ಪುತ್ರನಾದ ನಹುಷಚಕ್ರವರ್ತಿಯು ಇಂದ್ರಪದವನ್ನು ಹೊಂದಿ ಸ್ವರ್ಗರಾಜ್ಯಾಧಿಪತ್ಯದಲ್ಲಿದ್ದಾಗ, ಕಾಮಮೋಹಿತನಾಗಿ, ಗರ್ವದಿಂದ ಬ್ರಾಹ್ಮಣಾಪಮಾನವನ್ನು ಮಾಡಿ, ಮಹನೀಯರಾದ ಅಗಸ್ತ್ಯರ ಶಾಪದಿಂದ ಅಜಗರನಾಗಿ ಜನಿಸಬೇಕಾಯಿತು. ಆಗ ನಹುಷನು ದೀನನಾಗಿ—ನನಗೆ ಎಂದಿಗೆ ಆ ಸರ್ಪಜನ್ಮವಿಮೋಚನವಾಗುವದೆಂತಲೂ, ತಾವತ್ಪರ್ಯಂತವಾಗಿ ತನ್ನ ಜೀವನೋಪಾಯವು ಯಾವರೀತಿಯಿಂದ ಜರುಗಬೇಕೆಂತಲೂ, ಅರ್ಥಿಸಿಕೊಳ್ಳಲು—ಮುಂದೆ ನಿಮ್ಮ ವಂಶದಲ್ಲಿ ಜನಿಸುವ ಧರ್ಮಜನೊಡನೆ ಸಲ್ಲಾಪವು ಘಟಿಸಿದಾಗ, ಶಾಪವಿಮೋಚನವೆಂತಲೂ, ಅದುವರೆಗೆ ನಿನ್ನ ನಿರ್ಬಂಧಕ್ಕೆ ಸಿಲ್ಕಿದ ಪ್ರಾಣಿಗಳೇ ನಿನಗೆ ಆಹಾರವೆಂತಲೂ, ಆ ಮುನೀಶ್ವರನ ಕ್ಲೃಪ್ತಿಯನ್ನು ಹೊಂದಿದ್ದನು. ಅದುಕಾರಣ ಭೀಮನು ಅದರ ಬಂಧನವನ್ನು ಬಿಡಿಸಿಕೊಂಡು ಹೋಗಲಾಗದೆ ತನ್ನ ಶಕ್ತಿಸರ್ವಸ್ವವನ್ನು ವಿನಿಯೋಗಿಸಿದರೂ ತಪ್ಪಿಸಿಕೊಳ್ಳುವುದು ಅವಶ್ಯಕವೆಂದು ತೋರಿದಾಗ ಪ್ರಾಣದಲ್ಲಿ ನಿರಾಶನಾಗಿ,—ಅಕಟಾ! ನನ್ನ ಶರೀರನಾಶಕ್ಕಿಂತಲೂ, ನನ್ನ ಸಹೋದರರು ರಾಜ್ಯಭ್ರಷ್ಟರಾಗಿ ವನವಾಸಕ್ಲೇಶದಲ್ಲಿರುವುದು ಬಹುಸಂಕಟಕರವಾಗಿದೆ. ರಾಜ್ಯಾಪೇಕ್ಷೆಯಿಂದ ಧರ್ಮಾತ್ಮನಾದ ಅಗ್ರಜನನ್ನು ವಾಗ್ಬಾಣದಿಂದ ನೋಯಿಸಿದೆನಲ್ಲಾ! ನಾನಿದ್ದರೆ ಲೋಕಕಂಟಕನೂ, ಡಾಂಭಿಕನೂ, ಕಪಟದ್ಯೂತವನ್ನು ಬಲ್ಲವನೂ, ಆದ ದುರ್ಯೋಧನನನ್ನು ಕೊಂದು ರಾಜ್ಯವನ್ನು ಸಾಧಿಸುತಿದ್ದೆನು. ಇನ್ನು ಅನಾಥೆಯಾದ ನಮ್ಮ ತಾಯಿ ಕುಂತೀದೇವಿಯ ಮನೋರಥವು ಹೇಗೆ ನೆರವೇರುವುದು—ಎಂದು ನಾನಾಪ್ರಕಾರವಾಗಿ ಹಂಬಲಿಸುತಿದ್ದನು. ಅತ್ತಲು ಧರ್ಮರಾಯನು ತನ್ನ ಪ್ರಿಯಭ್ರಾತೃವಾದ ಭೀಮಸೇನನು ಬಹಳ ಹೊತ್ತಿನಿಂದ ತನ್ನ ಹತ್ತಿರ ಇಲ್ಲದಿರುವಾಗ ಅನೇಕದುರ್ನಿಮಿತ್ತಗಳಾದುದನ್ನು ಕಂಡು ವ್ಯಾಕುಲನಾಗಿ, ಅವನನ್ನು ಹುಡುಕಿಕೊಂಡು ಅರಣ್ಯದಲ್ಲಿ ಒಬ್ಬನೇ ಅಲೆದು, ಕೊನೆಗೆ ಹೆಬ್ಬಾವಿನಿಂದ ಹಿಡಿಯಲ್ಪಟ್ಟಿರುವ ಭೀಮನನ್ನು ಕಂಡನು! ಆಗ—ಮಹಾಬಾಹುಶಾಲಿಯಾದ ನಮ್ಮ ಭೀಮಸೇನನೂ ತಪ್ಪಿಸಿಕೊಳ್ಳಲಾರದಂತೆ, ಅವನನ್ನು ನಿರ್ಬಂಧಿಸಿರುವ ಈ ಸರ್ಪವು ಸಾಧಾರಣವಾದುದಲ್ಲವೆಂದು ಧರ್ಮಪುತ್ರನು ಯೋಚಿಸಿ—ಎಲೈ ಸರ್ಪಶ್ರೇಷ್ಠನೇ! ನೀನು ಯಾರು? ಏನುಮಾಡಿದರೆ, ನನ್ನ ತಮ್ಮನಾದ ಭೀಮಸೇನ

ನನ್ನು ಬಿಡುವೆ—ಎಂದನು. ಉರಗರೂಪದ ನಹುಷನು-ಎಲೈ ಪೃಚ್ಛಕನೇ! ನಾನು ಯಾರಾದರೇನು ? ಈ ನನ್ನ ನಿರ್ಬಂಧಕ್ಕೆ ಸಿಲ್ಕಿರುವವನಲ್ಲಿ ನಿನಗೆ ಮಮತೆಯಿದ್ದು ಬಿಡಿಸಿಕೊಳ್ಳಬೇಕಾದರೆ, ನೀನು ನನ್ನ ಪ್ರಶ್ನೆಗಳಿಗೆಲ್ಲ ಸದುತ್ತರವನ್ನು ಕೊಟ್ಟಲ್ಲಿ ಬಿಡುವೆನು— ಎಂದನು. ಅದಕ್ಕೆ ಧರ್ಮರಾಯನು ಒಪ್ಪಿಕೊಳ್ಳಲು :—

ಸರ್ಪ :—ಎಲೈ ರಾಯನೆ! ಎಲ್ಲರೂ ಯಾವುದನ್ನು ತಿಳಿಯಬೇಕು ?

ರಾಯ :—ಸಕಲಬಂಧವಿಮೋಚನಕರ್ಕ್ಕ ಕಾರಣವಾದ ಪರಮಾತ್ಮ ಸ್ವರೂಪವನ್ನು ಮುಖ್ಯವಾಗಿ ತಿಳಿಯಬೇಕು.

ಸರ್ಪ :—ಆವಕರ್ಮವನ್ನು ಮಾಡಿದರೆ, ಉತ್ತಮಲೋಕವು ಪ್ರಾಪ್ತಿಸುವುದು ? ರಾಯ :—ಸತ್ಪಾತ್ರದಲ್ಲಿ ದಾನ ಧರ್ಮಗಳನ್ನು ಮಾಡಿ, ಸತ್ಯವಾಗಿಯೂ, ಪ್ರಿಯವಾಗಿಯೂ ನುಡಿಯುತ ಕ್ರೋಧವನ್ನು ತ್ಯಜಿಸಿ, ಅಹಿಂಸೆಯಲ್ಲಿರುವವನಿಗೆ ಸದ್ಗತಿ ಪ್ರಾಪ್ತಿಯಾಗುವುದು.

ಸರ್ಪ :—ದಾನ, ಸತ್ಯ, ಈ ಎರಡರಲ್ಲಿ ಯಾವುದು ಶ್ರೇಷ್ಠವಾದುದು?

ರಾಯ :—ದಾನವೆಂದರೆ, ನ್ಯಾಯಾರ್ಜಿತವಾದ ತನ್ನ ಸ್ವತ್ತಿನಲ್ಲಿ ಕೆಲವು ಭಾಗವನ್ನಾದರೂ ಶಾಸ್ತ್ರೀಯವಾಗಿ ಸತ್ಪಾತ್ರದಲ್ಲಿ ಶ್ರೀ ಕೃಷ್ಣಾರ್ಪಣವಾಗಿ ಕೊಡುವುದೇ ಆಗಿರುವುದು. ಸತ್ಯವೆಂದರೆ—ಮನೋವಾಕ್ಕಾಯ ಕರ್ಮಗಳಲ್ಲಿ ಬೇದವಿಲ್ಲದೆ ಪ್ರಾಣಿಮಾತ್ರದಲ್ಲಿ ಹಿತವಾದ ಸದ್ವೃತ್ತಿಯಿಂದ ಪರರಿಗೆ ಹಿತವಾಗುವಂತೆ ಯಥಾರ್ಥವಾಗಿ ಹೇಳುವುದು ದ್ರವ್ಯೋಪಪತ್ತಿಸಾಹಾಯ್ಯವನ್ನಪೇಕ್ಷಿಸಿ ಪರಾಧೀನವಾಗಿರುವ ದಾನಧರ್ಮಕ್ಕಿಂತಲೂ ಬಾಹ್ಯಸಹಾಯಾಪೇಕ್ಷೆಯಿಲ್ಲದೆ ಮನೋನಿಗ್ರಹಮಾತ್ರದಿಂದ ಸರ್ವಸಾಧ್ಯವಾಗಿರುವ ಸತ್ಯಧರ್ಮವೇ ಶ್ರೇಷ್ಠವಾಗಿರುವುದು—ಎಂದು ಹೇಳಿದುದಕ್ಕೆ ಸರ್ಪಶ್ರೇಷ್ಠನು ಒಪ್ಪಿ ಅಭಿನಂದಿಸಲು—

ರಾಯ :—ಎಲೈ ಸರ್ಪಶ್ರೇಷ್ಠನೇ ! ಇಲ್ಲಿ ಮೃತನಾಗಿ ದೇಹವನ್ನು ಕಳೆದುಕೊಂಡ ಜೀವನಿಗೆ ಸ್ವರ್ಗಪ್ರಾಪ್ತಿಯೂ ಅಲ್ಲಿ ವಿಷಯೋಪಭೋಗವೂ ಹೇಗಾಗುವುವು ?

ಸರ್ಪ :—ಜಗತ್ತಿನಲ್ಲಿ ಮಾನವನು ಕಾರ್ಯನಿಮಿತ್ತವಾಗಿ ಹೇಗೆ ಎಲ್ಲಾ ಕಡೆಗಳಲ್ಲಿಯೂ ಸುತ್ತಾಡುತ್ತಿರುವನೋ ಹಾಗೆ ಜೀವರಾಶಿಗಳು ಸಕಲ

ಜನ್ಮಗಳಲ್ಲಿಯೂ ಕರ್ಮಾನುಸಾರ ಸುತ್ತಾಡುತ್ತಿರುವನಷ್ಟೆ. ಜ್ಞಾನಿಯಾದವನು ಮಹತ್ತಾಗಿಯೂ ನಿತ್ಯವಾಗಿಯೂ ಇರುವ ಪರಬ್ರಹ್ಮನಲ್ಲಿ ದೃಷ್ಟಿಯುಳ್ಳವನಾಗಿರುವನು. ಫಲಾಕಾಂಕ್ಷೆಯುಳ್ಳ ದೇಹಾಭಿಮಾನಿಯಾದ ಜೀವನು ಪಾಪಪುಣ್ಯಕರ್ಮಗಳಿಂದ ಬದ್ಧನಾಗಿ ಆಗಾಗ ಜನ್ಮವನ್ನೆತ್ತಿ ಪಾಪಪುಣ್ಯಫಲಗಳನ್ನು ಅನುಭವಿಸುವನು. ಮಾನವನು ದಾನ ಧರ್ಮ ಅಹಿಂಸೆ ಪರೋಪಕಾರ ಮೊದಲಾದ ಸತ್ಕರ್ಮಗಳಿಂದ ಸ್ವರ್ಗವನ್ನು ಪಡೆಯುವಂತೆ ಆತ್ಮಸ್ತುತಿ, ಪರನಿಂದೆ, ಕಾಮ, ಕ್ರೋಧ, ಲೋಭ, ಹಿಂಸೆ, ಇತ್ಯಾದಿ ಕೆಟ್ಟ ನಡತೆಗಳಿಂದ ತಿರಸ್ಕೃತನಾಗಿ ಅಂಡಜ, ಸ್ವೇದಜ ಮುಂತಾದ ಕೀಳುಜನ್ಮಕ್ಕೆ ಬರುವನು—ಎಂದು ಹೇಳಿ, ಹೀಗೆ ಇನ್ನೂ ಪರಸ್ಪರ ಪ್ರಶ್ನೋತ್ತರಗಳಾದ ಬಳಿಕ—

ಅಜಗರದ ಶರೀರದೊಳಗೆ ಬಹುಕಾಲದಿಂದ ಸೇರಿಬಿದ್ದಿದ್ದ ನಹುಷಚಕ್ರವರ್ತಿಯು-ಎಲೈ ಯುಧಿಷ್ಠಿರನೇ, ಮಹಾಬಲಶಾಲಿಯಾದ ಭೀಮಸೇನನು ಆಬಾಧಿತನಾಗಿರುವನು. ಸಾಧುವಾದ ನಿನ್ನ ಧರ್ಮಕಥಾಶ್ರವಣದಿಂದ ನನಗೆ ಪ್ರಾಪ್ತವಾಗಿದ್ದ ಕಠಿಣವಾದ ಅಗಸ್ತ್ಯಮುನಿಯ ಶಾಪವು, ನಿವೃತ್ತವಾಯಿತು. ಇದೋ ವಿಮಾನವು ಬಂದಿತು. ನಿನಗೆ ಮಂಗಳವಾಗಲಿ. ನಾನು ಸ್ವರ್ಗಕ್ಕೆ ಹೋಗಿಬರುತ್ತೇನೆ—ಎಂದನು. ಆ ಬಳಿಕ ಧರ್ಮರಾಯನು ಭೀಮನೊಡನೆ ತಮ್ಮ ಆಶ್ರಮಕ್ಕೆ ಹೋದನು. ಗಾಳಿಯಿಂದ ಅಗ್ನಿಯು ವೃದ್ಧಿಯಾಗುವಂತೆ ವನವಾಸಕ್ಲೇಶದಿಂದ, ಅಣ್ಣನ ಧರ್ಮಪಾಶಕ್ಕೆ ಕಟ್ಟುಬಿದ್ದು ನಿಟ್ಟುಸಿರನ್ನು ಬಿಡುತಿರುವ ಭೀಮಸೇನನ ಕೋಪವು ದುಷ್ಟರಾದ ಕೌರವರ ವಿಷಯದಲ್ಲಿ ವೃದ್ಧಿಯಾಗುತ್ತಿದ್ದಿತು.

ನಿರಾಶತೆಯಿಂದ ಮನಶ್ಶಾಂತಿಯನ್ನು ಪಡೆದಿರುವ ಪಾಂಡವರು ದೂರ್ವಾಸಮುನಿಗಳನ್ನು ಶಿಷ್ಯಸಮೇತ ಸತ್ಕರಿಸಿ, ಇಂದ್ರಾದಿ ದೇವತೆಗಳ ದರ್ಶನಸಂಭಾಷಣಾದಿಗಳನ್ನು ಹೊಂದಿ, ತಪಸ್ಸನ್ನು ಮಾಡುತ ಕ್ಲೇಶಪಡುತ್ತಿದ್ದರೂ ಅತಿಸಮರ್ಥರಾಗಿಯೇ ಇದ್ದರು. ದುರ್ಯೋಧನನು ದುಷ್ಟರ ದುರ್ಬೋಧನೆಯಿಂದ ದ್ವೈತವನದಲ್ಲಿರುವ ಪಾಂಡವರಿಗೆ ಅವಮಾನವನ್ನು ಮಾಡಬೇಕೆಂದೆಣಿಸಿ, ತಮ್ಮ ಗೋಧನವನ್ನು ವಿಚಾರಿಸಿಕೊಂಡು ಬೇಟೆಯಾಡಿ ಬರುವುವೆಂದು, ಧೃತರಾಷ್ಟ್ರನಿಗೆ ತಿಳುಹಿಸಿ, ಆತನ ಅಪ್ಪಣೆ

ಯನ್ನು ಪಡೆದು, ಪತ್ನೀಪರಿವಾರದೊಂದಿಗೆ ಅಟ್ಟಹಾಸದಿಂದ ಘೋಷ ಯಾತ್ರೆ ಹೊರಟನು. ಕೌರವೇಶ್ವರನು ಚತುರಂಗಬಲದೊಡನೆ ಆ ವನಕ್ಕೆ ಹೋಗಿ ಗುಡಾರಗಳಲ್ಲಿಳಿದು, ಮಹಾರಾಜವೈಭವದಿಂದಿದ್ದನು. ಸ್ವಲ್ಪ ಕಾಲಕ್ಕೆ ಮುಂಚೆನಿಂದಲೂ ಅಲ್ಲಿ ವಾಸವಾಗಿದ್ದ ಗಂಧರ್ವರನ್ನು ಕೌರವರು ಕಂಡು, ಅವರನ್ನು ಅಲ್ಲಿಂದ ಹೊರಡಿಸಬೇಕೆಂದು ಯೋಚಿಸಿದುದು ಸಾಗದೆ, ಅವರೊಡನೆ ಕಾಳಗವಾಡಿ ಸೋತು, ಕೈಸೆರೆ ಹಿಡಿಯಲ್ಪಟ್ಟರು. ಆ ಸುದ್ದಿ ಯನ್ನು ಕೇಳಿದ ಧರ್ಮರಾಯನು ತಮ್ಮಂದಿರನ್ನು ಕುರಿತು—ನೀವು ಕೌರವ ರನ್ನು ಸೆರೆಯಿಂದ ಬಿಡಿಸಿ ಬನ್ನಿರಿ ಎನಲು,—

ಪರೈಸ್ತು ಕಲಹೇ ಪ್ರಾಪ್ತೇ ವಯಂ ಪಂಚೋತ್ತರಂ ಶತಂ ।
ಸ್ವವ್ಯೂಹಕಲಹೇ ಪ್ರಾಪ್ತೇ ವಯಂ ಪಂಚೈವತೇ ಶತಂ ॥

ಎಂದು ಹೇಳಿರುವಂತೆ ಭೀಮಾರ್ಜುನರು ವೇಗವಾಗಿ ಹೊರಟು, ಸಾಮೋ ಪಾಯಕ್ಕೆ ವಶರಾಗದ ಗಂಧರ್ವರ ಕೂಡ ಯುದ್ಧವನ್ನು ಮಾಡಿ ನೋಯಿ ಸಲು, ಚಿತ್ರಸೇನನೆಂಬ ಗಂಧರ್ವರಾಜನು ವಿನೀತವಾಗಿ ಬರಲು, ಆತನೊ ಡನೆ ತಮ್ಮ ಅಣ್ಣನಬಳಿಗೆ ಹೋಗಿ ವಂದಿಸಿದರು ಧರ್ಮರಾಯನು ಆ ಗಂಧರ್ವರಾಜನನ್ನು ಸನ್ಮಾನಿಸುವಂತೆ ಹೇಳಲು ; ಆತನು ಸತ್ಕೃತನಾಗಿ ಪಾಂಡವಾಗ್ರಜನ ಇಷ್ಟಾನುಸಾರ ಕುಟುಂಬಸಮೇತರಾದ ಕೌರವರ ಹಿಂ ಗಟ್ಟುಮುರಿಕಟ್ಟುಗಳನ್ನು ಸಡಲಿಸಿ ಬಿಡುಗಡೆ ಮಾಡಿಸಿದನು. ಆದರೇನು ? ಹಾವಿಗೆ ಹಾಲೆರದಂತಾಯಿತು. ಕೃತಘ್ನರಾದ ಕೌರವರಿಗೆ ಧರ್ಮಾತ್ಮರಾದ ಪಾಂಡವರಲ್ಲಿ ಇನ್ನೂ ಮತ್ಸರವು ಹೆಚ್ಚಿತು ಪಾಂಡವರು ಕಷ್ಟಕ್ಕೆ ಸಿಕ್ಕಿ ಜ್ಞಾತಿಗಳಿಂದ ಅಪಕಾರವನ್ನು ಹೊಂದಿದ್ದರೂ, ಅದನ್ನು ಕ್ಷಮಿಸಿ ಅವರ ಕಷ್ಟವನ್ನು ತಪ್ಪಿಸುವುದಕ್ಕೆ ಸಿದ್ಧರಾಗಿಯೇ ಇದ್ದರು.

ಪಾಂಡವರು ಕಾಮ್ಯಕವನದಲ್ಲಿರುವಾಗ ಒಂದುದಿನ ದ್ರೌಪದಿಯನ್ನು ತೃಣಬಿಂದುಋಷಿಗಳ ಆಶ್ರಮದಲ್ಲಿ ಬಿಟ್ಟು ಬೇಟೆಯಾಡುವುದಕ್ಕಾಗಿ ಹೋ ದರು. ಆ ಸಮಯದಲ್ಲಿ ಸಿಂಧುದೇಶಾಧಿಪತಿಯಾದ ಜಯದ್ರಥನು ಅನೇಕ ಮಂದಿ ಸಾಮಂತರಾಜರೊಡನೆ ಸಾಲ್ವದೇಶಕ್ಕೆ ಬೇಕೆಂದು ಹೊರಟು, ಕಾಮ್ಯಕವನ ಮಾರ್ಗವಾಗಿ ಬಂದಿಳಿದನು. ಅಲ್ಲಿ ಪಾಂಡವರ ಧರ್ಮ ಪತ್ನಿಯಾದ ದ್ರೌಪದೀದೇವಿಯನ್ನು ಕಂಡು, ವಿಷಯಾಭಿಲಾಷೆಯಿಂದ ತನ್ನ

ಬಳಿಯಲ್ಲಿದ್ದ ಸರ್ವಸಚಿವನಾದ ಕೋಟಿಕಾಸ್ಯನೆಂಬ ಅರಸನನ್ನು ಕುರಿತು ಅತ್ಯಂತರೂಪವತಿಯಾದ ಈಕೆಯು ಯಾರಾಗಿರಬಹುದು? ದೇವತಾ ಸ್ತ್ರೀಯೋ? ನನ್ನನ್ನು ವರಿಸುವುದಕ್ಕೇನಾದರೂ ಇಲ್ಲಿಗೆ ಬಂದು ಕಾದಿರುವಳೋ? ನೀನು ಸರ್ವಾಂಗಸುಂದರಿಯಾದ ಆಕೆಯ ಬಳಿಗೆ ಹೋಗಿ ಅವಳ ವೃತ್ತಾಂತವನ್ನೆಲ್ಲ ತಿಳಿದುಕೊಂಡು, ನಾನು ಆಕೆಯನ್ನು ವರಿಸಲು ಸಿದ್ಧನಾಗಿರುವ ಸಂಗತಿಯನ್ನು ಬೇಕಾದರೆ ಹೇಳಿ ಬಾ,—ಎಂದುಸುರಿದನು. ಕೋಟಿಕಾಸ್ಯನು ಬೇಗನೆ ಅಲ್ಲಿಗೆ ಹೋಗಿ, ದ್ರೌಪದೀದೇವಿಯು ಸಂಗತಿಯನ್ನೆಲ್ಲ ತಿಳಿದುಕೊಂಡು ಬಂದು, ಸೈಂಧವನನ್ನು ಕುರಿತು—ಪತಿವ್ರತೆಯಾದ ಆಕೆಯನ್ನು ಬಲತ್ಕಾರವಾಗಿಯಾದರೂ ನಿನ್ನ ರಥದಮೇಲೆ ಕುಳ್ಳಿರಿಸಿಕೊಂಡು ಸ್ವದೇಶಕ್ಕೆ ಹೋಗಿಸುಖವಾಗಿರು ನಡೆ,—ಎಂದು ಬೋಧಿಸಿದನು. ಸಿಂಹವಿರುವ ಸ್ಥಳಕ್ಕೆ ಹೋಗುವ ನರಿಯಂತೆ, ದುಷ್ಟಚತುಷ್ಟಯದಲ್ಲಿ ಒಬ್ಬನಾದ ಜಯದ್ರಥನು ಆ ಆಶ್ರಮಕ್ಕೆ ಹೋಗಿ, ಲಾವಣ್ಯವತಿಯಾದ ಕೃಷ್ಣೆಯನ್ನು ನೋಡಿ ಕಾಮಮೋಹಿತನಾಗಿ, ಆಕೆಯಕೂಡ ಕುಶಲಪ್ರಶ್ನೆಯನ್ನು ಮಾಡಿದ್ದನು. ಪಾಂಚಾಲಿಯು, ಧೃತರಾಷ್ಟ್ರನ ಅಳಿಯನೆಂದು ಆತನೊಡನೆ ಮಾತನಾಡಿ, ಅತಿಥಿಸತ್ಕಾರವನ್ನು ಮಾಡಬೇಕೆಂದಿರುವಾಗ, ಅವನು ಆಕೆಯನ್ನು ಕುರಿತು—ಎಲೆ ಮಂಗಳಾಂಗಿ, ನಿನ್ನ ಮೃದುಮಧುರಭಾಷೆಯಿಂದಲೇ ತೃಪ್ತನಾಗಿದೇನೆ. ಐಶ್ವರ್ಯಹೀನರೂ, ದೀನರೂ, ರಾಜ್ಯಭ್ರಷ್ಟರೂ, ಬುದ್ಧಿಹೀನರೂ, ಆದ ಪಾಂಡವರನ್ನು ತ್ಯಜಿಸಿ, ನನಗೆ ಪತ್ನಿಯಾಗಿರುವುದಕ್ಕೆ ಬೇಗನೆ ಹೊರಟು ನನ್ನ ದಿವ್ಯರಥವನ್ನೇರುವಳಾಗು—ಎಂದನು. ಆಕೆಯು ಕರ್ಣಕಠೋರವಾದ ಅವನ ಆ ಕೀಳು ಮಾತುಗಳನ್ನು ಕೇಳಿ, ರೋಷಾವೇಶದಿಂದ ಕೂಡಿ ತನ್ನ ಪತಿಗಳ ಆಗಮನವನ್ನು ನಿರೀಕ್ಷಿಸುತ, ಅವನನ್ನು ತಿರಸ್ಕರಿಸಿ, ಸುಚರಿತ್ರರಾದ ಪಾಂಡವರು-ಸತ್ಯದಿಂದ ಲೋಕವನ್ನು ವಶಮಾಡಿಕೊಳ್ಳುತ, ಧರ್ಮದಿಂದ ಈತಿಬಾಧೆಗಳನ್ನು ನಿಗ್ರಹಿಸುತ, ದಾನದಿಂದ ದೀನರನ್ನು ಸಂತೋಷಗೊಳಿಸುತ, ಶುಶ್ರೂಷೆಯಿಂದ ಹಿರಿಯರನ್ನು ಮೆಚ್ಚಿಸುತ, ಬಿಲ್ಲಿನಿಂದ ಶತ್ರುಗಳನ್ನು ಜಯಿಸುತ, ಕ್ಷಮೆಯಿಂದ ಸಕಲಪ್ರಾಣಿಗಳನ್ನೂ ರಂಜನಗೊಳಿಸುತ, ಇರುವರು,—ಎಂದು, ಅವರ ಸದ್ಗುಣಗಳನ್ನು ವರ್ಣಿಸುತ ಕಾಲಹರಣವನ್ನು ಮಾಡುತ್ತಿದ್ದಳು. ಆಗಲವನು—ಎಲೆ ಸರೋಜಮುಖಿ!

ನಿನ್ನಗಂಡಂದಿರ ಯುಕ್ತಿ ಪರಾಕ್ರಮ ಇವುಗಳನ್ನೆಲ್ಲ ನಾನು ಬಲ್ಲೆನು. ಅವೆಲ್ಲಾ ಹಾಗಿರಲಿ. ಜಾಗ್ರತೆ ಹೊರಟು ನನ್ನ ದಯೆಯನ್ನು ಸಂಪಾದಿಸಿಕೊ—ಎಂದು ಗರ್ಜಿಸಿದನು. ಆ ಕಮಲಲೋಚನೆಯು ಶ್ರೀಪತಿಯ ನೆನೆಯುತ್ತ, ಆ ದುಷ್ಟನನ್ನು ಕುರಿತು—ಎಲೋ ನೀಚ, ಸ್ವಲ್ಪ ನಿಧಾನಿಸು. ಸತ್ಯಸಂಧರಾದ ಪಾಂಡವರು ಬಂದು ನಿನ್ನನ್ನು ಹತಮಾಡುವರು. ತ್ರಿಕರಣದಿಂದಲೂ ನಾನು ಪತಿಪಾಂಡವರನ್ನು ಸಂಪೂರ್ಣಭಕ್ತಿಯಿಂದ ಸೇವಿಸಿಕೊಂಡಿರುವೆನು. ಅದು ನಿಜವಾದರೆ, ನೀನು ಕೂಡಲೆ ಕೌಂತೇಯರ ಕೈಗೆ ಸಿಕ್ಕಿ ದುಃಖಪಡುವುದನ್ನು ನೋಡುವೆನು—ಎಂದಳು. ಅಷ್ಟರಲ್ಲಿ ಅವನು ತನ್ನ ತೇರಿನಮೇಲೆ ಕುಳ್ಳಿರಿಸಿಕೊಳ್ಳುವುದಕ್ಕಾಗಿ ಆಕೆಯ ಸೆರಗನ್ನು ಹಿಡಿದು ಎಳೆದನು. ಕೃಷ್ಣೆಯು ಅವನನ್ನು ಕಾಲಿನಿಂದ ನೂಕಲು ; ಅವನು ಕೆಳಕ್ಕೆ ಬಿದ್ದೆದ್ದು ರೋಷದಿಂದಿರುವಲ್ಲಿ. ತನ್ನನ್ನು ಮುಟ್ಟದಿರುವುದಕ್ಕಾಗಿ ತಾನೇ ಅವನ ರಥದಮೇಲೆ ಕುಳಿತಳು. ಇದಿರಿಗಿದ್ದ ಧೌಮ್ಯಾಚಾರ್ಯರು ಏನುಮಾಡಿಯಾರು? ಒಡನೆ ಆ ರಾಜಾಧಮನು ಚತುರಂಗಬಲದೊಡನೆ ಹೊರಟನು. ಅತ್ತಲಿಂದ ಪಾಂಡವರು ಅಲ್ಲಿಗೆ ಬರುತ ದ್ರೌಪದಿಯ ವೃತ್ತಾಂತವನ್ನು ಕೇಳಿ ಸೈಂಧವನ ಬೆಂಬಿಡಿದರು. ಪಾಂಡವರೈವರೂ ತೀವ್ರಬಾಣಗಳಿಂದ ಸಾಮಂತರಾಜನೊಡನೆ ವೇಗವಾಗಿ ಪ್ರಯಾಣಮಾಡುತ್ತಿರುವ ಜಯದ್ರಥನನ್ನು ಎಚ್ಚರಿಸಿ, ದ್ರೌಪದೀಹರಣದಿಂದುಂಟಾದ ಕೋಪದಿಂದ ಜಾಜ್ವಲ್ಯಮಾನರಾಗಿ ಯುದ್ಧಕ್ಕಾರಂಭಿಸಲು; ವೈರಿಗಳೆಲ್ಲ ದಿಗ್ಭ್ರಾಂತರಾದರು. ಸೈಂಧವನ ಆಜ್ಞಾನುವರ್ತಿಗಳಾದ ಯೋಧರು ಪ್ರಾಣದಮೇಲೆ ಆಶೆಯನ್ನು ಬಿಟ್ಟು ಪಾಂಡವರನ್ನು ಎದಿರಿಸಿದರು. ಅನೇಕವೀರಭಟರು ಹತರಾದರು. ತ್ರಿಗರ್ತದೇಶಾಧಿಪತಿಯೂ ಧರ್ಮರಾಯನಿಂದ ಜಯಿಸಲ್ಪಟ್ಟನು. ಭೀಮನು ಕೋಟಿಕಾಸ್ಯನನ್ನು ಹಿಡಿದು, ಅವನರಥರಥಾಶ್ವಸಾರಥಿಗಳನ್ನು ಕೆಡವಿ, ಪ್ರಾಸಾಯುಧದಿಂದ ಅವನನ್ನು ಪೆಟ್ಟಿಕ್ಕಲು; ಅವನು ಬಹಳವಾಗಿ ನೊಂದು ತಪ್ಪಿಸಿಕೊಂಡು ಓಡಿಹೋದನು. ಅರ್ಜುನನು ಸೌವೀರದೇಶಾಧಿಪತಿಗಳಗೆದಿರಾಗಿ ಅವರನ್ನೆಲ್ಲ ತೀವ್ರನಾರಾಚಗಳಿಂದ ಕೆಡವಿ ಅವರ ಚತುರಂಗಬಲವನ್ನೂ ನಿರ್ನಾಮವಾಗಿ ಮಾಡಿದನು. ಹಾಗೆಯೇ ನಕುಲಸಹದೇವರಿಬ್ಬರೂ ತಂತಮ್ಮ ಪರಾಕ್ರಮಾತಿಶಯದಿಂದ ಶೂರಭಟರನ್ನೇ ಕೆಣಕಿ

ಕೆಡವುತ್ತಿದ್ದರು. ಆಗ ಸೈಂಧವನ ಸೊಕ್ಕಡಗಿ ತನ್ನ ಪ್ರಾಣವನ್ನುಳಿಯಿಸಿ ಕೊಳ್ಳಬೇಕೆಂಬ ಆಸೆಯಿಂದ ತಾನು ಮಾತ್ರ ರಥದಿಂದ ಕೆಳಕ್ಕೆ ಧುಮಿಕಿ ಭಯಭ್ರಾಂತನಾಗಿ ಓಡುತಲಿದ್ದನು. ಭೀಮಾರ್ಜುನರು, ತಮ್ಮ ಸೋದರ ರನ್ನೂ ಪಾಂಚಾಲಿಯನ್ನೂ ಧೌಮ್ಯಾಚಾರ್ಯರನ್ನೂ ರಥದಮೇಲೆ ಕುಳ್ಳಿರಿಸಿ, ಆಶ್ರಮಕ್ಕೆ ಕಳುಹಿಸಿ, ಸೈಂಧವನನ್ನು ಅಟ್ಟಿಕೊಂಡು ಹೋದರು. ಅಷ್ಟು ಹೊತ್ತಿಗೆ ಸೈಂಧವನು ಒಂದುಹರಿದಾರಿ ದೂರ ಓಡಿಹೊಗಿದ್ದರೂ, ಭೀಭತ್ಸುವಿನ ಬಾಣಗಳು ಅವನನ್ನು ಪಟ್ಟಕ್ಕೆ ಮುಂದಕ್ಕೆ ಹೋಗದಂತೆ ಮಾಡಲು; ಭೀಮನು ವಾಯುವೇಗದಿಂದ ಓಡಿ ಅವನನ್ನು ಹಿಡಿದು ಕಪೋಲಗಳನ್ನು ಬಲವಾಗಿ ಪ್ರಹರಿಸಿ ನೆಲಕ್ಕೆ ಕೆಡವಿ ಹೊಸಕುತಿರಲು; ಅವನು ಮೈಮರೆತನು. ಆಗ ಭೀಮನೇ ಅವನಿಗೆ ಶೈತ್ಯೋಪಚಾರವನ್ನು ಮಾಡಿ,—ಎಲೋ ದುರುಳಾ! ತಂಗಿಯಾದ ದುಶ್ಶಳೆಯ ನಿಮಿತ್ತವಾಗಿ ನಿನ್ನನ್ನು ಬಿಟ್ಟದೇನೆ. ಶತ್ರುವಾದರೂ ಶರಣಾಗತನಾದರೆ, ಧರ್ಮರಾಜನು, ಅವನಿಗೆ ಶಿಬಿಚಕ್ರವರ್ತಿಯಂತೆ, ತನ್ನ ದೇಹವನ್ನಾದರೂ ಕೊಟ್ಟು ಕಾಪಾಡುವನಾದುದರಿಂದ ಆತನ ಸನ್ನಿಧಿಗೆ ಹೋಗೋಣ ನಡೆ—ಎಂದು ಹೇಳಿ, ಅವನನ್ನೂ ಕರೆದುಕೊಂಡು ಯುಧಿಷ್ಠಿರನ ಬಳಗೆ ಬಂದನು. ಕರುಣಾಳುವಾದ ಧರ್ಮರಾಜನೂ, ರಾಜ್ಞಿ ದ್ರೌಪದಿಯೂ,—ದಾಸನಾದ ನಾನು ನಿಮಗೆ ಶರಣಾಗತನಾಗಿದೇನೆ— ಎಂದು ಹೇಳಿ ವಂದಿಸುತ್ತಿರುವ ಸೈಂಧವನನ್ನು, ಶ್ರೀರಾಮನು ಶರಣಾಗತನಾದ ಕಾಕಾಸುರನ ಅಪರಾಧವನ್ನು ಕ್ಷಮಿಸಿ ಕಾಪಾಡಿದಂತೆ, ಮನ್ನಿಸಿ ಕಳುಹಿಸಿಕೊಡಲು; ಭೀಮನು ಜಯದ್ರಥನಿಗೆ ಬುದ್ಧಿಕಲಿಸಿ ಬಿಡಬೇಕೆಂದು ಯೋಚಿಸಿ—ಅವನ ತಲೆಯಮೇಲೆ ಅರ್ಧಚಂದ್ರಬಾಣದಿಂದ ಐದು ಪಟ್ಟಿಗಳನ್ನು ತೆಗೆದು 'ಪರನಾರೀಸಹೋದರನಾಗಿರು' ಎಂದು ವಿವೇಕವನ್ನು ಹೇಳಿ ಬಿಟ್ಟುಕೊಟ್ಟನು. ಅವನು ಹತಾವಶಿಷ್ಟವಾದ ಸೈನ್ಯ ದೊಡನೆ ಲಜ್ಜೆಯಿಂದ ತಲೆಯನ್ನು ಬಗ್ಗಿಸಿಕೊಂಡು ಬಂದ ದಾರಿಯನ್ನು ಹಿಡಿದು ಹೋದನು.

ಶಮಧನರಾದ ಪಾಂಡವರು ತತ್ಕಾಲದಲ್ಲಿ ಉಂಟಾದ ಕ್ಲೇಶಗಳನ್ನು ಸಹಿಸುತ ಕಾಮ್ಯಕವನದಿಂದ ದ್ವೈತವನಕ್ಕೆ ಹೋಗಿ ಸತ್ಕಥಾಪ್ರಸಂಗದಿಂದಿರುವಾಗ ವಿಪ್ರೋತ್ತಮನೊಬ್ಬನು ಧರ್ಮರಾಯನ ಬಳಗೆ ಹೋಗಿ, ತನ್ನ

ಅಗ್ನಿಹೋತ್ರದ ಅರಣಿಯು ಅಪಹೃತವಾಗಿರುವುದರಿಂದ ಅದನ್ನು ತರಿಸಿ ಕೊಡಬೇಕೆಂದನು. ಅದಕ್ಕಾಗಿ ಪಾಂಡವರು ಮೃಗದ ಬೇಟೆಗೆ ಹೋದರು. ಅದು ಸಿಕ್ಕಲಿಲ್ಲ. ತೃಷ್ಣಾತುರರಾಗಿದ್ದರು. ಕಮಲಕಲ್ಹಾರಾದಿ ದಿವ್ಯಪುಷ್ಪಗಳಿಂದ ಪ್ರಕಾಶಮಾನವಾಗಿ ದೂರದಲ್ಲಿದ್ದ ಕೊಳಕ್ಕೆ ಮೊದಲು ಸಹದೇವನೂ, ತರುವಾಯ ನಕುಲನೂ, ಅನಂತರ ಅರ್ಜುನನೂ, ಬಳಿಕ ಭೀಮಸೇನನೂ ಹೋಗಿ ಅಲ್ಲಿದ್ದ ಯಕ್ಷವೇಷದ ಪರೇತಪತಿಯ ಪ್ರಶ್ನೆಗಳಿಗೆ ಉತ್ತರವನ್ನೀಯದೆ, ಬಾಯಾರಿಕೆಯಿಂದ ಪೀಡಿತರಾಗಿ ಆ ನಿರ್ಮಲೋದಕವನ್ನು ಕುಡಿದು ಪ್ರಜ್ಞಾರಹಿತರಾಗಿ ಮಲಗಿದ್ದರು. ನಾಲ್ವರು ತಮ್ಮಂದಿರೂ ಬಹು ಕಾಲ ನಿರೀಕ್ಷಿಸಿದರೂ ನೀರನ್ನು ತೆಗೆದುಕೊಂಡು ಬಾರದೆ ಇದ್ದುದರಿಂದ ಧರ್ಮರಾಯನು ಸಂಭ್ರಾಂತನಾಗಿ ತಾನೇ ಆ ಸರಸ್ಸನ್ನು ಹುಡುಕಿಕೊಂಡು ಹೋಗಿ ಅದನ್ನು ಕಂಡು, ಯಾವುದೊಂದು ಗಾಯವೂ ಇಲ್ಲದೆ ನೆಲದ ಮೇಲೆ ಬಿದ್ದಿರುವ ಅನುಜರನ್ನು ನೋಡಿ ದುಃಖಿಸಿ, ಪಿಪಾಸೆಯನ್ನು ಪರಿಹರಿಸಿಕೊಂಡು ತಕ್ಕ ಯೋಚನೆ ಮಾಡಬೇಕೆಂದು ಆ ಸರೋವರಕ್ಕೆ ಇಳಿಯುತ್ತಿರುವಾಗ ಭೀಮಾದಿಗಳನ್ನು ಕುರಿತು ಪ್ರಶ್ನಿಸಿದಂತೆ ಯಕ್ಷನು—ಎಲೈ ನರೇಂದ್ರನೇ ! ನನ್ನ ಪ್ರಶ್ನೆಗಳಿಗೆಲ್ಲ ಸದುತ್ತರಗಳನ್ನಿತ್ತು ಆಬಳಿಕ ನೀರನ್ನು ಕುಡಿ-ಎಂದು ಹೇಳಿದನು. ಆ ನುಡಿಗಳನಾಲಿಸಿ ಕೇಳಿ,-ಹಾಗೆಯೇ ಆಗಲಿ,—ಎಂದು ಹೇಳಿದ ಯುಧಿಷ್ಠಿರನು, ಯಕ್ಷನ ಧರ್ಮಸಾರಗಳಾದ ಎಲ್ಲಾ ಪ್ರಶ್ನೆಗಳಿಗೂ ತಕ್ಕ ಉತ್ತರಗಳನ್ನು ಹೇಳಿ ಮೆಚ್ಚಿಸಿ, ಧರ್ಮದೇವತೆಯನ್ನು ಪ್ರತ್ಯಕ್ಷವಾಗಿ ನೋಡಿ. ಪಾದಗಳಿಗೆ ಶಿರಸ್ಸನ್ನು ಸೋಕಿಸಿ ವಂದನವನ್ನು ಮಾಡಿ,—ಧರ್ಮದಲ್ಲಿ ದೃಢಬುದ್ಧಿಯೂ, ತ್ರಿಲೋಕಪ್ರಸಿದ್ಧವಾದ ಕೀರ್ತಿಯೂ, ಯುದ್ಧದಲ್ಲಿ ಶತ್ರುಜಯವೂ, ಸಜ್ಜನಸಹವಾಸವೂ, ದಿವ್ಯಜ್ಞಾನವೂ ತಮಗೆ ಉಂಟಾಗುವಹಾಗೆ—ಯಮಧರ್ಮನಿಂದ ವರಗಳನ್ನು ಪಡೆದು ಕೃತಕೃತ್ಯನಾದನು. ಒಡನೆ ಅನುಜರೂ ನಿದ್ದೆಮಾಡಿ ಎದ್ದಂತೆ, ಎದ್ದು ಬಂದು, ಅಣ್ಣನಿಗೆ ವಂದಿಸಿ, ನಡೆದ ಸಂಗತಿಯನ್ನೆಲ್ಲ ಕೇಳಿ ತಿಳಿದುಕೊಂಡು ಸಂತುಷ್ಟರಾಗಿ, ತಮ್ಮ ಆಶ್ರಮಕ್ಕೆ ವಿಪ್ರಕಾರ್ಯವನ್ನು ನೆರವೇರಿಸಿಕೊಂಡು ಹೋದರು, ಹೀಗೆ ಶಮದಮಾದಿಗುಣ ಸಂಪನ್ನರಾದ ಕೌಂತೇಯರಿಗೆ ವನವಾಸದಲ್ಲಿ ಅನೇಕಕಷ್ಟಗಳು ಸಂಭವಿಸಿದರೂ ಇಂದ್ರಿಯಗಳನ್ನು

ಜಯಿಸಿದವರಾದುದರಿಂದ, ಅವುಗಳನ್ನೆಲ್ಲ ಕಳೆದು ೧೨ ವರುಷ ವನವಾಸವನ್ನು ಮಾಡಿ ಅಜ್ಞಾತವಾಸವನ್ನು ಮಾಡಲೋಸುಗ ಯೋಚಿಸುತ್ತಿದ್ದರು.

## ಅಧ್ಯಾಯ ೩.

ಸಂಭಾಷಣಕುಶಲರಾದ ಪಾಂಡವರು ಸಕಲವಸ್ತುಸಮೃದ್ಧಿಯಿಂದ ಸರ್ವಜನಾಹ್ಲಾದಕರವಾಗಿರುವ ಮತ್ಸ್ಯದೇಶದ ವಿರಾಟನಗರ (ಈಗಿನ ಧಾರವಾಡಜಿಲ್ಲಾ)ದಲ್ಲಿ ಒಂದು ವರುಷ ಅಜ್ಞಾತವಾಸವನ್ನು ಮಾಡಬೇಕೆಂದು, ನಿಶ್ಚಯಿಸಿಕೊಂಡು, ಪತ್ನೀಸಮೇತರಾಗಿ ಕಾಮ್ಯಕವನದಿಂದ ಹೊರಟು ತಮ್ಮ ಪರಿಜನರನ್ನೆಲ್ಲ ಬೇಕುಬೇಕಾದ ಸ್ಥಳಗಳಿಗೆ ಕಳುಹಿಸಿ, ಆ ಪುರದ ಸಮೀಪಕ್ಕೆ ನಡೆದು, ಸುಹೋನ್ನತವಾಗಿ ಬೆಳೆದಿರುವ ಬನ್ನಿಯುಮರದಮೇಲೆ ತಮ್ಮ ಆಯುಧಗಳನ್ನೆಲ್ಲ ಬಚ್ಚಿಟ್ಟು, ವಿಶ್ರಮಿಸಿಕೊಳ್ಳುತಿದ್ದರು ಆಗ ಧರ್ಮರಾಯನು ಯತಿವೇಷದಿಂದ ಕಂಕನೆಂಬ ನಾಮವಂ ಕೈಕೊಂಡು ವಿರಾಟರಾಜನಲ್ಲಿ ಸೇರಿ ಅಕ್ಷವಿದ್ಯೆಯೇ ಮುಂತಾದ ಆಟಗಳಲ್ಲಿ ವಿನೋದವಾಗಿ ಹೊತ್ತನ್ನು ಕಳೆಯಿಸುತ್ತಿದ್ದನು. ಭೀಮನು ಅಡುಗೆಯವನಂತೆ ಮಲಿನವಸ್ತ್ರವನ್ನು ಧರಿಸಿ ಸೌಟು ಮುಂತಾದ ಪಾಕೋಪಕರಣಗಳನ್ನು ಹಿಡಿದುಕೊಂಡು, ವಿರಾಟರಾಯನ ಸನ್ನಿಧಿಗೆ ಹೋಗಿ ಎಲೈ—ರಾಜೇಂದ್ರನೇ ! ನಾನು ವಲಲನೆಂಬ ಹೆಸರುಳ್ಳ ಪಾಕಶಾಸ್ತ್ರಜ್ಞನು. ಅನೇಕಪ್ರಕಾರವಾಗಿಯೂ ಬಹು ಶುಚಿರುಚಿಯಾಗಿಯೂ ನಳಪಾಕಕ್ಕೆ ಮೇಲೆನಿಸುವ ಅಡುಗೆಯನ್ನುಮಾಡುವೆನು. ಎಂತಹ ಸೌದೆಯು ಕೊರಡನ್ನಾದರೂ ಕೊಡಲಿಯಿಲ್ಲದೆ ಸೀಳಿ, ಗೊತ್ತಾದಕಾಲಕ್ಕೆ ಮುಂಚೆ ಎಷ್ಟುಮಟ್ಟಿಗಾದರೂ ಬೇಕಾದ ದಿವ್ಯ ಭಕ್ಷ್ಯಭೋಜ್ಯಗಳನ್ನು ಮಾಡುತ್ತೇನೆ. ಸತ್ಯಸಂಧನಾದ ಯುಧಿಷ್ಠಿರಮಹಾರಾಜನಿಗೆ ಸೂಪಶಾಸ್ತ್ರದಲ್ಲಿ ಅಸದೃಶವಾದ ಚಾತುರ್ಯವನ್ನು ತೋರಿಸಿ, ಆತನಿಂದ ಮೆಚ್ಚಿಸಿಕೊಂಡಿದ್ದೆನು. ಈಗ ನಿನ್ನಲ್ಲಿ ಅಡುಗೆ

ಯುವನಾಗಿರಲು ಬಂದಿದೇನೆ—ಎಂದು ಅರ್ಥಿಸಿದನು. ಆ ಭೂಪತಿಯು ಅವನನ್ನು ದಿಟ್ಟಿಸಿನೋಡಿ, 'ಏನು, ಅಡುಗೆಯುವನು ಇಂತಹ ತನುಕಾಂತಿ ಯಿಂದ ಶೋಭಿಸುತಿರುವನೇ? ಆತ್ಮಸ್ತುತಿಯ ಪಾಪಕ್ಕಾಗಿ ಸ್ವರ್ಗದಿಂದ ಭೂಮಿಗೆ ತಳ್ಳಲ್ಪಟ್ಟ ಯಯಾತಿಮಹಾರಾಜನಂತೆ ನನ್ನ ಬಳಿಗೈತಂದಿ ರುವ ಈತನು ಮಹಾತ್ಮನಾಗಿರಬಹುದು.' ಎಂದುಕೊಂಡು—ಏನಯ್ಯಾ! ನೀನು ರಾಜಾಧಿರಾಜನಾಗಿರುವುದಕ್ಕೆ ಯೋಗ್ಯನು. ಹೀನಕೃತ್ಯಕ್ಕೆ ತಕ್ಕವ ನಲ್ಲ—ಎಂದು ಮೃದುವಾಗಿ ನುಡಿದನು. ಭೀಮನು—ಎಲೈ ಮೇದಿನೀ ಪತಿಯೇ! ಲಾಲಿಸು. ನನಗುಚಿತವಾದ ಕೆಲಸವನ್ನು ಕೊಡಲು ಕೇಳ ಕೊಂಡೆನು. ಭುಜಬಲದಿಂದ ಗರ್ವಿತರಾದ ಜಟ್ಟಿಗಳನ್ನು ಬೇಕಾದರೆ ಕಾಳಗ ದಲ್ಲಿ ಅವರ ಕೊಬ್ಬನ್ನಡಗಿಸಿ, ಸಿಂಹಶಾರ್ದೂಲಮದಗಜಗಳ ಬಲವನ್ನು ಕೆಡಿಸಿ, ಸಂತೋಷವನ್ನುಂಟುಮಾಡೇನು. ಇದು ಹೊರತು ನನಗೆ ಮತ್ತೇನೂ ಬಾರದು. ನೀವು ಇಷ್ಟಪಟ್ಟು ನಿಮ್ಮ ಒಳ ಇಟ್ಟುಕೊಳ ದಿದ್ದರೆ ಮತ್ತೆಲ್ಲಿಗಾದರೂ ಹೋಗುವೆನು—ಎಂದು ಹೇಳದನು. ವಿರಾಟ ರಾಯನು ಯೋಚಿಸಿ—ಎಲೈ ನರೋತ್ತಮನೇ! ಸಕಲಜನಾನಂದಕರ ನಾದ ನೀನು ನನ್ನ ಪಾಕಶಾಲೆಗೆ ಅಧ್ಯಕ್ಷನಾಗಿ ಸುಖವಾಗಿರು—ಎಂದನು. ಭೀಮನು ತನ್ನ ವೃತ್ತಿಯನ್ನು ಆರೂ ಅರಿಯದಂತೆ ಅಲ್ಲಿ ವಾಸವಾಗಿದ್ದರೂ ಎಂದಿನಂತೆ ತ್ರಿಕಾಲದಲ್ಲಿಯೂ ಸದಾಚಾರಸಂಪನ್ನನಾಗಿರುತಿದ್ದನು! ಆ ಬಳಿಕ ಅರ್ಜುನನು, ಊರ್ವಶಿಯಿಂದ ತನಗುಂಟಾದ ಶಾಪವು ಆಗ ಸನ್ನಿ ಹಿತವಾಗಲು, ನಪುಂಸಕವೇಷವನ್ನು ಧರಿಸಿ ಬೃಹನ್ನಳೆ ಎಂಬ ಹೆಸರಿನಿಂದ ದೊರೆಯನ್ನು ಕಾಣಿಸಿಕೊಂಡು, ಆ ಭೂಪತಿಯ ಪುತ್ರಿಯಾದ ಉತ್ತರಾ ದೇವಿಗೆ ಭರತಶಾಸ್ತ್ರಬೋಧಕನಾಗಿ ನೇಮಿಸಲ್ಪಟ್ಟನು. ನಕುಲನು ದಾಮ ಗ್ರನ್ಥಿ ಎಂಬ ಹೆಸರಿನಿಂದ ಅಶ್ವಪತಿಯಾಗಿಯೂ, ಸಹದೇವನು ತಂತಿಪಾಲ ನೆಂದು ಕೂಗಿಸಿಕೊಳ್ಳುತ, ಗೋಪಾಲನಾಗಿಯೂ, ರಾಜಮಹಿಷಿಯಾದ ಪಾಂಚಾಲಿಯು ಮಾಲಿನಿ ಎಂಬ ಆಖ್ಯೆಯಿಂದ ಸುಧೇಷ್ಣೆಯ ಬಳಿಯಲ್ಲಿ ಸೈರಂಧ್ರಿಯಾಗಿಯೂ, ಸೇವಾವೃತ್ತಿಯಲ್ಲಿದ್ದರು. ಪಾಂಡವರು ರಾಜಾಧಿ ರಾಜರಾಗಿದ್ದರೂ ಸಮಯಪರಿಪಾಲನೆಗಾಗಿ ಸತೀಸಮೇತ ಸಮಾನರಲ್ಲಿಯೇ

ಸೇವೆಗೆ ನಿಲ್ಲಬೇಕಾಯಿತು. ಈ ಕೆಲಸಗಳನ್ನು ಅವರು ಅಭ್ಯಾಸಮಾಡಿ ಕಲಿತಿರಲಿಲ್ಲ. ದೇವಾಂಶಸಂಭೂತರಾದುದರಿಂದಲೂ, ದೇವತಾವರಗಳಿಂದಲೂ, ಅವರಿಗೆ ಈ ಕೆಲಸಗಳಲ್ಲಿ ಪ್ರಾವೀಣ್ಯವು ಉಂಟಾಗಿದ್ದಿತು. ಆದುದರಿಂದ ಅವರು ಕಷ್ಟವನ್ನು ಸುಲಭವಾಗಿ ಪರಿಹರಿಸಿಕೊಂಡರು. ಹೀಗೆ ಸಾಮಾನ್ಯ ಜನಗಳಿಗೆ ಇಂತಹ ಕಷ್ಟಗಳು ಬಂದಲ್ಲಿ ಮನುಷ್ಯರಿಗೆ ಕಷ್ಟಕಾಲದಲ್ಲಿ ಉಪಯೋಗವಾಗುವ ಕುಶಲವಿದ್ಯೆಯಲ್ಲಿಯೂ ಕೈಗಾರಿಕೆಗಳಲ್ಲಿಯೂ ಪರಿಶ್ರಮವಿದ್ದರೆಅನುಕೂಲವಲ್ಲವೆ ? ಪಾಂಡವರು ಪಾಂಚಾಲಿಯೊಡನೆ ವ್ಯಾಜಾಂತರದಿಂದ ಪ್ರತಿದಿನವೂ ಒಬ್ಬರನ್ನೊಬ್ಬರು ನೋಡುತ ಸುಖವಾಗಿದ್ದರು.

ಆ ಊರಿನಲ್ಲಿ ಒಂದು ಜಾತ್ರೆಯೊದಗಿತು. ಅದಕ್ಕಾಗಿ ಬಹುದೂರದಿಂದ ಅನೇಕರು ಅಲ್ಲಿಗೆ ಹೋಗಿ ಸೇರಿದರು. ಭುಜಬಲಾಟೋಪದಲ್ಲಿ ಪ್ರಸಿದ್ಧನಾದ ಜಟ್ಟಿಯೊಬ್ಬನು ವಿರಾಟರಾಯನ ಆಸ್ಥಾನಕ್ಕೆ ಹೋಗಿ ತನ್ನ ಪ್ರತಾಪಗಳನ್ನು ಹೇಳಿಕೊಂಡು ಬಡಿವಾರ ಮಾಡುತ್ತಿದ್ದನು. ಇವನೊಡನೆ ಬಾಹುಯುದ್ಧವನ್ನು ಮಾಡಿ ಗೆಲ್ಲುವಷ್ಟು ಶಕ್ತರಾರೂ ಆ ಊರಿನಲ್ಲಿ ಇರಲಿಲ್ಲ. ಒಂದುದಿನ ವಿರಾಟರಾಜನು ಭೀಮಸೇನನನ್ನು ಕರೆಸಿಕೊಂಡು ಸನ್ಮಾನಿಸಿ—ಅಯ್ಯಾ ! ಆ ಜಟ್ಟಿಯ ಸೊಕ್ಕನ್ನಡಗಿಸಲೊಲ್ಲೆಯಾ—ಎಂದನು. ಆಗ ಅಲ್ಲಿಯೆ ಇದ್ದ ಯುಧಿಷ್ಠಿರನೂ ಒಪ್ಪಿ ಸಂಜ್ಞೆಮಾಡಿದನು ಭೀಮನು ಪರಮಸಂತೋಷದಿಂದ ರಾಜಾಜ್ಞೆಯನ್ನಂಗೀಕರಿಸಿ ಆ ಜಟ್ಟಿಯೊಡನೆ ಮುಷ್ಟಿಯುದ್ಧಕ್ಕೆ ನಿಂತು ನೋಟಕರಿಗೆ ಆಶ್ಚರ್ಯವುಂಟಾಗುವಂತೆ ಹೋರಾಡುತಿದ್ದನು. ಭೀಮನು ಮೊತ್ತಮೊದಲು ಏನನ್ನೂ ಅರಿಯದವನಂತೆ ನಟಿಸಿ, ಹೊಂಚುಹಾಕುತಿದ್ದು ಜಟ್ಟಿಕಡೆಗೆ ಬಾಹುಮೂಲದಲ್ಲಿ ಬಿಗಿದು ಅಚೀಚೆಗೆ ಕದಲದಹಾಗೆ ಅವನ ಪಾರ್ಶ್ವಗಳನ್ನು ಹಿಡಿದು ಕೆಡವಿದನು. ಭಯಂಕರನಾದ ಆ ಮಲ್ಲಮುಖ್ಯನು ಕೂಡಲೇ ಮೇಲಕ್ಕೆದ್ದು ಭೀಮನನ್ನೆದಿರಿಸಿದನು. ಮಾರುತಿಯು ಭಯಂಕರವಾಗಿ ಗರ್ಜಿಸಿ, ತನ್ನ ಭುಜದಂಡಗಳನ್ನು ನೀಡಿ ಆ ಜಟ್ಟಿಯ ಹಸ್ತಗಳನ್ನು ಹಿಡಿದು ಲಾಗಿಸಿ, ಬಿರುಬಿರನೆ ತಿರುಗಿಸಿ, ನೆಲಕ್ಕೆ ಕೆಡವಿ ಕಾಲುಗಳಿಂದ ತೀಡಲು ; ಅವನು ಲೋಕಾಂತರವನ್ನೈದಿದನು ! ಜಗಜ್ಜಟ್ಟಿಯಂತಿದ್ದ ಭೀಮಸೇನನಿಗೆ ಆ ದೊರೆಯು ಬೇಕಾದ

ಬಹುಮಾನವನ್ನು ಮಾಡಿದನು ಹೀಗೆಯೇ ಅನೇಕವೇಳೆ, ಪ್ರಪಂಚದಲ್ಲಿ ನಮಗೆ ಸಾಟಿಯೇ ಇಲ್ಲವೆಂದು ಹೆಮ್ಮೆಯಿಂದ ಕಾಳಗಕ್ಕೆ ಬರುತ್ತಿದ್ದ ಬಲಿಷ್ಠರಾದ ಜಟ್ಟಿಗಳನ್ನೆಲ್ಲ ಅಸಹಾಯಶೂರನಾದ ಭೀಮಸೇನನು ಜಯಿಸಿ ಸಿಂಹ ಶಾರ್ದೂಲ ಮದಕರಿ ಮುಂತಾದುವುಗಳನ್ನು ಲಕ್ಷ್ಯವಿಲ್ಲದೆ, ಬೆದರಿಸಿ ಕೆಡವುತ ವಿರಾಟರಾಜನಿಂದ ಮೆಚ್ಚಿಸಿಕೊಂಡಿದ್ದನು.

ಸುಧೇಷ್ಣೆಗೆ ಪರಿಚರ್ಯೆಯನ್ನು ಮಾಡುತ್ತಿದ್ದ ಮನೋಹರಾಂಗಿಯಾದ ದ್ರೌಪದಿಯನ್ನು ಕಂಡು ಶ್ವಾನವು ಪವಿತ್ರವಾದ ಪುರೋಡಾಶವನ್ನು ತಿನ್ನುವುದಕ್ಕೆಣಿಸಿದಂತೆ, ನೀಚನಾದ ಕೀಚಕನು ಆಕೆಯ ಸಂಗವನ್ನಪೇಕ್ಷಿಸಿದನು. ಅವನಿಗೆ ಪಾಂಚಾಲಿಯು ಹೇಳಿದ ವಿವೇಕವು ಫಲಿಸಲಿಲ್ಲ. ಸೇನಾಧ್ಯಕ್ಷನಾದ ನಾನು ರಾಣಿಯ ಸಹೋದರನಾದುದರಿಂದ, ಸೈರಂಧ್ರಿಯಾದ ನೀನು ಹೇಳಿದಹಾಗೆ ಕೇಳಬೇಕು. ಇರು-ಎಂದು ತನ್ನ ಪ್ರತಾಪವನ್ನು ತೋರ್ಪಡಿಸಿ ತೆರಳಿದನು. ಲೋಕದಲ್ಲಿ ಸೇವಾಧರ್ಮವನ್ನು ವಿಚಾರಿಸಿದರೆ, ಶಕ್ತನಾದ ಮಂತ್ರಿಮುಖ್ಯನು ಕೂಡ ರಾಜಶಾಸನವನ್ನು ಮೀರುವುದು ಅಶಕ್ಯವೆಂಬುದು ಸ್ಪಷ್ಟವಾಗುತ್ತದೆ ಸುಧೇಷ್ಣೆಯು ಕೀಚಕನಪೇಕ್ಷೆಯಂತೆ ಲೋಕಜನನಿಯಂತಿದ್ದ ದ್ರೌಪದೀದೇವಿಯನ್ನು ಕರೆದು ನನ್ನ ತಮ್ಮನ ಮನೆಗೆ ಹೋಗಿ ಪಾನೀಯಪದಾರ್ಥವನ್ನು ತೆಗೆದುಕೊಂಡು ಬಾ —ಎಂದು ಅಪ್ಪಣೆಮಾಡಿದಳು. ಆ ಮಾತನ್ನು ಕೇಳಿದೊಡನೆ, ಆಕೆಯ ಹೃದಯವು ಪರಿಪಕ್ವವಾದ ದಾಳಿಂಬದ ಹಣ್ಣಿನಂತೆ ಸೀಳಿ ಆ ನಿರ್ಬಂಧಕ್ಕೆ ಹೆದರಿ ಗಡಗಡನೆ ನಡುಗುತ, ತನ್ನ ಪಾತಿವ್ರತ್ಯಕ್ಕೆ ಹಾನಿಬಾರದಂತೆ ದೇವರ ಪ್ರಾರ್ಥನೆಯನ್ನು ಮಾಡಿ, ಕೀಚಕನ ಮನೆಗೆ ಬಂದಳು. ಅಲ್ಲಿ ದುರಾತ್ಮನಾದ ಕೀಚಕನು ಆ ಕಮಲಲೋಚನೆಯನ್ನು ಬಯಸಿದುದರಿಂದ, ಬಲೆಗೆ ಸಿಕ್ಕಿದ ಹುಲ್ಲೆಯು ಮರಿಯಂತಿದ್ದರೂ, ಉಪಾಯದಿಂದ ತಪ್ಪಿಸಿಕೊಂಡು ಭೀಮನ ಬಳಿಗೆ ಹೋಗಿ, ನಡೆದ ಸಂಗತಿಯನ್ನು ತಿಳುಹಿಸಿ, ಮುಕ್ತಾಫಲದಂತೆ ಕಣ್ಣೀರು ಸುರಿಸುತ,—ಮದದಾನೆಯು ಬೇಲದಹಣ್ಣನ್ನು ಕಾಲಿನಿಂದ ತುಳಿದು ನಾಶಮಾಡುವಂತೆ, ಆ ಪಾಪಿಯನ್ನು ಕೊಂದು ನನ್ನನ್ನು ರಕ್ಷಿಸಬೇಕಾಗಿದೆ—ಎಂದು ಹೇಳಿಕೊಂಡಳು. ಅದನ್ನು ಕೇಳಿ ಕೋಪಗೊಂಡ ಭೀಮನು, ಅನೃತೋಪಶಮನವಾದ ವಾಕ್ಯಗಳಿಂದ ದ್ರೌಪದೀದೇವಿಗೆ ಸಮಾಧಾನವನ್ನು

ಹೇಳಿ, ಕೀಚಕವಧೋಪಾಯವನ್ನು ಚಿಂತಿಸಿ, ಆಕೆಯೊಡನೆ ಆ ದುಷ್ಟನಿಗೆ ಹೇಳಿಕಳುಹಿಸಿದನು. ಕಾಲವಶನಾದ ಕೀಚಕನು ಸಂಕೇತಪ್ರಕಾರ, ನಾಟಕಶಾಲೆಯಲ್ಲಿ ದ್ರೌಪದಿಯೊಡನೆ ಸುಖವಾಗಿರಬೇಕೆಂದು ಬಯಸಿ ಬರುವುದಕ್ಕೆ ಮುಂಚೆ, ಆ ರಾತ್ರಿ ಭೀಮನು ಅಲ್ಲಿದ್ದ ದಿವ್ಯವಾದ ಹಂಸತೂಲಿಕಾತಲ್ಪದಮೇಲೆ ಮಲಗಿ, ಸಿಂಹವು ಮೃಗಗಳು ಬರುವುದನ್ನೇ ನೋಡುತ್ತಿರುವಂತೆ, ನೋಡುತ್ತಿದ್ದನು ಅಷ್ಟರಲ್ಲಿ ದುರ್ವಿನೀತನಾದ ಕೀಚಕನು ಹಾಸಿಗೆಯ ಸಮೀಪಕ್ಕೆ ಹೋಗಿ ಪ್ರಚನ್ನವೇಷದಿಂದ ಕೋಪೋದ್ದೀಪಿತನಾಗಿ ಹೊದಿದುಕೊಂಡು ಮಲಗಿರುವ ಭೀಮನನ್ನೇ ಸೈರಂಧ್ರಿಯೆಂದೆಣಿಸಿ, ಸ್ವಲ್ಪ ಮೈದಡವಿ, ಸಂತೋಷದಿಂದ ಹಿಗ್ಗಿದವನಾಗಿ "ಎಲೈ, ನಾರೀಮಣಿಯೇ! ನನ್ನ ಅಂತಃಪುರದಲ್ಲಿರುವ ತರುಣಿಯರೆಲ್ಲರೂ ನನ್ನನ್ನು ರೂಪಸಂಪತ್ತಿನಲ್ಲಿ ಮನ್ಮಥನಿಗೆ ಸರಿಯಾದವನೆಂದು ಹೊಗಳುವರು. ನೀನು ಮಾತುಕೊಟ್ಟದ್ದಂತೆ ಇಲ್ಲಿಗೆ ಬಂದಿರುವುದರಿಂದ ಆ ವಾಕ್ಯವನ್ನು ನಿಜವೆಂದು ತಿಳಿದೆನು. ಮಂಗಳಸ್ನಾನವನ್ನು ಮಾಡಿ, ದಿವ್ಯವಸ್ತ್ರಗಂಧಮಾಲ್ಯಾಭರಣಾದಿಗಳನ್ನು ತೆಗೆಯಿಸಿಕೊಂಡು ಬಂದಿದ್ದೇನೆ. ನನ್ನ ಸರ್ವಸ್ವವೂ ನಿನ್ನದೆಂದು ತಿಳಿದು ನನ್ನ ಸೌಂದರ್ಯಾದಿಗಳನ್ನು ಸಫಲವನ್ನಾಗಿ ಮಾಡು" ಎಂದನು. ಭೀಮನು ಕಾಲಕೇಯರೆಂಬ ದೈತ್ಯರಲ್ಲಿ ಪ್ರಸಿದ್ಧನಾದ ನೀನು ಸೌಂದರ್ಯಶಾಲಿಯೇ ಅಹುದು. ನನ್ನಂತಹ ಸ್ತ್ರೀರತ್ನವನ್ನು ನೀನು ಎಂದಿಗೂ ನೋಡಿರಲಾರೆ. ಸ್ವಲ್ಪ ಹೊತ್ತಿನಲ್ಲಿಯೇ ನಿನ್ನ ಮನೋರಥವನ್ನು ನೆರವೇರಿಸಿ, ಮತ್ತೋರ್ವಳ ಸಂಗವನ್ನು ಬಯಸದರೀತಿ ಮಾಡುವೆನು,-ಎಂದು ಹೇಳಿ ಕೂಡಲೆ ಎದ್ದು, ಭಯಂಕರವಾದ ಪರಾಕ್ರಮವು ಮೆರೆಯಲು, ಕೀಚಕನ ಮುಂಡೆಕೂದಲುಗಳನ್ನು ಹಿಡಿದು ಎಳೆದನು. ಆಗ ಕೀಚಕನು ಭ್ರಾಂತನಾಗಿ, ಭೀಮನನ್ನು ಬಿಗಿದುಹಿಡಿದನು. ವಸಂತಕಾಲದಲ್ಲಿ ಹೆಣ್ಣಾನೆಗೋಸ್ಕರ ಹೆಣಗಾಡುವ ಮದದಾನೆಗಳಂತೆ ವೀರಾಗ್ರೇಸರರಾದ ಭೀಮಕೀಚಕರೀರ್ವರೂ ಬಾಹುಯುದ್ಧಕ್ಕೆ ತೊಡಗಿ, ಪಾದಘಾತದಿಂದ ನೆಲವು ನಡುಗುವಂತೆ ನಿಂತು ಒಬ್ಬರನ್ನೊಬ್ಬರು ಹಿಡಿಯಲಾರದೆ ರೋಷಾವೇಶವುಳ್ಳವರಾಗಿ, ಛಲದಿಂದ ವೀರಾಲಾಪಗಳನ್ನು ನುಡಿಯುತ, ಮೊಣಕಾಲುಗಳಿಂದ ಗುದ್ದಿ ಪಾದಗಳಿಂದ ಒದೆದು ವಿಚಿತ್ರವಾಗಿ ಹೋರುತ, ರಣಕ್ರೀಡೆಯಲ್ಲಿದ್ದರು. ಬಾಹುಬಲ

ದಲ್ಲಿ ಸಕಲಜನ ಭಯಂಕರನಾದ ಕೀಚಕನು ಭೀಮನನ್ನು ಕಾಲಿನಿಂದ ಒದೆದು ನೂಕಿದನು. ಅವನು ದಂಡಾಹತವಾದ ಉರಗನಂತೆ ಎದ್ದು ಕೀಚಕನನ್ನು ಹಿಡಿದು ಅವನ ವಕ್ಷಸ್ಥಲದಲ್ಲಿ ಬಲವಾಗಿ ಅಪ್ಪಳಿಸಿದನು. ಕೀಚಕನು ಯುದ್ಧೋತ್ಸಾಹದಿಂದ ಮೆರೆಯುತ ಭೀಮನನ್ನು ಎಳೆಯುತ್ತಲೂ ತಿವಿಯುತ್ತಲೂ ಇರಲು ; ಪರಾಕ್ರಮಧುರ್ಯನಾದ ಪವನಪುತ್ರನು ಬಲೋನ್ಮತ್ತನಾದ ಕೀಚಕನ ತೊಡೆಗಳನ್ನು ತನ್ನ ತೊಡೆಗಳಿಂದ ಬಿಗಿದು ಮುಷ್ಟಿಪ್ರಹಾರಗಳಿಂದ ನೋಯಿಸಿ, ಅವನ ಪಟುಗಳನ್ನೆಲ್ಲ ಚಾತುರ್ಯದಿಂದ ತಪ್ಪಿಸಿಕೊಂಡು, ತಲೆಕೆಳಗಾಗಿ ಮಾಡಿ, ಒಂದು ಹಸ್ತದಿಂದ ಜುಟ್ಟನ್ನು ಹಿಡಿದು, ಮತ್ತೊಂದರಿಂದ ಎದೆಯನ್ನು ಒತ್ತಿ ಹಿಡಿದು, ಬಡಿದು, ಒದೆದು, ಹೊಸಕಿ, ಗತಪ್ರಾಣನಂತೆ ಮಾಡಿ, ಮರಳಿ ಅವನನ್ನು ಮೇಲಕ್ಕೆ ಹಾರಿಸಿ, ಕೆಳಕ್ಕೆ ಕೆಡಹಲು, ಅವನು ರಕ್ತವನ್ನು ಕಾರುತ ಪ್ರಾಣವನ್ನು ಬಿಟ್ಟನು ! ಅಷ್ಟಕ್ಕೇ ಸುಮ್ಮನಾಗದ ಭೀಮನು ಆಸೂತನಂದನನನ್ನು ವಿಕೃತರೂಪನನ್ನಾಗಿ ಮಾಡಿ, ಪಾಂಚಾಲಿಯನ್ನು ಕರೆದು, 'ಪಾಪಾತ್ಮರಾದವರು ನಿನ್ನನ್ನು ಬಯಸಿ ಬಂದರೆ, ಅವರಿಗೆಲ್ಲರಿಗೂ ಇದೇಗತಿ' ಎಂದು ಹೇಳಿ, ಗೋಪ್ಯವಾಗಿ ತನ್ನ ವಾಸಸ್ಥಳಕ್ಕೆ ಹೋಗಿ, ಸ್ನಾನಾದಿಗಳನ್ನು ಮಾಡಿ ಮಲಗಿದನು.

ಲೋಕಮಾನ್ಯೆಯಾದ ದ್ರೌಪದಿಯು, ದುಷ್ಟಕೀಚಕನು ಭೀಮನಿಂದ ಸಂಹೃತನಾದುದನ್ನು ಕಂಡು, ಕಾವಲುಗಾರರನ್ನು ಕೂಗಿ,—ನನ್ನ ಪತಿಗಳಾದ ಗಂಧರ್ವರ ದೆಸೆಯಿಂದ ಕೀಚಕನು ಮಡಿದು ಬಿದ್ದಿದಾನೆ. ನೋಡಿ— ಎಂದಳು. ಅವರು ಪಂಜುಗಳ ಬೆಳಕಿನಲ್ಲಿ ಅಲ್ಲಿಗೆ ಹೋಗಿ, ರಕ್ತದಿಂದ ಭೂಮಿಯು ನನೆದು, ಅವಯವಗಳೊಂದೂ ಕಾಣದೆ ಬಿದ್ದಿರುವ ಸುಧೇಷ್ಣೆಯ ತಮ್ಮನನ್ನು ನೋಡಿ, ಆರ್ತಧ್ವನಿಯಿಂದ ಎಲ್ಲರಿಗೂ ಗೊತ್ತಾಗುವಂತೆ ಗಟ್ಟಿಯಾಗಿ ಅರಚಿಕೊಂಡರು. ಉಪಕೀಚಕರು ಅದನ್ನು ಕೇಳಿ, ಅಲ್ಲಿಗೆ ಓಡಿಹೋಗಿ, ತಮ್ಮ ಅಣ್ಣನು ಮಣ್ಣಿನ ಮುದ್ದೆಯಂತಾಗಿ ಸತ್ತುಬಿದ್ದಿರುವುದನ್ನು ನೋಡಿ, ಆಶ್ಚರ್ಯವಿಷಾದಗಳಿಂದ ಕೂಡಿದವರಾಗಿ ಅದಕ್ಕೆ ಕಾರಣವಾದ ಮಾಲಿನಿಯನ್ನು ಹಿಡಿದು, ಕೀಚಕನೊಡನೆ ದಹಿಸಿದರೆ, ಪರಲೋಕದಲ್ಲಾದರೂ ಅವನ ಇಷ್ಟವು ನೆರವೇರುವುದೆಂದು ಯೋಚಿಸಿ, ತ್ರಿಕರಣಶುದ್ಧೆಯಾದ ಸೈರಂಧ್ರಿಯನ್ನು ದುರ್ಬುದ್ಧಿಯಿಂದ ಆ ಶವದೊಡನೆ ಬಂಧಿಸಿ, ರಾಜ

ಮಾರ್ಗದಲ್ಲಿ ಸ್ಮಶಾನಕ್ಕೆ ತೆಗೆದುಕೊಂಡು ಹೋಗುತ್ತಿದ್ದರು. ಪತಿಪರಾಯಣೆಯಾದ ದ್ರೌಪದಿಯು “ ಜಯ, ಜಯಂತ, ವಿಜಯ, ಜಯತ್ಸೇನ, ಜಯದ್ಬಲ,” ಎಂಬ ಸಂಕೇತನಾಮದಿಂದಿರುವ ತನ್ನ ಪತಿಗಳಾದ ಪಾಂಡವರಿಗೆ ಗೊತ್ತಾಗುವಂತೆ, ಅವರನ್ನು ಸಂಬೋಧಿಸಿ,—ನಿಮ್ಮ ಪ್ರಿಯಪತ್ನಿಯಾದ ನನ್ನನ್ನು ಉಪಕೀಚಕರು, ರುದ್ರಭೂಮಿಗೆ ಹೊತ್ತುಕೊಂಡು ಹೋಗುತಿರುವರು, ನನ್ನ ಲಜ್ಜೆಯು ಕೊಳ್ಳೆಹೋಯಿತು. ತ್ರಿಲೋಕಗಳಲ್ಲಿಯೂ ಪ್ರಖ್ಯಾತರಾದ ನೀವು ಈ ಸಮಯದಲ್ಲಿ ಬಲಪರಾಕ್ರಮಗಳನ್ನು ಬಿಟ್ಟು ಧರ್ಮಪಾಶಬದ್ಧರಾಗಿ, ಸತ್ಯಪ್ರತಿಜ್ಞೆಯಿಂದ ಕೂಡಿ ಎಲ್ಲಿ ಮರೆಯಾಗಿದ್ದೀರಿ ? ನನ್ನನ್ನು ರಕ್ಷಿಸಲು ಬೇಗಬನ್ನಿ—ಎಂದು ಗಟ್ಟಿಯಾಗಿ ಕೂಗಿಕೊಂಡಳು. ಅಡಿಗೆಮನೆಯಲ್ಲಿದ್ದ ಭೀಮನು ದ್ರೌಪದಿಯ ದೀನಾಲಾಪಗಳನ್ನು ಕೇಳಿ, ಸೋಜಿಗಗೊಂಡು, ಓಡಿಬಂದು—ಎಲೆ, ಸೈರಂಧ್ರಿಯೇ ! ಭಯಪಡಬೇಡ. ಸೂತಪುತ್ರರನ್ನು ಸಮವರ್ತಿಯ ಬಳಿಗೆ ಈ ನಿಮಿಷವೇ ಕಳುಹಿಸುವೆನು ಎಂದು ಹೇಳಿ, ಉಪಕೀಚಕರನ್ನು ಅಡ್ಡಗಟ್ಟಿ, ಒಂದು ಮಹಾವೃಕ್ಷವನ್ನು ಬೇರುಸಹಿತ ಕಿತ್ತುಕೊಂಡು, ಅದರ ಎಲೆಗಳನ್ನು ಉದಿರಿಸಿ, ಪ್ರಳಯಕಾಲದ ಯಮನಂತೆ ಅವರೊಡನೆ ಯುದ್ಧಕ್ಕೆ ನಿಂತನು ಅವರು ಭಯಭ್ರಾಂತರಾಗಿ ದ್ರೌಪದಿಯನ್ನು ಅಲ್ಲಿಯೇ ಬಿಟ್ಟು ಪಲಾಯನಕ್ಕೆ ಆರಂಭಿಸಿದರು. ಭೀಮನು ಅವರನ್ನು ಬಿಟ್ಟುಕೊಟ್ಟನೇ ? ಇಲ್ಲ. ಸಿಕ್ಕಿಸಿಕ್ಕಿದ ಹಾಗೆ ಅವರೆಲ್ಲರನ್ನೂ ಹಿಡಿದು, ಆ ದೊಡ್ಡಮರದಿಂದಲೇ ಹೊಡೆಯುತ ಕ್ಷಣಮಾತ್ರದಲ್ಲಿ ನೂರೈದು ಮಂದಿ ಉಪಕೀಚಕರನ್ನೂ ಕೊಂದು ಪಾಂಚಾಲಿಯ ಬಳಿಗೆ ಹೋಗಿ, ಕಟ್ಟುಗಳನ್ನೆಲ್ಲ ಸಡಲಿಸಿ ಬಿಡಿಸಿದನು. ಭಯದುಃಖಗಳಿಂದ ಅಳತೊಡಗಿದ ಆಕೆಯನ್ನು ಕುರಿತು—ಎಲೆ, ಶೋಭನಾಂಗಿಯೇ ! ಸೈರಿಸು. ಸೂರ್ಯಪ್ರಭೆಯು ಸೂರ್ಯನಲ್ಲಿಯೇ ಏಕವಾಗಿರುವಂತೆ, ನೀನು ನಮ್ಮಲ್ಲಿಯೇ ಮನಸ್ಸುಳ್ಳವಳಲ್ಲದೆ ಮತ್ತೊಂದು ವಸ್ತುವಿನಲ್ಲಿ ಮನಸ್ಸುಳ್ಳವಳಲ್ಲವೆಂಬುದನ್ನು ನಾವು ಬಲ್ಲೆವು. ಸ್ತ್ರೀಯರಿಗೆ ಪಾತಿವ್ರತ್ಯಧರ್ಮವು ಪ್ರಾಣಾವಸಾನಪರ್ಯಂತವೂ ರಕ್ಷಿಸತಕ್ಕದಾಗಿದೆ. ಇಂತಹ ದುರವಸ್ಥೆ ಬಂದಿತೆಂದು ನೀನು ಕ್ಲೇಶಪಡಬೇಡ. ಪೂರ್ವಕಾಲದಲ್ಲಿ ದೇವರಾತನೆಂಬುವನ ಭಾರ್ಯೆಯು ಪತಿವ್ರತಾಶಿರೋಮಣಿಯಾಗಿದ್ದಳು. ಒಬ್ಬ ರಾಕ್ಷಸನು ಆಕೆಯ ಸೌಂದರ್ಯಾದಿಗಳಿಗೆ ಭ್ರಮಿಸಿ,

ದೇವರಾತನ ವೇಷದಿಂದ ಆ ಸಾಧ್ವಿಯನ್ನು ಕರೆದುಕೊಂಡು ಹೋಗಿ,
ನಿರ್ಜನವಾದ ಒಂದು ಸರೋವರದ ಸಮೀಪದಲ್ಲಿ ಬಿಟ್ಟು, ತನ್ನ ಪ್ರತಾಪ
ವನ್ನು ಹೇಳಿ, ಆಕೆಯೊಡನೆ ಸುಖವಾಗಿರಲು ತವಕಪಡುತಿದ್ದನು. ಆಗ ಅವಳ
ಅವಯವಗಳು ದೇವತಾನುಗ್ರಹದಿಂದ ಶಿಲಾಮಯವಾಗಲು ; ರಕ್ಕಸನಿಗೆ
ಇಷ್ಟಾರ್ಥಸಿದ್ಧಿಯಾಗದೆ ಉರಿದುಬಿದ್ದನು ! ಲೋಕದಲ್ಲಿ ಪತಿವ್ರತೆಯರಿಗೆ
ಸಾಮಾನ್ಯವಾಗಿ ಅಧಿಕವಾದ ದುಃಖವೂ ಸ್ವಸೌಖ್ಯಖಂಡನೆಯೂ ಆಗುವುದು.
ಮಧುಮತೀದೇವಿಯು ಶ್ರೀಗುರುದತ್ತಾತ್ರೇಯಸ್ವಾಮಿಯಲ್ಲಿಯೂ ಶಚೀ
ದೇವಿಯು ದೇವೇಂದ್ರನಲ್ಲಿಯೂ ಮಂಗಳಾಂಗಿಯಾದ ಅನಸೂಯಾದೇವಿ
ಯು ಅತ್ರಿಋಷಿಯಲ್ಲಿಯೂ, ಅರುಂಧತಿಯು ವಶಿಷ್ಠನಲ್ಲಿಯೂ. ದಮಯಂ
ತಿಯು ನಳಚಕ್ರವರ್ತಿಯಲ್ಲಿಯೂ, ಚಂದ್ರಮತೀದೇವಿಯು, ಸತ್ಯಹರಿಶ್ಚಂದ್ರ
ನಲ್ಲಿಯೂ, ಲೋಪಾಮುದ್ರೆಯು ಅಗಸ್ತ್ಯಮಹರ್ಷಿಯಲ್ಲಿಯೂ, ಸುಕ
ನ್ಯೆಯು ಚ್ಯವನಮಹರ್ಷಿಯಲ್ಲಿಯೂ, ಶ್ರೀಮತಿಯು ಕಪಿಲಮುನಿಯ
ಲ್ಲಿಯೂ, ಸಾವಿತ್ರಿಯು ಸತ್ಯವಂತನಲ್ಲಿಯೂ, ಮದಯಂತಿಯು ಸೌದಾಸ
ನಲ್ಲಿಯೂ, ಸೀತಾದೇವಿಯು ಶ್ರೀರಾಮನಲ್ಲಿಯೂ, ಸರಸ್ವತೀದೇವಿಯು
ಬ್ರಹ್ಮನಲ್ಲಿಯೂ, ರೋಹಿಣಿಯು ಚಂದ್ರನಲ್ಲಿಯೂ, ಪಾರ್ವತಿಯು ಶಂಕರ
ನಲ್ಲಿಯೂ, ಶ್ರೀಯು ಶ್ರೀಧರನಲ್ಲಿಯೂ, ಅನುಕೂಲೆಯರಾಗಿರುವಂತೆ
ನೀನು ನಮಗೆ ಅನುಕೂಲೆಯಾಗಿ ಕಷ್ಟಸುಖಗಳಿಗೆ ಈಡಾಗಿರುವುದರಿಂದ,
ದೈವಾಧೀನಕಾರ್ಯಕ್ಕೆ ಕ್ಲೇಶಪಡದೆ ಇರು. ಧನಿಕನ ಗುಣವು ತ್ಯಾಗದಿಂದಲೂ
ಉದಕದ ಗುಣವು ಒಳ್ಳೆಯ ಭೂಮಿಯಿಂದಲೂ, ಕಣ್ಣಿನಗುಣವು ದಯಾರಸ
ದಿಂದಲೂ. ವಿದ್ಯಾವಂತನ ಗುಣವು ವಿನಯದಿಂದಲೂ, ಹೆಂಗಸಿನ ಗುಣವು
ಪಾತಿವ್ರತ್ಯಕ್ಕೆ ಕುಂದಕವನ್ನುಂಟುಮಾಡಿಕೊಳ್ಳದ ಒಳ್ಳೆಯ ನಡತೆಯಿಂ
ದಲೂ, ಪ್ರಕಾಶವನ್ನು ಹೊಂದುತ್ತವೆ. ಲೋಕಕ್ಕೆ ಹಿತವನ್ನು ಕೋರುವ
ನಿನ್ನ ಮುಖವು ಕಣ್ಣೀರಿನಿಂದ ತುಂಬಿರುವುದು ಮಂಗಳಕರವಾದುದಲ್ಲ.
ಅಜ್ಞಾತವಾಸದಲ್ಲಿಯೂ ಹತ್ತುತಿಂಗಳು ಕಳೆಯಿತು. ಇನ್ನು ಸ್ವಲ್ಪದಿನಗ
ಳಲ್ಲಿಯೇ ಶತ್ರುಗಳನ್ನೆಲ್ಲ ಧ್ವಂಸಮಾಡಿ ರಾಜ್ಯಲಕ್ಷ್ಮಿಯನ್ನು ಕೈಕೊಳ್ಳು
ವೆವು—ಎಂದು ಸಾಂತ್ವವಚನಗಳಿಂದ ಬಹುಮಾನಿಸಿ, ಆಕೆಯ ವಾಸಸ್ಥಾನಕ್ಕೆ
ಕಳುಹಿಸಿ, ತನ್ನಮನೆಗೆ ಹೋದನು. ಕೀಚಕನು ಉಪಕೀಚಕರೊಡನೆ

ಸೈರಂಧ್ರಿಯು ನಿಮಿತ್ತವಾಗಿ ಸಂಹೃತನಾದ ಸಂಗತಿಯು ಮತ್ಸ್ಯಮಹೀಪಾಲನೇ ಮುಂತಾದವರಿಗೆ ವಿದಿತವಾಗಿ ಅಜೇಯನಾಗಿದ್ದ ಸೇನಾಧಿಪತಿಯು ನಷ್ಟನಾದನೆಂದು ಚಿಂತಾಕ್ರಾಂತರಾಗಿ ಆ ಸೈರಂಧ್ರಿಗೆ ಭೀತಿಗೊಂಡಿದ್ದರು. ಈ ವೃತ್ತಾಂತವು ಬೇಹಿನವರಿಂದ ದೇಶದೇಶಗಳಿಗೂ ಹಬ್ಬಿತು.

ಅತ್ತಲು ಗಜಪುರಿಯಲ್ಲಿ ಕೌರವೇಂದ್ರನು ಮಂತ್ರಾಲೋಚನೆಯನ್ನು ಮಾಡಿದ ಪರಿ ಎಂತೆಂದರೆ :—ಪಾಂಡವರಿಗೆ ಅಜ್ಞಾತವಾಸದ ಅವಧಿಯೂ ಕಳೆಯುತ ಬಂದಿತು. ಪ್ರತಿಜ್ಞಾಪಾಲನವನ್ನು ಮಾಡಿಕೊಂಡು ಪುನಃ ಪಾಂಡವರು ಬಂದರೆ ನಮ್ಮೊಡನೆ ಯುದ್ಧವನ್ನು ಮಾಡಿ ತಮ್ಮ ಕೋಪಕ್ಕೆ ಪ್ರತೀಕಾರವನ್ನು ಮಾಡುವರು. ಅದುಕಾರಣ ಅಜ್ಞಾತವಾಸಕಾಲದಲ್ಲಿ ಅವರಿರುವ ತಾಣವನ್ನು ನಾವು ಕಂಡುಹಿಡಿದರೆ, ಅವರ ಶೌರ್ಯರೋಷಾದಿಗಳು ಅಡಗಿ, ಸತ್ಯಧರ್ಮವನ್ನು ತಪ್ಪದೆ ಯಥಾಪ್ರಕಾರ ಕಾಡುಪಾಲಾಗುವರು. ನಾವು ನಿಶ್ಚಿಂತತೆಯಿಂದ ರಾಜ್ಯಭಾರಮಾಡಬಹುದು. ಅವರಿರುವ ಸ್ಥಳವನ್ನು ಕಂಡುಬಂದು ಹೇಳುವುದಕ್ಕಾಗಿ ಆಪ್ತರಾದ ಬೇಹಿನವರು ಅತಿವೇಗವಾದ ಅಶ್ವಗಳ ಮೇಲೆ ಕುಳಿತು ಹೊರಡಲಿ. ಲೋಕವಿಖ್ಯಾತವಾದ ಪರಾಕ್ರಮವನ್ನು ಹೊಂದಿ ಅಜೇಯನಾಗಿದ್ದ ಕೀಚಕನು ಸ್ವೇಚ್ಛೆಯಿಂದ ಕಾಲವಶನಾದುದನ್ನು ಕುರಿತು ಯೋಚಿಸಿದರೆ, ಬಹುಶಃ ಪಾಂಡವರು ವಿರಾಟನಗರದಲ್ಲಿರಬಹುದೆಂದು ತೋರುತ್ತದೆ ನಾವು ಈಗಲೇ ಅಲ್ಲಿಗೆ ಹೋಗಿ ಹೊತ್ತುಗೊತ್ತಿಗೆ ಮೇವಿಲ್ಲದಂತೆ ತುರುಗಳನ್ನೂ ಕರುಗಳನ್ನೂ ಅಗಲಿಸಿದರೆ, ಯುಧಿಷ್ಠಿರನು ಭೋಜನವನ್ನು ಮಾಡುವುದಿಲ್ಲ. ಆಗ ಭೀಮಾರ್ಜುನರು ಅವುಗಳನ್ನು ಬಿಡಿಸಿಕೊಳ್ಳುವುದಕ್ಕೆ ಬರುವರು. ಆ ಸಮಯದಲ್ಲಿ ನಾವು ಅವರನ್ನು ಕಂಡು ಹಿಡಿದರೆ ಪ್ರತಿಜ್ಞಾಭಂಗವನ್ನು ಮಾಡಿದಂತಾಗಿ, ನಮ್ಮ ಇಷ್ಟಾರ್ಥಸಿದ್ಧಿಯೂ ಅನಿಷ್ಟನಿವೃತ್ತಿಯೂ ಆಗುವುದು. ಮತ್ತು ಮತ್ಸ್ಯರಾಯನನ್ನು ಗೆಲ್ಲಲು ಸುಸಮಯವಾಗಿದೆ. ಅದಕ್ಕಾಗಿ ನಾವು ವಿರಾಟನಗರಕ್ಕೆ ದಂಡಯಾತ್ರೆಗಾಗಿ ಹೊರಡಲು ಎಲ್ಲವೂ ಸಿದ್ಧವಾಗಿರಲಿ. ನಾಳೆ ಭೋಜನೋತ್ತರ ಹೊರಡೋಣ—ಎಂದು ನಿಗದಿಮಾಡಿದನು. ಕೌರವರು ಆ ಮಾರನೆಯದಿನ ಬಹುಸಂಭ್ರಮದಿಂದ ಚತುರಂಗಬಲಸಮೇತರಾಗಿ ಮತ್ಸ್ಯದೇಶಕ್ಕೆ ದಾಳಿಯಿಟ್ಟರು. ಆ ಹೊತ್ತಿಗೆ ಸರಿಯಾಗಿ ವಿರಾಟನಗರ

ದಲ್ಲಿದ್ದ ಕೌಂತೇಯರಿಗೆ ಅಜ್ಞಾತವಾಸದ ಒಂದು ವರ್ಷವೂ ಪೂರ್ಣವಾಯಿತು. ತ್ರಿಗರ್ತದೇಶಾಧಿಪತಿಯೂ, ಕೀಚಕನಿಂದ ಅನೇಕವೇಳೆ ಪರಾಜಿತನಾದವನೂ, ಮತ್ಸ್ಯರಾಯನ ಮಹಾವೈರಿಯೂ ಆದ ಸುಶರ್ಮನು ಕೌರವೇಶ್ವರನ ಇಷ್ಟದಂತೆ ವಿರಾಟನಗರದ ದಕ್ಷಿಣದಿಕ್ಕಿನಲ್ಲಿ ಮೊದಲು ಗೋಗ್ರಹಣವನ್ನು ಮಾಡುವುದಕ್ಕಾಗಿ ಅಗಣಿತಸೈನ್ಯಸಮೇತ ಹೊರಟು ರಣದಲ್ಲಿ ಜಯಶೀಲನಾಗಿ ವಿರಾಟರಾಯನನ್ನು ಕೈಸೆರೆ ಹಿಡಿದು, ಗೋವುಗಳನ್ನು ಕಟ್ಟಿಸಿದನು. ಧರ್ಮಜನು ಆ ದುಃಖವಾರ್ತೆಯನ್ನು ಕೇಳಿ, ಕನಿಕರಗೊಂಡು ಶತ್ರುಭಯಂಕರನಾದ ಭೀಮಸೇನನನ್ನು ನೋಡಿ " ಎಲೈ ವತ್ಸನೇ ! ಸುಶರ್ಮನ ಕೈಗೆ ಸಿಕ್ಕಿ ಕಷ್ಟಪಡುತ್ತಿರುವ ವಿರಾಟರಾಯನನ್ನು ಬಿಡಿಸಿಕೊ. ಇಷ್ಟು ದಿನಗಳೂ ಈತನಿಂದ ಪೋಷಿತರಾದೆವು. ಪ್ರತ್ಯುಪಕಾರಕ್ಕೆ ಸುಸಮಯವಾಗಿದೆ—ಎಂದು ಸೂಚಿಸಿದನು. ಭೀಮನು ಪಾಳೆಯದ ರಕ್ಷಣೆಗೆ ನಕುಲಸಹದೇವರನ್ನು ಇರಿಸಿ, ಅಗ್ರಜನಿಗೆ ಯುದ್ಧವಿನೋದವನ್ನು ನೋಡುತಿರುವಂತೆ ಅರಿಕೆಮಾಡಿ ವಿರಾಟನ ದಿವ್ಯರಥವನ್ನೇರಿ ಧನುಸ್ಸನ್ನು ತೆಗೆದುಕೊಂಡು ತ್ರಿಗರ್ತರಮೇಲೆ ಯುದ್ಧಕ್ಕೆ ನಿಂತು ಗರುಡನು ಕ್ರೂರಸರ್ಪವನ್ನು ಹಿಡಿಯುವಂತೆ ಸುಶರ್ಮನನ್ನು ಹಿಡಿದು, ಅವನ ಸೈನ್ಯವನೆಲ್ಲವನ್ನು ಪೆಟ್ಟಿಕ್ಕಿ ಪಲಾಯನಗೊಳಿಸಿ, ವಿರಾಟರಾಯನನ್ನು ಬಿಡಿಸಿಕೊಂಡು, ಶತ್ರುಗಳ ರಥಗಜತುರುಗಮಣಿಭೂಷಣಾದಿಗಳನ್ನು ಸೂರೆಗೊಳಿಸಿ ಗೋವುಗಳನ್ನು ತಿರುಗಿಸಿಕೊಂಡು ಜಯಭೇರೀನಿನಾದದೊಡನೆ ಸಹೋದರರ ಕೂಡ ಹಿಂತಿರುಗಿ ಬಂದನು !

ರಾಣಿವಾಸದಲ್ಲಿ ಬೃಹನ್ನಳೆ ಎಂಬ ಹೆಸರಿಂದಿದ್ದ ಅರ್ಜುನನು ಒಂದು ವರ್ಷದಿಂದ ಉಪವಾಸವಾಗಿರುವ ತನ್ನ ಭುಜಗಳಿಗೆ ಪಾರಣೆಯನ್ನು ಮಾಡಲೆಣಿಸಿ, ಭೀರುವಾದ ಉತ್ತರನನ್ನೇ ಸಾರಥಿಯನ್ನಾಗಿ ಮಾಡಿಕೊಂಡು ಬಚ್ಚಿಟ್ಟಿದ್ದ ಆಯುಧಗಳನ್ನು ತೆಗೆದುಕೊಂಡು, ಉತ್ತರಗೋಗ್ರಹಣದ ಯುದ್ಧಾರಂಭದಲ್ಲಿ, ಭೀಷ್ಮದ್ರೋಣರಿಗೆ ನಮಸ್ಕಾರಾರ್ಥವಾಗಿ ಅವರ ಪಾದಗಳ ಮೇಲೆ ಬಾಣಪ್ರಯೋಗವನ್ನು ಮಾಡಿ, ಸಕಲರಾಜಸಮೂಹವನ್ನು ಸೇನೆಯೊಡನೆ ಸೋಲಿಸುತ, ಕೊನೆಗೆ ಸಮ್ಮೋಹನಾಸ್ತ್ರವನ್ನು ಉಪಯೋಗಿಸಿ ರಾಜಪುತ್ರಿಗಾಗಿ ಕೌರವರ ವಸ್ತ್ರಾಭರಣಾದಿಗಳನ್ನು ತೆಗೆಯಿಸಿಕೊಂಡು,

ರಾಜಧಾನಿಗೆ ಹಿಂತಿರುಗಿದನು. ವಿರಾಟರಾಯನು ತನ್ನ ಮಗನಾದ ಉತ್ತರನು ಒಬ್ಬನೇ ಯುದ್ಧಕ್ಕೆ ಹೋಗಿರುವುದನ್ನು ಕೇಳಿ ಚಿಂತಿಸುತ್ತಿರಲು, ಯುಧಿಷ್ಠಿರನು ಅವನಿಗೆ ಧೈರ್ಯವನ್ನು ಹೇಳಿ ಸಮಾಧಾನಪಡಿಸುವ ಸಂದರ್ಭದಲ್ಲಿ ಉತ್ತರನನ್ನು ಪ್ರಶಂಸಿಸದೆ, ಅರಮನೆಯಿಂದ ಆತನ ಸಾರಥಿಯಾಗಿ ಹೋಗಿರುವ ಬೃಹನ್ನಳೆಯ ಪರಾಕ್ರಮವನ್ನು ಹೊಗಳಿದನು. ವಿರಾಟನು ಅದಕ್ಕೆ ಕೋಪಗೊಂಡು ನೆತ್ತದಿಂದ ಧರ್ಮರಾಯನ ತಲೆಯಮೇಲೆ ಹೊಡೆದನು! ದ್ರೌಪದಿಯು, ಮತ್ಸ್ಯಮಹೀಪಾಲನ ಶ್ರೇಯಸ್ಸಿಗೆ ಕುಂದಕ ಬಾರದಂತೆ ಮಾಡುವುದಕ್ಕಾಗಿ, ಧರ್ಮಜನ ರಕ್ತವು ನೆಲಕ್ಕೆ ಬೀಳದ ಹಾಗೆ, ತನ್ನ ಸೆರಗಿನಿಂದ ತಡೆದಳು! ಅಷ್ಟರಲ್ಲಿ ಉತ್ತರನು ವಿಜಯನೊಡನೆ ದಿವ್ಯವೈಭವದಿಂದ ಅರಮನೆಗೆ ಹೋಗಿ ತನ್ನ ತಂದೆಗೆ ವಂದಿಸಿ, ಯುದ್ಧ ವೃತ್ತಾಂತವನ್ನು ತಿಳಿಯಿಸಿದನು. ಭೀಮಾರ್ಜುನರು, ತಮ್ಮ ಅಣ್ಣನನ್ನು ವಿರಾಟನು ದಾಳದಿಂದ ಬಡಿದು ರಕ್ತಸುರಿಸಿ ನೋಯಿಸಿದುದಕ್ಕೆ ತಕ್ಕ ಪ್ರತೀಕಾರವನ್ನು ಮಾಡಬೇಕೆಂದಿರಲು; ಉಪಶಾಂತನಾದ ಧರ್ಮರಾಯನು ಅವರನ್ನು ಸಮಾಧಾನಗೊಳಿಸಿ, „ಅಜ್ಞಾತವಾಸದ ಅವಧಿಯು ತೀರಿದುದರಿಂದ ನಾಳೆಯ ಪ್ರಾತಃಕಾಲ ಮಂಗಳಸ್ನಾನವನ್ನು ಮಾಡಿ, ರಾಜಯೋಗ್ಯಂಗಳಾದ ನೂತನ ವಸ್ತ್ರ ಗಂಧ ಪುಷ್ಪಾದ್ಯಾಭರಣಗಳಿಂದ ಅಲಂಕೃತರಾಗಿ ಸಿಂಹಾಸನಾಸೀನರಾಗಿ ಇರೋಣ" ಎಂದು ಗೊತ್ತುಮಾಡಿಕೊಂಡರು. ಅದರಂತೆ ಪುಣ್ಯ ಚರಿತ್ರರಾದ ಪಾಂಡವರು ಪತ್ನೀಸಮೇತರಾಗಿ ನೃಪಾಸನದಲ್ಲಿರುವಾಗ, ವಿರಾಟರಾಜನು ತನ್ನ ಪುತ್ರನಿಂದ ಅವರ ವೃತ್ತಾಂತವನ್ನು ತಿಳಿದು ಭಯಭಕ್ತಿಯಿಂದ ಅವರಿಗೆ ದಂಡವತ್ಪ್ರಣಾಮವನ್ನು ಮಾಡಿ, ತನ್ನ ಅಪರಾಧವೇನಿದ್ದರೂ ಕ್ಷಮಿಸಿ ಕಾಪಾಡುತ್ತಿರಬೇಕೆಂದು ಬೇಡಿಕೊಂಡು ಬಹುವಾಗಿ ಸನ್ಮಾನಿಸಿದನು. ದೈವಾಧೀನತೆಯಿಂದ ನೀವು ವನವಾಸವನ್ನೂ ಅಜ್ಞಾತವಾಸವನ್ನೂ ನೆರವೇರಿಸಿ ಕೌರವರಿಗೆ ಮುಖಭಂಗವನ್ನು ಮಾಡಿ ಕ್ಷೇಮದಿಂದಿರುವುದು ನಮ್ಮ ಭಾಗ್ಯವಿಶೇಷವೆಂದೂ, ಈ ರಾಜ್ಯಕೋಶಂಗಳೆಲ್ಲವೂ ನಿಮ್ಮ ಅಧೀನವೆಂದೂ, ಹೇಳಿ ತಿರಿಗೂ ಉಪಚರಿಸಿದನು! ವಾಚಕರೇ, ಹೀಗೆ ಅರಿಷಡ್ವರ್ಗವನ್ನು ಜಯಿಸಿದವನು ತನ್ನ ಉದ್ದೇಶವು ನೆರವೇರುವವರೆಗೂ ಅವ್ಯಕ್ತನಾಗಿದ್ದು, ಅದು ಸಿದ್ಧಿಸಿದ ಬಳಿಕ ವ್ಯಕ್ತನಾಗಿರಬೇಕೆಂಬುದು ಪಾಂಡವರ ಅಜ್ಞಾತವಾಸ

ಕಥಾದೃಷ್ಟಾಂತಗಳಿಂದ ಅರಿಯಬಹುದಲ್ಲವೇ? ಈ ರೀತಿಯಾಗಿ ೧೩ ವರುಷಗಳು ಕಳೆಯಲು, ಪಾಂಡವರು ಮತ್ಸ್ಯರಾಯನಿಂದ ಸನ್ಮಾನಿತರಾಗಿ ಆತನ ರಾಜ್ಯಕ್ಕೆ ಸೇರಿದ ಉಪಪ್ಲಾವ್ಯ ಪಟ್ಟಣದಲ್ಲಿ ರಾಜಭೋಗದಿಂದ ಸುಖವಾಗಿದ್ದರು. ಆಗ ವಿರಾಟರಾಜನು ಪಾಂಡವರೊಡನೆ ಬಂಧುತ್ವವನ್ನು ಬೆಳಯಿಸಬೇಕೆಂದು ಆಲೋಚಿಸಿ ತನ್ನ ಪುತ್ರಿಯಾದ ಉತ್ತರೆಯನ್ನು ಅರ್ಜುನನಿಗೆ ಕೊಟ್ಟು ವಿವಾಹಮಾಡಬೇಕೆಂಬ ತನ್ನ ಕೋರಿಕೆಯನ್ನು ಧರ್ಮರಾಜನಲ್ಲಿ ಅರಿಕೆಮಾಡಿದನು. ಸವ್ಯಸಾಚ್ಯಕಾರಿಯಾದ ಅರ್ಜುನನು—ಎಲೈ ರಾಯನೇ! ಉತ್ತರಾದೇವಿಗೆ ನಾನು ಉಪಾಧ್ಯಾಯನಾಗಿದ್ದೆನು. ಆಕೆಯು ನನಗೆ ಪುತ್ರೀಸಮಾನಳಾದುದರಿಂದ ನನ್ನ ಸೊಸೆಯನ್ನಾಗಿ ಮಾಡಿಕೊಳ್ಳಬಹುದಾಗಿದೆ—ಎಂದನು ರಾಜನು 'ಹಾಗೆಯೇ ಆಗಲಿ' ಎಂದು ಹೇಳಿ, ವಿವಾಹಮಹೋತ್ಸವಕ್ಕಾಗಿ ತಕ್ಕಸನ್ನಾಹದಲ್ಲಿ ಆಸಕ್ತನಾಗಿದ್ದನು. ಆಗ ಧರ್ಮರಾಯನು ದ್ವಾರಕಿಗೆ ಹೇಳಿಕಳುಹಿಸಿ ಚಕ್ರಪಾಣಿಯಾದ ವಾಸುದೇವನನ್ನು ಅಭಿಮನ್ಯುವಿನ ವಿವಾಹಕ್ಕೆ ಕರೆಯಿಸಿದನು. ಅಗಣಿತ ಚತುರಂಗಬಲದೊಡನೆ ಬಲಭದ್ರನು, ಸುಭದ್ರಾದೇವಿಯನ್ನೂ ಅಭಿಮನ್ಯುವನ್ನೂ ಕರೆದುಕೊಂಡು ಉಪಪ್ಲಾವ್ಯಕ್ಕೆ ಬಂದನು, ಉಪಪಾಂಡವರೊಡನೆ ಪಾಂಚಾಲರಾಯನು ೩ ಅಕ್ಷೋಹಿಣೀ ಸೇನಾಸಮೇತನಾಗಿ, ಪಯಣ ಹೊರಟು ಪಾಂಡವರ ಬಳಿಗೆ ಸೇರಿದನು. ಹೀಗೆ ಪಾಂಡವ ಹಿತೈಷಿಗಳೆಲ್ಲರೂ ಉಪಪ್ಲಾವ್ಯನಗರಕ್ಕೆ ಹೋಗಿ ಕೌಂತೇಯರನ್ನು ಬಹುವಿಧವಾಗಿ ಉಪಚರಿಸುತಲಿದ್ದರು. ಆ ಬಳಿಕ ಸುಮುಹೂರ್ತದಲ್ಲಿ ಜಗದ್ವಿಖ್ಯಾತನಾದ ಅಭಿಮನ್ಯುವಿಗೆ ಉತ್ತರಾದೇವಿಯನ್ನು ಕೊಟ್ಟು ಅತ್ಯಂತವೈಭವದಿಂದ ವಿವಾಹ ಮಂಗಳಕಾರ್ಯವನ್ನು ಬೆಳೆಯಿಸಿ, ಸಮಸ್ತ ಬಂಧುಜನಗಳೊಸೇರಿ ಸಂತುಷ್ಟಾಂತಃಕರಣರಾಗಿದ್ದರು.

## ಅಧ್ಯಾಯ ೮.

ಬಂದುದಿನ, ಅನೇಕ ಸಾಮಂತರಾಜರುಗಳಿಂದಲೂ ಬಂಧುಬಳಗಗಳಿಂದಲೂ ಕೂಡಿದವನಾಗಿ ಭದ್ರಾಸನದಲ್ಲಿ ಕುಳಿತು ಜಿಡ್ಡೋಲಗದಲ್ಲಿರುವ ಧರ್ಮರಾಯನನ್ನು ಕೃಪೆಯಿಂದ ನೋಡುತ ದಿವ್ಯಕನಕಾಸನದಲ್ಲಿರುವ ಶ್ರೀ

ಕೃಷ್ಣನು—ಎಲೈ ಸಭ್ಯರುಗಳಿರಾ ! ಸುಚರಿತ್ರರಾದ ಪಾಂಡವರು ಭೂಮಂಡಲವನ್ನೆಲ್ಲ ಜಯಿಸುವುದಕ್ಕೆ ಸಮರ್ಥರಾದರೂ ಜ್ಞಾತಿಗಳ ವಂಚನೆಗೆ ಸಿಕ್ಕಿ ರಾಜ್ಯಸಂಪತ್ತನ್ನು ಕಳೆದುಕೊಂಡು ಇದುವರಿಗೆ ಅನುಭವಿಸಿದ ಕಷ್ಟದ ತೆರವು ನಿಮಗೆಲ್ಲರಿಗೂ ತಿಳಿದ ಸಂಗತಿಯೇ ಆಗಿದೆ. ಕೌಂತೇಯರು ಧರ್ಮದಿಂದ ದೊರೆಯುವ ಒಂದು ಗ್ರಾಮಕ್ಕಾದರೂ ಪ್ರಭುಗಳಾಗಿರುವುದಕ್ಕೆ ಒಡಂಬಡುವರೇ ಹೊರತು ಅಧರ್ಮದಿಂದ ಬರುವ ತ್ರಿಲೋಕಾಧಿಪತ್ಯಕ್ಕೂ ಒಡಂಬಡರು. ಪರಿಜನರಹಿತರಾಗಿರುವ ಪಾಂಡವರು ಕಪಟೋಪಾಯವುಳ್ಳ ಕೌರವರನ್ನು ಈಗ ಜಯಿಸಲಾಪರೆ ಎಂದರೆ, ತಮ್ಮ ಪ್ರತಿಜ್ಞೆಯನ್ನು ಸಾರ ಮಾಡುವುದಕ್ಕೆ ಸಂಶಯವಿಲ್ಲ. ಆದರೆ ಜೂಜಿನಲ್ಲಿ ರಾಜ್ಯವನ್ನು ಪಡೆದು, ದುರಹಂಕಾರದಿಂದಿರುವ ಕೌರವರ ಅಭಿಮತವನ್ನು ತಿಳಿಯುವುದಕ್ಕಾಗಿ ಬುದ್ಧಿವಂತನಾದ ಒಬ್ಬನಿಯೋಗಿಯನ್ನು ಹಸ್ತಿನಾವತಿಗೆ ಕಳುಹಿಸಬೇಕು —ಎಂದು ಹೇಳಿದುದಕ್ಕೆ ಬಲಭದ್ರಪ್ರಮುಖರೆಲ್ಲರೂ ಅನುಮೋದಿಸಿದರು. ಆ ಬಳಿಕ ವಾಸುದೇವನು ರಾಜನೀತಿಯನ್ನು ಹೇಳಿ ದ್ವಾರಕೆಗೆ ಹೊರಟು ಬಂದನು. ಅತ್ತಲಾಗಿ ದುರ್ಯೋಧನನು—'ಉತ್ತರಗೋಗ್ರಹಣದಲ್ಲಿ ಅರ್ಜುನನಿಂದ ನಾವು ರಣಪರಾಜಿತರಾದಾಗ, ಅಜ್ಞಾತವಾಸದ ಸಂವತ್ಸರವು ಪೂರ್ಣವಾಗಿರಲಿಲ್ಲ. ಆದುದರಿಂದ ಕೌಂತೇಯರನ್ನು ಮರಳಿ ಕಾಡಿಗೆ ಅಟ್ಟಬೇಕೆಂದೂ, ಧರ್ಮರಾಯನು ಹತಪ್ರತಿಜ್ಞನಾದನೆಂದೂ, ಬೇಕಾದರೆ ಲೆಕ್ಕ ಮಾಡಿತೋರಿಸುವೆನೆಂದೂ,—ಹೇಳುತ್ತಿದ್ದನು. ಆಗ ಶಾಂತನವನು ಕೌರವರನ್ನು ಕುರಿತು—“ಸೌರಚಾಂದ್ರಮಾನದ ಸಂವತ್ಸರಗಳಿಗಿರತಕ್ಕ ವ್ಯತ್ಯಾಸವನ್ನು ತೋರ್ಪಡಿಸಿ, ಧನಂಜಯನನ್ನು ನಾವು ಕಂಡವೇಳೆಗೆ ಸಾವನದಿಂದ ಪ್ರತಿಜ್ಞಾಹಾನಿಯಿಲ್ಲದೆ ೧೩ ವರುಷಗಳೂ ಪೂರ್ಣವಾಗಿ ನೆರವೇರಿದ್ದಿತೆಂದೂ, ಪಾಂಡವರು ಬ್ರಹ್ಮಲೋಕದ ಆಧಿಪತ್ಯಕ್ಕಾದರೂ ಅಧರ್ಮವನ್ನಾಚರಿಸತಕ್ಕವರಲ್ಲವೆಂದೂ, ಅವರಿಗೆ ಅರ್ಧರಾಜ್ಯವನ್ನು ಕೊಡದೆ ದಕ್ಕಿಸಿಕೊಳ್ಳುವುದಕ್ಕಾಗುವುದಿಲ್ಲವೆಂದೂ,''—ಖಚಿತವಾಗಿ ಹೇಳಿದನು. ಅದನ್ನು ಕೇಳಿದ ದುರ್ಯೋಧನನು ಆಸ್ಥಾನದಲ್ಲಿ ಎಲ್ಲರ ಇದುರಿಗೂ—ಪಾಂಡವರು ಪ್ರತಿಜ್ಞೆಯನ್ನು ನೆರವೇರಿಸಿಕೊಂಡರೂ ನಾನು ರಾಜ್ಯವನ್ನೆಂದಿಗೂ ಅವರಿಗೆ ಖಂಡಿತವಾಗಿ ಕೊಡುವುದಿಲ್ಲ—ಎಂದನು. ಧೃತರಾಷ್ಟ್ರನು ತನ್ನ ಕುತನಯನ

ದುರ್ಬುದ್ಧಿಗೆ ಚಿಂತಿಸುತ, ಶತ್ರುಸಂಹಾರಕನಾದ ಭೀಮಸೇನನ ಪರಾಕ್ರಮವನ್ನು ಸ್ಮರಿಸಿ, ಸಭಾಸ್ಥಾನದಲ್ಲಿ—“ ರಥಿಕಶ್ರೇಷ್ಠರೆಲ್ಲರೂ ಯುದ್ಧಕ್ಕೆ ಸೇರಿದರೆ ಅವರೆಲ್ಲ ಒಂದುಪಾಲು, ಸಮರಾಗಮವನ್ನೇ ಮಹೋತ್ಸವವನ್ನಾಗಿ ತಿಳಿದಿರುವ ಭೀಮನೊಬ್ಬನೇ ಒಂದುಪಾಲು ; ನಾನು ಅವನ ಪರಾಕ್ರಮವನ್ನು ನೆನೆನೆನೆದು ಹೆಬ್ಬುಲಿಯನ್ನು ನೋಡಿದ ಹುಲ್ಲೆಯಂತೆ ಹೆದರಿ, ರಾತ್ರಿಯ ಹೊತ್ತು ನಿದ್ದೆಮಾಡದೆ ಚಿಂತಾಕ್ರಾಂತನಾಗಿದೇನೆ. ಅವನು ಸ್ವಭಾವತಃ ಅಸಹಾಯಶೂರನಾಗಿಯೂ, ಮಿತಭಾಷಿಯಾಗಿಯೂ, ಮಹಾಬಾಹುವಾಗಿಯೂ, ಘೋರವಾದ ಧ್ವನಿಯುಳ್ಳವನಾಗಿಯೂ, ಕ್ರೂರವಾದ ನೋಟವುಳ್ಳವನಾಗಿಯೂ, ಮಹಾವೇಗವುಳ್ಳವನಾಗಿಯೂ, ಭಯಂಕರವಾದ ಮುಖವುಳ್ಳವನಾಗಿಯೂ, ವಿನೋದಕ್ಕೂ ನಗದಿರುವವನಾಗಿಯೂ, ಇರುವನು. ದೊಡ್ಡದಾಗಿ ಉಕ್ಕಿನಿಂದ ಮಾಡಲ್ಪಟ್ಟು, ಚಿನ್ನದಿಂದಲಂಕೃತವಾಗಿಯೂ, ಎಂಟು ಅಂಚುಗಳಿಂದ ಪ್ರಕಾಶಿಸುತ ದೃಢತರವಾಗಿಯೂ, ಪರ್ವತವನ್ನೂ ಒಂದೇ ಏಟಿಗೆ ಪುಡಿಪುಡಿಮಾಡತಕ್ಕುದಾಗಿಯೂ, ಯಮದಂಡದಂತೆ ಮತ್ತೊಬ್ಬರು ಹಿಡಿಯುವದಕ್ಕಸಾಧ್ಯವಾದುದಾಗಿಯೂ, ಇರುವ ಗದಾದಂಡವನ್ನು ಹಿಡಿದು ಬರುವ ಭೀಮನು ಮೃಗಸಮೂಹವನ್ನು ಹೊಕ್ಕ ಸಿಂಹದಂತೆ, ನನ್ನ ಕುಮಾರಕರ ಮಧ್ಯದಲ್ಲಿ ನುಗ್ಗಿ ಅವರೆಲ್ಲರನ್ನೂ ಸಂಹರಿಸದೆ ಬಿಡುವನೇ ? ಅವನು ಬಾಲ್ಯದಲ್ಲಿ ಆಟವಾಡುವಾಗ ನನ್ನ ಪುತ್ರರೆಲ್ಲರೂ ಒಟ್ಟಾಗಿ ಸೇರಿ, ಆತನನ್ನು ಕೆಣಕಿ ಪೀಡಿತರಾಗಿದ್ದರೂ, ಅಮಾನುಷವಾದ ಅವನ ಪರಾಕ್ರಮವನ್ನರಿಯದೆ, ದ್ರೋಹಮಾಡುತ ಬಂದರು. ಅದುಕಾರಣ ಇಂತಹ ವೈರವು ವೃದ್ಧಿಗೆ ಬರಲು ಹೇತುವಾಯಿತು. ಅವನು ಕಠೋರಹೃದಯನಾಗಿ ಕೌರವರ ದ್ರೋಹಕ್ಕೆ ತಕ್ಕುದನ್ನು ಮಾಡುವನೇ ಹೊರತು ಸಂಧಿಯನ್ನು ಎಂದಿಗೂ ಅಂಗೀಕರಿಸನು. ದೇವಕೀನಂದನನಾದ ಶ್ರೀಕೃಷ್ಣನ ಬಲದಿಂದ ಭೋಜಾಂಧಕರೂ, ಭೀಷ್ಮನ ಪ್ರತಾಪದಿಂದ ಕೌರವರು ಹೊರತಾಗಿ ಮಿಕ್ಕ ಮಹೀಪತಿಗಳೆಲ್ಲರೂ, ಜರಾಸಂಧನಿಂದ ನಿಗ್ರಹಿಸಲ್ಪಟ್ಟಿದ್ದರು. ಅಂತಹ ವೀರನನ್ನು ಭುಜಬಲದಿಂದಲೇ ಸಂಹರಿಸಿದ ವೀರಕೇಸರಿಯಾದ ಭೀಮನ ಮುಂದೆ ಯುದ್ಧಕ್ಕೆ ನಿಂತು ಬದುಕಿಬರುವ ಗಂಡಸರು ಯಾರು ? ಬಲದಲ್ಲಿ ವಾಯುದೇವನಿಗೂ, ಲಂಘನದಲ್ಲಿ ಆಂಜನೇಯನಿಗೂ,

ಧನುರ್ವಿದ್ಯೆಯಲ್ಲಿ ದ್ರೋಣಾರ್ಜುನರಿಗೂ, ಗದಾಯುದ್ಧದಲ್ಲಿ ಬಲಭದ್ರನಿಗೂ, ಸಮನಾದ ಪವನಪುತ್ರನು ಎದುರಾದವರನ್ನು ಯುದ್ಧಸಾಧನಗಳಿಲ್ಲದೆ ಬಡಿಯುವನೆಂಬಲ್ಲಿ, ಭಯಂಕರವಾದ ಗದಾದಂಡವನ್ನು ಧರಿಸಿ, ಯುದ್ಧಕ್ಕೆ ನಿಂತರೆ ಪುತ್ರಮಿತ್ರಾಮಾತ್ಯಾನುಚರರೊಡನೆ ದುರ್ಯೋಧನನು ಹೆದರಿ ಓಡುವನೇ ಹೊರತು ಧೈರ್ಯದಿಂದ ನಿಂತು ಹೋರುವನೇ? ಭೀಮನಾದರೋ! ಪ್ರಾಣಾನಪಿ ಪರಿತ್ಯಜ್ಯ ಮಾನೋ ರಕ್ಷ್ಯಸ್ಸದಾನೃಭಿಃ |

ಅನಿತ್ಯೋ ಭವತಿ ಪ್ರಾಣೋ ಮಾನ ಆಚಂದ್ರತಾರಕಂ ||

ಎಂಬ ತನ್ನ ಪ್ರತಿಜ್ಞೆಯಂತೆ ಹಿಮ್ಮೆಟ್ಟದೇ ನಿಂತು ಯುದ್ಧಮಾಡಿ ಜಯಿಸುವುದರಲ್ಲಿ ಸಂದೇಹವಿಲ್ಲ. 'ವಿನಾಶಕಾಲೇ ವಿಪರೀತಬುದ್ಧಿಃ' ಎಂಬ ಲೋಕೋಕ್ತಿಯಂತೆ, ಯುಧಿಷ್ಠಿರನೊಡನೆ ಜೂಜಾಡುವುದು—ಸರಿಯಲ್ಲವೆಂದು ಮಹಾತ್ಮನಾದ ವಿದುರನು ನನಗೆ ಹೇಳಿದಾಗ ಚಾಡಿಹೇಳಿದಂತೆ ತೋರಿತು. ಲೋಕದಲ್ಲಿರುವ ಜನರಿಗೆಲ್ಲರಿಗಿಂತಲೂ ಚೋಟುದ್ದ ಅಧಿಕವಾದ ಶರೀರಪ್ರಮಾಣವುಳ್ಳವರಾಗಿ ಶ್ರೇಷ್ಠವಾದ ಅವಯವಗಳುಳ್ಳವರೂ, ಬ್ರಹ್ಮಚರ್ಯವ್ರತವುಳ್ಳವರೂ, ತಪೋಧನರೂ, ಪುರುಷಶ್ರೇಷ್ಠರೂ, ವೇದದಲ್ಲಿಯೂ, ಶಾಸ್ತ್ರಗಳಲ್ಲಿಯೂ, ಯುದ್ಧದಲ್ಲಿಯೂ ಅಮಾನುಷವಾದ ಶಕ್ತಿಯನ್ನು ತೋರಿಸತಕ್ಕವರೂ, ಆದ ಪಾಂಡವರು ಜಯಶೀಲರಾಗುವರೆಂದು ನಾನು ತಿಳಿದಿದ್ದರೂ, ಬುದ್ಧಿಹೀನರಾದ ನನ್ನ ಮಕ್ಕಳನ್ನು ಯುದ್ಧಕ್ಕೆ ಹೋಗಬೇಡಿ—ಎಂದು ಹೇಳಲಾರೆನು. ಆದುದರಿಂದ ಪೌರುಷಕ್ಕಿಂತಲೂ ದೈವಬಲವೇ ದೊಡ್ಡದು. ಜ್ಞಾನವಧಿಕವಾಗಿದ್ದರೂ ಅದು ದೈವ ಬಲದಿಂದ ದುಃಖಧ್ವಂಸವನ್ನು ಮಾಡಲಾರದು. ವಿಷಯಾಭಿಲಾಷೆಯಿಲ್ಲದ ಬ್ರಹ್ಮನಿಷ್ಠರು ಕೂಡ, ಪ್ರಾಪ್ತವಾಗುವ ಸುಖದುಃಖಗಳನ್ನು ಲೋಕರೀತಿಯನ್ನನುಸರಿಸಿ, ಅನುಭವಿಸುವುರೆಂಬಲ್ಲಿ ಪುತ್ರಪೌತ್ರಕಳತ್ರಾದಿಗಳಲ್ಲಿ—ಅತ್ಯಾಸಕ್ತನಾದ ನನಗೆ ದುಃಖವು ಹೇಗೆ ತಪ್ಪುವುದು? ಐಶ್ವರ್ಯಾಭಿಲಾಷೆಯಿಂದ ಕಪಟದ್ಯೂತವನ್ನಾಡಿದ ದುರ್ಯೋಧನನು ನಮ್ಮ ಕುಲಕ್ಕೆ ಭೀಮನೆಂಬ ಮೃತ್ಯುವನ್ನು ಕರೆದು ಆಪತ್ತನ್ನು ತಂದುಬಿಟ್ಟನು. ಕಾಲಾಧೀನನಾದ ಮಾನವನು ಸಂಸಾರವೆಂಬ ಗಾಡಿಯಲ್ಲಿ ವೃಥಾ ತಿರುಗುತಿರುವನೇ ಹೊರತು ತಪ್ಪಿಸಿಕೊಳ್ಳ

ಲಾರನು. ನನ್ನ ಅವಸ್ಥೆಯು—' ಆಮುರಣಾತ್ಕಿಂಶಲ್ಯಂ? ಪ್ರಚ್ಛನ್ನಂ ಯತ್ಕೃತಂ ಪಾಪಂ' ಎಂಬಂತೆ ಪರಿಣಮಿಸಿ ಕೊರಗುತಿದೇನೆ. ವೈರಿಗಳು ತನ್ನನ್ನು ಯುದ್ಧಕ್ಕೆ ಕರೆಯುವುದನ್ನೇ ವರಪ್ರದಾನವೆಂದು ತಿಳಿದಿರುವ ಭೀಮನು ತನ್ನ ಪ್ರತಿಜ್ಞೆಯಂತೆ ನನ್ನ ಒಂದುನೂರುಮಂದಿಅಣುಗರ ನ್ನೂ ಕೊಂದರೆ, ಅಂತಃಪುರಸ್ತ್ರೀಯರೆಲ್ಲರೂ ಕ್ಲೇಶಪಡುವಾಗ ಆ ದುಃಖವ ನ್ನು ಹೇಗೆಸಹಿಸಲಿ! ಕಾಳ್ಕಿಚ್ಚಿಗೆ ಸಹಾಯವಾಗಿಬರುವ ಬಿರುಗಾಳಿಯಂತಿ ರುವ ಪನ್ನಗಾಶನವಾಹನನಾದ ಶ್ರೀ ಕೃಷ್ಣನೇ ಸಹಾಯನಾಗಿ ಉಳ್ಳ ಧನಂ ಜಯನು :—

ಆಮಂತ್ರಣೋತ್ಸವಾವಿಪ್ರಾ ಗಾವ್ರೋ ನವತೃಣೋತ್ಸವಾಃ ।
ಭರ್ತಾಗಮೋತ್ಸವಾನಾರ್ಯಸ್ಸೋಹಂ ಕೃಷ್ಣ ರಣೋತ್ಸವಃ ॥

ಎಂಬ ತನ್ನ ವಚನದಂತೆ ಗಾಂಡೀವವನ್ನು ಹಿಡಿದು ಬಂದರೆ, ನನ್ನ ಅಸಂ ಖ್ಯಾತವಾದ ಚತುರಂಗಬಲವೂ ನಾಶವಾಗುವುದು. ಜ್ಞಾನಶೂನ್ಯರಾದ ನನ್ನ ಪುತ್ರರೆಲ್ಲರೂ ನಾನು ಬೇಡವೆಂದು ಎಷ್ಟುಮೊರೆಯಿಕ್ಕಿದರೂ, ಕೇಳದೆ ಪಾಂಡವರೊಡನೆ ಯುದ್ಧಮಾಡುವುದಕ್ಕೆ ಕಾಲನ್ನು ಕೆರೆಯುತಿರುವರು. ಏನುಮಾಡಲಿ"—ಎಂದು ಗೋಳಾಡಿ, ಸಂಜಯನನ್ನು ಪಾಂಡವರ ಬಳಿಗೆ ರಾಯಭಾರಕ್ಕೆ ಕಳುಹಿಸಿ, ವಿದುರನು ಹೇಳಿದ ದಂಡನೀತಿಯನ್ನು ಕೇಳಿ ಮಿಡುಕಾಡುತ್ತಿದ್ದನು. ಆಗ ಸನತ್ಸುಜಾತರೆಂಬ ಬ್ರಹ್ಮರ್ಷಿಗಳು ಆಸ್ಥಾ ನಕ್ಕೆ ಹೋಗಿ ಧೃತರಾಷ್ಟ್ರನನ್ನು ಕಂಡು ಅವನಿಂದ ಪೂಜಿತರಾಗಿ ಬ್ರಹ್ಮ ವಿದ್ಯೆಯನ್ನು ಉಪದೇಶಿಸಿದರು. ಕೌರವರಾಯನು ಮಾಡಬೇಕಾದ ಮುಂದಿನ ಕಾರ್ಯವನ್ನು ಆಪ್ತರಿಗೆ ಅರುಹಿ, ಶ್ರೀಕೃಷ್ಣನನ್ನು ಒಳಗುಮಾಡಿಕೊಳ್ಳಲು ಗುಟ್ಟಿನಿಂದ ದ್ವಾರಕೆಗೆ ಹೋದನು. ಅದನ್ನು ತಿಳಿದ ಅರ್ಜುನನೂ ಬೇಗನೆ ಅಲ್ಲಿಗೆ ಹೋಗಿರಲು ; ವಾಸುದೇವನು ಅವರನ್ನುಪಚರಿಸಿ, ಅವರು ಬಂದಿ ರುವ ಕಾರ್ಯವನ್ನರಿತು—ಎಲೈ ಕುರುವೀರರುಗಳಿರಾ! ಯುದ್ಧವನ್ನು ಮಾಡ ದಿರುವ ನಾನೊಬ್ಬನೇ ಒಂದು ಪಕ್ಷ. ಸೇನಾಧಿಪತಿಯಾದ ಕೃತವರ್ಮನೊ ಡನೆ ಇರುವ ನನ್ನ ಒಂದು ಅಕ್ಷೋಹಿಣೀ ಯಾದವಸೇನೆಯೇ ಒಂದು ಪಕ್ಷ. ಇವೆರಡರಲ್ಲಿ ನೀವಿಬ್ಬರೂ ಬೇಕಾದ ಒಂದೊಂದು ಸಾಹಾಯ್ಯವನ್ನು ಪೇಕ್ಷಿಸಬಹುದು—ಎಂದನು. ಆಗ ಅರ್ಜುನನು ಕೈಮುಗಿದು—ಸ್ವಾಮಿ,

ನಾವು ಬಡವರು. ಯಾದವಸೈನ್ಯವನ್ನೆಲ್ಲ ಪೋಷಿಸುವಷ್ಟು ಶಕ್ತರಾಗಿಲ್ಲ. ಬಡವರಿಗೆ ಸಹಾಯಕನು ಎಂಬ ಬಿರುದನ್ನು ವ್ಯಕ್ತಪಡಿಸಲು, ನೀನೊಬ್ಬನೇ ನಮ್ಮ ಕಡೆಗೆ ಬಂದರೆ ಸಾಕು—ಎಂದು ಅರ್ಥಿಸಿದನು. ದುರ್ಯೋಧನನು—ಕೃಷ್ಣ! ಅರ್ಜುನನಿಗಾಗಿ ನೀನು ಯಾವಾಗಲೂ ಬಹಳ ಮರುಗುವೆಯಾದುದರಿಂದ ನೀನೊಬ್ಬನು ಹೊರತು ಮಿಕ್ಕ ಯಾದವಸೇನೆಯನ್ನೆಲ್ಲ ಕಳುಹಿಸಿಕೊಡು. ಯದ್ಯಪಿ ನೀನು ಧುರಕ್ಕೆನಿಂತು ಕಾದಾಡಕೂಡದು—ಎಂದು ಕೇಳಿಕೊಂಡು, 'ಹಾಗೆಯೇ ಆಗಲಿ' ಎಂದು ಶ್ರೀಕೃಷ್ಣನು ಹೇಳಿದುದಕ್ಕೆ ಸಂತಸಗೊಂಡು, ಬಲರಾಮನನ್ನು ಕಂಡು ಬಲಸಹಿತ ಗಜಪುರಿಗೆ ಹೊರಟು ಹೋದನು. ಆಗ ಶ್ರೀ ಕೃಷ್ಣನು ಮುಗುಳುನಗೆ ನಗುತ—ಎಲೈ, ಪಾರ್ಥನೇ, ಕತ್ತಿಯನ್ನು ಬಿಸುಟು ಬರೆಯನ್ನು ಅಂಗೀಕರಿಸಿದಂದದಲಿ ಯಾದವಬಲವನ್ನು ಒಲ್ಲದೆ, ಯುದ್ಧಮಾಡತಕ್ಕವನಲ್ಲದ ನನ್ನನ್ನು ಬರಿದೆ ಬಯಸಿದೆಯಲ್ಲಾ! ನಿನ್ನ ಸಹೋದರರು ಇದನ್ನು ಕೇಳಿ ಹೀಯಾಳಿಸರೇ,—ಎಂದನು. ಸವ್ಯಸಾಚಿಯು ಗಹಗಹಿಸಿ—ದೇವ ಇದನ್ನೆಲ್ಲ ಯಾರಿಗೆ ಹೇಳುವೆ. ನಿಜಶಿಷ್ಯನಲ್ಲಿ ವಿನೋದವೇ? ನನ್ನ ಒಡಹುಟ್ಟಿದವರು ಅಸದೃಶವಾದ ನಿನ್ನ ಮಹಿಮಾತಿಶಯವನ್ನು ಅರಿಯರೇ—ಎಂದನು. ಶ್ರೀಕೃಷ್ಣನು—ಅಯ್ಯಾ, ಆಯುಧವನ್ನು ಹಿಡಿಯದೆ ಯುದ್ಧಕ್ಕೆ ಬಂದು ನಾನು ಮಾಡತಕ್ಕುದೇನಿದೆ? ಊಟದ ಹಂಗಿಗೆ ಸಿಕ್ಕಿ ಸುಮ್ಮನಿರಬಾರದಷ್ಟೆ. ನಮ್ಮಲ್ಲಿ ದೇವತ್ವವು ಸ್ವಲ್ಪವೂ ಇಲ್ಲ. ನಾನು ಬಾರೆನು. ಬಂದರೂ ಮಾಡತಕ್ಕ ಕೆಲಸವಿಲ್ಲ—ಎಂದನು. ಅರ್ಜುನನು,—ಸರ್ವದೇವಾದಿದೇವನೇ! ನಿನ್ನನ್ನು ಸ್ತುತಿಸುವುದಕ್ಕೆ ವೇದಾವಳಿಗೂ ಅಳವಲ್ಲ. ಅಮಾತದಂತಿರಲಿ. ನಾವು ಭಕುತರು. ನೀನು ನಮ್ಮರಕ್ಷಕನಾದುದರಿಂದ ನನ್ನ ಸಾರಥಿಯಾಗಿದ್ದು ರಕ್ಷಿಸು—ಎಂದು ಆತನ ಪಾದಗಳಲ್ಲಿ ತನ್ನ ಹಣೆಯನ್ನಿಟ್ಟನು. ಬಳಿಕ ದೀನಬಂಧುವು ಅವನನ್ನು ಮೇಲಕ್ಕೆತ್ತಿ ಸಾರಥಿಯಾಗಿರುವುದಕ್ಕೆ ಒಪ್ಪಿದನು ವಾಚಕರೇ! ಭಗವದ್ಭಕ್ತಿಯಿಂದಾಗುವ ಪ್ರಯೋಜನವನ್ನು ತಿಳಿಯಿರಿ. ಭಕ್ತಪರಾಧೀನನಾದ ಶ್ರೀಕೃಷ್ಣನು ತನ್ನ ಗೌರವವನ್ನು ಲಕ್ಷಿಸದೆ, ಪಾಂಡವರನ್ನು ಸಲಹುವುದರಲ್ಲಿ ಸಾರಥ್ಯರೂಪವಾದ ಸೇವಾವೃತ್ತಿಯನ್ನು ಪ್ರೀತಿಪೂರ್ವಕವಾಗಿ ಅಂಗೀಕರಿಸಿ, ಒಡನೆ ಅರ್ಜುನನ ಕೂಡ ಉಪಪ್ಲಾವ್ಯಕ್ಕೆ ಹೊರಟನು.

ಅನಂತರ ಕುಂತೀಸುತರು ಆಸ್ಥಾನದಲ್ಲಿ ಮಂತ್ರಾಲೋಚನೆಯನ್ನು ಮಾಡಿ, ಧೃತರಾಷ್ಟ್ರನ ಬಳಿಗೆ ಅರ್ಧರಾಜ್ಯವನ್ನು ಕೊಡಹೇಳುವುದಕ್ಕೆ ಶ್ರೀಕೃಷ್ಣನನ್ನೇ ಸಂಧಿಗೆ ಕಳುಹಿಸಬೇಕೆಂದು ನಿಶ್ಚಯಿಸಿದರು. ಆಗ ಭೀಮನು ಪ್ರತ್ಯೇಕವಾಗಿ ಆ ಯಶೋದಾವತ್ಸಲನನ್ನು ಕುರಿತು—ಎಲೈ ವಾಸುದೇವನೆ, ಲಾಲಿಸು ; ನಮ್ಮ ಏಳಿಗೆಯನ್ನು ಸಹಿಸದ ಕೌರವರಲ್ಲಿ ಯುದ್ಧವಾಗುವುದೆಂಬ ಭೀತಿಯನ್ನು ಉಂಟುಮಾಡದೆ, ಸಾಮೋಪಾಯವನ್ನೇ ಆಚರಿಸಬೇಕಾಗಿಯೂ, ಕಾಲಪ್ರೇರಿತವಾದ ಕಿಚ್ಚಿನಂತಿರುವ, ದೂರಾಲೋಚನೆ ಇಲ್ಲದ ಮೂರ್ಖನಾದ ದುರ್ಯೋಧನನು ನಮ್ಮ ಕುಲದಲ್ಲಿ ಹುಟ್ಟಿರುವುದರಿಂದ ಆತನು ನಮ್ಮಲ್ಲಿ ಉದಾಸೀನನಾಗಿದ್ದರೂ, ಆತನೊಡನೆ ನಾವೆಲ್ಲರೂ ಕೂಡಿರುವ ಹಾಗೆ ಮಾಡಬೇಕಾಗಿಯೂ, ಉಭಯಕುಲಪಿತಾಮಹನಾದ ಭೀಷ್ಮನೇ ಮೊದಲಾದ ವೃದ್ಧರು ಕೇಳುತ್ತಿರುವಾಗ, ಭರತಕುಲಕ್ಕೆ ನಾಶವು ಬಾರದಂತೆ, ಪರದ್ರವ್ಯವನ್ನೇ ಬಯಸಿ ಮತ್ತನಾಗಿರುವ ನನ್ನ ತಮ್ಮ ಕೌರವೇಂದ್ರನಿಗೆ ಧರ್ಮನೀತಿ ಹುಟ್ಟುವಂತೆ ಮಾಡಬೇಕಾಗಿಯೂ, ಜಗಜ್ಜಾಡ್ಯನಿವಾರಕನಾದ ನಿನ್ನನ್ನು ಕೇಳಿಕೊಳ್ಳುತ್ತೇನೆ. ಹಠವಾದಿಯಾದ ದರ್ಯೋಧನನಿಗೆ ನಾವೆಲ್ಲ ಅಧೀನರಾದರೂ ಚಿಂತೆಯಿಲ್ಲ. ಕೆಡಕಿಗೆ ಪ್ರತಿಯಾಗಿ ನಾವು ಕೆಡುಕನ್ನೇ ಮಾಡಿದರೆ ಅದು ವೃದ್ಧಿಯಾಗಿ ನಾಶವನ್ನುಂಟುಮಾಡುವುದು. ಧನಲೋಭದಿಂದ ನಮ್ಮನ್ನು ಸಹಜ ಶತ್ರುಗಳೆಂದು ಭಾವಿಸಿರುವ ಆತನನ್ನು ಕುರಿತು—ಭ್ರಾತೃಸ್ನೇಹದಿಂದ ನೀನು ಸಮಾಧಾನವನ್ನು ಹೊಂದಿ, ಸುಖವಾಗಿರಬೇಕೆಂದು ನಾನು ಹೇಳಿದೆನು—ಎಂದು ಮೃದುವಾಗಿ ನುಡಿ ಇದಕ್ಕೆ ಕ್ಷಮಾಗುಣದಲ್ಲಿ ಭೂದೇವಿಗೆ ಸಮನಾದ ಧರ್ಮರಾಯನೂ, ತಪಃಕೃಶನಾದ ಅರ್ಜುನನೂ ಒಪ್ಪುವರು—ಎಂದು ವಿಜ್ಞಾಪಿಸಿದನು. ಶ್ರೀಕೃಷ್ಣನು ಭೀಮಸೇನನ ಮೃದುವಾದ ಮಾತುಗಳನ್ನು ಕೇಳಿ,-ಅಗ್ನಿಯು ತಣ್ಣಗಾದಂತೆಯೂ, ಕುಲಪರ್ವತವು ಹಗುರವಾದಂತೆಯೂ ಆಯಿತಲ್ಲಾ !—ಎಂದು ಆಶ್ಚರ್ಯಗೊಂಡು "ಎಲೈ ವೃಕೋದರನೇ, ದುಷ್ಟದುರ್ಯೋಧನನನ್ನು ಅನುಜ ಸಮೇತ ಗದಾಪ್ರಹಾರಗಳಿಂದ ನೆಲಕ್ಕೆ ಕೆಡಹುವೆನೆಂದು ಗದೆಯನ್ನು ಮುಟ್ಟಿ ಅಣ್ಣತಮ್ಮಂದಿರೆದುರಿಗೆ ಮಾಡಿದ ನಿನ್ನ ಪ್ರತಿಜ್ಞೆ ಏನಾಯಿತು ? ಯಾವಾಗಲೂ ಯುದ್ಧವೇ ಲೇಸೆಂದು ನುಡಿಯುತ್ತಿದ್ದ ನೀನು ಕೌರವರನ್ನು ಹೀಗೆಯೇ ಕೊಲ್ಲುವೆ

ನೆಂದು ಹೇಳುತ, ಮಹಾವೃಕ್ಷಗಳನ್ನು ಸಮೂಲವಾಗಿ ಕಿತ್ತುಹಾಕಿ, ದೊಡ್ಡ ಬಂಡೆಗಳನ್ನು ಉರುಳಿಸಿಕೊಂಡು ಬರುತ, ಭೂಮಿಯು ಸೀಳಿಹೋಗುವಂತೆ ಪಾದಘಾತವನ್ನು ಮಾಡುತ, ಯಮದಂಡದಂತಿರುವ ಗದೆಯನ್ನು ತಿರುಗಿಸುತ, ಒಂದುವೇಳೆಯಾದರೂ ಸಂತೋಷಪಡದೆ ಕ್ಲಪ್ತಕಾಲದಲ್ಲಿ ನಿದ್ರಾಹಾರವನ್ನು ಹೊಂದದೆ, ಕಂಬನಿಗಳಂ ತುಂಬುತ, ಮಂಡಿಯಮೇಲೆ ತಲೆಯನ್ನಿರಿಸಿಕೊಂಡು ಹಲ್ಲುಮುಡಿಯನ್ನು ಕಚ್ಚಿಕೊಂಡು 'ಎಂದಿಗೆ ಅಣ್ಣನು ಕೌರವರನ್ನು ಕೊಲ್ಲುವುದಕ್ಕೆ ಅಣತಿಯನ್ನೀಯುವನೋ' ಎಂದು ದಿನಗಳನ್ನು ಲೆಕ್ಕಮಾಡುತ, ತೇಜೋವಂತನಾದ ಸೂರ್ಯನಂತೆ ತೋರುತ್ತಿದ್ದೆಯಲ್ಲಾ ! ಈಗ ಆ ಪ್ರತಾಪವೇನಾಯಿತು ? ಏತಕ್ಕಾಗಿ ನೀನು ಕೌರವರೊಡನೆ ಸಂಧಿಯನ್ನಪೇಕ್ಷಿಸುವೆ ? ನಿನಗೇನಾದರೂ ಅಪಶಕುನಗಳು ತೋರಿದುವೇ ? ದಿಗುಲಿನಿಂದೇನಾದರೂ ನಿನ್ನ ಮನಸ್ಸು ನಡಗುತಿರುವುದೇ ? ನಿನ್ನ ತೊಡೆಗಳೇನಾದರೂ ಕಟ್ಟಿಕೊಂಡಿರುವುವೇ ? ಯಾವಾಗಲೂ ಬವರವನ್ನು ಬಯಿಸುವ ಶೂರರು ಯುದ್ಧಕಾಲಬಂದಾಗ ಹಿಂದೆ ಸರಿಯುವುದಿಲ್ಲವಲ್ಲಾ ! ನಿನ್ನ ಶಾಂತತೆಯಂನೋಡಿದರೆ, ತೆಪ್ಪವಿಲ್ಲದ ಆಪತ್ಸಮುದ್ರದಲ್ಲಿ ನಿನ್ನ ಸಹೋದರರನ್ನು ನೀನೇ ಮುಳುಗಿಸುವಂತೆ ತೋರುತ್ತದೆ. ನಿನ್ನ ಪರಾಕ್ರಮವನ್ನು ಜ್ಞಾಪಿಸಿಕೋ. ಅರಿಗಳೊಡನೆ ಸಂಧಿಮಾಡಿಕೊಂಡು ಅವರನ್ನು ಬೇಡುತ್ತ ಬದುಕುವುದು ಯುಕ್ತವಲ್ಲ. ಕ್ಷತ್ರಿಯನಿಗೆ ಭುಜಬಲದಿಂದ ಒದಗುವ ಸಂಪತ್ತು ಶ್ರೇಷ್ಠವಾದುದು. ಆದುದರಿಂದ ಹಗೆಗಳನ್ನು ಯಾಚಿಸಿ ಬದುಕುವ ಯೋಚನೆಯನ್ನು ಬಿಟ್ಟು, ಶೌರ್ಯವನ್ನಾಶ್ರಯಿಸಿ ಯುದ್ಧವನ್ನು ಮಾಡಿ ಜಯಶೀಲನಾಗು"—ಎಂದನು.

ಅದನ್ನು ಕೇಳಿದ ಭೀಮಸೇನನು "ಎಲೈ ಜನಾರ್ದನನೇ ! ಅಣ್ಣನ ಅಭಿಪ್ರಾಯಕ್ಕೆ ಲೇಶವೂ ವಿರೋಧವಾಗಿ ನಡೆಯಬಾರದೆಂದು ಯೋಚಿಸಿ ಹೇಳಿದ ನನ್ನನ್ನು 'ಆಪತ್ಸಮುದ್ರದಲ್ಲಿ ಎಲ್ಲರನ್ನೂ ಮುಳುಗಿಸತಕ್ಕವನು' ಎಂದು ನೀನು ಆಡಿದ ಹೀಯಾಳಿಕೆಯ ನುಡಿಗಳು ನನ್ನ ಎದೆಯನ್ನು ನೋಯಿಸುತ್ತಿವೆ. ಶೂರರು ಆತ್ಮಶ್ಲಾಘನೆಯನ್ನು ಮಾಡಿಕೊಳ್ಳುವರೇ ? ಸರ್ವಾಂತರ್ಯಾಮಿಯಾದ ನೀನು ನನ್ನ ಸ್ವಭಾವಾದಿಗಳನ್ನು ಅರಿತಿದ್ದರೂ ವ್ರಣವನ್ನು ಸೂಜಿಯಿಂದ ಚುಚ್ಚಿದ ಹಾಗೆ, ಮರ್ಮೋದ್ಘಾಟನೆಯನ್ನು ಮಾಡಿ

ಹೀಯಾಳಿಸಿದುದರಿಂದ ನನ್ನ ಪರಾಕ್ರಮದ ರೀತಿಯನ್ನು ನಿನ್ನ ಅಜ್ಞಾನು ಸಾರ ಅರಿಕೆ ಮಾಡುವೆನು ಕೇಳು. ಸರ್ವರಿಗೂ ಆಧಾರವಾದ ಭೂವ್ಯಾಕಾಶಗಳು ಒಂದುವೇಳೆ ಒಟ್ಟಾಗಿ ಸೇರಿದರೂ, ನಿನ್ನ ಅನುಗ್ರಹದಿಂದ ಅವುಗಳ ಮೂಲವನ್ನು ತಿಳಿದು ಭೂಮಿಯನ್ನು ಕೆಳಕ್ಕೂ ಆಕಾಶವನ್ನು ಮೇಲಕ್ಕೂ ನೂಕಿ ಯಥಾಪ್ರಕಾರ ಅವುಗಳನ್ನು ನಿಲ್ಲಿಸುವ ಸಾಮರ್ಥ್ಯವುಳ್ಳವನಾಗಿದೇನೆ. ಸಮುದ್ರರಾಜನೂ ಪರ್ವತರಾಜನೂ ಸಂಕ್ರಂದನನೂ ಒಟ್ಟಾಗಿ ಬಂದರೂ ನನ್ನ ಕೈಗೆ ಸಿಕ್ಕಿದ ಶತ್ರುವನ್ನು ಬಿಡಿಸಿ ಕಾಪಾಡಲಾರರು. ಪಾಂಡವರ ಮೇಲೆ ಕ್ರೋಧಾವೇಶದಿಂದ ಯುದ್ಧಕ್ಕೆ ಬರುವ ಯಾರನ್ನೇ ಆಗಲಿ ಕಾಲಿನಲ್ಲಿ ಹೊಸಕಿ ಪಾತಳಕ್ಕೆ ನೂಕಿ ಬಿಡುವೆನು. ಊರುಬಾಗಿಲ ಕಬ್ಬಿಣದ ಲಾಳಮುಂಡಿಗೆಗಳಂತೆ ದೀರ್ಘವಾಗಿರುವ ನನ್ನ ಭುಜಗಳ ಬಲಕ್ಕೆ ಈಡಾದ ಶತ್ರುವು ಯಾವನಿದಾನೆ? ನನ್ನ ಕೈಗೆಸಿಲ್ಕಿದ ವೈರಿಯು ಶರಣಾಗತನಾಗದಿದ್ದರೆ ಬದುಕಿಹೋಗುವುದುಂಟೇ? ನೀನು ರಕ್ಷಕನಾಗಿರುವಲ್ಲಿ—ಲೋಕಗಳೆಲ್ಲವೂ ಒಮ್ಮಡಿಯಾಗಿ ಸೇರಿ ಕೋಪಿಸಿ ಯುದ್ಧಕ್ಕೆ ಬಂದರೂ, ನನಗೆ ಭಯವಿಲ್ಲ. ದೈವಯತ್ನದಿಂದ ಯುದ್ಧವು ಪ್ರಾಪ್ತಿಸಿದರೆ, ಆಗ ನನ್ನ ಪರಾಕ್ರಮವು ಲೋಕಕ್ಕೆ ವಿದಿತವಾಗುವುದು. ಅಪಕಾರಮಾಡಿದವರಿಗೂ ಉಪಕಾರ ಮಾಡಬೇಕೆಂದೆಣಿಸಿ, ಕೌರವರು ನಮಗೆ ಮಾಡಿದ ದ್ರೋಹಗಳನ್ನೆಲ್ಲ ಕ್ಷಮಿಸಿ ಸಮಾಧಾನವಚನಗಳನ್ನು ಹೇಳಿದೆನು. ಈಗ ಹುಟ್ಟಿರುವ ಮನಃಕಷಾಯವನ್ನು ತಪ್ಪಿಸಬೇಕಾದರೆ, ಕೆಟ್ಟುದಕ್ಕೆ ಒಳ್ಳೆಯದನ್ನು ಮಾಡುವದೊಂದು ಮಾರ್ಗವೇ ಹೊರತು, ಮತ್ತಾವ ಮಾರ್ಗವೂ ಇಲ್ಲ. ನನ್ನ ಸಹವಾಸದಲ್ಲಿರುವ ನೀನು ನನ್ನ ಪರಾಕ್ರಮಾತಿಶಯವನ್ನು ತಿಳಿದೂ, ತಿರಸ್ಕರಿಸಿ ಮಾತನಾಡಿದೆಯಲ್ಲಾ! ಸರ್ವಜ್ಞನಾದ ನಿನಗೆ ನಾನು ಹೇಳುವುದು ಯುಕ್ತವೇ?—" ಎಂದು ತಿಳುಹಿಸಿ, ವಿಷಾದಿಸಿದನು ಆ ಬಳಿಕ ಗೋವಿಂದನು ಎಲೈ ಸತ್ಯಚರಿತ್ರನೇ! ನಿನ್ನ ಮನೋಭಾವವನ್ನು ತಿಳಿಯುವುದಕ್ಕಾಗಿ ಧಿಕ್ಕರಿಸಿ ಮಾತನಾಡಿದೆನೇ ಹೊರತು, ಪಾಂಡಿತ್ಯದಿಂದಾಗಲಿ ಕ್ರೋಧದಿಂದಾಗಲಿ ಹಾಗೆ ನುಡಿದವನಲ್ಲ. ನಿನ್ನ ಮಾಹಾತ್ಮ್ಯವನ್ನೂ ಪರಾಕ್ರಮಾದಿಗಳನ್ನೂ ನಾನು ಚೆನ್ನಾಗಿ ಬಲ್ಲೆನು. ನೀನು ಈಗ ಹೇಳಿದುದಕ್ಕಿಂತಲೂ, ಶತಾಧಿಕವಾಗಿ ಮಾಡುವಷ್ಟು ಸಾಮರ್ಥ್ಯ

ವಿದೆಯೆಂದು ನಾನು ತಿಳದಿದೇನೆ. ಸಕಲಜನಪೂಜಿತವಾದ ನಿಮ್ಮ ಕುಲಕ್ಕೆ ತಕ್ಕ ಶೌರ್ಯಾದಿಗುಣಗಳು ಅಸಹಾಯಶೂರನಾದ ನಿನ್ನಲ್ಲಿಯೇ ನೆಲೆಗೊಂಡಿವೆ. ನಿನ್ನನ್ನು ಹೊಗಳದೇ ಇರುವವರೇ ವಿರಳರು. ಅದು ಹಾಗಿರಲಿ, ಪುರುಷ ಪ್ರಯತ್ನಕ್ಕೆ ಫಲವು ಸಂದಿಗ್ಧವಾದುದರಿಂದ, ದೈವಬಲವೇ ಪುರುಷನ ಕಾರ್ಯ ಸಿದ್ಧಿಗೂ ಕಾರ್ಯನಾಶಕ್ಕೂ ಕಾರಣವಾಗಿರುವುದು. ಒಂದು ಪ್ರಕಾರವಾಗಿ ನಿಷ್ಕರ್ಷೆಮಾಡಿದ ಕಾರ್ಯವು, ಗಾಳಿ ಬೀಸುವಂತೆ ಮತ್ತೊಂದು ರೀತಿಯಾಗಿ ಪರಿಣಮಿಸುತ್ತದೆ, ಚೆನ್ನಾಗಿ ಪರ್ಯಾಲೋಚಿಸಿ ಮಾಡಿದ ಕಾರ್ಯವನ್ನು ದೈವವು ಅಪಹರಿಸುವುದು. ಆದರೂ ಪ್ರಯತ್ನವನ್ನೂ ಮಾಡಬೇಕು. ದೈವಪುರುಷ ಪ್ರಯತ್ನಗಳೆರಡೂ ಸೇರಿದ ಹೊರತು ಫಲಪ್ರಾಪ್ತಿಯಾಗದೆಂದು ತಿಳದು, ಫಲವಾಗದಿದ್ದರೆ ದುಃಖವನ್ನೂ ಫಲವುಂಟಾದರೆ ಸಂತೋಷವನ್ನೂ ಪಡೆಯದೆ ಸಮಬುದ್ಧಿಯಿಂದಿರಬೇಕು. ಮನಸ್ಸಿನಲ್ಲಿ ಎಣಿಸಿದುದೆಲ್ಲವೂ ಆಗುವುದೆಂದು ನಂಬಬಾರದು. ಸಂಧಿಮಾಡುವುದಕ್ಕೆ ನಾಳೆ ಹಸ್ತಿನಾವತಿಗೆ ಹೋಗುವೆನು. ಕೌರವರು ಸಂಧಿಗೆ ಒಪ್ಪಿದರೆ, ಅವರಿಗೆ ಬದುಕುವ ದಾರಿಯೂ ನಿಮಗೆಲ್ಲರಿಗೂ ನನಗೆ ಕೀರ್ತಿಯೂ ಉಂಟಾಗುವುವು ಇಲ್ಲವೇ ಅತಿಭಯಂಕರವಾದ ಯುದ್ಧವು ಒದಗುವುದು. ಆಗ ನೀನೂ ಅರ್ಜುನನೂ ಯುದ್ಧ ಕಾರ್ಯವನ್ನು ನಿರ್ವಹಿಸಬೇಕು ; ಮತ್ತಾರೂ ಸಮರ್ಥರಿಲ್ಲ, ನಾನು ಅವನಿಗೆ ಸಾರಥಿ ಯಾಗಿ ಇರತಕ್ಕವನು. ಆದುದರಿಂದ ನಿನ್ನ ಮನಸ್ಸು ಈಗ ಮಾತ್ರ ಕರು ಣಾರ್ದ್ರವಾಗಿರಬಾರದು—ಎಂದನು.

ಆ ಬಳಿಕ ಅರ್ಜುನಾದಿಗಳು ಹೇಳದುದನ್ನೆಲ್ಲ ಕೇಳಿ ತಕ್ಕ ಉತ್ತರ ಗಳನ್ನು ದಯೆಪಾಲಿಸಿದ ಶ್ರೀ ಕೃಷ್ಣನು ತನ್ನ ಕನಕರಥದೊಳಗೆ ಕುಳಿತು ಉಪಪ್ಲಾವ್ಯದಿಂದ ಗಜಪುರಿಗೆ ಹೋಗಿ,—ಪಾಂಡವರಿಗೆ ಆಪ್ತರಲ್ಲದ ಕೌರವರ ರಾಜಗೃಹದಲ್ಲಿಳದು ಬಂಗಾರದ ಪಾತ್ರೆಗಳಲ್ಲಿ ಮೃಷ್ಟಾನ್ನವನ್ನು ಭುಂಜಿಸಿ ಮಹಾರಾಜೋಪಚಾರವನ್ನು ಹೊಂದುವುದಕ್ಕಿಂತಲೂ, ಆಪ್ತನೂ ಭಕ್ತನೂ ಆದ ವಿದುರನು ಮನೆಯಲ್ಲಿಳದು ಉಪ್ಪಿಲ್ಲದ ಗಂಜಿಯನ್ನಾದರೂ ಕುಡಿದು ಉದ್ದೇಶಕಾರ್ಯವನ್ನು ಮಾಡಿಕೊಂಡು ಬರಬೇಕು—ಎಂದು ಯೋಚಿಸಿ, ಋಜುಭಾವವುಳ್ಳವನಾದ ವಿದುರನ ಗೃಹದಲ್ಲಿಳದು, ಅವನನ್ನನುಗ್ರಹಿಸಿ, ಕಷ್ಟಸಹಿಷ್ಣುತೆಯುಳ್ಳ ತನ್ನ ಸೋದರತ್ತೆಯಾದ ಕುಂತೀದೇವಿಯ ಬಳಿಗೆ

ಹೋಗಿ ಆಕೆಗೆ ವಂದಿಸಿ, ಫಲ ಮುಂತಾದುವುಗಳನ್ನು ಸಮರ್ಪಿಸಿ, ಪಾಂಡವರ ಕ್ಷೇಮಲಾಭವನ್ನು ತಿಳುಹಿಸಿ, ಆಕೆಗೆ ಮನಸ್ಸಮಾಧಾನವನ್ನು ಮಾಡಿದ ಬಳಿಕ, ಕೌರವರ ಸಭೆಯನ್ನು ಸೇರಿ ಸಂಧಿಗೋಸ್ಕರ ಮಾತನಾಡಿ ದುರ್ಯೋಧನನಿಗೆ ಬುದ್ಧಿವಾದವನ್ನು ಹೇಳಿಸಿದನು. ಅದಕ್ಕೆ ಕೌರವನು ಆಸ್ಥಾನದಲ್ಲಿ ನಿಂತು,—ಎಲೈ ಕೃಷ್ಣನೇ! ಕೌಂತೇಯರಿಗೆ ರಾಜ್ಯದಲ್ಲಿ ಆಶೆ ಇದ್ದರೆ ಅವರು ನಮ್ಮೊಡನೆ ಯುದ್ಧಮಾಡಿ ಗೆಲ್ಲಬೇಕು. ಇಲ್ಲದಿದ್ದರೆ ಒಂದ, ಸೂಜಿಯಮೊನೆಯನ್ನು ಊರುವಷ್ಟು ಭೂಮಿಯನ್ನಾದರೂ ಅವರಿಗೆ ನಾನು ಕುಡುವುದಿಲ್ಲ. ಇದೇ ನನ್ನ ನಿಶ್ಚಯವು. ಭೀಮನ ಪ್ರತಿಜ್ಞೆ ಏನಾಯಿತು?—ಎಂದನು. ಆಗ ಶ್ರೀಕೃಷ್ಣನು ಕುರುಸಭಾಮಧ್ಯದಲ್ಲಿ ಸಭಾಜನರೆಲ್ಲರೂ ಕೇಳುತ್ತಿರಲು, ಕೌರವನನ್ನು ಕುರಿತು—"ನೀನು ಬುದ್ಧಿಬಲ್ಲಂದಿನಿಂದ ಇದುವರೆಗೂ ಪಾಂಡವರಿಗೆ ಕೇಡನ್ನೇ ಮಾಡಿರುವೆ. ಅದು ತರವಲ್ಲ. ಅವರೊಡನೆ ಸಂಧಿಮಾಡಿಕೊಂಡು ಅವರ ರಾಜ್ಯವನ್ನು ಅವರಿಗೆ ಕೊಡು,—ಎಂದು ನಿನ್ನ ತಾಯಿತಂದೆಗಳೂ, ಹಿರಿಯರೂ ಬೋಧಿಸುವಂತೆ, ನೀನು ಪಿತ್ರಾರ್ಜಿತವಾದ ದಾಯಭಾಗದಲ್ಲಿ ಕೊನೆಯಪಕ್ಷ ಐದು ಗ್ರಾಮಗಳನ್ನಾದರೂ ಕೌಂತೇಯರಿಗೆ ಕೊಡದಿದ್ದರೆ, ಶೀಘ್ರದಲ್ಲಿಯೇ ಯುದ್ಧವೊದಗಿ ನಿನ್ನೊಬ್ಬನ ತಪ್ಪಿತಕ್ಕಾಗಿ ಬಹುಪ್ರಾಣಿಗಳು ಹತರಾಗುವುದಲ್ಲದೆ, ಸಪರಿವಾರ ನೀನೂ ಕೆಡುವೆ. ಇದು ಖಂಡಿತ" ಎಂದು ತಿಳಿಯಿಸಿದನು.

ದುಶ್ಶಾಸನನು, ಅದನ್ನು ಕೇಳಿ ಕೋಪಾಕ್ರಾಂತನಾದ ತನ್ನ ಅಗ್ರಜನನ್ನು ಕುರಿತು—ಅಣ್ಣಾ! ನಾವು ಸಂಧಿಗೆ ಒಡಂಬಡದಿದ್ದರೆ, ಕರ್ಣಶಕುನಿಗಳೊಡನೆ ನಮ್ಮಿಬ್ಬರನ್ನೂ ಪಾಶದಲ್ಲಿ ಕಟ್ಟಿ ಪಾಂಡವರಿಗೆ ಒಪ್ಪಿಸುವರಂತೆ—ಎಂದು ನುಡಿಯಲು; ದುರ್ಯೋಧನನು ಕ್ರೋಧಾರುಣಲೋಚನನಾಗಿ ಹಿಂದುಮುಂದು ಯೋಚಿಸದೆ ಯಾರನ್ನೂ ಸಡ್ಡೆಮಾಡದೆ, ಅಲ್ಲಿಂದ ಎದ್ದು ತನ್ನ ಆತ್ಮವಿಲಾಸವೆಂಬ ಕೊಠಡಿಗೆ ಹೋದನು. ಅಲ್ಲಿ ತನ್ನ ದುರ್ಮಂತ್ರಿಗಳೊಡನೆ ಸೇರಿ,—'ನಮ್ಮನ್ನು ಹಿಡಿದು ಬಂಧಿಸುವುದಕ್ಕೆ ಮುಂಚೆ ಆ ಕೃಷ್ಣನನ್ನೇ ಹಿಡಿದು ಕಟ್ಟಿದರೆ ಪಾಂಡವರು ಭಗ್ನೋತ್ಸಾಹರಾಗುವರು'—ಎಂದು ನಿಷ್ಕರ್ಷಿಸುತ್ತಿದ್ದನು. ಆ ಸಂಗತಿಯು ಸರ್ವಾಂತರ್ಯಾಮಿಯಾದ ಶ್ರೀಕೃಷ್ಣನಿಗೆ ವಿದಿತವಾಯಿತು. ಧೃತರಾಷ್ಟ್ರನು ವಿದುರನನ್ನು ಕಳುಹಿಸಿ, ಕೌರ

ವರನ್ನು ತನ್ನ ಬಳಿಗೆ ಕರೆಯಿಸಿಕೊಂಡು, ಪುತ್ರವಾತ್ಸಲ್ಯದಿಂದ ಮರಳಿ 'ಪಾಂಡವರ ರಾಜ್ಯವನ್ನಾದರೂ ಪಾಂಡವರಿಗೆ ಕೊಟ್ಟುಬಾಳು' ಎಂಬುದೇ ಮೊದಲಾದ ವಿವೇಕವಚನಗಳನ್ನು ಹೇಳಿ ಹೇಳಿ ಬೇಸತ್ತನು. 'ಹಠವಾದಿಯು ಎಳ್ಳಷ್ಟೂ ಸೋಲುವುದಿಲ್ಲ' ಎಂಬಂತೆ ಮೂರ್ಖನಾದ ದುರ್ಯೋಧನನು ಅದನ್ನು ಕೇಳದೆ, ತನ್ನ ಯೋಚನೆಯಂತೆಯೇ ಮಾಡಬೇಕೆಂದಿದ್ದನು. ಆಗ, ಭರತಕುಲಹಿತಾರ್ಥವಾಗಿ ದೂತಭಾವವನ್ನು ಅಂಗೀಕರಿಸಿದ ಷಡ್ಗುಣೈಶ್ವರ್ಯಸಂಪನ್ನನಾದ ವಾಸುದೇವನು ದುರ್ಯೋಧನನನ್ನು ಕುರಿತು—ನೀನು ಅಜ್ಞಾನದಿಂದ ನಾನೊಬ್ಬನೇ ಇಲ್ಲಿ ಇದಾನೆಂದು-ಕಟ್ಟಿಹಾಕುವುದಕ್ಕೆ ಸನ್ನದ್ಧನಾಗಿದ್ದೀಯಲ್ಲಾ ! ನೋಡು, ನಾನೆಲ್ಲಿದ್ದರಲ್ಲಿಯೇ ಸಕಲದೇವತೆಗಳೂ ಮಹರ್ಷಿಗಳೂ ಪಾಂಡವರೂ ಇರುವರು—ಎಂದು ಗರ್ಜಿಸಲು. ಒಡನೆ ಆ ಮಹಾನುಭಾವನ ಶರೀರದಲ್ಲಿ ಬ್ರಹ್ಮರುದ್ರೇಂದ್ರಾದಿಸಮಸ್ತದೇವತೆಗಳೂ, ಕೌಂತೇಯರೂ ಗಂಧರ್ವೋರಗರಾಕ್ಷಸಾದಿಗಳೆಲ್ಲ ಕಾಣಿಸಿಕೊಂಡರು ! ಆತನ ಭುಜದಲ್ಲಿ ಶಂಖಚಕ್ರ ಮುಂತಾದ ದಿವ್ಯಾಯುಧಗಳೂ, ಕಣ್ಣು ಮೂಗು ಕಿವಿಗಳಲ್ಲಿ ಅಗ್ನಿಜ್ವಾಲೆಗಳೂ, ರೋಮಕೂಪಗಳಲ್ಲಿ ಪ್ರಳಯಕಾಲದ ಆದಿತ್ಯಕಿರಣಗಳೂ ಹುಟ್ಟಿ ದೇದೀಪ್ಯಮಾನನಾಗಿರಲು ; ಆ ವಿಶ್ವರೂಪವನ್ನು ನೋಡುವುದಕ್ಕೆ ಭೀಷ್ಮದ್ರೋಣವಿದುರಸಂಜಯರಿಗೂ ನಾರದಾದಿಮಹರ್ಷಿಗಳಿಗೂ, ಭಕ್ತಿಭರಿತನಾಗಿದ್ದ ಧೃತರಾಷ್ಟ್ರನಿಗೂ ಶ್ರೀಕೃಷ್ಣಾನುಗ್ರಹದಿಂದ ದಿವ್ಯದೃಷ್ಟಿಯುಂಟಾಯಿತು ! ಅವರು ಆ ವಿಶ್ವರೂಪದರ್ಶನದಿಂದ ರೋಮಾಂಚಿತಗಾತ್ರರಾಗಿ " ಈ ವಸುದೇವನಂದನನು ಪರಮಪುರುಷನೆಂದು ತಿಳಿಯದೆ, ಮನುಷ್ಯಮಾತ್ರನೆಂದೆಣಿಸುವ ಮಾನವರು ಸಂಸಾರಪಾಶದಿಂದ ಬದ್ಧರಾಗಿ ಜರಾಮರಣಗಳನ್ನೈದುತ್ತಿರುವರು. ಮನುಷ್ಯವೇಷವನ್ನು ಧರಿಸಿ, ಲೋಕವನ್ನು ಅನುವರ್ತಿಸಿ, ಇತರರಂತೆ ವಿನೋದವನ್ನು ಮಾಡುತ್ತಿರುವನೆಂದೂ, ಓ ಸ್ವಾಮಿಯೇ ! ಜಗದೀಶ್ವರನೇ, ಸರ್ವಭೂತಜನಕನೇ, ವರದೇಶವರಪ್ರದನೇ, ರಕ್ಷಿಸು, ರಕ್ಷಿಸು, ಎಂದೂ, ಜನನಮರಣಗಳಿಗೆ ಭಯಪಟ್ಟು ನಿನ್ನಲ್ಲಿ ಭಕ್ತಿಯನ್ನು ಮಾಡುವ ಭಕ್ತರಿಗೆ ಈ ಲೋಕದಲ್ಲಿ ಸಕಲಸೌಖ್ಯಗಳನ್ನೂ ಅಂತ್ಯದಲ್ಲಿ ಮುಕ್ತಿಯನ್ನೂ ದಯಪಾಲಿಸುವ ನಿನಗೆ ನಮಸ್ಕಾರ ನಮಸ್ಕಾರ ಎಂದೂ, " ಅನೇಕವಿಧವಾಗಿ ಸ್ತುತಿಸಿ

ವಂದಿಸುತ್ತಿದ್ದರು. ಆಗ ದೇವತಾಸಮೂಹಗಳಿಂದ ಆ ಭಗವಂತನ ಮೇಲೆ ದಿವ್ಯಪರಿಮಳ ಪುಷ್ಪಗಳು ವಿಶೇಷವಾಗಿ ವರ್ಷಿಸಲ್ಪಟ್ಟುವು. ಸಕಲ ಲೋಕೇಶ್ವರನಾದ ಶ್ರೀಕೃಷ್ಣನು ಪ್ರಸನ್ನಹೃದಯನಾಗಿ ತನ್ನ ಇಚ್ಛಾಲೀಲೆಯನ್ನು ಉಪಸಂಹರಿಸಿಕೊಂಡನು

ಶ್ರೀಕೃಷ್ಣನು ಕೌರವರಿಗೆ ವಿವೇಕವನ್ನು ಹೇಳಿ, ಕರ್ಣನಿಗೆ ಪ್ರತ್ಯೇಕವಾಗಿ ಬುದ್ಧಿಯನ್ನು ಹೇಳಿ, ಪೃಥೆಗೆ ಹೇಳಬೇಕಾಗಿದ್ದವುಗಳನ್ನು ಹೇಳಿ ವಂದಿಸಿ, ವಿದುರನನ್ನು ಆಲಿಂಗಿಸಿ, ತನ್ನ ಮಣಿರಥದಲ್ಲಿ ಕುಳಿತು ಪಾಂಡವರ ಬಳಿಗೆ ಹೋಗಿ ಕರಿನಗರದ ಆಸ್ಥಾನದಲ್ಲಿ ನಡೆದ ವೃತ್ತಾಂತಗಳನ್ನೆಲ್ಲ ವಿವರಿಸಿದನು. ಅವರು ಉಪಪ್ಲವ್ಯನಗರದಲ್ಲಿದ್ದುಕೊಂಡು ಮಂತ್ರಾಲೋಚನೆಯನ್ನು ಮಾಡಿ, ಗುರುಹಿರಿಯರಾದ ಹಿತೈಷಿಗಳನ್ನು ಕುರಿತು "ಮುಂದೆ ನಾವು ಮಾಡತಕ್ಕ ಕಾರ್ಯವನ್ನು ನೀವು ಯೋಚಿಸಿ ನಿಮ್ಮ ಮನಸ್ಸಿಗೆ ಅನುಸಾರವಾಗಿಯೂ, ನಮಗೆ ಶ್ರೇಯಸ್ಕರವಾಗಿಯೂ, ಇರುವಹಾಗೆ ಹೇಳಬೇಕಾಗಿದೆ"—ಎಂದು ನುಡಿಯಲು; ಶ್ರೀಕೃಷ್ಣನೇ ಮುಂತಾದವರು ಏಕವಾಕ್ಯತೆಯಿಂದ ಅಧರ್ಮಪರರೂ ಪಿಶುನರೂ ಆದ ಕೌರವರ ಕೂಡ ಯುದ್ಧವನ್ನು ಮಾಡಿ ರಾಜ್ಯವನ್ನು ಪಡೆಯಬೇಕು—ಎಂದು ನಿರ್ಣಯಿಸಿದರು. ಹಲಾಯುಧನು ಮಾತ್ರ ಬಂಧುಗಳಿಗೆ ಒದಗಿರುವ ಪರಸ್ಪರ ವೈರವನ್ನು ತಪ್ಪಿಸುವುದಕ್ಕಾಗದೆ, ಯುದ್ಧದಲ್ಲಿ ಆರಕಡೆಗೂ ಸೇರದೆ, ಶ್ರೀಕೃಷ್ಣನ ಸಮ್ಮತಿಯಿಂದ ತೀರ್ಥಯಾತ್ರೆಗೆ ಹೋದನು. ಪಾಂಡವರು ಯುದ್ಧಕ್ಕೆ ಸನ್ನದ್ಧರಾಗಿ, ಜೈತ್ರಯಾತ್ರೆ ಹೊರಡುವಾಗ ಮಾಡಬೇಕಾದ ದೇವತಾಪ್ರಾರ್ಥನೆ ಮುಂತಾದವುಗಳನ್ನು ಮಾಡಿಕೊಂಡು, ಚತುರಂಗಬಲದೊಡನೆ ಹೊರಟು ಹಿರಣ್ವತೀನದಿಯ ದಡದ ಮೇಲೆ ನಿರ್ಮಿತವಾಗಿದ್ದ ರಾಜಗೃಹದಲ್ಲಿ ಮಂಡಿಸಿದರು. ಪ್ರೀತಿಪೂರ್ವಕವಾಗಿ ತಮ್ಮ ಕಡೆಗೆ ಸೇರಿದ ಸೇನಾನಿವೇಶವನ್ನು ನೋಡಿ, ಎಣಿಕೆಮಾಡಿ, ವೀರರಿಗೆಲ್ಲ ತಕ್ಕ ಸನ್ಮಾನವನ್ನು ಮಾಡಿ, ಕುಲಶೀಲಗಳನ್ನು ಪರೀಕ್ಷಿಸಿ, ಹತ್ತಿರ ಆಪ್ತರಾದವರನ್ನು ನೇಮಿಸಿಕೊಂಡು ಯುದ್ಧಕಾರ್ಯಾಸಕ್ತರಾಗಿದ್ದರು.

ಅತ್ತಲು ಕೌರವೇಶ್ವರನು, ಮಹಾಶಯನಾದ ಭೀಷ್ಮನ ಮೂಲಕ ತಮ್ಮ ಉಭಯಪಕ್ಷಗಳಲ್ಲಿಯೂ ಸೇರಿರುವ ಸೇನೆಯಲ್ಲಿ—ರಥಿಕರನ್ನೂ, ಅತಿರಥರನ್ನೂ, ಮಹಾರಥರನ್ನೂ, ನಿರ್ಣಯಿಸಿಕೊಂಡು ಆತನಿಗೆ ಕೌರ

ವರ ಕಡೆಯ ಸರ್ವಸೇನಾಧಿಪತ್ಯವನ್ನು ವಿಧಿವತ್ತಾಗಿ ಕೊಟ್ಟನು! ನಾಳೆ ಯುದ್ಧವೆಂಬ ಸಮಯದಲ್ಲಿ ಶಕುನಿಯ ಪುತ್ರನಾದ ಉಲೂಕನ ಮೂಲಕ ಕೌರವನು ಪಾಂಡವರಿಗೆ ಶೌರ್ಯರೋಷದಿಂದ ನಿಷ್ಠುರೋಕ್ತಿಯನ್ನು ಹೇಳಿ ಕಳುಹಿಸಿದನು. ಧರ್ಮರಾಯನು ಅನುಜಸಮೇತ ಒಡ್ಡೋಲಗದಲ್ಲಿರುವಾಗ ಉಲೂಕನು ಅಲ್ಲಿಗೆ ಹೋಗಿ, ತಾನು ರಾಜಾಜ್ಞೆಯಂತೆ ನಿಯೋಗಕ್ಕೆ ಬಂದಿರುವುದನ್ನು ತಿಳುಹಿಸಿ, ಅಭಯವನ್ನು ಪಡೆದು, ಶ್ರೀಕೃಷ್ಣನೂ ಕೇಳುತ್ತಿರಲು, ಹೇಳಿದುದೇನೆಂದರೆ :—ನೀವು ಸಂಜಯನ ಕೂಡ ಶಪಥಪೂರ್ವಕವಾಗಿ ಹೇಳಿಕಳುಹಿಸಿದ್ದಂತೆ ಮಾಡುವುದಕ್ಕೆ ಕಾಲ ಬಂದಿದೆ. ನಾವು ಯುಕ್ತಿಯಿಂದ ರಾಜ್ಯಾಪಹಾರವನ್ನು ಮಾಡಿ ೧೩ ವರುಷಗಳಿಂದ ಅನುಭವಿಸುತ್ತಿರುವುದನ್ನೂ, ಪಾಂಚಾಲಿಗೂ ನಿಮಗೂ ಅವಮಾನಮಾಡಿದುದನ್ನೂ, ಅರಣ್ಯವಾಸದಲ್ಲಿ ನೀವು ಅನುಭವಿಸಿದ ಕ್ಲೇಶಗಳನ್ನೂ, ಸ್ಮರಿಸಿಕೊಂಡು ಪೌರುಷವನ್ನು ತೋರಿಸಬೇಕು. ಕ್ಷತ್ರಿಯ ಸ್ತ್ರೀಯು ತಾನು ವೀರಮಾತೆ ಎನಿಸಿಕೊಳ್ಳುವುದಕ್ಕಲ್ಲವೇ ಶೂರರಾದ ಪುತ್ರರನ್ನು ಹೆರುವಳು. ಶೂರನಾದ ಕ್ಷತ್ರಿಯನು ಸಮರದಲ್ಲಿ ತನ್ನ ಬಲವನ್ನೂ ಶೌರ್ಯವನ್ನೂ ಅಸ್ತ್ರಲಾಘವವನ್ನೂ ಕೋಪವನ್ನೂ ವ್ಯಕ್ತಗೊಳಿಸಿ ಹಗೆಗಳಿಗೆ ತಕ್ಕ ಪ್ರತೀಕಾರವನ್ನು ಮಾಡುವನಲ್ಲವೇ? ಸಕಲ ಸಂಪತ್ತುಗಳನ್ನೂ ಕಳೆದುಕೊಂಡು, ಪರಸ್ವತ್ತಿಗೆ ಆಶೆಪಡದೆ, ದೀನನಾಗಿ ಕಷ್ಟಪಡುವ ದೊರೆಯು ತನಗೆ ದ್ರೋಹವನ್ನು ಮಾಡಿದ ವೈರಿಗಳಲ್ಲಿ ದಿನದಿನಕ್ಕೂ ಕೋಪವನ್ನು ಹೆಚ್ಚಾಗಿ ತೋರಿಸಿ ಕೊನೆಗಾಣಿಸದಿರುವನೇ? ಜೂಜಿನಲ್ಲಿ ಸೋತು ದಾಸಭಾವವನ್ನು ಹೊಂದಿದ್ದಾಗ ಭೀಮನ ಗದೆಯೂ, ಅರ್ಜುನನ ಗಾಂಡೀವವೂ, ಎಲ್ಲಿ ಹೋಗಿದ್ದುವು? ದ್ರೌಪದಿಯು ಎಳೆಯಲ್ಪಟ್ಟಾಗ ಜಳ್ಳಾದ ಎಳ್ಳನಂತಿದ್ದು, ಅರಣ್ಯದಲ್ಲಿ ಅಲೆದು, ವಿರಾಟನಗರದಲ್ಲಿ ಭೀಮನು ಅಡಿಗೆಯವನಾಗಿದ್ದುದೂ, ಪಾರ್ಥನು ಕಡಗಕವಡೆಗಳನ್ನು ಧರಿಸಿ, ಜಡೆಹಾಕಿಕೊಂಡು ಬೃಹನ್ನಳೆಯಾಗಿದ್ದುದೂ, ಕೌರವರ ಬುದ್ಧಿವಂತಿಕೆಯಿಂದಾದ ಶಿಕ್ಷೆಯಲ್ಲವೇ? ಅಶಕ್ತರಾಗಿದ್ದರೂ ಅಹಂಕಾರದಿಂದ ಪ್ರತಿಜ್ಞಾರೂಪವಾಗಿ ನುಡಿದುದನ್ನೆಲ್ಲ ಕಾರ್ಯತಃ ಈಗ ತೋರಿಸದಿದ್ದರೆ, ಆತ್ಮಪ್ರಶಂಸೆಯನ್ನು ಮಾಡಿಕೊಳ್ಳುವ ಕುತ್ಸಿತಪುರುಷರೆಂದು ಸಜ್ಜನರು ಆಡಿಕೊಳ್ಳದಿರುವರೇ? ನಿಮ್ಮ ಪೌರುಷ ಮುಂತಾದುವು

ನಾಳನಿಂದ ಕುರುಕ್ಷೇತ್ರದ ರಣರಂಗದಲ್ಲಿ ಗೊತ್ತಾಗುವುದು. ಸಾವಿರಮಂದಿ ಅರ್ಜುನರೂ, ನೂರುಮಂದಿ ಕೃಷ್ಣರೂ ಕೂಡಿಬಂದರೂ, ಓಡಿಸಬಲ್ಲೆವು. ೧೧ ಅಕ್ಷೌಹಿಣಿ ಸೇನೆಯನ್ನೂ ಭೀಷ್ಮದ್ರೋಣಕರ್ಣಶಲ್ಯ ಮುಂತಾದ ಮಹಾರಥಿಕರ ಪರಾಕ್ರಮವನ್ನೂ ನೋಡಿ ಹಿಮ್ಮೆಟ್ಟದೆ, ಕೈಲಾದರೆ ಯುದ್ಧವನ್ನು ಮಾಡಲಿ. ಇಲ್ಲವೆ ಪರ್ವತಶಿಖರವನ್ನೇರಿ ಮರೆಯಾಗಲಿ,—ಎಂದು ಕೌರವೇಂದ್ರನು ಹೇಳಿದನೆಂಬದಾಗಿ ನುಡಿದನು. ಪಾಂಡವರು ಉಲೂಕನನ್ನು ಕುರಿತು—ನೀನು ಬೇಗ ಕೌರವನ ಬಳಿಗೆ ಹೋಗಿ, ಕೌಂತೇಯರು ಯುದ್ಧಕ್ಕೆ ಸಿದ್ಧರಾಗಿದ್ದಾರೆ. ನಾಳೆ ನೀನೂ ಯುದ್ಧಕ್ಕೆ ಸಿದ್ಧನಾಗಿರಬೇಕು,—ಎಂದುಹೇಳು. ಸ್ವಭುಜಪರಾಕ್ರಮದಿಂದ ಯುದ್ಧದಲ್ಲಿ ವೈರಿಗಳನ್ನು ಜಯಿಸುವವನು ಉತ್ತಮನು. ಪರಬಲವನ್ನು ನಂಬಿಕೊಂಡು ರಿಪುಗಳನ್ನು ಜಯಿಸುವೆನೆಂದು ತಿಳಿದಿರುವ ಪುರುಷಾಧಮನಿಗೆ ಹಾನಿಯಾಗದೆ ಇರುವುದಿಲ್ಲ. ದುರ್ಯೋಧನನು ತನ್ನಲ್ಲಿರುವ ಕೆಟ್ಟ ಗುಣಗಳಿಗೆ ಕೂಡಲೆ ತಕ್ಕ ಫಲವನ್ನು ಹೊಂದುವನು. ಪೂರ್ವಕಾಲದಲ್ಲಿ ದೇವತೆಗಳು ಕಡಲಿನಲ್ಲಿ ಹುಟ್ಟಿದ ರತ್ನಗಳಿಂದ ತೃಪ್ತರಾಗದೆ, ಹುಟ್ಟಿದ ವಿಷಕ್ಕೂ ಹೆದರದೆ, ಅಮೃತವು ಸಿಕ್ಕುವವರೆಗೂ ಅದನ್ನು ಕಡೆದಂತೆ ನಮ್ಮ ಕೆಲಸ ಕೈಗೂಡುವವರೆಗೂ ಪ್ರತಿಜ್ಞೆಗೆ ತಪ್ಪುವುದಿಲ್ಲ—ಎಂದು ಕೌರವರಿಗೆ ಹೇಳುವಂತೆ ಶಾಸನವನ್ನಿತ್ತು ಸೇನಾರಚನೆಯನ್ನು ಮಾಡಿಕೊಂಡು ಧುರಕ್ಕೆ ಅನುವಾಗುತ್ತಿದ್ದರು. ಉಲೂಕನು ಕೌರವೇಶ್ವರನ ಬಳಿಗೆ ಹೋಗಿ, ಭೀಮಾರ್ಜುನರು ಹೇಳಿದ ಮರ್ಮಭೇದಕವಾದ ವಾಕ್ಯಗಳನ್ನು ಶ್ರುತಪಡಿಸಲು, ಅವನು ನಾಳೆ ಅರುಣೋದಯ ಕಾಲಕ್ಕೆ ನಮ್ಮ ಸಕಲಸೈನ್ಯವೂ ಪಾವನವಾದ ಕುರುಕ್ಷೇತ್ರದ ಮೈದಾನದಲ್ಲಿ ಸಮರಸಿದ್ಧವಾಗಿರಬೇಕು—ಎಂದು ಮಂತ್ರಿಮುಖ್ಯನಿಗೆ ಹೇಳಲು, ಅವನು ರಾಜಾಜ್ಞೆಯಂತೆ ಪ್ರಚಾರಪಡಿಸಲು; ಸೈನಿಕರೆಲ್ಲರೂ ಯುದ್ಧಕ್ಕೆ ಸಿದ್ಧರಾಗಿ, ಎಷ್ಟುಹೊತ್ತಿಗೆ ಬೆಳಗಾಗುವುದೋ ? ಎಂದು ನಿರೀಕ್ಷಿಸುತಿದ್ದರು.

## ಅಧ್ಯಾಯ ೫.

ಪಾಂಡವರು ಪಾವನವಾದ ಕುರುಕ್ಷೇತ್ರದ ಪಶ್ಚಿಮಭಾಗದ ಬಯಲಲ್ಲಿ ಪಾಳೆಯವನ್ನು ಬಿಟ್ಟು, ಯುದ್ಧಕ್ಕೆ ಹೊರಡುವುದಕ್ಕೆ ಮುಂಚೆ ಮೊತ್ತಮೊದಲು ಮಹಾಗಣಪತಿಯನ್ನೂ, ಆದಿತ್ಯಾದಿನವಗ್ರಹಗಳನ್ನೂ, ಶಸ್ತ್ರಾಸ್ತ್ರಗಳನ್ನೂ, ಕ್ರಮವಾಗಿ ಅರ್ಚಿಸಿ, ಇಷ್ಟದೇವತಾಪ್ರಾರ್ಥನೆಯನ್ನು ಮಾಡಿ, ಶ್ರೀಕೃಷ್ಣನಿಗೂ ಗುರುಹಿರಿಯರಿಗೂ ಮಣಿದು, ಉಕ್ತವಾದ ಹೋಮದಾನಾದಿಗಳನ್ನು ನಡೆಯಿಸಿ, ದಿವ್ಯವಾದ ವಸ್ತ್ರಭೂಷಣಾದಿಗಳಿಂದಲಂಕೃತರಾಗಿ, ತಂತಮ್ಮ ವಾಹನಗಳನ್ನೇರಿಕೊಂಡು, ಛತ್ರಚಾಮರಾದಿಬಿರುದುಗಳೊಡನೆ, ಭೇರಿಗಳು ಭೋರೆನುತಿರಲು, ವಂದಿಮಾಗಧಾದಿಗಳು ಹೊಗಳುತಿರಲು, ಶುಕ್ರೋದಯಕಾಲದಲ್ಲಿ, ಹೊರಟರು. ಆಸೇತುಹಿಮಾಚಲ ಪರ್ಯಂತವಾಗಿರತಕ್ಕ ದೇಶಾಧಿಪತಿಗಳಲ್ಲಿ, ಭೋಜದೇಶಾಧಿಪತಿಯಾದ ರುಕ್ಮಿಯು ಹೊರತಾದ ನೃಪತಿಗಳು ಉಕ್ಕಿಬರುತ್ತಿರುವ ಸಮುದ್ರವೋ ಎಂಬಂತೆ ಜತೆಯಲ್ಲಿ ಬರುತಿರುವ ತಂತಮ್ಮ ಚತುರಂಗಬಲದೊಡನೆ ಕುರುಪಾಂಡವರ ಕಡೆ ಬಂದುಸೇರಿದರು. ಕೌರವರಕಡೆ ಯುದ್ಧಕ್ರಮವನ್ನು ಚೆನ್ನಾಗಿ ಅರಿತಿದ್ದ, ಹನ್ನೊಂದು ಅಕ್ಷೋಹಿಣೀಸೇನೆಯೂ, ಪಾಂಡವರಕಡೆ ಏಳು ಅಕ್ಷೋಹಿಣೀಬಲವೂ ಕೂಡಿದ್ದಿತು. [ಅಕ್ಷೋಹಿಣಿ ಎಂದರೆ:—೨೧, ೮೭೦ ರಥಗಳು, ೨೧, ೮೭೦ ಆನೆಗಳು, ೬೫, ೬೧೦ ಕುದುರೆಗಳು, ೧೦೯, ೩೫೦ ಪದಾತಿಗಳು] ಪಾಂಡವರ ಪಕ್ಷವಾಗಿ ಧೃಷ್ಟದ್ಯುಮ್ನನೇ ೧೮ ದಿನಗಳವರೆಗೂ ಸರ್ವಸೇನಾಧಿಪತಿಯಾಗಿದ್ದನು. ಕೌರವರ ಕಡೆ ೧೦ ದಿನಗಳವರೆಗೂ ಭೀಷ್ಮನೂ, ೫ ದಿನಗಳು ದ್ರೋಣಾಚಾರ್ಯನೂ, ೨ ದಿನಗಳು ಕರ್ಣನೂ ೧ ದಿನದಲ್ಲಿ ಶಲ್ಯನೂ ಬಳಿಕ ಅಶ್ವತ್ಥಾಮನೂ ಮುಖ್ಯ ಸೇನಾಧಿಪತಿಗಳಾಗಿ ತಂತಮ್ಮ ಕರ್ತವ್ಯಗಳನ್ನು ನೆರವೇರಿಸಿದರು. ಯುದ್ಧಕಾಲದಲ್ಲಿ ರಥಿಕರೊಡನೆ ರಥಿಕರೂ, ಆನೆಯ ಹಿಂಡಿನೊಡನೆ ಮಾವುತರೂ, ಅಶ್ವಸೇನೆಯೊಡನೆ ರಾವುತರೂ, ಪದಾತಿಗಳೊಡನೆ ಪದಾತಿಗಳೂ. ಜತೆಯಾಗಿ ಪರಸ್ಪರ ಯುದ್ಧಮಾಡಬೇಕೆಂದೂ, ಧೈರ್ಯಶೌರ್ಯಗಳಲ್ಲಿ ಸಮಾನರಾದವರೊಡನೆ ಹೋರಬೇ

ಕೆಂದೂ,—ಆಯುಧರಹಿತರನ್ನೂ, ಯುದ್ಧಕ್ಕೆ ಬಾರದಿರುವವರನ್ನೂ, ಬಾಲ
ಕರನ್ನೂ, ಮೈಮರೆತಿರುವವರನ್ನೂ, ಭಯದಿಂದ ಓಡುವವರನ್ನೂ, ಹೊರೆ
ಹೊತ್ತುಕೊಂಡು ಹೋಗಿಬರುವವರನ್ನೂ, ಮತ್ತೊಬ್ಬರೊಡನೆ ಕಾಳಗ
ಮಾಡುವವರನ್ನೂ, ವಂದಿಮಾಗಧಸೂತಜನಗಳನ್ನೂ, ಶರಣಾಗತರಾದವ
ರನ್ನೂ, ಶ್ರಮನ್ನೈದಿರುವವರನ್ನೂ, ತುತೂರಿಹಿಡಿದಿರುವ ಸವಾರರನ್ನೂ,
ಭಗ್ನವಾಹನರನ್ನೂ, ಎದುರಿಸಕೂಡದೆಂದೂ,—ವಿಧಾಯಕವಾಯಿತು. ಆಹ
ವಕ್ಕೆ ಬಂದಿರುವ ಭೂಪತಿಗಳಿಗೂ ಅವರವರ ಚತುರಂಗಬಲಕ್ಕೂ ತಾರತ
ಮ್ಯಾನುಸಾರವಾಗಿ ಬಿಡಾರಗಳನ್ನೂ ಊಟಕ್ಕೂ ಉಪಚಾರಾದಿಗಳಿಗೂ ತಕ್ಕ
ಏರ್ಪಾಡುಗಳನ್ನೂ ಮಾಡಿಸಿ ಯುದ್ಧಸಾಮಗ್ರಿಗಳನ್ನೆಲ್ಲ ಒದಗಿಸಿಕೊಂಡು,
ರಣರಂಗದಲ್ಲಿ ತಮ್ಮವರೆಂದು ತಿಳಿಯುವುದಕ್ಕಾಗಿ ಬೇಕಾದ ಗುರುತುಗ
ಳನ್ನೂ ಸನ್ನೆಯ ಮಾತುಗಳನ್ನೂ ಗೊತ್ತುಮಾಡಿಕೊಂಡು ಸಿದ್ಧರಾಗಿದ್ದರು.
ಪಾಂಡವರಕಡೆ ಸಕಲಯೋಧರ ಬಿರುದಧ್ವಜಗಳಿಗಿಂತಲೂ ಅತ್ಯುನ್ನತವಾದ
ಸೂರ್ಯಬಿಂಬದಂತಿರುವ ಹನುಮಧ್ವಜವೂ, ಕೌರವರಕಡೆ ನವರತ್ನಖಚಿತ
ವಾಗಿರುವ ಮನೋಹರವಾಗ ಸರ್ಪಧ್ವಜವೂ, ಶೋಭಿಸುತ್ತಿದ್ದುವು. ನರನಾ
ಥನಾದ ಧರ್ಮರಾಯನೊಡನೆ ಭೀಮಸೇನನು ಶ್ವೇತಚ್ಛತ್ರಮಧ್ಯದಲ್ಲಿ ನಿಂತು,
ಹಿಗ್ಗುತ್ತ ಬಲವಾಗಿ ತನ್ನ ಜಯಶಂಖವನ್ನು ಊದಿ ಕೌರವರ ಎದೆಗಳು
ತಲ್ಲಣಿಸುವ ಹಾಗೆ ಮಾಡಿದನು! ಉಭಯಸೇನೆಗಳೂ ವ್ಯೂಹರಚನೆಯಲ್ಲಿ
ಹರ್ಷವಿಸ್ಮಯಗಳಿಂದ ಒಬ್ಬರನ್ನೊಬ್ಬರು ನೋಡುತ್ತಿರಲು; ಪಾಂಡವರು
ಶ್ರೀಕೃಷ್ಣನೊಡನೆ ಗುರುಹಿರಿಯರ ಆಜ್ಞೆಯನ್ನು ಹೊಂದುವುದಕ್ಕಾಗಿ ಪಾದ
ಚಾರಿಗಳಾಗಿ ಭೀಷ್ಮ ದ್ರೋಣ ಕೃಪ ಶಲ್ಯರ ಸನ್ನಿಧಿಗೆ ಹೋಗಿ, ಅವರ
ಪಾದಪದ್ಮಗಳಿಗೆರಗಿ, 'ಯುದ್ದಮಾಡಲೇ ಬೇಕಾಗಿಬಂದಿತಲ್ಲಾ!' ಎಂದು
ಚಿಂತಿಸಿ, ಅವರೊಡನೆ ಯುದ್ಧಮಾಡುವುದಕ್ಕೆ ಅಪ್ಪಣೆಯನ್ನು ಪಡೆದು
ಅವರ ಮಂಗಳಾಶೀರ್ವಾದಕ್ಕೆ ಪಾತ್ರರಾಗಿ, ಹಿಂತಿರುಗಿ ಬಂದರು. ಅತ್ತಲು
ಕೌರವೇಂದ್ರನು ತನ್ನ ತಾಯಿಗೆ ವಂದಿಸಿದಾಗ ಆಕೆಯು ತನ್ನ ಮಗನನ್ನು
ಕುರಿತು—ಎಲ್ಲಿ ಧರ್ಮವಿರುವುದೊ ಅಲ್ಲಿ ಜಯವಾಗುವುದರಿಂದ. ನೀನು ಧರ್ಮ
ಮಾರ್ಗವನ್ನು ಬಿಡದೆ ಯುದ್ಧಮಾಡಿ ಅದರಿಂದ ಪುಣ್ಯಲೋಕವನ್ನೂ ದೇವ
ತ್ವವನ್ನೂ ಹೊಂದುವನಾಗು—ಎಂದು ಹೇಳಿದ ಆಶೀರ್ವಚನವನ್ನು ಕೇಳಿ

ಬರುತಿರಲು ; ಭಾನುಮತಿಯು ತನ್ನ ಪತಿಯಾದ ದುರ್ಯೋಧನನನ್ನು ಕುರಿತು—ಜೀಯಾ ! ತಾವೇನೋ ಯುದ್ಧಕ್ಕೆ ಸನ್ನದ್ಧರಾಗಿ ಹೊರಟಿರೋಣವಾಗಿದೆ. ಆದರೆ ನನ್ನದೊಂದರಿಕೆ ಇದೆ ಅದನ್ನು ಲಾಲಿಸಲು ಬೇಡುವೆನು-ಎಂದಳು. ಕೌರವೇಶ್ವರನು—ಎಲೆಪ್ರಿಯೇ, ಅದೇನು? ತ್ವರ್ಯವಾಗಿ ಹೇಳು-ಎಂದನು. ರಾಣಿಯು—ಮಹಾಪ್ರಭೋ, ನಿನ್ನೆಯ ಬೆಳಗಿನಜಾವದಲ್ಲಿ ಒಂದು ಮುಂಗಿಸಿಯು ಒಂದುನೂರು ಹಾವುಗಳನ್ನು ಕಚ್ಚಿ ಕೊಂದಹಾಗೆ ಸ್ವಪ್ನವನ್ನು ಕಂಡೆನು. ಇದು ಅಶುಭವು. ನೂರೆಂಬ ಲೆಕ್ಕವು ನಮಗೂ ಒಂದೆಂಬ ಮುಂಗಿಸಿಯು ವಾಯುಪುತ್ರನಿಗೂ ಸಂಬಂಧಿಸುವಹಾಗೆ ತೋರುತಿದೆ—ಎಂದಳು. ದುರ್ಯೋಧನನು—ಎಲೆ ಪ್ರಾಣಕಾಂತೆ, ಭಯಶೀಲರು ಕೆಟ್ಟ ಕನಸುಗಳಿಗೂ ಅಪಶಕುನಗಳಿಗೂ ಹೆದರಬೇಕು. ದುರ್ನಿಮಿತ್ತಾದಿಗಳು ಎಲ್ಲಿಯಾದರೂ ಒಂದುಕಡೆ ಕಾಕತಾಳನ್ಯಾಯದಂತೆ ಫಲಿಸಬಹುದು. ಬುದ್ಧಿಶಾಲಿಯು ಅಂತಹುದುದನ್ನೆಲ್ಲ ಎಂದಿಗೂ ನಂಬುವುದಿಲ್ಲ. ಈ ಸಂಗತಿಯು ಆಂಗೀರಸದಿಂದ—"ಶಕುನಂಶಪಥಸ್ಸ್ವಪ್ನ ಸ್ಸಾಮುದ್ರಿಕಮುಪಶ್ರುತಿಃ । ಏತೇಕಲಿಯುಗೇಪಂಚ ಫಲಂತಿ ನಫಲಂತಿಚ ॥" ಎಂದು ಹೇಳಲ್ಪಟ್ಟಿರುತ್ತೆ. ಶೀಘ್ರದಲ್ಲಿ ಶತ್ರುಗಳನ್ನೆಲ್ಲ ಬಲಿಕೊಟ್ಟು ಬರುವೆನು—ಎಂದು ಸಂತವಿಟ್ಟು ವೈಭವದಿಂದ ರಣರಂಗಕ್ಕೆ ಹೋಗಿ ಸೇರಿದನು.

ಆಗ ಉಭಯಸೈನ್ಯಗಳ ಮಧ್ಯದಲ್ಲಿ ರಥದಮೇಲಿರುವ ಅರ್ಜುನನು ಗುರುಹಿರಿಯರನ್ನೂ ನಂಟರಿಷ್ಟರನ್ನೂ ನೋಡಿ, ಭಯಪಟ್ಟು ಅಜ್ಞಾನದಿಂದ ಮಿಡುಕುತ, ಅವರನ್ನು ಇದುರಿಸುವುದಕ್ಕೆ ಮನಸ್ಸಿಲ್ಲದೆ, ವಿರಕ್ತನಾಗಿ, ನಾನು ಅವರೊಡನೆ ಯುದ್ಧಮಾಡುವುದಿಲ್ಲವೆಂದನು. ಶ್ರೀಕೃಷ್ಣನು—ಎಲೈ ಪಾರ್ಥನೇ, ಕ್ಷತ್ರಿಯನು ಯುದ್ಧವನ್ನು ಬಿಡಬಾರದು. ಆತ್ಮಕ್ಕೆ ಸಾವಿಲ್ಲ. ಹಾಲಿನಲ್ಲಿ ಕೆನೆಯೂ, ಮೊಸರಿನಲ್ಲಿ ಬೆಣ್ಣೆಯೂ, ಪುಷ್ಪಗಳಲ್ಲಿ ಮಕರಂದವೂ, ಮಂತ್ರಗಳಲ್ಲಿ ಗಾಯತ್ರಿಯೂ, ಸಾರವಾಗಿರುವಂತೆ, ಲೋಕಹಿತಾರ್ಥವಾಗಿ ಈಗ ನಾನು ಹೇಳುವ ಸ್ಥಿರಪ್ರಜ್ಞನ ಲಕ್ಷಣಗಳನ್ನೂ, ನಿಷ್ಕಾಮಕರ್ಮಸಾಧನೋಪಾಯವನ್ನೂ, ನನ್ನ ಲೀಲಾವಿಭೂತಿಸ್ವರೂಪವನ್ನೂ, ಆತ್ಮಾನಾತ್ಮಬೋಧೆಯನ್ನೂ, ಭಗವಂತನಲ್ಲಿರಬೇಕಾದ ಏಕಾಂತ ಭಕ್ತಿಯ

ವಿಚಾರವನ್ನೂ, ಯೋಗಗಳ ರೀತಿಯನ್ನೂ, ಚೆನ್ನಾಗಿ ಕೇಳಿ ತಿಳಿದುಕೊ—ಎಂದು, ಮೋಕ್ಷಧರ್ಮಕ್ಕೆ ಅನುಗುಣವಾಗಿ ಅಮೃತತುಲ್ಯವಾದ ಗೀತಶಾಸ್ತ್ರವನ್ನು ಉಪದೇಶಿಸಿ, ಮಹಾಮಹಿಮೆಯುಳ್ಳ ತನ್ನ ವಿಶ್ವರೂಪವನ್ನು ತೋರಿಸಿ, ಈಶ್ವರತತ್ತ್ವವನ್ನು ಬೋಧಿಸಿ, ಕಿರೀಟಿಯ ಭ್ರಾಂತಿಯನ್ನು ಹೋಗಲಾಡಿಸಿ, ಕರ್ತವ್ಯವನ್ನು ಹೇಳಿ, ಶೌರ್ಯರೋಷಾದಿಗಳು ಉಂಟಾಗುವಂತೆ ಮಾಡಲು ; ಧನಂಜಯನು ಒಪ್ಪಿಕೊಂಡು ಉತ್ಸಾಹಶೀಲನಾಗಿ ಯುದ್ಧಕ್ಕೆ ಸಿದ್ಧನಾದನು. ಆ ಸಮಯದಲ್ಲಿ ವೀರಭಟರ ಅಟ್ಟಹಾಸವೂ ಶಂಖಕಹಳಾಭೇರೀಮೃದಂಗಾದಿಧ್ವನಿಗಳೂ, ಗಜಬೃಂಹಿತಗಳೂ, ಅಶ್ವಗಳ ಹೇಷಾರವವೂ ಭೂನಭೋಂತರಗಳನ್ನು ತುಂಬುತ್ತಲಿದ್ದುವು. ದಿಗ್ಗಜಗಳೆಲ್ಲವೂ ಆ ಧ್ವನಿಯಿಂದ ಕಂಪಿತವಾದುವು ಪ್ರಾಣಿಗಳೆಲ್ಲರೂ ಮಹಾಪ್ರಳಯ ಉಂಟಾಗುವುದೆಂದು ನಡುಗುತಲಿದ್ದರು.

ಮಾರ್ಗಶಿರಶುದ್ಧತ್ರಯೋದಶೀಭರಣೀನಕ್ಷತ್ರದಲ್ಲಿ ಪಾಂಡವಯೋಧರು 'ಸತ್ಯಮೇವೋದ್ಧರಾಮ್ಯಹಂ' ಎಂದು ಕೂಗಿ ಹೇಳುತ, ಸರ್ವಬುದ್ಧಿಪ್ರೇರಕನಾದ ಜಗದೀಶ್ವರನ ಸರ್ವೋತ್ಕೃಷ್ಟವಾದ ಮಹಿಮೆಯನ್ನು ಧ್ಯಾನಿಸುತ, ವೀರಾಗ್ರೇಸರನಾದ ಭೀಮಸೇನನನ್ನು ಮುಂದುಮಾಡಿಕೊಂಡು ಕೌರವರ ಮೇಲೆ ಯುದ್ಧಕ್ಕೆ ಪ್ರಾರಂಭಿಸಿ, ಸಕಲಸೇನಾಧಿಪತಿಯಾದ ಭೀಷ್ಮನ ಪಾದಗಳಿಗೆ ಮೊತ್ತಮೊದಲು ಬಾಣಪ್ರಯೋಗವನ್ನು ಮಾಡಿದರು. ಮೇಘವು ದೊಡ್ಡ ಸಿಡಿಲಿನೊಂದಿಗೆ ಗರ್ಜಿಸುವಹಾಗೆ ಭೀಮನು ಗಟ್ಟಿಯಾಗಿ ಕಾಕುಹಾಕಿ, ತನ್ನ ಜಯಶಂಖವನ್ನು ಬಲವಾಗಿ ಊದಲು ; ಆ ಧ್ವನಿಯು ಚತುರಂಗಬಲದ ಕೋಲಾಹಲಕ್ಕಿಂತಲೂ ಇಮ್ಮಡಿಯಾಗಿ ಕೇಳಲ್ಪಟ್ಟು ಮೃಗೇಂದ್ರನ ಗರ್ಜನೆಗೆ ಮೃಗಗಳು ತಲ್ಲಣಿಸುವಂತಾಗಿ, ಕೌರವರ ಗುಂಡಿಗೆಗಳು ಬಡಿದುಕೊಳ್ಳುವಂತೆಯೂ, ವಾಹನಗಳು ಮೂತ್ರಪುರೀಷವನ್ನು ಉದಿರಿಸುವಂತೆಯೂ ಆಯಿತು. ಪಾಂಡವರು ತಮಗೆದುರಾದವರ ಮೇಲೆ ಕವಿದು ತಮ್ಮ ಪ್ರತಾಪವನ್ನು ಮೆರೆಯಿಸುತಿದ್ದರು. ಭೀಮನು ಬಾರಿಬಾರಿಗೂ ಗರ್ಜಿಸುತ ಕೌರವರ ಸೈನ್ಯದಮೇಲೆ ವೇಗವಾಗಿ ಕಾಣಿಸಿಕೊಳ್ಳಲು ; ಕೌರವನು ಕೃಪಾಚಾರ್ಯ ಮುಂತಾದ ಮಹಾರಥಿಕರೊಡನೆ ಅವನನ್ನು ಸುತ್ತುಮುತ್ತಿಕೊಂಡು, ಸರ್ಪಸಮಾನವಾದ ಬಾಣಗಳನ್ನು

ಪ್ರಯೋಗಿಸಿ ನೋಯಿಸಿದನು. ಮಾನವಶರೀರವನ್ನು ಧರಿಸಿದ ಮಹಾವಾಯುವಿನಂತೆ ತನ್ನ ಗದಾದಂಡವನ್ನು ತಿರುಗಿಸಿ ಎದುರಿಸಿದವರನ್ನು ಬಡಿಯುತ, ಹೆಬ್ಬುಲಿಯು ಹುಲ್ಲೆಗಳನ್ನು ಕೊಲ್ಲುವಂತೆ, ರಥಿಕರ ಗರ್ವವನ್ನು ತಗಿಸುತ, ರಥಗಳನ್ನು ಪುಡಿಪುಡಿಮಾಡುತ, ಮದದಾನೆಗಳ ಶಿರಸ್ಸನ್ನು ಭೇದಿಸುತ, ಮಾವುತರನ್ನು ಉರುಳಿಸುತ, ಕುಲಾಲಚಕ್ರದಂತೆ ಮಂಡಲಾಕಾರವಾಗಿಸುತ್ತುತ್ತ ಚಿತ್ರಯುದ್ಧವನ್ನು ಮಾಡಿ ಶತ್ರುಪಕ್ಷವನ್ನು ಹೊಡೆದು ಕೊಲ್ಲುತ್ತಿರಲು, ಅವರು ಚೆದರಿ ಚೆಲ್ಲಾಪಿಲ್ಲಿಯಾಗಿ ಓಡುತ್ತಿದ್ದರು. ಹೀಗೆ ಆದಿನ ಸಂಧ್ಯಾಕಾಲದವರೆಗೂ ಕುರುಪಾಂಡವರಿಗೆ ಯುದ್ಧವಾಗಿ ಸೂರ್ಯನು ಕ್ರಮಕ್ರಮವಾಗಿ ಪಶ್ಚಿಮಾಬ್ಧಿಯ ತೀರವನ್ನುಹೊಂದುತಿರುವಾಗ ತಂತಮ್ಮ ಪಾಳೆಯಕ್ಕೆ ಸೇನಾಸಮೇತ ಹಿಂತಿರುಗಿದರು.

[illegible]ನೆಯದಿನ ಸೇನಾಧ್ಯಕ್ಷನಾದ ಧೃಷ್ಟದ್ಯುಮ್ನನು ಕ್ರೌಂಚವ್ಯೂಹವನ್ನು ನಿರ್ಮಿಸಲು, ಕೌಂತೇಯರು ಕೌರವರಮೇಲೆ ಬಾಣಪ್ರಯೋಗವನ್ನು ಮಾಡಿ ಅವರ ಬಿಂಕವಂ ಮುರಿಯುತ್ತಿದ್ದರು. ಆಗ ಭೀಮನು ಗದಾಹಸ್ತನಾಗಿ ನಿಂತು ತನಗೆದುರಾದವರ ಕೂಡ ಅತ್ಯದ್ಭುತವಾದ ತನ್ನ ಶೌರ್ಯವನ್ನು ಮೆರೆಯಿಸುತ, ಒಣಗಿದೆಲೆಗಳನ್ನು ಹಾರಿಸುವ ಸುಂಟರುಗಾಳಿಯಂತೆ, ಹೊಡೆದು ಕೊಲ್ಲುತಿರಲು; ಕೌರವಯೋಧರು ಭೀಮನ ಪರಾಕ್ರಮಕ್ಕೆ ಆಶ್ಚರ್ಯಪಡುತ, 'ಯುಗಾಂತಕಾಲದ ಅಂತಕನೇ ಈ ಭೀಮನ ರೂಪದಿಂ ಬಂದು ನಮ್ಮಮೇಲೆ ಉರವಣಿಸುತಿದಾನೆ.' ಎಂದು ಮೊರೆಯಿಡುತ ಪ್ರಾಣವನ್ನು ತೃಣೀಕರಿಸಿ ಯುದ್ಧವನ್ನು ಮಾಡುತಿದ್ದರು. ಆಗ ಕಳಿಂಗದೇಶಾಧಿಪತಿಯಾದ ಶ್ರುತಾಯುವು ನಿಷಾದಪತಿಯಾದ ಕೇತುಮಂತನನ್ನೂ, ಸಾವಿರರಥಿಕಶ್ರೇಷ್ಠರನ್ನೂ, ಹತ್ತುಸಾವಿರ ಮದದಾನೆಗಳನ್ನೂ ಕೂಡಿಕೊಂಡು ಭೀಮನಮೇಲೆ ಹೊರಟು ಅವನನ್ನು ಸುತ್ತಿಮುತ್ತಿಕೊಂಡು ಕೋಪಾಟೋಪದಿಂದ ಅನೇಕ ತೀವ್ರಬಾಣಗಳಿಂದ ಹೊಡೆದು ಬೊಬ್ಬಿರಿದನು. ಭೀಮನು ಅದನ್ನು ಸಹಿಸದೆ, ಅಧಿಕವಾಗಿ ಅಟ್ಟಹಾಸವನ್ನು ಮಾಡಿ ಲಕ್ಷೋಪಲಕ್ಷಬಾಣಗಳನ್ನು ಕ್ಷಣಮಾತ್ರದಲ್ಲಿಯೇ ಬಿಡುತ, ಕವಿದುಬರುವ ಶತ್ರುಸೇನೆಗಳನ್ನು ನಾಶಮಾಡುತ, ಕಳಿಂಗಪತಿಯಮೇಲೆ ಕಾಣಿಸಿಕೊಂಡನು. ಆ ಧನುರ್ಧರಾಗ್ರೇಸರನು ಭೀಮನ ಹೃದಯಮಧ್ಯದಲ್ಲಿ ಸುವರ್ಣಪುಂಖಗಳಾದ ಬಾಣಗಳನ್ನು

ನಡಿಸಿ ನೋಯಿಸಲು ; ಭೀಮನು ಕೋಪೋದ್ದೀಪಿತನಾಗಿ ವಿಚಿತ್ರವಾಗಿ ತನ್ನ ರಥವನ್ನು ನಡೆಯಿಸುತ ಸರೋವರಗಳನ್ನು ಕಲಕುವ ಮಹಾಮಕರದಂತೆ, ತೀಕ್ಷ್ಣಸಾಯಕಗಳಿಂದ ಕಳಿಂಗಮಹೀಪಾಲನನ್ನೂ ಕೇತುಮಂತನನ್ನೂ ಇವರಿಬ್ಬರ ಅಂಗರಕ್ಷಕರನ್ನೂ ಪುತ್ರಮಿತ್ರಬಲಸಮೇತ ಸಂಹರಿಸಿ ತನ್ನ ಜಯಶಂಖವನ್ನು ಪೂರಿಸಿ, ಜಯಶೀಲರಾಗಿ ಬಂದ ಸಹೋದರರೊಡನೆ ಸೂರ್ಯಾಸ್ತಮಯಕಾಲದಲ್ಲಿ ಮಹಾವೈಭವಗಳಿಂದ ಕೂಡಿ ಶಿಬಿರಕ್ಕೆ ಬಂದನು.

೩ ನೆಯ ದಿನ ಪಾಂಡವರು ನಿತ್ಯಕರ್ಮವನ್ನೂ ಧನುರ್ವೇದದ ದೇವತಾರ್ಚನ ಮುಂತಾದವುಗಳನ್ನೂ ಮಾಡಿಕೊಂಡು, ಎರಡನೆಯ ಸಮುದ್ರವೋ ಎಂಬಂತೆ ಬರುತಿರುವ ತಮ್ಮ ಸೇನೆಯೊಡನೆ ಸೂರ್ಯೋದಯಕಾಲಕ್ಕೆ ಸರಿಯಾಗಿ ರಣರಂಗಕ್ಕೆ ಬಂದರು. ಆದಿನದ ಯುದ್ಧಕ್ಕೆ ಆ ಮಹಾಮಹಿಮನಾದ ಭೀಷ್ಮನು ಗರುಡವ್ಯೂಹವನ್ನು ಒಡ್ಡಿ ಪಾಂಡವರೊಡನೆ ಚಿತ್ರಯುದ್ಧವನ್ನು ಮಾಡಿನೋಯಿಸಿದನು. ಭೀಮನು ಕುಪಿತನಾಗಿ ಗದೆಯನ್ನು ತೆಗೆದುಕೊಂಡು ಕೌರವಸೇನೆಯಮೇಲೆ ನುಗ್ಗಿ ರಥಗಳನ್ನು ಅಪ್ಪಳಿಸುತ, ಆನೆಗಳ ಸೊಂಡಿಲುಗಳನ್ನು ಹಿಡಿದು ಬೀಸಿ ಕೊಲ್ಲುತ, ಕುದುರೆಗಳನ್ನು ಎತ್ತಿ ಅಂತರಿಕ್ಷಕ್ಕೆ ಬಿಸಾಡುತ ಕಾಲ್ಬಲಗಳನ್ನು ತುಳಿದು ನಾಶಮಾಡುತ, ಸಂಜೆಯವರಿಗೂ ಕಾದಾಡಿ, ಆ ಬಳಿಕ ಪರಿವಾರದೊಡನೆ ಪಾಳೆಯಕ್ಕೆ ಹಿಂತಿರುಗಿದನು. ಹೀಗೆ ಭಯಂಕರವಾಗಿ ಯುದ್ಧವಾಗುತಿದ್ದರೂ ಪ್ರಜೆಗಳು ನಿರ್ಭಯದಿಂದ ತಂತಮ್ಮ ಕಾರ್ಯವನ್ನು ಮಾಡಿಕೊಂಡು ಸುಖವಾಗಿದ್ದರು

೪ ನೆಯ ದಿನ ಉಭಯಸೇನೆಗಳೂ ರಣರಂಗದಲ್ಲಿ ಕಲೆತು ದಾರುಣವಾದಯುದ್ಧವನ್ನು ಮಾಡುವಾಗ, ಭೀಮನು ಆನೆಯ ಹಿಂಡಿಗೆ ಹೋಗಿ ಎದರಾದ ಮಾವುತರೊಡನೆ ಹೋರಿ ಮದಗಜಗಳನ್ನೆಲ್ಲ ಸವರಿ, ಸಿಂಹನಾದವನ್ನು ಮಾಡಿದನು. ಮಾನಧನನಾದ ಸುಯೋಧನನು ತನ್ನ ಆನೆಯ ದಂಡು ಸವೆದು ಹೋಗುತಿರುವುದನ್ನು ತಿಳಿದು ಕೋಪೋದ್ರೇಕದಿಂದ ಪರಿವಾರ ಸಹಿತ ಹೊರಟು ಭೀಮನಮೇಲೆ ತಾನೇ ಯುದ್ಧಕ್ಕೆ ನಿಂತು ನಿಶಿತಶರಗಳನ್ನು ಪ್ರಯೋಗಿಸಿದನು. ಮಹಾರಥನಾದ ಭೀಮನು ತನ್ನ ಊರುವೇಗದಿಂದ ರಥಸಮೂಹಗಳನ್ನೂ, ಆನೆಗಳಿಂದ ಮಾವುತರನ್ನೂ, ತುರಗಗಳಿಂದ ರಾವುರನ್ನೂ ಕೆಡಹಿ, ಸ್ಥಿರವಾಗಿ ನಿಂತು ಮೃತ್ಯುದೇವತೆಯಂತೆ ತನ್ನ ದೃಷ್ಟಿಗೆ

ಬಿದ್ದ ಯೋಧರನ್ನೆಲ್ಲ ಗದೆಯ ಪೆಟ್ಟಿನಿಂದ ಕಾಲನ ಅರಮನೆಗೆ ಕಳುಹಿಸುತಿದ್ದನು. ಏಕಾದಶಾಕ್ಷೋಹಿಣೀಪತಿಯಾದ ಕೌರವೇಶ್ವರನು ರೇಗಿದವನಾಗಿ ಬಕಾಂತಕನಮೇಲೆ ಕ್ರೂರನಾರಾಚಗಳನ್ನು ಪ್ರಯೋಗಿಸಿ ನೋಯಿಸಿದನು. ಕ್ರೋಧೋದ್ದೀಪಿತನಾದ ಭೀಮನು ದುರ್ಯೋಧನನನ್ನು ನೋಡುತ, ಅನೇಕಬಾಣಗಳನ್ನು ಪ್ರಯೋಗಿಸಿ-ಅವನು ತಲೆ ಎತ್ತದಂತೆ ಮಾಡಿದನು. ಭೀಷ್ಮನು ಅದನ್ನು ಕಂಡು ಬೇಗನೆ ಕೌರವೇಶ್ವರನಿಗೆ ಬೆಂಬಲವಾಗಿ ಹೊರಟು ತನ್ನ ಪರಾಕ್ರಮದಿಂದ ಅವನನ್ನು ತೊಲಗಿಸಿಕೊಂಡು ಹೋದನು. ಸಮರದಕ್ಷರಾಗಿ ತನ್ನನ್ನು ಎದುರಿಸಿದ ಸೇನಾಪತಿ, ಜರಾಸಂಧ, ವಿಚಿತ್ರ, ಭೀಮ, ಸುಲೋಚನ, ಭೀಮಬಾಹು, ಸುಷೇಣ, ಉಗ್ರ ಎಂಬ ೮ ಮಂದಿ ಕೌರವರನ್ನು ಭೀಮಸೇನನು ಕ್ರೂರಬಾಣಗಳಿಂದ ಕೊಂದು, ಐರಾವತಕ್ಕೆ ಸಮವಾದ ಮದಕರಿಯಮೇಲೆ ಕಾಳಗಕ್ಕೆ ಬರುತ್ತಿದ್ದ ಭಗದತ್ತನನ್ನು ಕೆಣಕಿ ಅವನ ಕ್ರೂರವಾದ ಏಟಿನಿಂದ ಮೂರ್ಛಿತನಾಗಿ ಬಿದ್ದನು. ಆಗ ಘಟೋತ್ಕಚನು ಆ ಭಗದತ್ತನ ಕೂಡ ಯುದ್ಧಮಾಡುತಿರುವಲ್ಲಿ ಭೀಮನು ತಟ್ಟನೆ ಎದ್ದು, ಗಜಯುದ್ಧಕೋವಿದರಿಗೆಲ್ಲ ಗುರುವಿನಂತಿದ್ದ ಆ ಪ್ರಾಗ್ಜ್ಯೋತಿಷಾಧಿಪತಿಯನ್ನು ನೋಯಿಸಿ, ಅವನ ಮದಗಜವನ್ನೂ ಕೊಂದು ಓಡಿಸಿದನು. ದುರ್ಯೋಧನನು ಆವೊತ್ತು ತನ್ನ ತಮ್ಮಂದಿರೆಂಟುಮಂದಿ ಭೀಮನಿಂದ ಹತರಾದುದಕ್ಕೆ ಕಂಬನಿಗಳನ್ನು ಸುರಿಸುತ ಪಾಳೆಯವನ್ನು ಸೇರಿದನು.

೫ ನೆಯದಿನ ಕೌರವಸೇನೆಯೂ ಪಾಂಡವಸೇನೆಯನ್ನು ಸಮುದ್ರವು ಸಮುದ್ರವನ್ನು ಸೇರುವಂತೆ ಕೂಡಲು, ಸಂಗ್ರಾಮದಲ್ಲಿ ಮಹಾತ್ಮನಾದ ಭೀಷ್ಮನು ಮಕರವ್ಯೂಹವನ್ನೂ, ಧೃಷ್ಟದ್ಯುಮ್ನನು ಶ್ಯೇನವ್ಯೂಹವನ್ನೂ ನಿರ್ಮಿಸಿಕೊಂಡು ಸಂಜೆಯವರೆಗೂ ಪರಸ್ಪರ ಘೋರವಾಗಿ ಯುದ್ಧವನ್ನು ಮಾಡಿದರು. ಇಂದು ಕೌರವರಿಗೇ ಜಯವಾಯಿತು.

೬ ನೆಯದಿನ ಆಹವದಲ್ಲಿ ಕುರುಪಾಂಡವರಿಗೆ ಜಗಳವಾಗುತಿರುವಲ್ಲಿ, ಭೀಮನು ಸೂರ್ಯಬಿಂಬದಂತೆ ಹೊಳೆಯುತ್ತಿರುವ ದಿವ್ಯರಥಾರೂಢನಾಗಿ ಭೀಷ್ಮನ ಕ್ರೌಂಚವ್ಯೂಹದ ಒಳಗೆನುಗ್ಗಿ, ದುರ್ಯೋಧನನನ್ನೂ, ಕೃತವರ್ಮನನ್ನೂ ಯುದ್ಧದಲ್ಲಿ ಸೋಲಿಸಿ, ಅರಿಗಳನ್ನು ಸವರುತಲಿದ್ದು ಜಯಮಂಗಳವಾದ್ಯಗಳು ಭೋರಿಡುತಿರಲು, ಸುವರ್ಣಕಲಶಶತಗಳಿಂದ ಶೋಭಿ

ಸುತ, ಮುಕ್ತಾಮಯಗಳಾದ ಮೇಲುಕಟ್ಟುಗಳಿಂದ ಹೊಳೆಯುತ್ತ, ಮನೋಹರವಾಗಿರುವ ತನ್ನ ಬಿಡಾರವನ್ನು ಸೇರಿ, ಪುಷ್ಪಮಾಲಾಲಂಕೃತವಾದ ಮೃದುಶಯನದಲ್ಲಿ ಕುಳಿತ, ಆಪ್ತಮಿತ್ರರೊಡನೆ ರಾಜಭೋಗಗಳನ್ನು ಅನುಭವಿಸಿದಬಳಿಕ ನಿದ್ರಾಸಕ್ತನಾದನು.

೭ ನೆಯದಿನ ಕುರುಪಾಂಡವರಿಗೆ ಮಹಾಭಯಂಕರವಾಗಿ ಯುದ್ಧವಾಗುತ್ತಿದ್ದುದನ್ನು ಎಂದಿನಂತೆ ವ್ಯೋಮಯಾನದಲ್ಲಿ ಕುಳಿತು ನೋಡುತ್ತಿದ್ದ ದೇವತೆಗಳು ಅಭಿನಂದಿಸುತ್ತಿದ್ದರು. ಭೀಷ್ಮನು ತನ್ನನ್ನು ಅರ್ಧರಥನೆಂದು ಸಭೆಯಲ್ಲಿ ಹೇಳಿದುದಕ್ಕೋಸ್ಕರ ಆವನ ಸೇನಾಧಿಪತ್ಯಕಾಲದಲ್ಲಿ ಹತ್ತು ದಿನಗಳೂ ಕರ್ಣನು ಕೋಪಗೊಂಡು ಯುದ್ಧಕ್ಕೆ ಬಾರದೆ,ದಂಡುಬಿಟ್ಟು ದೂರವಾಗಿ ಇದ್ದುದರಿಂದ ಅರ್ಜುನನು ತ್ರಿಗರ್ತರನ್ನು ನಾಶಮಾಡಲು ಸರಾಗವಾಯಿತು. ಭೀಮನು ಭಯಂಕರನಾಗಿ ಯುದ್ಧಮಾಡುತ್ತ ವೈರಿಗಳನ್ನು ಹತಮಾಡುತ್ತಿರುವಲ್ಲಿ ಹಗಲು ಕಡಿಮೆಯಾಗುತ್ತಾ ಬಂದು, ಅಂತರಿಕ್ಷವು ರಕ್ತಮಯವಾಗಿ ದ್ವಿಜರೆಲ್ಲರೂ ಸಾಯಂತನಕರ್ಮದಲ್ಲಿ ನಿರತರಾಗಿರಲು; ಉಭಯಪಕ್ಷದವರೂ ಪಾಳೆಯಕ್ಕೆ ಬರುತ್ತಿರಲು; ಮಂದಮಾರುತವು ಬೀಸುತ್ತಿದ್ದಿತು. ಚಂದ್ರನು ರಾತ್ರಿಯೆಂಬ ಕಾಂತೆಯೊಡನೆ ಸೇರಿದುದರಿಂದ ಅಂಧಕಾರವು ಅದೃಶ್ಯವಾಯಿತು. ಆಗ ಯೋಧರು ವಿಶ್ರಮಿಸಿಕೊಳ್ಳುತ್ತಲಿದ್ದರು.

೮ ನೆಯದಿನ ಮಹಾಬಲಸಂದನನಾದ ಭೀಮನು ಕನಕಚಿತ್ರಿತವಾದ ಮಿಂಚಿನಂತೆ ಹೊಳೆಯುತ್ತಲಿರುವ ಧನುಸ್ಸನ್ನು ಹಿಡಿದು ಹೆದೆಯನ್ನು ಮೀಟುತ, ಮಹಾಪರಾಕ್ರಮಿಯಾದ ಭೀಷ್ಮನನ್ನೆದುರಿಸಿ ತೀಕ್ಷ್ಣಬಾಣಗಳನ್ನು ಪ್ರಯೋಗಿಸುತ್ತಿರುವಾಗ ಅವನಿಗೆ ಅಡ್ಡಲಾಗಿ ಬಂದು ತನ್ನನ್ನು ಕೆಣಕಿದ- ಸುನಾಭ, ಆದಿತ್ಯಕೇತು, ಕುಂಡಧಾರ, ಬಹ್ವಾಸಿ, ಮಹೋದರ, ಅಪರಾಜಿತ, ಪಂಡಿತಕ, ವಿಶಾಲಾಕ್ಷ—ಎಂಬ ಎಂಟುಮಂದಿ ಕೌರವರನ್ನು ಪ್ರಾತಃಕಾಲದಲ್ಲಿಯೇ ಬಲಿಹಾಕಿ, ಕೌರವರ ಆನೆಯ ಹಿಂಡನ್ನು ಮುಳುಗಿಸಿ, ಅನೇಕ ಕುರುವೀರರುಗಳನ್ನು ದಿವ್ಯಾಸ್ತ್ರಗಳಿಂದ ಜಯಿಸಿ, ಬೊಬ್ಬಿರಿದನು. ಆಗ ಪಾಂಡವರ ಕಡೆ ಇರಾವಂತನೆಂಬ ಸಾಮಂತರಾಜನು ಕೌರವರಿಂದ ಮಡಿದನು. ಅದನ್ನು ಕೇಳಿ ಕೋಪದಿಂದ ಮುಂದಕ್ಕೆ ಹೋಗುತ್ತಿರುವ ಭೀಮನಿಗೆ ಎದುರಾಗಿ ಕಾಳಗಕ್ಕೆ ಬಂದ ಮಕರಧ್ವಜ, ಸುಬಾಹು, ದೀರ್ಘ

ಬಾಹು, ವಿರಾಜ, ಕುಂಡಭೇದಿ, ದೀರ್ಘಲೋಚನ, ಅನಾಧೃಷ್ಟಿ—ಎಂಬ ಏಳು ಮಂದಿ ಕೌರವರನ್ನು ಹತಮಾಡಿ, ದ್ರೋಣಾಚಾರ್ಯನನ್ನು ಎದುರಿಸಿ, ನೋಡಿದವರೆಲ್ಲಾ ಭಲಾ! ಭಲಾ! ಎಂದು ಹೊಗಳುವಂತೆ ಯುದ್ಧವನ್ನು ಮಾಡುತಿದ್ದು, ಜಯಶೀಲರಾಗಿ ಬಂದ ಒಡಹುಟ್ಟಿದವರೊಡನೆ ಪಾಳೆಯವನ್ನು ಸೇರಿದನು. ಅಪ್ಪೊತ್ತು ೧೪ ಮಂದಿ ತಮ್ಮಂದಿರು ಹತರಾದುದಕ್ಕೆ ನಿಟ್ಟುಸಿರನ್ನು ಬಿಡುತ್ತಿದ್ದ ಕೌರವೇಂದ್ರನು, ಕ್ರೂರಸರ್ಪನಂತಿರುವ ದುಶ್ಶಾಸನನ ಹಸ್ತದಲಾಗಿನಿಂದ ಕನಕರತ್ನಖಚಿತವಾದ ದಿವ್ಯರಥವನ್ನೇರಿ ಅಮರಸಮೂಹದಿಂದ ಸ್ತುತಿಸಲ್ಪಡುತಿರುವ ಮಹೇಂದ್ರನ ವೈಭವದಂತೆ ಮಹಾರಾಜವೈಭವದಿಂ ಶಿಬಿರಕ್ಕೆ ಹೋಗುತ್ತಿರಲು; ಸಾವಿರಸಂಖ್ಯೆಯುಳ್ಳ ಚಿನ್ನದ ಹಿಡಿಯುಳ್ಳ ದೀವಟಿಗೆಗಳು ಗಂಧದ ಎಣ್ಣೆಯಿಂದ ಹತ್ತಿ ಬೆಳಗುತ್ತಿರಲು, ವಂದಿಮಾಗಧಬೃಂದಗಳು ಸಹಸ್ರಪ್ರಕಾರವಾಗಿ ಸ್ತುತಿಸುತ್ತಿರಲು, ರಣಯಜ್ಞಕ್ಕೆ ಬಂದಿರುವ ಸಾಮಂತರಾಜರುಗಳ ಮೃದುಮಧುರವಾದ ಬಿನ್ನಪಗಳನ್ನು ಕೇಳುತ, ದಿವ್ಯರಥ ಗಜಾಶ್ವಗಳನ್ನೇರಿ ತಂತಮ್ಮ ಸೈನ್ಯಗಳೊಡನೆ ಬಂದು ವಂದಿಸಿ ವರದಿಹೇಳುವ ದಳಪತಿಗಳನ್ನು ಅದಟಿಸುತ, ರಾಜಮರ್ಯಾದೆಗಳಿಂದ ಶೋಭಿಸುತಿರುವ ಭೀಷ್ಮನ ಗುಡಾರದ ಬಳಿಗೆ ಹೋಗಿ, ಕರಿಕರೋಪಮಾನವಾದ ಹಸ್ತಗಳನ್ನೆತ್ತಿ ಆತನ ಪಾದಪದ್ಮಗಳಿಗೆ ವಂದಿಸಿ, ಗದ್ಗದಕಂಠನಾಗಿ,—ಎಲೈ ಪಿತಾಮಹನೇ! ನಿನ್ನ ಸಾಹಾಯ್ಯದಿಂದ ದೇವದಾನವರನ್ನೂ ಜಯಿಸುವೆನೆಂದಿದ್ದ ನನಗೆ ಸೋಮಕಕೇಕಯಪಾಂಚಾಲಸಹಿತರಾದ ಪಾಂಡವರನ್ನು ಗೆಲ್ಲುವುದೇ ದುರ್ಘಟವಾಗಿದೆ. ಅವರೆಲ್ಲರನ್ನೂ ಸಂಗ್ರಾಮದಲ್ಲಿ ಸಂಹರಿಸುವುದಾಗಿ ಅಪ್ಪಣೆಕೊಡಿಸಿದುದನ್ನು ನೆರವೇರಿಸಬೇಕೆಂದು ಬೇಡುತ್ತೇನೆ. ಇಲ್ಲವಾದರೆ, ದಾನಶೀಲನೂ ರಣೋತ್ಸಾಹಿಯೂ ಆದ ಕರ್ಣನು ಸರ್ವಸೇನಾಪತಿಯಾಗಿರುವುದಕ್ಕೆ ಅಣತಿಯನ್ನೀಡು—ಎಂದು ವಿಜ್ಞಾಪಿಸಿದನು. ಭೀಷ್ಮನು ಹೃದಯಶಲ್ಯವಾದ ಕೌರವೇಶ್ವರನ ವಾಕ್ಯಗಳನ್ನು ಕೇಳಿ ಎಲೈ ಸಮ್ರಾಜನೇ, ಇಂದ್ರಾದಿದೇವತೆಗಳೂ ಪಾಂಡವರನ್ನು ಜಯಿಸಲಾರರು. ದುರ್ನೀತಿಯಿಂದ ಅವರೊಡನೆ ವಿರೋಧವನ್ನು ಸಂಪಾದಿಸಿಕೊಂಡಿರುವೆ. ಆದರೂ ಅವರ ಕೂಡ ಚಿರಸ್ಮರಣೀಯವಾಗಿರುವಂತೆ ಯುದ್ಧ ಮಾಡುತ್ತೇನೆ. ವ್ಯಾಧಿಗ್ರಸ್ತನಿಗೂ, ರಾಗಾನ್ವಿತನಿಗೂ, ಅರ್ಥಾಸಕ್ತನಿಗೂ,

ರೋಷಯುಕ್ತನಿಗೂ ನಿದ್ರೆ ಬರಲಾರದು. ನನ್ನ ಶಕ್ತಿಯನ್ನು ನಾಳೆ ನೋಡುವೆ. ಈ ರಾತ್ರಿ ಸುಖವಾಗಿ ನಿದ್ದೆಮಾಡು—ಎಂದು ಸಂತೈಸಿ ಕಳುಹಿಸಿದನು.

೯ ನೆಯ ದಿನ ನಡೆದ ಭೀಷ್ಮನ ರೌದ್ರರಣದಲ್ಲಿ ಪಾಂಡವಯೋಧರು ಬಹುವಾಗಿ ನೊಂದು ತಲ್ಲಣಿಸುತ್ತಿದ್ದರು. ಆಗ ಭೀಮನು ದಿವ್ಯಾಸ್ತ್ರಗಳನ್ನು ಧನುಸ್ಸಿನಲ್ಲಿ ಹೂಡಿ ತನಗೆದುರಾದ ರಥಿಕರಮೇಲೆ ಪ್ರಯೋಗಿಸಿ ಕೊಲ್ಲುತ್ತಿರಲು, ಅರ್ಜುನನು ಆ ದೇವವ್ರತನಿಗಿದುರಾಗಿ ಯುದ್ಧಮಾಡುತ್ತಿರಲು, ಧರ್ಮರಾಯನು ಶಕುನಿಯನ್ನು ನೋಯಿಸಿ ಅವನ ಕುದುರೆಗಳ ದಂಡನ್ನು ನಾಶಗೊಳಿಸಿದನು. ಆದರೂ ಅಷ್ಟೊತ್ತು ಭೀಷ್ಮನು ಪಾಂಡವರಿಗೆ ಜಯವಾಗದಂತೆ ಮಾಡಿ ಬಹಳವಾಗಿ ನಷ್ಟಗೊಳಿಸಿ, ತಾನೇ ಗೆದ್ದು ಜಯಭೇರಿಯನ್ನು ಹೊಡಿಸಿದನು.

೧೦ ನೆಯ ದಿನವೂ ಮಹಾಮಹಿಮನಾದ ಭೀಷ್ಮನು ಪಾಂಡವಬಲವನ್ನು ಕ್ರೂರವಾದ ಅಸ್ತ್ರಶಸ್ತ್ರಗಳಿಂದ ನಾಶಗೊಳಿಸಿ, ಸುಹೃದ್ಗಣಸಮೇತರಾದ ಪಾಂಡವರನ್ನೂ ತನ್ನ ಚಂಡಕಾಂಡಗಳಿಂದ ನೋಯಿಸುತ್ತಿದ್ದನು. ಭೀಮಾರ್ಜುನರು ಆತನ ಪರಾಕ್ರಮವನ್ನು ಕೊಂಡಾಡುತ್ತ ಆಹವದಲ್ಲಿ ತಮ್ಮ ಶಕ್ತಿಯನ್ನು ತೋರಿಸುತಲಿದ್ದರು. ಆ ದಿನದ ಯುದ್ಧವು ದೇವದಾನವರ ಯುದ್ಧದಂತೆ ಅತ್ಯಂತದಾರುಣವಾಗಿ ಉಭಯಪಕ್ಷಗಳಲ್ಲಿಯೂ ಅಸಂಖ್ಯಾಕವಾಗಿ ಸೇನಾನಾಶವಾಯಿತು. ಪಾಂಡವರು ದೀನದೆಶೆಯಲ್ಲಿರುವ ತಮ್ಮ ಬಲವನ್ನು ನೋಡಿ—ಭಯವನ್ನು ಬಿಟ್ಟು ಗಾಂಗೇಯನ ಮೇಲೆ ಉರವಣಿಸಿ—ಎಂದು ಪ್ರೋತ್ಸಾಹಿಸಲು, ಅವರು ತಮ್ಮ ಪ್ರಾಣಗಳ ಮೇಲಿನ ಆಶೆಯನ್ನು ತೊರೆದು, ಕ್ಷತ್ರಿಯ ಧರ್ಮವನ್ನು ಆಶ್ರೈಸಿ, ಬ್ರಹ್ಮಲೋಕವನ್ನು ಅಪೇಕ್ಷಿಸುತ ಪರಾಕ್ರಮ ವಿಜೃಂಭಿತರಾಗಿದ್ದರು. ಪ್ರತಿದಿವಸವೂ ಭೀಮಾರ್ಜುನರು ಎದುರುಕಕ್ಷಿಯಲ್ಲಿ ಹತ್ತುಸಾವಿರ ರಥಿಕರಿಗೆ ಕಮ್ಮಿ ಇಲ್ಲದಂತೆಯೂ, ಶೂರಶಾರ್ದೂಲನಾದ ಭೀಷ್ಮನು ಪಾಂಡವಬಲದಲ್ಲಿ ಇಪ್ಪತ್ತುಸಾವಿರಕ್ಕೆ ಹೆಚ್ಚಿಲ್ಲದೆಯೂ ಕೊಲ್ಲುತಿದ್ದರಷ್ಟೆ. ಅಷ್ಟೊತ್ತು ಎರಡುಕಡೆಗಳಲ್ಲಿಯೂ ಅನೇಕಸಹಸ್ರಸಂಖ್ಯಾಕರಾದ ಪ್ರಾಣಿಗಳು ಹತರಾಗಿ ಯುದ್ಧಭೂಮಿಯು ಅತಿಭಯಂಕರವಾಗಿದ್ದಿತು ತನ್ನ ತಂದೆಯಾದ ಶಂತನುಚಕ್ರವರ್ತಿಯಿಂದ, ಸ್ವೇಚ್ಛಾಮರಣವನ್ನು ಹೊಂದುವ ವರವನ್ನು ಪಡೆದಿದ್ದ

ಭೀಷ್ಮಬ್ರಹ್ಮಚಾರಿಯು ಶರೀರಾಭಿಮಾನವನ್ನು ಬಿಟ್ಟು ಶಿಖಂಡಿಯನ್ನು ಮುಂದಿಟ್ಟುಕೊಂಡು ಬಂದ, ಧನಂಜಯನೊಡನೆ ಯುದ್ಧವನ್ನು ಸಾಕು ಮಾಡಿ,—ಕೌಂತೇಯರು ಅವಧ್ಯರಾದುದರಿಂದಲೂ, ಸ್ತ್ರೀರೂಪನಾದ ಶಿಖಂಡಿಯನ್ನು ಯುದ್ಧದಲ್ಲಿದುರಿಸುವುದು ಯುದ್ಧಧರ್ಮವಲ್ಲವಾದುದುದರಿಂದಲೂ, ನಾನು ಈಗ ಈ ಸ್ಥೂಲಶರೀರವನ್ನು ತೊರೆದು ಪರಲೋಕಕ್ಕೆ ಹೋಗಲು ಸುಸಮಯವು—ಎಂದು ನಿರ್ಧರಿಸಿ, ಶ್ರೀಕೃಷ್ಣಪರಮಾತ್ಮನನ್ನು ಧ್ಯಾನಿಸುತ, ತನ್ನ ಚಂಡಪರಾಕ್ರಮದಿಂದ ಅನೇಕರಾಜರನ್ನು ನಾಕಕ್ಕೆ ಕಳುಹಿಸಿ, ತಣಿದು ಕಟ್ಟಕಡೆಗೆ ಅರ್ಜುನ ಸಹಾಯನಾದ ಶಿಖಂಡಿಯ ಮಹೋಗ್ರವಾದ ಬಾಣದಪೆಟ್ಟಿನಿಂದ ಬಿದ್ದು, ಶರೀರದಲ್ಲಿ ನಟ್ಟಿದ್ದ ಶರಗಳು ಹಾಸಿಗೆಯಂತಿರಲು, ಭೂಮಿಯನ್ನು ಸೋಕದೆ, ಪೂರ್ವಶಿರಸ್ಸಾಗಿ ಮಲಗಿ ಉತ್ತರಾಯಣ ಮಕರಮಾಸದ ಶುಕ್ಲಪಕ್ಷವನ್ನು ನಿರೀಕ್ಷಿಸಿ, ಉಪನಿಷತ್ಪಾರಾಯಣವನ್ನು ಮಾಡುತ್ತಿದ್ದನು. ವೀರಭಟರ ಗರ್ವವನ್ನು ಅಡಗಿಸುತ್ತಿದ್ದ ಭೀಮನು ಭೀಷ್ಮನ ಯುದ್ಧವು ಕೊನೆಗಂಡುದಕ್ಕೆ ಸಂತೋಷಿಸಿ, ರಾಜಚಿಹ್ನೆಗಳಿಂದ ಕೂಡಿ ಸಹೋದರಸಮೇತ ಪಾಳೆಯವನ್ನು ಸೇರಿದನು. ಆ ಬಳಕ ಕುರು ಪಾಂಡವರು ಕವಚಕಿರೀಟಾದಿಗಳನ್ನು ಸಡಲಿಸಿ, ಆಯುಧರಹಿತರಾಗಿ ಪಾದಚಾರಿಗಳಾಗಿ, ರಾಜರ್ಷಿಯಾದ ಭೀಷ್ಮಾಚಾರ್ಯನ ಸನ್ನಿಧಿಗೆ ಹೋಗಿ ನಾನಾವಿಧವಾಗಿ ಉಪಚರಿಸಿ, ಆತನ ರಕ್ಷಣೆಗೆ ತಕ್ಕ ಸೇವಕರನ್ನು ನೇಮಿಸಿ, ಆ ರಾತ್ರಿಯೇ ಮರಳ ತಂತಮ್ಮ ಬಿಡಾರಕ್ಕೆ ಹೋದರು.

೧೧ ನೆಯದಿನ ಕುರುಪಾಂಡವರು ಸೂರ್ಯೋದಯಕ್ಕೆ ಮುಂಚೆ ಬಂಧುಮಿತ್ರಾದಿಗಳೊಡನೆ ಶರತಲ್ಪಗತನಾದ ಭೀಷ್ಮನ ಸನ್ನಿಧಿಗೆ ಹೋಗಿ ಸವಿನಯವಾಗಿ ಮಣಿದು ಕುಳಿತುಕೊಂಡರು. ತೃಷ್ಣಾತುರನಾಗಿದ್ದ ಭೀಷ್ಮನಿಗೆ ಮತ್ತಾವ ನಿರ್ಮಲೋದಕವೂ ರುಚಿಸದೆ ಇರಲು, ಪಾರ್ಥನು ಪರ್ಜನ್ಯಾಸ್ತ್ರವನ್ನು ಪ್ರಯೋಗಿಸಿ ತರಿಸಿದ ಶೀತಳವಾದ ಮತ್ತು ಅಮೃತೋಪಮಾನವಾದ ಗಂಗೋದಕವು ಆತನ ಶರೀರವೆಲ್ಲವನ್ನೂ ವ್ಯಾಪಿಸಿ, ಬಾಣಗಳ ಪೆಟ್ಟನಿಂದಾದ ಪರಿತಾಪವನ್ನು ಪರಿಹರಿಸಿ ತೃಪ್ತಿಯನ್ನೈದಿಸಿತು. ಕಲ್ಮಷರಹಿತನಾದ ಭೀಷ್ಮನು ಪಾಂಡವರನ್ನು ಅನುಗ್ರಹಿಸಿ, ಕೌರವೇಶ್ವರನಿಗೆ ಹಿತೋಪದೇಶವನ್ನು ಮಾಡಿ, ಆತ್ಮಸ್ವರೂಪವನ್ನು ಅನುಸಂಧಾನಿಸುತ ಮೌನದಿಂದಿರಲು

ಸಕಲರಾಜಸಮೂಹವೂ ಪಾಳೆಯಕ್ಕೆ ಬಂದುಸೇರಿತು. ವಿಲಾಸಚತುರವಾದ ಕೌರವೇಂದ್ರನು ಭೀಷ್ಮನ ಆಜ್ಞಾನುಸಾರ ಧನುರ್ಧರರಿಗೆಲ್ಲ ಗುರುವಾದ ದ್ರೋಣಾಚಾರ್ಯನಿಗೆ ಮಂತ್ರಪುರಸ್ಸರವಾಗಿ ಅಭಿಷೇಕವನ್ನು ಮಾಡಿಸಿ, ದೇವತೆಗಳು ಕುಮಾರಸ್ವಾಮಿಗೆ ದೇವಸೇನಾಧಿಪತ್ಯವನ್ನು ಕೊಟ್ಟಹಾಗೆ, ಸರ್ವಸೇನಾಧಿಪತ್ಯವನ್ನು ವಹಿಸಿಕೊಟ್ಟನು. 'ದ್ರೋಣಕರ್ಣರ ಪಾಲನೆಯಿಂದ ಈ ಹೊತ್ತು ಪಾಂಡವರನ್ನು ಜಯಿಸುವೆವು' ಎಂದು ಕೌರವಯೋಧರು ಹಿಗ್ಗುತಿದ್ದರು. ಅತ್ತಲು ಯುಧಿಷ್ಠಿರನು ೭ ಅಕ್ಷೌಹಿಣೀ ಬಲವನ್ನೂ ಕ್ರೌಂಚವ್ಯೂಹದಲ್ಲಿರಿಸಿದನು. ಅದರ ಮುಖಭಾಗದಲ್ಲಿ ಪಾರ್ಥನು ಗಾಂಡೀವವನ್ನು ಹಿಡಿದು ನಿಂತಿರಲು ; ಭೀಮಸೇನನು ಗದಾಪಾಣಿಯಾಗಿ ದಿವ್ಯಮಣಿರಥದ ಮೇಲಿದ್ದುಕೊಂಡು, ಸಿಂಹನಾದವನ್ನು ಮಾಡುತ, ಅಗ್ರಭಾಗದಲ್ಲಿರಲು ; ರಾಜ್ಯಲಕ್ಷ್ಮಿಯು ಎತ್ತ ಕಡೆಸೇರುವಳೋ ಎಂಬ ಜಯಾಕಾಂಕ್ಷೆಯಿಂದ ಕೌರವರು ಪಾಂಡವರು ಯುದ್ಧಸನ್ನದ್ಧರಾಗಿರಲು ; ಉಭಯ ಬಲದಲ್ಲಿರುವ ಯೋಧಶ್ರೇಷ್ಠರ ಅಟ್ಟಹಾಸಗಳೂ, ಶಂಖಾರವಗಳೂ ರಥನೇಮಿಸ್ವನಗಳೂ, ಗಜಬೃಂಹಿತಗಳೂ, ಅಶ್ವಹೇಷಾರವಗಳೂ, ಸೈನಿಕರ ಸಿಂಹನಾದಗಳೂ, ಭೇರಿಮೃದಂಗಾದಿವಾದ್ಯಘೋಷಗಳೂ, ದಶದಿಕ್ಕುಗಳಲ್ಲಿಯೂ ವ್ಯಾಪಿಸಿರಲು ; ಕುಂಭಸಂಭವನು ದುರ್ಯೋಧನನನ್ನು ಅನುಗ್ರಹಿಸಿ, ರಣಭೂಮಿಯಲ್ಲಿ ರಥದಮೇಲೆ ವೀರಮಂಡಿಯಲ್ಲಿ ಕುಳಿತು, ಧನುಷ್ಟಂಕಾರವನ್ನು ಮಾಡಲು, ಯುದ್ಧಕ್ಕೆ ಆರಂಭವಾಯಿತು, ಸಹದೇವನು ಶಕುನಿಯೊಡನೆಯೂ, ಅಭಿಮನ್ಯುವು ಜಯದ್ರಥಕೌರವರೊಡನೆಯೂ, ಯುದ್ಧಮಾಡುತ್ತಿರುವಲ್ಲಿ ಮದ್ರದೇಶಾಧಿಪತಿಯಾದ ಶಲ್ಯನು ಭೀಮಸೇನನಮೇಲೆ ಕಾಣಿಸಿಕೊಂಡನು ಆವೀರಾಗ್ರಣಿಗಳಿಬ್ಬರೂ ಅತಿರೌದ್ರಾಕಾರಗಳಾದ ಗದಾಯುಧಗಳನ್ನು ತೆಗೆದುಕೊಂಡು ಗಿರಗಿರನೆ ತಿರುಗಿಸುತ ಕುಪ್ಪಳಿಸುತ, ಝಳುಪಿಸುತ ಚಕ್ರಗತಿಗಳ ಚಾತುರ್ಯದಿಂದ ಒಬ್ಬರನ್ನೊಬ್ಬರು ಪ್ರಹರಿಸುತ ರಕ್ತಸಿಕ್ತರಾಗಿ ಮೂರ್ಛೆಹೋಗಿಬಿದ್ದರು! ಕೃತವರ್ಮನು ಬಹುಪ್ರಯತ್ನದಿಂದ ಅಲ್ಲಿಗೆ ಬಂದು ಶಲ್ಯನನ್ನು ತನ್ನ ರಥದಲ್ಲಿರಿಸಿಕೊಂಡು ಹೋದನು. ಅಷ್ಟರಲ್ಲಿ ಭೀಮನು ಪ್ರಜ್ಞೆಯನ್ನೈದಿ ಪಾಶಹಸ್ತನಾದ ಅಂತಕನಂತೆ ತೋರುತ ಕೌರವಯೋಧರೊಡನೆ ಯುದ್ಧವನ್ನು

ಮಾಡುತ್ತಿದ್ದನು. ಅಸ್ತ್ರಾಚಾರ್ಯನಾದ ದ್ರೋಣನು ಯುಧಿಷ್ಠಿರಾದಿಗಳನ್ನೆದುರಿಸಿ ತನ್ನ ಖ್ಯಾತಿಗೆ ತಕ್ಕಂತೆ ಸಂಗ್ರಾಮದಲ್ಲಿ ಸಾವಿರಾರುಮಂದಿ ರಥಿಕರನ್ನು ಸಂಹರಿಸಿ, ಧರ್ಮರಾಯನನ್ನು ಹಿಡಿದು ಕೌರವನ ವಶಮಾಡುವುದಕ್ಕೆ ಯತ್ನಿಸಿ, ಭೀಮಾರ್ಜುನರ ವಿಜೃಂಭಣೆಯಿಂದ ಅದು ಸಾಗದೆ, ಕೌರವ ಯೋಧರು ಮುಖಮುರಿದು ಓಡುತಿರಲು ; ಉಭಯಪಕ್ಷದವರೂ ಆವೊತ್ತಿನ ರಣೋತ್ಸಾಹವನ್ನು ಮುಗಿಯಿಸಿಕೊಂಡು ಭೇರೀನಿನಾದದೊಡನೆ ಪಾಳೆಯಕ್ಕೆ ಹೋದರು.

೧೨ನೆಯ ದಿನದ ಯುದ್ಧಕ್ಕೆ ಮೊದಲಾಯಿತು. ಧರ್ಮರಾಯನನ್ನು ಕೈಸೆರೆಹಿಡಿದು ಕೌರವ ಸಭೆಗೆ ಒಪ್ಪಿಸುವುದಾಗಿ ಭಾಷೆಯನ್ನಿತ್ತಿದ್ದ ಅಸ್ತ್ರಾಚಾರ್ಯನು ಗರುಡವ್ಯೂಹವನ್ನೊಡ್ಡಿ ಅಕ್ಷೋಹಿಣೀಬಲಪರಿವೃತನಾಗಿ ಪಾಂಡವಬಲವನ್ನು ಮಹೇಂದ್ರನ ಬಲಗದ ಚಾವಡಿಗೆ ಕಳುಹಿಸುತಿದ್ದನು. ಕಿರೀಟಕುಂಡಲಹಾರಾದಿಭೂಷಣಗಳಿಂದ ಭೂಷಿತನಾದ ಕೌರವೇಶ್ವರನು ಭೀಮಸೇನನನ್ನು ತಾಗಿದನು. ಇವರಿಬ್ಬರ ಯುದ್ಧವೂ ಕ್ರೂರವಾದ ಸರ್ಪಕ್ಕೂ ಗರುಡನಿಗೂ ಒದಗುವ ಹೋರಾಟದಂತೆ ನೋಟಕರಿಗೆ ಆಶ್ಚರ್ಯವನ್ನೂ ಭಯವನ್ನೂ ಉಂಟುಮಾಡುತಿದ್ದಿತು. ಭಗವಂತನಾದ ಆದಿತ್ಯನು ಕಿರಣಸಹಸ್ರಗಳನ್ನು ಚೆಲ್ಲುವಂತೆ ಮಾರುತಿಯು ದುರ್ಯೋಧನನಮೇಲೆ ನಿಶಿತಶರಗಳನ್ನು ಪ್ರಯೋಗಿಸುತ ಆತನ ಕ್ರೂರಬಾಣಗಳನ್ನೆಲ್ಲ ಮಧ್ಯಮಾರ್ಗದಲ್ಲಿಯೇ ಕತ್ತರಿಸಿ ಅವನನ್ನು ಗಣನೆಮಾಡದೆ, ಧನುಸ್ಸನ್ನೂ ಧ್ವಜವನ್ನೂ ಖಂಡಿಸಿದನು. ವಂಗಪತಿಯು ದುರ್ಯೋಧನನನ್ನು ರಕ್ಷಿಸುವುದಕ್ಕಾಗಿ ಭೀಮನಮೇಲೆ ಯುದ್ಧಕ್ಕೆ ನಿಲ್ಲಲು, ಅವನು ಅವನನ್ನು ವಾಹನಸಮೇತ ಭೂಮಿಯಲ್ಲಿ ಕೆಡಹಿ, ಕೌರವನ ಆನೆಗಳನ್ನು ಸವರುತಲಿದ್ದನು. ಆಗ ನರಕಾಸುರನ ಮಗನಾದ ಭಗದತ್ತನು ತನ್ನ ಭದ್ರಗಜದಮೇಲೆ ಬಿಗಿದಿದ್ದ ನವರತ್ನಖಚಿತವಾದ ಅಂಬಾರಿಯಲ್ಲಿ ಕುಳಿತು, ಭೀಮನನ್ನು ಅಟ್ಟಿಕೊಂಡು ಹೋಗಿ ಅವನನ್ನು ಕೊಲ್ಲುವಷ್ಟು ಮಟ್ಟಿಗೆ ಬಗೆಬಗೆಯ ತಂತ್ರಗಳನ್ನೂ ಮಾಡಿದನು. ಅದು ಸಾಗದೆ, ಭೀಮನ ಪ್ರತ್ಯಸ್ತ್ರ ಮುಂತಾದವುಗಳಿಗೆ ಸಿಕ್ಕಿ ನೊಂದವನಾಗಿ ಓಡತೊಡಗಿದನು ಆಗ ಅರ್ಜುನನು ಅವನನ್ನು ಸಂಧಿಸಿ, ಕಾಳಗಮಾಡುತಿರುವಲ್ಲಿ, ಅವನು ಪಾರ್ಥನಮೇಲೆ ಆಕ

ರ್ಣಾಂತವಾಗಿ ಸೆಳೆದು ಬಿಟ್ಟ ವೈಷ್ಣವಾಸ್ತ್ರವನ್ನು ಶ್ರೀಕೃಷ್ಣನು ತನ್ನ ವಕ್ಷಸ್ಥಳದಲ್ಲಿ ಧರಿಸಲು ; ಅರ್ಜುನನು ಮತ್ತೊಂದು ದಿವ್ಯಾಸ್ತ್ರದಿಂದ ಅವನನ್ನೂ ಅವನ ಮದಕರಿಯನ್ನೂ ಕೊಂದನು ! ಕರ್ಣಾರ್ಜುನರಿಗೆ ಯುದ್ಧವಾಗುವಾಗ, ಭೀಮನು ದ್ರೋಣಾಚಾರ್ಯ ಮುಂತಾದವರನ್ನು ಎದುರಿಸಿ ಅಮರರು ಹೊಗಳುವಂತೆ ಚಮತ್ಕಾರವಾಗಿ ಯುದ್ಧಮಾಡುತಿದ್ದು ಸಂಧ್ಯಾ ಕಾಲದಲ್ಲಿ ಸಕಲಪರಿವಾರದೊಡನೆ ಶಿಬಿರಕ್ಕೆ ಬಂದನು.

೧೩ ನೆಯ ದಿನದ ಯುದ್ಧವು ಅತಿಭಯಂಕರವಾದುದು. ಶ್ರೀಕೃಷ್ಣ ಸಮೇತನಾದ ಪಾರ್ಥನು ಸಂಶಪ್ತಕರವಧಾರ್ಥವಾಗಿ ದೂವಾರಗಿರಲು ; ಸುಭದ್ರಾಪುತ್ರನಾದ ಅಭಿಮನ್ಯುವು, ತರುಣನಾದರೂ ಮಾನಿಯಾದುದರಿಂದ ಸ್ವಲ್ಪವಾದ ಅವಮಾನವನ್ನೂ ಸಹಿಸಲಾರದೆ, ಅಸ್ತ್ರಾಚಾರ್ಯನ ಪದ್ಮವ್ಯೂಹವನ್ನು ಪ್ರವೇಶಿಸಿ, ಅಸಹಾಯನಾಗಿನಿಂತು ಶತ್ರುಗಳಮೇಲೆ ತನ್ನ ಪರಾಕ್ರಮವನ್ನು ತೋರಿಸಿ, ನಿಶಿತಶಸ್ತ್ರಾಸ್ತ್ರಗಳಿಂದ, ದುರ್ಯೋಧನ ಪುತ್ರನಾದ ಲಕ್ಷ್ಮಣ ಮೊದಲಾದವರನ್ನು ಕೊಂದು ಕರ್ಣ ದ್ರೋಣ ಕೃಪ ಅಶ್ವತ್ಥಾಮ ಶಲ್ಯ ಮುಂತಾದ ಮಹಾವೀರರೊಡನೆ ಅತಿಘೋರವಾಗಿ ಯುದ್ಧವನ್ನು ಮಾಡಿ, ಅವರನ್ನು ಕ್ರೂರನಾರಾಚಗಳಿಂದ ಮೂರ್ಛೆಗೊಳ್ಳುವಂತೆ ಹೊಡೆದು, ಕೌರವರ ಬಲವನ್ನು ಬಾಣವರ್ಷಗಳಿಂದ ಓಡಿಸಿ, ಸಕಲರೂ ಶ್ಲಾಘಿಸುವಂತೆ ಧರ್ಮಯುದ್ಧವನ್ನು ಮಾಡಿ ಗೆದ್ದನು. ಅದನ್ನು ಸಹಿಸದ ಜಯದ್ರಥ ಮುಂತಾದ ಕೌರವಭಟರು ಅಸಹಾಯಶೂರನಾದ ಅಭಿಮನ್ಯುವನ್ನು ಮುತ್ತಿ ಕೊಂಡು ಕೂಟಯುದ್ಧದಲ್ಲಿ ಅಧರ್ಮದಿಂದ ಕೊಂದು ಸಂತೋಷಗೊಂಡು, ಪಾಂಡವರಿಗೆ ಮಹಾವ್ಯಸನವನ್ನುಂಟುಮಾಡಿದರು ! ಭೀಮಾರ್ಜುನರು ದೂರದಲ್ಲಿ ಪ್ರತಿದ್ವಂದ್ವಿಗಳ ಮೇಲೆ ಯುದ್ಧವನ್ನು ಮಾಡಿ, ಲಕ್ಷೋಪ ಲಕ್ಷಸೈನ್ಯವನ್ನು ಕೆಡಹುತಿದ್ದರು. “ ಶತ್ರುಗಳ ಗುಂಪನ್ನು ಎಂತಹ ವೀರನಾದರೂ ಒಬ್ಬನೇ ಪ್ರವೇಶಿಸಬಾರದು ” ಎಂಬ ಲೋಕೋಕ್ತಿಗೆ ಅನುಸಾರವಾಯಿತಲ್ಲಾ :—ಎಂದು ಪಾಂಡವರು ವ್ಯಸನದಿಂದ ತಮ್ಮ ಶಿಬಿರಕ್ಕೆ ಬಂದು ಸೇರಿದರು. ಆಗ ಭಗವದ್ಬಾದರಾಯಣಮುನಿಯು ಪಾಂಡವರ ಬಿಡಾರಕ್ಕೆ ಹೋಗಿ ಪೂಜಿತನಾಗಿ, ಅಭಿಮನ್ಯುವಿನ ಮರಣದಿಂದಾದ ವ್ಯಸನವನ್ನು ಪರಿಹರಿಸುವುದಕ್ಕಾಗಿ, ಪಾಂಡವರಿಗೆ ಷೋಡಶ ಮಹಾರಾಜರ ಚರಿತ್ರೆ

ಯನ್ನು ವಿವರಿಸಿ, " ಅಪ್ಪಾ ! ಅಂತಹ ಸರ್ವಗುಣಸಂಪನ್ನರಾದ ರಾಜಾಧಿರಾಜರೂ ಕಾಲಾಧೀನರಾದುದರಿಂದ, ಕಾಲವು ಎಂಥವನನ್ನಾದರೂ ನಾಶಗೊಳಿಸುವುದು. ಅರ್ಜುನಪುತ್ರನು ಯುದ್ಧದಲ್ಲಿ ಹಿಮ್ಮೆಟ್ಟದೆ ಅನೇಕ ವೀರರನ್ನು ಸಂಹರಿಸಿ ತಾನೂ ಅಸ್ತ್ರಘಾತದಿಂದ ವೀರಸ್ವರ್ಗವನ್ನು ಪಡೆದಿರುವನು. ಆ ವೀರಾಗ್ರಣಿಯನ್ನು ಕುರಿತು ಕ್ಲೇಶಪಡಬಾರದು. ಶೋಕವು ಅಶುಚಿಯಾದುದರಿಂದ ಅದನ್ನು ಬಿಡಬೇಕು. ಪ್ರತಿಕ್ರಿಯಾರಹಿತವಾದುದಕ್ಕೆ ನೀವು ಹೆಚ್ಚಾಗಿ ದುಃಖಪಟ್ಟು ಪ್ರಯೋಜನವೇನು ? " ಎಂದು ದುಃಖಸಮಾಧಾನವನ್ನು ಮಾಡಿಹೋದರು. ಆ ಬಳಿಕ ಪಾಂಡವರು ನೀರೊಳ್ಕೊಂಡು ರಾತ್ರಿ ಭೋಜನವನ್ನು ಮಾಡಿ ಮಲಗಿದರು.

೧೪ ನೆಯದಿನ ಬೆಳಗಿನ ಜಾವದಲ್ಲಿ ಪಾಂಡವರು ತತ್ಕಾಲೋಚಿತಂಗಳಾದ ವೇದೋಕ್ತಕರ್ಮಗಳನ್ನು ಎಂದಿನಂತೆ ಮಾಡಿಕೊಂಡು ನಿತ್ಯದಾನಾದಿಗಳನ್ನು ನೆರವೇರಿಸಿ, ಯುದ್ಧಕ್ಕೆ ಸನ್ನದ್ಧರಾಗಿ ಸಕಲಾಯುಧಗಳಿಂದ ಪೂರ್ಣವಾಗಿರುವ ಉತ್ತಮವಾದ ತಂತಮ್ಮ ರಥಗಳನ್ನಾರೋಹಿಸಿ, ರಣಭೂಮಿಗೆ ಬಂದು ಸಂಗ್ರಾಮದಲ್ಲಿದ್ದರು. ಶರಣಾಗತರಕ್ಷಣವಿಚಕ್ಷಣನಾದ ಶ್ರೀಕೃಷ್ಣನ ಅನುಗ್ರಹಕ್ಕೆ ಪಾತ್ರನಾಗಿರುವ ಅರ್ಜುನನು–" ಅಭಿಮನ್ಯುವಿನ ಕೊಲೆಗೆ ನಿಮಿತ್ತವಾದ ಸೈಂಧವನು ಇಂದಿನಸೂರ್ಯಾಸ್ತಮಾನಕಾಲದೊಳಗೆ ಶರಣಾಗತನಾಗದಿದ್ದರೆ ಅವನ ಶಿರಸ್ಸನ್ನು ಖಂಡಿಸದೆ ಇದ್ದಲ್ಲಿ, ಅಗ್ನಿಪ್ರವೇಶವನ್ನು ಮಾಡುವೆನು "–ಎಂಬ ತನ್ನ ಪ್ರತಿಜ್ಞೆಯನ್ನು ಸಾಧಿಸುವುದರಲ್ಲಿದ್ದನು. ಮತ್ತೊಂದೆಡೆಯಲ್ಲಿ ದೈತ್ಯಶ್ರೇಷ್ಠನಾದ ಅಲಂಬುಸನು ತನ್ನ ಪರಿವಾರದೊಡನೆ ಭೀಮನಮೇಲೆ ಯುದ್ಧಕ್ಕೆ ನಿಂತು ಆತನನ್ನು ಕ್ರೂರವಾದ ಬಾಣಗಳಿಂದ ನೋಯಿಸಿ, ೪೩೦ ಮಂದಿ ಪಾಂಡವಯೋಧರನ್ನು ಯಮಮಂದಿರಕ್ಕೆ ಕಳುಹಿಸಿ, ರಕ್ತಮಯಶರೀರನಾಗಿದ್ದ ಆ ವಾಯುಪುತ್ರನನ್ನು ಕುರಿತು–" ಎಲೋ ಭೀಮಾ, ನಾನಿಲ್ಲದಾಗ ನನ್ನ ಅಣ್ಣನಾದ ಬಕನನ್ನು ಕೊಂದು ಮೆರೆದೆ. ನೀನು ಶೂರನಾದರೆ ನನಗೆದುರಾಗಿ ನಿಂತು ಯುದ್ಧವನ್ನು ಮಾಡು–" ಎಂದು ಗರ್ಜಿಸಿ, ಮಾಯಾಯುದ್ಧಕ್ಕೆ ತೊಡಗಿದನು. ಪೂರ್ವದಲ್ಲಿ ಆಂಜನೇಯನಿಗೂ ಅಕ್ಷಕುಮಾರನಿಗೂ ಆದ ಆಜಿಯಂತೆ ಅವರೀರ್ವರಿಗೂ ಅತಿಘೋರವಾಗಿ ಯುದ್ಧವಾಯಿತು. ಮತ್ತೆ ಭೀಮನು

ತ್ವಷ್ಟ್ರದೇವತಾಕವಾದ ಅಸ್ತ್ರವನ್ನು ಪ್ರಯೋಗಿಸಿ ಆ ಅಸುರನ ಗರ್ವವನ್ನಡಗಿಸಿ ಓಡಿಸಲು, ಅವನು ಬಹುವಾಗಿ ನೊಂದು ಘಟೋತ್ಕಚನ ಸಮೀಪವನ್ನೈದಿ ಕಾದಾಡುತ್ತಿದ್ದು ಮರಳಿ ಭೀಮನನ್ನೆದುರಿಸಿದನು. ಧೀರನಾದ ವಾಯುಸೂನುವು ಆ ಖಳನನ್ನು ದಿವ್ಯಾಯುಧಗಳಿಂದ ಹೊಡೆದು ನೋಯಿಸಿ, ಮಲ್ಲಯುದ್ಧಕ್ಕೆ ಹೊಕ್ಕು ಶಕ್ರಶಂಬರರ ಹಾಗೆ ಹೋರಾಡುತಿರಲು, ಘಟೋತ್ಕಚಿಯು ಕ್ರೂರಬಾಣಗಳಿಂದ ಆ ರಾಕ್ಷಸನನ್ನು ಯಮಾಲಯಕ್ಕೆ ಕಳುಹಿಸಿದನು! ಅದನ್ನು ಕಂಡ ಪಾಂಡವಬಲವು ಕೋಲಾಹಲವನ್ನು ಮಾಡಿತು. ಅನಂತರ ದ್ರೋಣನ ವಿಶಿಖಭಯದಿಂದ ಪಾಂಡವಬಲವು ಕ್ಷೀಣವಾಗುತಿರಲು, ವ್ಯೂಹದ ಮಧ್ಯದಲ್ಲಿರುವ ಅರ್ಜುನನ ಧ್ವನಿ ಮುಂತಾದುವುಗಳಲ್ಲೊಂದನ್ನೂ ಕೇಳದೆ, ದುಃಖಾಕ್ರಾಂತನಾಗಿರುವ ಧರ್ಮರಾಯನು—'ಅರ್ಜುನನಿಗೆ ಸಹಾಯವಾಗಿ ಯಾರನ್ನು ಕಳುಹಿಸಲಿ? ನಾವು ವನವಾಸವನ್ನು ಮಾಡುವಾಗ ವೃದ್ಧಜನ ಸೇವಿತನಾದ ಭೀಮನ ಭುಜಬಲದಿಂದಲ್ಲವೆ, ಮಾಯಾವಿಗಳಾದ ರಾಕ್ಷಸರೇ ಮುಂತಾದ ವೈರಿಗಳನ್ನು ಜಯಿಸಿ, ಚಿಂತಾಸಮುದ್ರವನ್ನು ದಾಟಿದೆವು. ಆತನಿಗೆ, ಅಂಜನೇಯನಿಗೆ ಹೇಗೋ ಹಾಗೆ ಸಕಲವೂ ಸಾಧ್ಯವಾಗಿರುವುದು. ಅನುಜನಾಗಿರುವ ಫಲ್ಗುನನ ಕ್ಷೇಮಲಾಭವನ್ನು ಆತನಿಂದ ತಿಳಿಯುವೆನು'—ಎಂದು ನಿಶ್ಚಯಿಸಿ, ಆತನ ಬಳಿಗೆ ತನ್ನ ರಥವನ್ನು ಬೇಗನಾಗಿ ಬಿಡಿಸಿಕೊಂಡು ಹೋಗಿ ಗದ್ಗದಸ್ವರದಿಂದ—'ಎಲೈ ಭ್ರಾತೃವೇ! ದೇವತೆಗಳಿಗೂ ಅಜೇಯನಾದ ನಿನ್ನ ತಮ್ಮನ ಕಪಿಧ್ವಜವು ಕಾಣಬರುತ್ತಿಲ್ಲ. ಕಿರೀಟಿಯು ಏನಾದನೋ; ಶೀಘ್ರವಾಗಿ ಅಲ್ಲಿಗೆ ಹೋಗಿ ಅಚ್ಯುತನೊಡನೆ ಸವ್ಯಸಾಚಿಯು ಸಜೀವವಾಗಿರುವುದಕ್ಕೆ ಗುರುತಾಗಿ ನೀನು ಸಿಂಹನಾದವನ್ನು ಮಾಡಿ, ನನ್ನ ಪೇಚಾಟವನ್ನು ಹೋಗಲಾಡಿಸು' ಎಂದನು. ಭೀಮನು ಅಣ್ಣನ ಆಣತಿಯನ್ನು ಅಂಗೀಕರಿಸಲು; ಧರ್ಮರಾಯನು ಭೀಮನನ್ನು ತಬ್ಬಿಕೊಂಡು ಶಿರಸ್ಸನ್ನಾಘ್ರಾಣಿಸಿ ಮಂಗಳಾಶೀರ್ವಾದವನ್ನು ಮಾಡಿ ಕಳುಹಿಸಿದನು. ಭೀಮನು ಅಣ್ಣನ ರಕ್ಷಣೆಗೆ ಧೃಷ್ಟದ್ಯುಮ್ನನನ್ನು ಇರಿಸಿ, ದಿವ್ಯವಾದ ವಜ್ರಕವಚವನ್ನು ತೊಟ್ಟು, ನವರತ್ನಖಚಿತವಾದ ಮತ್ತೊಂದು ಕಿರೀಟವನ್ನು ಧರಿಸಿ, ಗದಾಪಾಣಿಯಾಗಿ, ನಾನಾವಿಧಾಯುಧಸಮೇತವಾದ ತನ್ನ ಕನಕರಥವನ್ನೇರಲು; ಸಾರಥಿ

ಯಾದ ವಿಶೋಕನು ಅತಿತ್ವರೆಯಿಂದ ರಥವನ್ನು ನಡೆಯಿಸಿಕೊಂಡು, ಶಕಟವ್ಯೂಹಮಧ್ಯದಲ್ಲಿರುವ ಅರ್ಜುನನ ಬಳಿಗೆ ಹೋಗುತ್ತಿದ್ದನು. ಆಗ ಕೌರವರೆಲ್ಲರೂ ಒಮ್ಮಿಡಿಯಾಗಿ ಸುತ್ತಿಮುತ್ತಿಕೊಂಡು, ನಿಶಿತಬಾಣಪರಂಪರೆಗಳಿಂದ ವಾಯುಪುತ್ರನನ್ನು ಮುಚ್ಚಿದರು. ಭೀಮನು, ವ್ಯಾಘ್ರಗಳ ಹಿಂಡನ್ನು ಕಂಡು ಸಂತೋಷಿಸುವ ಕೇಸರಿಯಂತೆ ವಿಜೃಂಭಿಸಿ, ತನ್ನೊಡನೆ ಯುದ್ಧಕ್ಕೆ ನಿಂತ ಸುಷೇಣ, ದೀರ್ಘಲೋಚನ, ಕುಂಡಭೇದ, ಬೃಂದಾರಕ, ರೌದ್ರಕರ್ಮ, ಅಭಯ, ವಿಲೋಚನ, ಎಂಬ ಏಳುಮಂದಿ ಧಾರ್ತರಾಷ್ಟ್ರರನ್ನು ದಿವ್ಯಾಸ್ತ್ರಶಸ್ತ್ರಗಳಿಂದ ಸಂಹರಿಸಿ, ಪುನಃ ಮೇಲೆ ಬಿದ್ದುಬಂದ ವಿಂದ, ಅನುವಿಂದ, ಸುದರ್ಶನ ಎಂಬ ಮೂವರು ಕೌರವರನ್ನೂ ಕ್ರೂರನಾರಾಚಗಳಿಂದ ಕೊಂದು, ಕೌರವರ ಪಡೆಯನ್ನು ಪೆಟ್ಟಿಕ್ಕುತ ಮುಂದೆಮುಂದೆ ಹೋಗುತಿರಲು ; ಹತಶೇಷರಾದ ಸುಶರ್ಮನಾದಿಗಳು—ಎಲ್ಲಿ ನೋಡಿದರೂ ಈ ವೃಕೋದರನ ಹೊಡೆತವೇ ಬಲವಾಗಿದೆಯಲ್ಲಾ !—ಎಂದು ನುಡಿನುಡಿದು ಓಡಿದರು. ಆಗ ದ್ರೋಣಾಚಾರ್ಯನು ಭೀಮನಿಗೆ ತಕ್ಕುದನ್ನು ಮಾಡುತ್ತೇನೆಂದು ಮೊರೆದು ಕೊಂಡು ಹೋಗಿ, ಶರಪರಂಪರೆಗಳಿಂದ ಪವಮಾನಪುತ್ರನ ಹಣೆಯನ್ನು ನೋಯಿಸಿದನು. ಕೌಂತೇಯನು ಸಿಟ್ಟಿನಿಂದ ಗದಾದಂಡವನ್ನು ಗರಗರನೆ ತಿರುಗಿಸಿ, ಅಸ್ತ್ರಾಚಾರ್ಯನ ಮೇಲೆ ಹಾಕಿದನು. ಆತನು ಒಡನೆ ಆ ರಥದಿಂದ ಹಾರಿ ಆ ಏಟನ್ನು ತಪ್ಪಿಸಿಕೊಂಡನು. ಆ ದಿವ್ಯರಥವು ಅಶ್ವಸಾರಥಿಧ್ವಜಸಮೇತ ಪುಡಿಪುಡಿಯಾಯಿತು. ದ್ರೋಣನು ಮತ್ತೊಂದು ತೇರನ್ನೇರಿ ಪಾಂಡವಯೋಧರನ್ನು ಬಲಿಯಿಕ್ಕುತ ಪುನಃ ಭೀಮನ ಸಂಗಡ ಯುದ್ಧಕ್ಕೆ ನಿಂತನು. ಅವರಿಬ್ಬರೂ ಮೇಘಬೃಂದಗಳಿಂದ ಮರೆಮಾಡಲ್ಪಟ್ಟ ರವಿಚಂದ್ರರಂತೆ ಶರಪೂರಿತಗಾತ್ರರಾಗಿ ಯುದ್ಧಮಾಡುತಿದ್ದರು ಆಗ ಭೀಮನು ಎಲ್ಲರೂ ನೋಡುತ್ತಿರುವಾಗ ರಥದಿಂದ ಧುಮುಕಿ ಬಾಣಗಳ ಪೆಟ್ಟಿಗೆ ಹೆದರದೆ, ಮಳೆಯ ಹನಿಗಳಿಗೆದುರಾಗಿ ಹೋಗುವ ದೊಡ್ಡ ಗೂಳಿಯಂತೆ ದ್ರೋಣನ ರಥದಬಳಿಗೆ ಹೋಗಿ, ಅದನ್ನು ಮೇಲಕ್ಕೆತ್ತಿ ಗಿರಗಿರನೆ ತಿರುಗಿಸಿ ಬೀಸಾಡಿದನು. ವಿರಥನಾದ ದ್ರೋಣನು ಮುಂಚಿತವಾಗಿ ಮತ್ತೊಂದು ರಥಕ್ಕೆ ಹಾರಿದುದರಿಂದ ಅಪಾಯಕ್ಕೆ ಸಿಕ್ಕಲಿಲ್ಲ. ಭೀಮನು ರಥವನ್ನೇರಿ ಶತ್ರುಸೈನ್ಯವನ್ನತಿಕ್ರಮಿಸಿ ಮತ್ತೊಂದೆಡೆಯಲ್ಲಿದ್ದ ವೈರಿವರ್ಗವನ್ನು

ಮೃತ್ಯುವಿಗೆ ಬಲಿಯನ್ನಾಗಿ ಮಾಡಿ, ಸಾತ್ಯಕಿಯ ರಣೋತ್ಸಾಹವಂ ನೋಡುತ, ಕೌರವಯೋಧಪ್ರಮುಖರನ್ನು ಸಂಗ್ರಾಮದಲ್ಲಿ ಸಂಹರಿಸುತಲಿರುವ ಸವ್ಯಸಾಚಿಯನ್ನು ದೂರದಲ್ಲಿಯೇ ನೋಡಿ, ಹರ್ಷಿತನಾಗಿ, ಭೂಮ್ಯಾಕಾಶಗಳು ನಡಗುವಂತೆ ಸಿಂಹಗರ್ಜನೆಯನ್ನು ಮಾಡಿದನು. ಅದನ್ನು ಕೇಳಿದ ಕೃಷ್ಣಾರ್ಜುನರು ಭೀಮನನ್ನು ನೋಡಲಪೇಕ್ಷಿಸಿ, ಸಂಗಡಲೆ ಪ್ರತಿಧ್ವನಿಯನ್ನು ಮಾಡಿದರು. ಇವರ ಅಟ್ಟಹಾಸವನ್ನು ಧರ್ಮರಾಯನು ಕೇಳಿ, ಸಂತುಷ್ಟಾಂತರಂಗನಾಗಿ ನಗುತ್ತ—ವಾಸುದೇವಭೀಮಾರ್ಜುನರ ಸಿಂಹನಾದಗಳು ಕೇಳಲ್ಪಡುತಲಿವೆ. ಇವರ ಬಾಹುಬಲಾದಿಗಳಿಂದಲ್ಲವೇ ನಾವು ಕ್ಷೇಮದಲ್ಲಿದ್ದೇವೆ. ದುರ್ಯೋಧನನಿಗೆ ಮಹಾನುಭಾವನಾದ ಭೀಷ್ಮನ ಬಲವೂ ತಪ್ಪಿ, ತಮ್ಮಂದಿರಲ್ಲಿಯೂ ಮೂವತ್ತುಮಂದಿ ಶೂರರು ಹತರಾಗಿರುವುದರಿಂದ ಪಶ್ಚಾತ್ತಾಪ ಹುಟ್ಟಿ ಮಿಕ್ಕವರನ್ನು ರಕ್ಷಿಸಲು, ನಮ್ಮೊಡನೆ ಸಂಧಿಯನ್ನು ಮಾಡಿಕೊಳ್ಳಬಾರದೇ ?—ಎಂದುಕೊಂಡನು.

ಅಷ್ಟರಲ್ಲಿ ಕರ್ಣನು ಭೀಮನಿಗೆದುರಾಗಿ ನಿಶಿತನಾರಾಚಗಳನ್ನು ಎಸೆದು ನೋಯಿಸಿದನು. ಆಗಲವನು ಅದನ್ನು ಗಣನೆಗೆ ತಾರದೆ, ಕರ್ಣನ ಮೇಲೆ ಚಂಡಕಾಂಡಗಳನ್ನು ಪ್ರಯೋಗಿಸಿ, ಅವನ ಧನುಸ್ಸನ್ನು ಎರಡು ಹೋಳ್ ಖಂಡಿಸಿ. ರಥಾಶ್ವಸಾರಥಿಧ್ವಜಗಳನ್ನು ಭೂಮಿಗೆ ಕೆಡಹಿ, ಕೃಷ್ಣಾರ್ಜುನರ ಪಾಂಚಜನ್ಯದೇವದತ್ತಧ್ವನಿಗಳಿಗಿಂತಲೂ, ಅಧಿಕವಾಗಿ ಕೇಳುವಂತೆ ಸಿಂಹನಾದವನ್ನು ಮಾಡಿ, ಯುಧಿಷ್ಠಿರಾದಿಗಳಿಗೆ ಆನಂದವನ್ನೂ ಶತ್ರುಪಕ್ಷದವರಿಗೆ ಭೀತಿಯನ್ನೂ ಕಲ್ಪಿಸಿದನು. ರಾಧೇಯನು ಮತ್ತೊಂದು ರಥವನ್ನೇರಿ ಭೀಮನನ್ನು ಶರವರ್ಷಗಳಿಂದ ಮುಚ್ಚಿ ಖಡ್ಗದಿಂದ ಹೊಡೆದನು. ವಾಯುಸೂನುವು ಅಸಂಖ್ಯಾತಗಳಾದ ಕ್ರೂರಬಾಣಗಳನ್ನು ಕರ್ಣನ ಮೇಲೆ ಪ್ರಯೋಗಿಸಿ ಬೊಬ್ಬಿರಿದನು. ಆಗ ಕೌರವೇಂದ್ರನು ಕರ್ಣನಿಗೆ ಸಹಾಯವಾಗಿ ದುಸ್ಸಹನೆಂಬ ತನ್ನ ತಮ್ಮನನ್ನು ಕಳುಹಿಸಲು, ಅವನು ಅವನನ್ನು ತನ್ನ ರಥದಲ್ಲಿ ಕುಳ್ಳಿರಿಸಿಕೊಂಡು, ಇಬ್ಬರೂ ಭೀಮನ ಕೂಡ ಯುದ್ಧವನ್ನು ಮಾಡುತಿರುವಲ್ಲಿ, ಮಾರುತಿಯು ಕೋಪಗೊಂಡು ತೀವ್ರವಾದ ಭಲ್ಲೆಯದಿಂದ ದುಸ್ಸಹನ ಶಿರಸ್ಸನ್ನು ಛೇದಿಸಿ, ಮತ್ತೆ ಕರ್ಣನನ್ನು ವಿರಥನನ್ನಾಗಿ ಮಾಡಿ ಅಬ್ಬರಿಸಿದನು. ಪೂರ್ವಕಾಲ

ದಲ್ಲಿ ಕುಮಾರಸ್ವಾಮಿಗೂ ತಾರಕಾಸುರನಿಗೂ ಒದಗಿದ್ದ ಸಮರದಂತೆ ಭೀಮಕರ್ಣರಿಗೆ ತಿರಿಗೂ ಯುದ್ಧವಾಯಿತು. ಅವರ ಜತೆಯಲ್ಲಿದ್ದ ಸೈನಿಕರು ಬಹುವಾಗಿ ನೊಂದು ದಿಕ್ಕಾಪಾಲಾಗಿ ಓಡುತಿದ್ದರು. ಕರ್ಣನು ಭೀಮನನ್ನು ಹೇಗಾದರೂ ಕೊಲ್ಲಬೇಕೆಂದು ಯೋಜಿಸಿ, ಸೂರ್ಯಾಗ್ನಿಗಳಂತೆ ಜ್ವಲಿಸುತಲಿರುವ ಶಕ್ತಿಯೊಂದನ್ನು ಪ್ರಯೋಗಿಸಿ, ಗಾಯಗೊಳಿಸಿ, ಕೌರವರನ್ನು ಸಂತೋಷಪಡಿಸಿದನು. ಆಗ ಭೀಮನು ಕರ್ಣನ ಕೋದಂಡವನ್ನು ಖಂಡಿಸಿ, ಅತಿಕ್ರೂರವಾದ ಬಾಣದಿಂದ ಹೊಡೆದನು. ರಕ್ತಸಿಕ್ತನಾಗಿದ್ದ ಕರ್ಣನಿಗೆ ಬೆಂಬಲವಾಗಿ ದುರ್ಜಯನು ಹೋಗಿ ಭೀಮನ ಕೂಡ ಯುದ್ಧಮಾಡಿ ಅವನಿಂದ ಮಡಿದನು. ಕರ್ಣನು ಹಲ್ಲುಮುಡಿಯನ್ನು ಕಚ್ಚಿಕೊಂಡು ಮರ್ಮಭೇದಕವಾದ ಬಾಣದಿಂದ ಭೀಮನನ್ನು ಹೊಡೆಯಲು, ಅದು ಅವನ ಎದೆಯನ್ನು ಭೇದಿಸಿಕೊಂಡು ಹೋಯಿತು. ಭೀಮನು, ಮುಖದಲ್ಲಿ ಪರಾಕ್ರಮಾಗ್ನಿಯು ಜ್ವಲಿಸುತಿರಲು, ಸಿಟ್ಟಿನಿಂದ ರಾಧೇಯನನ್ನು ನೋಯಿಸಿ, ಅವನ ರಥರಥಾಶ್ವಗಳನ್ನೂ ಸಾರಥಿ ಮುಂತಾದ ಅಂಗರಕ್ಷಕರನ್ನೆಲ್ಲ ಕೊಂದು ದುರ್ಮುಖನೆಂಬ ಅವನ ಪ್ರಿಯಪುತ್ರನನ್ನು ಕೊಂದನು. ಕರ್ಣನು ಭೀಮನನ್ನು ನಿಗ್ರಹಿಸಲಾಗದೆ, ಆತನಿಂದ ಬಾರಿಬಾರಿಗೂ ಪರಾಭವವನ್ನು ಹೊಂದುತಿದ್ದರೂ ಜಯಪರಾಜಯವನ್ನು ಗಣಿಸದೆ, ಮತ್ತೆ ಅನೇಕ ನಿಶಿತನಾರಾಚಗಳಿಂದ ನೋಯಿಸಲು, ವಾಯುಪುತ್ರನು ಅಯೋಮಯವಾದ ಗದಾದಂಡದಿಂದ ರಾಧೇಯನನ್ನು ಹೊಡೆದು, ಸಾರಥಿಯನ್ನು ಉರುಳಿಸಿದುದರಿಂದ ವಿಷವಿಲ್ಲದ ಹಾವಿನಂತಾಗಿ ಯುದ್ಧವನ್ನು ತೊರೆದು ಓಡಿದನು. ಅದನ್ನು ನೋಡಿ ಸಹಿಸಲಾರದ ಕೌರವರೈವರು ಅಸಹಾಯಶೂರನಾದ ಭೀಮನನ್ನೆದುರಿಸಿ, ಅನೇಕಕಂಕಪತ್ರಗಳಿಂದ ಅವನ ಉರಸ್ಸನ್ನು ಭೇದಿಸಿದರು. ದೇವಕುಮಾರರಂತಿದ್ದ ದುರ್ಮರ್ಷಣ, ಅಮರ್ಷ, ಅತಿಜಯ, ಜಯ, ದುಸ್ಸಹ ಎಂಬ ಐದುಮಂದಿ ಕುರುಕುಮಾರಕರನ್ನು ಭೀಮನು ತೀಕ್ಷ್ಣಸಾಯಕಗಳಿಂದ ಭೂಮಿಗೆ ಒರಗಿಸಿ, ಎದುರಿಸಿ ಬರುತಿದ್ದ ಕರ್ಣನ ಕಾರ್ಮುಕವನ್ನು ಮತ್ತೊಂದು ಭಲ್ಲೆಯದಿಂದ ಕತ್ತರಿಸಿ ಬೊಬ್ಬಿರಿದನು. ದೀನವದನನಾದ ಕರ್ಣನು ಬೇರೊಂದು ಬಿಲ್ಲನ್ನು ಹಿಡಿದು ನಿಶಿತ ಶಸ್ತ್ರಾಸ್ತ್ರಗಳಿಂದ ಭೀಮನನ್ನು ಗಾಯಗೊಳಿಸಿದನು. ಯಂತ್ರಕ್ಕೆ ಮೊಳೆಗ

ಳನ್ನು ಬಿಟ್ಟುವಂತೆ ಭೀಮನು ಕರ್ಣನ ಶರೀರದಲ್ಲಿ ಅನೇಕಬಾಣಗಳನ್ನು ನಡಿಸಿದನು. ಹೀಗೆ ಕರ್ಣಭೀಮರು ವೃತ್ರವಾಸವರಂತೆ ಹೋರುತ್ತಿರುವಾಗ ದುರ್ಯೋಧನನು ಮರಳಿ ತನ್ನ ಅರುವಂದಿ ಶೂರರಾದ ತಮ್ಮಂದಿರನ್ನು ಕರ್ಣನಿಗೆ ಸಹಾಯವಾಗಿ ಚತುರಂಗಬಲದೊಡನೆ ಕಳುಹಿಸಲು; ಚಿತ್ರ, ವಿಚಿತ್ರ, ಚಿತ್ರವರ್ಮ, ಚಿತ್ರಯುದ್ಧ, ಚಿತ್ರಾಕ್ಷ, ಚಾರುಚಿತ್ರರೆಂಬವರು ಭೀಮನ ಕೂಡ ಘೋರವಾಗಿ ಕಾದಾಡಿ, ಕೊನೆಗೆ ಭೀಮನಿಂದ ಹತರಾದರು. ಆಗ ಕರ್ಣನು ವಾಯುಸೂನುವಿನ ಮೇಲೆ ಕಾಣಿಸಿಕೊಂಡು ಮಾನವರಲ್ಲಿ ಮತ್ತೆ ಯಾರೂ ಸಹಿಸಲಾಗದಂತಿರುವ ಅಸದೃಶವಾದ ನಾರಾಚಗಳನ್ನು ನಟ್ಟನು. ಭೀಮನು ತನ್ನ ಪ್ರಾಣವನ್ನು ತೃಣವಾಗೆಣಿಸಿ, ಕ್ರೂರ ಬಾಣಗಳಿಂದ ಕರ್ಣನ ಕರ್ಣಾಭರಣಗಳನ್ನು ಕಡೆದು, ನಿರಾಭರಣನನ್ನಾಗಿ ಮಾಡಿದನು. ಕೌರವಬಲವು ಅಗ್ನಿಜ್ವಾಲೆಗೆ ಸಿಕ್ಕಿದ ತೃಣಗಳಂತೆ ಭೀಮನಿಂದ ನಾಶವಾಗುತ್ತಿದ್ದಿತು. ಅದನ್ನು ನೋಡುತ್ತಿದ್ದ ದೇವಮಾನವರೆಲ್ಲ ಹೊಗಳುತ್ತಿರಲು, ಗರ್ವಾಸೂಯೆಗಳುಳ್ಳ ದುರ್ಯೋಧನನು ಕರ್ಣನಿಗೆ ಸಹಾಯವಾಗಿ, ಶತ್ರುಂಜಯ, ಶತ್ರುಸಹ, ಮೋಧ, ಸುಬಾಹು, ಚಿತ್ರಸೇನ ಚಿತ್ರಾಯುಧ, ವಿಕರ್ಣರೆಂಬ ಏಳುಮಂದಿ ರಥಿಕರನ್ನು ಕಳುಹಿಸಿದನು. ಅವರು ಯುಗಾಂತ್ಯದಲ್ಲಿ ಏಳು ಗ್ರಹಗಳೂ ಒಟ್ಟಿಗೆ ಸೇರುವಂತೆ ಸೇರಿ, ಭೀಮನನ್ನು ಮುತ್ತಿಕೊಂಡು ಮೇಘಗಳು ಪರ್ವತಗಳ ಮೇಲೆ ವರ್ಷಿಸುವ ಹಾಗೆ ಬಾಣದ ಮಳೆಯನ್ನು ಸುರಿಸುತ್ತಿದ್ದರು. ಭೀಮಸೇನನು ಅತುಲವಾದ ಬಾಣಗಳಿಂದ ಆ ವಿಕರ್ಣನಾದಿಯಾದ ಶೂರರನ್ನು ಸಂಹರಿಸಿ, ಮತ್ತೊಂದು ಕ್ರೂರಬಾಣದಿಂದ ಕರ್ಣನನ್ನು ಹೊಡೆದು ಗರ್ಜಿಸಿದನು. ಪುನಃ ಸೂರ್ಯಪುತ್ರನು ವಾಯುಪುತ್ರನನ್ನು ಎದುರಿಸಿ, ಅರ್ಜುನ ಹೊರತು ಉಳಿದ ಪಾಂಡವರು ನನ್ನ ಕೈಗೆ ಸಿಕ್ಕಿದರೂ ಕೊಲ್ಲುವುದಿಲ್ಲ- ಎಂದು ಕುಂತೀದೇವಿಗೆ ಕೊಟ್ಟಿದ್ದ ಭಾಷೆಗೆ ತಪ್ಪಬಾರದೆಂದು, ಅವನನ್ನು ಕೊಲ್ಲದೆ, ರಣಕ್ರೀಡೆಯಲ್ಲಿದ್ದನು. ಪರಾಕ್ರಮಾದಿಗಳಲ್ಲಿ ಕರ್ಣನಿಗಿಂತ ಭೀಮನೂ, ಭೀಮನಿಗಿಂತ ಕರ್ಣನೂ ಸಮರ್ಥರಾಗಿ ಸಮರ ಸಂರಂಭದಲ್ಲಿರುವಾಗ, ಅವರಿಂದ ಮಡಿದ ವೀರರ ಸಂಖ್ಯೆಯು ಅಗಣಿತವಾಗಿರಲು, ಅವರ ಶರೀರದಿಂದ ಸುರಿದ ರಕ್ತಧಾರೆಗಳು ಹೊಳೆಯಾಗಿ ಹರಿಯುತ್ತಿದ್ದುವು. ಪರಸ್ಪರವಾಗಿ

ಹೆಬ್ಬುಲಿಯಂತೆ ವಿಜೃಂಭಿಸಿ, ಒಬ್ಬನು ಮಾಡಿದ ಕ್ರಿಯೆಗೆ ಮತ್ತೊಬ್ಬನು ಪ್ರತಿಕ್ರಿಯೆಯನ್ನೆಸಗುತ ಕಾಳಗವಾಡುವಾಗ, ಭೀಮನು ವಿರಥನಾಗಿ ಕರ್ಣನ ವೀರಾಲಾಪಗಳನ್ನು ಕೇಳಲಾರದೆ ದ್ವಂದ್ವಯುದ್ಧದಲ್ಲಿ ಅವನನ್ನು ಸಂಹರಿಸಬೇಕೆಂದು ನಿಷ್ಕರ್ಷಿಸಿ ಕರ್ಣನ ಸುವರ್ಣಮಯವಾದ ರಥಕ್ಕೆ ಹಾರುವಷ್ಟರಲ್ಲಿ ಅವನು ರಥದ ಪೀಠದ ಕೆಳಗೆ ಹೊಕ್ಕನು. ಭೀಮನು ಅಡಗಿದ್ದ ಕರ್ಣನನ್ನು ರಥದಲ್ಲಿ ಕಾಣದೆ ಅವನ ರಥಸತ್ತಾರಗಳನ್ನೆಲ್ಲ ಮುರಿಯಲು, ಅಂಗರಾಜನು ಈಚೆಗೆ ಬಂದು ಅವನನ್ನು ಕೊಲ್ಲಬೇಕೆಂದು ನಿಶ್ಚಯಿಸಿ ಕಾಲದಂಡೋಪಮಾನವಾದ ತೀವ್ರನಾರಾಚವನ್ನು ಪ್ರಯೋಗಿಸಲು; ಸಾಧನರಹಿತನಾಗಿದ್ದ ಭೀಮನು ಪ್ರಾಣರಕ್ಷಣೆಗಾಗಿ ಕರ್ಣನ ರಥಕ್ಕಿಂತಲೂ ಉನ್ನತವಾಗಿರುವ ಮದಗಜವನ್ನು ತನ್ನ ಶರೀರಕ್ಕೆ ಅಡ್ಡಲಾಗಿಟ್ಟುಕೊಂಡು ನಿಂತಿದ್ದನು. ಕರ್ಣನು ಅದನ್ನು ಕಂಡುಹಿಡಿದಾಗ, ಆ ಆನೆಯ ಶರೀರವನ್ನು ಕೊಚ್ಚುತ್ತಿರುವಲ್ಲಿ ಭೀಮನು ಎಲ್ಲಾ ಯುದ್ಧಸಾಧನೆಗಳಿಂದ ಕರ್ಣನನ್ನು ವಧಿಸಬೇಕೆಂದೆಣಿಸಿ ಅತನ ಚತುರಂಗಬಲವನ್ನು ಮುರಿದು ಅರ್ಜುನನು ಕರ್ಣನನ್ನು ವಧಿಸುವುದಾಗಿ ಮಾಡಿದ್ದ ಶಪಥವು ಹೃದಯಾರೂಢವಾಗಲು, ಸುಮ್ಮನಾದನು. ಅಷ್ಟರಲ್ಲಿ ಕರ್ಣಾರ್ಜುನರಿಗೆ ಯುದ್ಧವದಗಿ ಸೂರ್ಯಪುತ್ರನು ನೊಂದವನಾಗಿ ಓಡಿದನು.

ಅಶ್ವರಕ್ಷಣಾಚತುರನಾದ ಶ್ರೀಕೃಷ್ಣನು ಅರ್ಜುನನ ಬಾಣದಿಂದ ದಿವ್ಯಸರೋವರವೂ ಮಂಟಪವೂ ನಿರ್ಮಿತವಾಗಲು, ರಥಾಶ್ವಗಳ ದಣಿವನ್ನು ತೀರಿಸಿ, ನೀರನ್ನು ಕುಡಿಸಿ, ಆಹಾರದಿಂದ ತೃಪ್ತಿಯನ್ನೈದಿಸಿ, ಮರಳಿ ರಥಕ್ಕೆ ಕಟ್ಟಿದನು. ಅದುವರಿಗೆ ಪಾರ್ಥನು ನೆಲದಮೇಲೆ ನಿಂತು ತನ್ನ ಚಂಡಕಾಂಡಗಳಿಂದ ಹಗೆಗಳು ಹತ್ತಿರಕ್ಕೆ ಕೂಡ ಬಾರದಂತೆ ತಡೆದಿದ್ದನು. ಶ್ರೀಕೃಷ್ಣಾರ್ಜುನರ ಅಮಾನುಷಕೃತ್ಯಕ್ಕೆ ವೈರಿಗಳು ಬಹುಭೀತರಾಗಿದ್ದರು. ಕೌರವರು ಪಾರ್ಥನ ಪ್ರತಿಜ್ಞಾಭಂಗವನ್ನು ಮಾಡುವುದಕ್ಕಾಗಿ, ಸೈಂಧವನನ್ನು ಯುದ್ಧಕ್ಕೆ ಹೋಗಲೀಸದೆ, ಕಾಲಯಾಪನೆಯನ್ನು ಮಾಡುತ್ತಿರಲು; ಶ್ರೀಕೃಷ್ಣನು ಅದನ್ನು ತಿಳಿದು ಸಾಯಂಕಾಲ ೫ ಘಂಟೆಗೆ ಮುಂಚೆಯೇ ತನ್ನ ದಿವ್ಯಚಕ್ರದಿಂದ ಸೂರ್ಯನನ್ನು ಮುಚ್ಚಿದನು ಆಗ ಸೈಂಧವನು ಸೂರ್ಯಾಸ್ತಮಯವಾಯಿತೆಂದು ಭ್ರಮಿಸಿ ತನ್ನ ರಥದಮೇಲೆ ನಿಂ

ತು ಪಶ್ಚಿಮದಿಕ್ಕನ್ನು ನೋಡುತ್ತಿರಲು ; ಧನಂಜಯನು ಅವನನ್ನೆದುರಿಸಿ ಪಾಶುಪತಾಸ್ತ್ರದಿಂದ ಅವನ ಶಿರಸ್ಸನ್ನು ಖಂಡಿಸಿ, ಸಂಧ್ಯಾಕಾಲದಲ್ಲಿ ನದೀತೀರದಲ್ಲಿ ಸೂರ್ಯನಿಗೆ ಅರ್ಘ್ಯವನ್ನೀಡುತ್ತಿದ್ದ ಅವನ ತಂದೆಯ ಬೊಗಸೆಯಲ್ಲಿ ಆ ರುಂಡವು ಬೀಳುವಂತೆ ಮಾಡಿದನು ! ಒಡನೆ ವಾಸುದೇವನು ತನ್ನ ಚಕ್ರಾಯುಧವನ್ನು ಹಿಂತಿರುಗಿಸಿಕೊಂಡು ಹಸ್ತದಲ್ಲಿ ಧರಿಸಿದನು. ಆಗ ಸೂರ್ಯನು ಚೆನ್ನಾಗಿ ಕಾಣಲ್ಪಟ್ಟನು. ಭೀಮನು ಸಂತೋಷಗೊಂಡು ಸೈಂಧವನು ಮಡಿದ ಸಂಗತಿಯು ಸರ್ವರಿಗೂ ಗೊತ್ತಾಗುವಂತೆ ಬಲವಾಗಿ ಬೊಬ್ಬಿರಿದನು ! ಈ ರೀತಿಯಾಗಿ ಆದಿನ ೩೧ ಮಂದಿ ಕೌರವರೂ, ಸಂಶಪಕ್ತರೂ, ಸೈಂಧವಾದಿವೀರರೂ, ಮಡಿದುದರಿಂದ ಕೌರವರಿಗೆ ಆತಂಕ ಉಂಟಾಗಲು ; ಆ ಏಕಾದಶಿದಿನ ರಾತ್ರಿಯಲ್ಲಿಯೂ ಕುರುಪಾಂಡವರಿಗೆ ಅತಿಘೋರವಾದ ಯುದ್ಧವಾಯಿತು. ಆಗ ಭೀಮನು ಕರ್ಣನ ತಮ್ಮಂದಿರಾದ ಮನು, ಜಯಂತರೆಂಬವರನ್ನು ಅವನ ಇದಿರಿಗೇ ಸೋರೆಯಕಾಯಿಯನ್ನು ಸೀಳುವಂತೆ ಸಾರಥಿಸಹಿತ ಸೀಳಿ ಕೆಡಹಿದನು. ತಮ್ಮಂದಿರು ಹತರಾದುದಕ್ಕೆ ಸೂತಪುತ್ರನು ಕಂಬನಿಗಳನ್ನು ತುಂಬಿ, ರೋಷಾವೇಶದಿಂದ ವಾಯುಪುತ್ರನ ಮೇಲೆ ದಿವ್ಯಶಕ್ತಿಯೊಂದನ್ನು ಪ್ರಯೋಗಿಸಿದನು. ಭೀಮನು ನಗುತ ಅದನ್ನು ಹಿಡಿದು ಕರ್ಣನಮೇಲೆ ಹಿಂತಿರುಗಿ ಎಸೆದನು. ಈ ಮಧ್ಯದಲ್ಲಿ ಕೌರವಕುಮಾರಕರಿಬ್ಬರು ಭೀಮನನ್ನು ಮುತ್ತಿ ನೋಯಿಸಿದುದರಿಂದ, ಅವನು ಅವರ ರಥಕ್ಕೆ ಹಾರಿ ದುರ್ಮದನನ್ನು ಪಾದಘಟ್ಟನದಿಂದಲೂ, ದುಷ್ಕರ್ಣನನ್ನು ಕೈಪೆಟ್ಟಿನಿಂದಲೂ, ಕೊಂದನು. ಬಳಿಕ ಭೀಮನಿಗೂ ಬಾಹ್ಲಿಕನಿಗೂ ಸಮರವಾಗಿ, ಭೀಮನು ಮಹಾಬಲಶಾಲಿಯಾದಕಾರಣ ಅವನು ಪ್ರಯೋಗಿಸಿದ ಶಸ್ತ್ರಾಸ್ತ್ರಗಳಿಂದ ಮಡಿಯದೆ, ಮೂರ್ಛಿತನಾಗಿ, ಒಡನೆ ಎದ್ದು ಗದಾಪ್ರಹಾರಗಳಿಂದ ಆ ರಾಜನನ್ನು ನಾಕಕ್ಕೆ ಕಳುಹಿಸಿದನು. ಮತ್ತೆ ಕೌರವರಲ್ಲಿ ಹತ್ತುಮಂದಿ ಒಟ್ಟಾಗಿ ಭೀಮನನ್ನು ಸುತ್ತಿಕೊಂಡು ಅನೇಕಮಾರ್ಗಣಗಳಿಂದ ಹೊಡೆಯಲು, ಅವನು ತೀವ್ರವಾದ ಶರಗಳಿಂದ ಅವರ ತಲೆಗಳನ್ನು ಖಂಡಿಸಿ, ಕರ್ಣನ ಪ್ರಿಯಪುತ್ರನಾದ ವೃಷಸೇನನನ್ನು ಯುದ್ಧದಲ್ಲಿ ಕೊಂದನು. ಧೃತರಾಷ್ಟ್ರನ ಮೈದಂದಿರಾದ ಏಳುಮಂದಿ ರಥಿಕರೂ, ಶರಚಂದ್ರನೆಂಬ ವೀರಭಟನೂ, ಶಕುನಿಯ ತಮ್ಮಂದಿರೈವರೂ, ಭೀಮನ ಕ್ರೂರಬಾ

ಣಗಳಿಗೆ ಸಿಕ್ಕಿ ಕಾಲನವಶವಾದರು. ೧೩ ವರುಷಗಳಿಂದ ಮನಸ್ಸಿನಲ್ಲಿಯೇ ತಡೆಯಲ್ಪಟ್ಟಿದ್ದ ಭೀಮನ ಕೋಪಾಗ್ನಿಯಲ್ಲಿ ಕೌರವಯೋಧರು ಬಿದ್ದು ಪತಂಗಗಳಂತೆ ಉರಿದುಹೋಗುತ, ಅಪ್ರೊತ್ತಿನ ರೌದ್ರರಣದಲ್ಲಿ ಭೂರಿಶ್ರವ ಸೋಮದತ್ತ ಬಾಹ್ಲಿಕ ಮುಂತಾದ ರಾಜರೂ ಹತರಾಗಿ, ಮೂಲಬಲವೂ ನಾಶವಾಗುತಲಿರುವುದನ್ನು ನೋಡಿ ಕೌರವೇಂದ್ರನು ಕೊರಗುತ, ‘ ಭೀಮನನ್ನು ಹಿಡಿದು ಹೊಡೆಯಿರಿ, ತಿವಿಯಿರಿ, ಕಡಿಯಿರಿ ’ ಎಂದು ಆರ್ಭಟಿಸುತ, ಶರಪರಂಪರೆಗಳಿಂದ ಅವನನ್ನು ಮುಚ್ಚಲು ; ಭೀಮನು ಅವುಗಳನ್ನೆಲ್ಲ ಖಂಡಿಸಿ, ಕಾಳೆಗಮಾಡುತ, ಕಾಲಜಿಹ್ವಾಸಮಾನವಾದ ಮಹಾಶಕ್ತಿಯೊಂದರಿಂದ ಗುರಿಯೊಡ್ಡಿ ಹೊಡೆದು, ಕೌರವೇಂದ್ರನನ್ನು ಜಯಿಸಿ, ರಥರಥಾಶ್ವಧ್ವಜಗಳನ್ನು ನುಗ್ಗುನುಚ್ಚಾಗಿ ಮಾಡಿ ಗರ್ಜಿಸಿದನು. ಕರ್ಣನು ಕ್ರೋಧಾವೇಶದಿಂದ ತನಗೆದುರಾಗಿ ಬರುತಿದ್ದ ಘಟೋತ್ಕಚನಮೇಲೆ ಕಾಣಿಸಿಕೊಂಡು ‘ ಎಲೋ ! ಖೂಳ, ಬಕಾನುಜನಾದ ಹಲಾಯುಧನನ್ನು ಕೊಂದು ಕೌರವರ ಅಕ್ಷೋಹಿಣೀಬಲವನ್ನು ನಾಶಗೊಳಿಸಿ, ಮೆರೆಯುತಿರುವೆ. ಈಗಲೇ ನಿನ್ನನ್ನು ಕೊಲ್ಲುವೆನು ’ ಎಂದು ಆರ್ಭಟಿಸಿ, ಕಿರೀಟಿಯನ್ನು ಕೊಲ್ಲುವುದಕ್ಕಿಟ್ಟುಕೊಂಡಿದ್ದ ಇಂದ್ರದತ್ತವಾದ ‘ ಏ ಕ ವೀ ರ ಘ್ನಿ ’ ಎಂಬ ಮಹಾಶಕ್ತಿಯೊಂದರಿಂದ ಅವನ ತಲೆಯನ್ನು ಖಂಡಿಸಿ, ಕೌರವರಿಗೆ ಉತ್ಸಾಹವನ್ನುಂಟುಮಾಡಿದನು ! ರಾತ್ರಿ ಯುದ್ಧದಿಂದ ಯೋಧರು ನಿದ್ರಾರಹಿತವಾಗಿ ಮೈಮರೆಯುತ, ವಾಹನಗಳು ನಡೆದ ಮಾರ್ಗದಲ್ಲಿಯೇ ಹೋಗುತಲಿದ್ದುದರಿಂದ, ಉಭಯ ಪಕ್ಷದವರೂ ಯೋಚಿಸಿ, ಎಲ್ಲರಿಗೂ ಸ್ವಲ್ಪಹೊತ್ತು ನಿದ್ರೆಯನ್ನು ಮಾಡಲವಕಾಶವನ್ನೀಯಲು ; ಆಗ ರಥಗಳ ಮೇಲೆ ರಥಿಕರೂ ಮದದಾನೆಗಳ ಕುಂಭಸ್ಥಲಗಳಲ್ಲಿ ಮಾವುತರೂ, ಕುದುರೆಗಳಮೇಲೆ ರಾವುತರೂ, ರಣಭೂಮಿಯಲ್ಲಿ ಆಯುಧಪಾಣಿಗಳಾದ ಕಾಲಾಳುಗಳೂ, ಸಮರ್ಥರಾದ ಚಿತ್ರಗಾರರಿಂದ ಲಿಖಿಸಲ್ಪಟ್ಟ ಚಿತ್ರಪ್ರತಿಮೆಗಳಂತೆ ನಿಶ್ಚಲರಾಗಿದ್ದರು. ಚಂದ್ರೋದಯವಾದ ಕೂಡಲೆ ಮರಳಿ ಯುದ್ಧಕ್ಕೆ ಪ್ರಾರಂಭಿಸಿದರು. ಭಾರದ್ವಾಜಪ್ರಮುಖರ ಬಾಣಗಳ ಹೊಡೆತಕ್ಕೆ ಪಾಂಡವಬಲವು ತಲ್ಲಣಿಸುತಿದ್ದಿತು.

೧೫ ನೆಯ ದಿನದ ಯುದ್ಧವು ಆರಂಭವಾಗಿ ಎಳಬಿಸಿಲಿನಲ್ಲಿಯೇ ವಿರಾಟ, ದ್ರುಪದರು ದ್ರೋಣನಿಂದ ಹತರಾಗಲು, ಭೀಮನು- ‘ ಎಲೈ ಧೃಷ್ಟದ್ಯುಮ್ನನೇ!

ಕ್ಷತ್ರಿಯಧರ್ಮದಿಂದೊಪ್ಪುವ ಸರ್ವಸೇನಾಧಿಪತಿಯಾದ ನೀನು ಪಿತೃವಿಯೋಗದಿಂದ ಮೈಮರೆತಿದ್ದರೆ ಹೇಗೆ? ಧರ್ಮವೂ ಕೀರ್ತಿಯೂ, ಸತ್ಯವೂ, ಐಶ್ವರ್ಯವೂ, ಉಂಟಾಗುವಂತೆ ಯತ್ನಿಸಿ, ಅವುಗಳನ್ನು ಸಾಧಿಸಬೇಕು. ದ್ರೋಣನನ್ನು ಕೊಲ್ಲುವೆನೆಂಬ ನಿನ್ನ ಪ್ರತಿಜ್ಞೆಯು ಈ ಹೊತ್ತು ನೆರವೇರಲಿ' ಎಂದು ಪ್ರವಚಿಸಿದನು. ಆಗ ದುಶ್ಯಾಸನನು ಸಹದೇವನನ್ನೆದುರಿಸಿ ತನ್ನ ಪರಾಕ್ರಮಕ್ಕೆ ತಕ್ಕಂತೆ ದಿವ್ಯಾಸ್ತ್ರಗಳನ್ನು ಪ್ರಯೋಗಿಸಿ ನೋಯಿಸುತಿರಲು, ಭೀಮನು—ಶ್ಲೋ|| ಅನಿತ್ಯಾನಿ ಶರೀರಾಣಿ ವಿಭವೋನೈವ ಶಾಶ್ವತಃ | ನಿತ್ಯಂ ಸನ್ನಿಹಿತೋಮೃತ್ಯುಃ ಕರ್ತವ್ಯೋಧರ್ಮಸಂಗ್ರಹಃ || ಎಂಬ ನಿಶ್ಚಯದಿಂದ ಧರ್ಮೈಕಾಯತ್ತಚಿತ್ತನಾಗಿ ಯುದ್ಧವನ್ನು ಮಾಡುತ್ತಿರುವ ತನ್ನ ತಮ್ಮ ಸಹದೇವನಿಗೆ ಸಹಾಯನಾಗಿ ಹೋಗಿ, ದುಶ್ಯಾಸನನನ್ನು ಓಡಿಸಿ ಕರ್ಣನಿಗೆದುರಾಗಿನಿಂತು ಅವನ ವಕ್ಷಸ್ಥಲವನ್ನು ಭೇದಿಸಿ ಬೊಬ್ಬಿರಿದನು! ಬಳಿಕ ದ್ರೋಣನನ್ನೆದುರಿಸಿ, " ಅಶ್ವತ್ಥಾಮನು ಹತನಾದನು" ಎಂದುಹೇಳಲು ; ಅವನು ಅದನ್ನು ಕೇಳಿ ಕಳವಳಿಸಿ ಬಿದ್ದು, ವಿಚಾರಪರನಾಗಿ ಅನೃತವೆಂದು ತಿಳಿದು, ರೌದ್ರಾವೇಶದಿಂದ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದನು. ಅದರಿಂದ ಅನೇಕಚಂಡಕಾಂಡಗಳು ಹುಟ್ಟಿ ಪಾಂಡವಬಲವನ್ನು ಬಹುವಾಗಿ ಕೊಂದುವು. ಆಗ ಭೀಮನು, ದ್ರೋಣಾಚಾರ್ಯನು ಸತ್ಯಯುದ್ಧದಲ್ಲಿ ಜಿತನಾಗನೆಂದು ಯೋಚಿಸಿ, ಆತನು ತನಗೆ ತಾನೇ ಪ್ರಾಯೋಪವೇಶವನ್ನು ಮಾಡುವುದಕ್ಕೆ ತಕ್ಕ ಉಪಾಯವನ್ನು ಚಿಂತಿಸಿ, ಅಶ್ವತ್ಥಾಮನೆಂಬ ಆನೆಯ ಸಂಗತಿಯನ್ನು ಧರ್ಮರಾಯನಿಗೆ ತಿಳುಹಿಸಿ, ಆತನಿಂದ ಅಸ್ತ್ರಚಾರ್ಯನಿಗೆ ಕೇಳುವಂತೆ, " ಅಶ್ವತ್ಥಾಮಾ ಹತಃ ಕುಂಜರಃ" ಎಂದು ಹೇಳಿಸಿ, ಕೊನೆಯಮಾತು ಮಾತ್ರ ಕೇಳದಂತೆ ದುಂದುಭಿಯನ್ನು ಹೊಡಿಸಲು ; ದ್ರೋಣನು ತನ್ನ ಪ್ರಿಯಪುತ್ರನಾದ ಅಶ್ವತ್ಥಾಮನು ಮಡಿದಿರಬಹುದೆಂದು ಕಳವಳಗೊಂಡಿರುವಾಗ, ಭೀಮನು ಮತ್ತೆ ದ್ರೋಣನ ರಥದ ಬಳಿಗೆ ಹೋಗಿ " ಎಲೈ ಗುರುಸ್ವಾಮಿಯೇ! ಬ್ರಾಹ್ಮಣೋತ್ತಮನು ಸ್ವಧರ್ಮವನ್ನು ಬಿಟ್ಟು ಯುದ್ಧವನ್ನು ಮಾಡಿ ಜನಹಿಂಸೆಯನ್ನು ಮಾಡಬಹುದೇ? ಅಹಿಂಸೆಯೇ ಪರಮಧರ್ಮವು ; ಅದಕ್ಕೆ ವಿಪ್ರರೇ

ಮೂಲವು. ಅಷ್ಟು ಮಂದಿ ಬಾಹುಜನರನ್ನು ಏಕೆ ಸಂಹರಿಸಿದೆ ? ಯಾರನ್ನು ರಕ್ಷಿಸಬೇಕು ? ಕುಲಾಚಾರವನ್ನು ಬಿಟ್ಟು ಹೀಗೆ ಮಾಡಬಹುದೇ ? ಅಶ್ವತ್ಥಾಮನೂ ರಣರಂಗದಲ್ಲಿ ಮಡಿದನಲ್ಲಾ ! ಧರ್ಮರಾಯನ ಮಾತು ಸಟೆಯಾದುದೇ ? ನಿನ್ನ ಬುದ್ಧಿಗೆ ನಾನೇನನ್ನಲಿ. ” ಎಂದು ಮೃದುವಾಗಿ ನುಡಿದನು. ಅದನ್ನು ಕೇಳಿದ ದ್ರೋಣನು ವಿರಕ್ತಿಯಿಂದ ಶಾಂತನಾಗಿ ಶಸ್ತ್ರಾಸ್ತ್ರಗಳನ್ನು ರಥದ ಮೇಲಿರಿಸಿ, ಸರ್ವಪ್ರಾಣಿಗಳಿಗೂ ಅಭಯವನ್ನು ಹೇಳುತ್ತ, ಯೋಗಾರೂಢನಾಗಿ ಶ್ವಾಸಧಾರಣೆಯನ್ನು ಮಾಡಿ ಪ್ರಾಣವನ್ನು ಬಿಡಲು ! ಆತನ ದಿವ್ಯತೇಜಸ್ಸು ಬ್ರಹ್ಮವನ್ನೈದಿದ ಸಂಗತಿಯನ್ನು ತಿಳಿಯದೆ, ಧೃಷ್ಟದ್ಯುಮ್ನನು ಹೋಗಿ ಆಚಾರ್ಯನ ತಲೆಯನ್ನು ಖಂಡಿಸಿ, ಕೌರವರನ್ನು ಓಡಿಸಿದನು ! ಆಗ ಅರ್ಜುನನು “ ವಿನಶ್ವರವಾದ ಸುಖಕ್ಕಾಗಿ ಧರ್ಮವನ್ನೂ ಸೌಹಾರ್ದವನ್ನೂ ತೊರೆದು ತಂದೆಗಿಂತಲೂ ಅಧಿಕನಾದ ಆಚಾರ್ಯನನ್ನು ಸಂಹರಿಸಿದುದರಿಂದ ನಮಗೆ ದುರ್ಗತಿ ಬರುವುದು. ಇಂತಹ ಜಯವನ್ನು ಪಡೆಯುವದಕ್ಕಿಂತ ಮೃತರಾಗುವುದೇ ಉತ್ತಮ. ” ಎಂದು ಬಿಕ್ಕಿ ಬಿಕ್ಕಿ ಅಳುತ ಸಹೋದರರೆದುರಿಗೆ ನುಡಿದನು. ಆಗ ಭೀಮನು “ ಎಲೈ ಪಾರ್ಥನೆ, ಕುಲಾಚಾರಗಳನ್ನು ತ್ಯಜಿಸಿ ಅನ್ಯಮತವನ್ನವಲಂಬಿಸಿ, ಗುಬ್ಬಿಯಮೇಲೆ ಬ್ರಹ್ಮಾಸ್ತ್ರವನ್ನು ಬಿಡುವಂತೆ, ಅಸ್ತ್ರವಿದ್ಯೆಯನ್ನರಿಯದವರನ್ನೂ ಬ್ರಹ್ಮಾಸ್ತ್ರದಿಂದ ಸಂಹರಿಸುತ್ತಿದ್ದ ದ್ರೋಣನನ್ನು ಉಪಾಯಾಂತರದಿಂದ ಕೊಂದುದು ಗುರುದ್ರೋಹವೇ ? ವಂಚನಾದಿಗಳಿಂದ ಕೇಡನ್ನು ಮಾಡಬರುವವನನ್ನು ಯುಕ್ತಿಯಿಂದ ಗೆಲ್ಲಬಾರದೇ ? ಲೋಕದಲ್ಲಿ ರಾಜನು, ಶರಣಾಗತನಿಗೂ, ತನಗೂ ಶತ್ರುಗಳ ಮೂಲಕ ಬಾಧೆಯು ಬಾರದಂತೆ ಮಾಡಿಕೊಂಡು, ಕೀರ್ತಿಯನ್ನು ಪಡೆದು ಸಜ್ಜನರಲ್ಲಿ ಉಪಶಾಂತನಾಗಿದ್ದರೆ, ಅಂತಹ ಪ್ರಭುವಿಗೆ ಧರ್ಮವೂ, ಕೀರ್ತಿಯೂ, ರಾಜ್ಯವೂ ಸೌಖ್ಯವೂ ಉಂಟಾಗುವುವು. ಈ ಗುಣಗಳಿಂದ ಕೂಡಿದ ನೀನು ಹೀಗೆ ಹೇಳಬಹುದೇ ? ಮೊದಲು ನಾವು ಧರ್ಮದಿಂದ ರಾಜ್ಯಭಾರವನ್ನು ಮಾಡುತಿದ್ದುದನ್ನು ತಪ್ಪಿಸಿ, ಅಧರ್ಮದಿಂದ ರಾಜ್ಯವನ್ನು ಅಪಹರಿಸಿ, ಪಾಂಚಾಲಿಯನ್ನು ಸಭೆಗೆ ಎಳೆತಂದು, “ ನಿನ್ನ ಗಂಡಂದಿರಾದ ಪಾಂಡವರೈವರೂ ಆಪನ್ನರಾಗಿದಾರೆ, ನಿನಗೆ ತಕ್ಕಪತಿಯನ್ನು ನೋಡಿಕೊ ” ಎಂದು ಹಾಸ್ಯಮಾಡಿ, ನಾರುಮುಡಿಗಳನ್ನುಡಿಸಿ, ನಮ್ಮನ್ನು ಅನ್ಯಾಯವಾಗಿ

ಅರಣ್ಯಕ್ಕಟ್ಟಿ, ಅನುಚಿತವಾದ ಅನೇಕ ಕಾರ್ಯಗಳನ್ನು ಮಾಡಿದರು. ಆಗಪುತ್ರಸಮೇತನಾದ ಈ ಚಾಪಾಚಾರ್ಯನು ಆಡಿನ ಕಣ್ಣುಗಳಂತೆ ಕಣ್ಣುಗಳನ್ನು ಬಿಟ್ಟುಕೊಂಡು ನೋಡುತ್ತಿದ್ದನೇ ಹೊರತು ಉಚಿತವನ್ನರಿತು ನಡೆಯಲಿಲ್ಲ. ಈತನಲ್ಲವೆ, ಅಭಿಮನ್ಯುವನ್ನು ಕೊಲ್ಲಿಸಿದವನು! ಇಂತಹ ಸಂದರ್ಭಗಳು ಇನ್ನೂ ಎಷ್ಟೋ ಇವೆ. ಆದರೂ ಸತ್ಯಧರ್ಮವನ್ನು ಮೀರದೆ, ಆ ದುಷ್ಕೃತ್ಯಗಳನ್ನೆಲ್ಲ ಸಹಿಸಿ, ದ್ರೋಣನನ್ನು ಯುದ್ಧದಲ್ಲಿ ಕೊಂದು ಕ್ಷತ್ರಿಯ ಧರ್ಮವನ್ನು ತೋರಿಸಿದುದು ಅಧರ್ಮವೆಂದು, ಮರ್ಮಭೇದಕವಾಗಿ ಹೇಳುತಿರುವೆ. ಒಂದು ವಿಚಾರವನ್ನು ಕುರಿತು ಮಾತನಾಡುವಾಗ ಕೋಪವನ್ನೂ ಪಕ್ಷಪಾತವನ್ನೂ ಬಿಡಬೇಕು. ಪಕ್ಷಪಾತದಿಂದ ದೋಷವು ಕಾಣದೇ ಹೋಗುವುದು. ಕೋಪವಿದ್ದರೆ, ವಿಷಯದ ಸ್ವಭಾವವು ತಿಳಿಯುವುದಿಲ್ಲ ಎಂಬುದು ಗೊತ್ತಿದೆಯಷ್ಟೆ. ನಿನ್ನಲ್ಲಿ ಹದಿನಾರನೆಯ ಅಂಶವನ್ನೂ ಹೊಂದದ ಅಶ್ವತ್ಥಾಮನನ್ನು ಏಕೆ ಹೊಗಳುವೆ ? ಶೈಲಶಿಖರೋಪಮಾನಗಳಾದ ವೃಕ್ಷಗಳನ್ನು ಮಹಾಮಾರುತವು ಕೆಡಹುವ ರೀತಿಯಲ್ಲಿ ಯಾವಸಾಹಾಯ್ಯವನ್ನೂ ಅಪೇಕ್ಷಿಸದೆ, ಚತುರಂಗಬಲಸಮೇತರಾದ ಕೌರವರನ್ನು ಈಕ್ಷಣ ನಾಶಮಾಡುತ್ತೇನೆ. ನೀವೆಲ್ಲರೂ ತಟಸ್ಥರಾಗಿ ದೂರದಲ್ಲಿದ್ದು ನೋಡುತಿರಿ. ಶ್ರೀಮನ್ನೃಸಿಂಹಸ್ವಾಮಿಯು ಹಿರಣ್ಯಕಶಿಪುವನ್ನು ಹಿಡಿದು ಮಾಡಿದ ರೀತಿಗೆ ನಾನೊರ್ವನೇ ಅಶ್ವತ್ಥಾಮನನ್ನು ಕೊನೆಗಾಣಿಸುವೆನು. ನಿನ್ನ ಒಡಹುಟ್ಟಿದವರ ಪರಾಕ್ರಮವನ್ನು ತಿಳಿದೂ ಏಕೆ ಭಯಪಡುವೆ ? ಚಿಂತಿಸಬೇಡ ”— ಎಂದು ಹೇಳಿದನು. ಆಗ ಎಲ್ಲರೂ ‘ ಭಲಾ ಭಲಾ ’ ಎಂದು ಅಸಹಾಯಶೂರನಾದ ಭೀಮನನ್ನು ಕೊಂಡಾಡುತ ಯುದ್ಧಾಸಕ್ತರಾದರು. ಆ ಬಳಿಕ ಅಶ್ವತ್ಥಾಮನು ಪಿತೃನಿರ್ಯಾಣದುಃಖದಿಂದ ಪಾಂಡವಯೋಧರ ಮೇಲೆ ನಾರಾಯಣಾಸ್ತ್ರವನ್ನು ಪ್ರಯೋಗಿಸಲು ; ಅದು ಮಹಾರಣ್ಯವನ್ನು ದಹಿಸುವ ಕಾಳ್ಗಿಚ್ಚಿನಂತೆ ಪಾಂಡವಬಲವನ್ನು ಕಬಳಿಸುತಿದ್ದಿತು. ಜಗಜ್ಜಾಡ್ಯವಿದಾರಕನಾದ ಶ್ರೀಕೃಷ್ಣನು ಪಾಂಡವ ಸೈನ್ಯವೆಲ್ಲವನ್ನೂ ಆ ಅಸ್ತ್ರಕ್ಕೆ ಶರಣಾಗತರನ್ನಾಗಿ ಮಾಡಿ ರಕ್ಷಿಸಿದನು. ಆದರೆ ಭೀಮನು ಮಾತ್ರ ಆ ಅರ್ಥಕ್ಕೆ ಒಡಂಬಡದೆ ಹೋರುತಲೇ ಇದ್ದನು. ಶ್ರೀಕೃಷ್ಣಾರ್ಜುನರು ಆತನ ಆಯುಧಗಳನ್ನು ಕಿತ್ತುಹಾಕಿ, ಭೂಮಿಯಲ್ಲಿ ತಳ್ಳಿದುದರಿಂದ ನಿರ್ಬಾಧನಾದನು. ಮತ್ತೆ ಅಶ್ವ

ತ್ಥಾಮನು ಪಾಂಡವ ಬಲವನ್ನು ಕೊಲ್ಲುತಿರುವಲ್ಲಿ ಅದನ್ನು ನೋಡಿ ಸಹಿಸದೆ ಭೀಮನು ಕೋಪಿಸಿಕೊಂಡು, ವಿಷವನ್ನು ಕಾರುತಿರುವ ಅನೇಕಬಾಣ ಗಳಿಂದ ಆತನನ್ನು ಮುಚ್ಚಲು; ಅವನು ಅವುಗಳನ್ನು ಖಂಡಿಸಿ, ಕ್ರೂರ ನಾರಾಚಗಳಿಂದ ನೋಯಿಸಿದನು. ಭೀಮನು ತನ್ನ ಅಂಕಿತವಿರುವ ಸುವರ್ಣ ಪುಂಖಗಳಾದ ಅನೇಕಬಾಣಗಳಿಂದ ಅಶ್ವತ್ಥಾಮನನ್ನು ಪೆಟ್ಟಿಕ್ಕಿ ಮತ್ತೆ ಮಾರ್ತಾಂಡನನ್ನು ಮುಚ್ಚುವ ಮೇಘಗಳಂತೆ ಬಾಣವರ್ಷಗಳಿಂದ ಮುಚ್ಚಿ ದನು. ಅಷ್ಟರಲ್ಲಿ ಅಶ್ವತ್ಥಾಮಾರ್ಜುನರಿಗೆ ಯುದ್ಧವು ಸಂಘಟಿಸಿ, ಸಂಧ್ಯಾ ಕಾಲ ಸನ್ನಿಹಿತವಾಗಲು ತೂರ್ಯತ್ರಯವು ಘೋರಿಡುತಿರಲು, ಕೌಂತೇ ಯರು ಸಂತೋಷದಿಂದ ಶಿಬಿರವನ್ನೈದಿದರು. ದೀನವದನನಾಗಿದ್ದ ದುರ್ಯೋ ಧನನು ತನ್ನ ಪಾಳೆಯವನ್ನು ಸೇರಿ ವಿಶ್ರಮಿಸಿಕೊಂಡಿದ್ದು ಅನಂತರ ನವರತ್ನ ಖಚಿತವಾದ ಸಿಂಹಪೀಠದಲ್ಲಿ ಕುಳಿತು ಒಡ್ಡೋಲಗದಲ್ಲಿರುತ, ಯಥಾ ಯೋಗ್ಯವಾದ ಭದ್ರಾಸನಗಳಲ್ಲಿ ಕುಳಿತಿರುವ ಸಾಮಂತರಾಜರೊಡನೆ ಆಲೋಚಿಸಿ. ದಿವ್ಯಾಸ್ತ್ರಕೋವಿದನಾದ ಕರ್ಣನನ್ನು ಸರ್ವಸೇನಾಧಿಪತಿಯ ನ್ನಾಗಿ ಮಾಡಲು; ಆತನು "ನಾಳೆಯ ಪ್ರಾತಃಕಾಲ ೬ ಗಂಟೆಗೆ ಮುಂಚೆ ನಮ್ಮ ಚತುರಂಗ ಬಲವೆಲ್ಲವೂ ಯುದ್ಧಕ್ಕೆ ಸಿದ್ಧವಾಗಿರಬೇಕು" ಎಂದು ಬೆಸಸಿ, ನಿದ್ರಾಸಕ್ತನಾದನು. ಹತಶೇಷರಾದ ಕೌರವಯೋಧರು-"ಅಕಟಾ! ದಾನಧರ್ಮತಪೋಬಲಸತ್ಯಪರಾಕ್ರಮಾದಿಸದ್ಗುಣಗಳಿಂದ ಖ್ಯಾತರಾದ ಭೀಷ್ಮದ್ರೋಣರು ಬಿದ್ದುದರಿಂದ, ನಮ್ಮ ಬಲವು ಸೂರ್ಯಚಂದ್ರರಿಲ್ಲದ ಆಕಾಶದಂತೆಯೂ, ಸಿಂಹಶಾರ್ದೂಲಶೂನ್ಯವಾದ ಗುಹೆಯಂತೆಯೂ— ಆಯಿತು! ಎಲೈ ಸಮರ್ಥನಾದ ಕರ್ಣರಾಯನೇ ರಕ್ಷಿಸು, ರಕ್ಷಿಸು, ಅನಾಥ ರಾದೆವು" ಎಂದು ಪ್ರಲಾಪಿಸುತ ಆ ರಾತ್ರಿಯನ್ನು ಕಳೆಯುತ್ತಿದ್ದರು. ವಾಚಕಮಹಾಶಯರೇ! ದೇವಾಂಶಸಂಭೂತರಾದ ಭೀಷ್ಮದ್ರೋಣರು ಮಹ ನೀಯರಾದರೂ ಮೂರ್ಖನಾದ ದುರ್ಯೋಧನನಿಗೆ ಸೇವಕರಾಗಿದ್ದುದರಿಂದ ನಾಶವನ್ನೈದಿದರು! ಅದುಕಾರಣ ಅಲ್ಪರಸಂಗದಿಂದ ಒಳ್ಳೆಯವರಿಗೂ ಕೇಡುಂಟಾಗದಿರುವುದೇ?

೧೬ನೆಯದಿನ ಕುರುಪಾಂಡವರು ರತ್ನಖಚಿತವಾದ ಕಿರೀಟಮಾಲ್ಯಾ ಭರಣಗಳಿಂದಲೂ, ಮತ್ತೆ ಮುಂತಾದವುಗಳಿಂದ ಯುಕ್ತವಾದ ವಾಹನಗಳಿಂ

ದಲೂ ಶೋಭಿತರಾಗಿ ಸಪರಿವಾರ ರಣರಂಗದಲ್ಲಿ ಸೇರಿ ಹೋರಾಟಕ್ಕೆ ತೊಡಗಿದರು. ಆ ಹೊತ್ತು ಕೌರವರ ಕಡೆ ೫ ಅಕ್ಷೋಹಿಣೀ ಬಲವೂ ಪಾಂಡವರ ಕಡೆ ೩ ಅಕ್ಷೋಹಿಣೀ ಬಲವೂ ಶೇಷವಾಗಿದ್ದಿತು. ಉದಯಾಚಲದಲ್ಲಿ ಪ್ರಕಾಶಿಸುವ ಸೂರ್ಯಭಗವಂತನಂತೆ ಭೀಮಸೇನನು ಅತ್ಯುನ್ನತ ಮದಗಜವನ್ನೇರಿ, ದಿವ್ಯಾಯುಧಗಳನ್ನು ಧರಿಸಿ ಚತುರಂಗ ಬಲದೊಡನೆ ಕೌರವರನ್ನು ಪ್ರಹರಿಸುತಿರುವಾಗ ಕರೂಶದೇಶಾಧಿಪತಿಯಾದ ಕ್ಷೇಮಧೂರ್ತಿಯು ಉಚ್ಚಸ್ವರದಿಂದ "ಎಲೋ ಭೀಮ, ನಿಲ್ಲು, ನಿಲ್ಲು." ಎಂದು ಬೆದರಿಸುತ ತನ್ನ ಮದದಾನೆಯನ್ನು ಆತನ ಭದ್ರಗಜದ ಮೇಲೆ ಅಡರಿಸಿ, ತೀಕ್ಷ್ಣಸಾಯಕಗಳಿಂದ ಹೊಡೆದನು. ಭೀಮನು ಅವನನ್ನು ಖಡ್ಗದಿಂದ ಕೊಂದು, ಅವನ ಮದಕರಿಯನ್ನೂ ಕೆಡಹಿದನು. ದುರ್ಯೋಧನನು ಅಶ್ವಹೃದಯಜ್ಞನಾದ ಶಲ್ಯನನ್ನು ಸರ್ವಸೇನಾಧಿಪತಿಯಾದ ಕರ್ಣನ ಸಾರಥ್ಯಕ್ಕೆ ಒಡಂಬಡಿಸಲು ; ಆ ಮದ್ರರಾಯನು ಮಹೇಂದ್ರನ ರಥವನ್ನು ನಡೆಯಿಸುವ ಮಾತಲಿಯಂತೆ ವೈರಿಜನ ದುಸ್ಸಹವಾದ ರಾಧೇಯನ ರಥವನ್ನೇರಿ ಅದನ್ನು ನಡೆಸುತ, ಅವನೊಡನೆ ವಾಗ್ವಾದವನ್ನು ಮಾಡಿ ನಿರಾಕರಿಸುತಲಿದ್ದರೂ, ಕರ್ಣನು ಕಾಲಪೃಷ್ಠವೆಂಬ ಧನುಸ್ಸಿನಲ್ಲಿ ದಿವ್ಯಾಸ್ತ್ರಗಳನ್ನು ಹೂಡಿ ತನ್ನ ಪರಾಕ್ರಮಕ್ಕೆ ತಕ್ಕಂತೆ ಪಾಂಡವ ಬಲವನ್ನು ವಧಿಸುತ, ಕೌಂತೇಯರಲ್ಲಿ ಪ್ರತಿಯೊಬ್ಬನ ಸಂಗಡಲೂ ಯುದ್ಧವನ್ನು ಮಾಡಿ ತನ್ನ ಬಿಲ್ಗಾರಿಕೆಯ ಶಿಕ್ಷಾಚಾತುರ್ಯವನ್ನು ಮೆರೆಯಿಸುತಿದ್ದನು. ಅಶ್ವತ್ಥಾಮನು ಭೀಮನನ್ನು ಎದುರಿಸಿ ಯುದ್ಧಮಾಡುತಲಿರುವಾಗ ಪರಸ್ಪರ ಬಹುವಿಧವಾದ ಕ್ರೂರಬಾಣಗಳನ್ನು ಪ್ರಯೋಗಿಸಿ, ಒಬ್ಬನು ಮಾಡಿದುದಕ್ಕೆ ಮತ್ತೊಬ್ಬನು ಪ್ರತಿಕ್ರಿಯೆಯನ್ನೆಸಗುತ, ಕೊನೆಗೆ ಚಂಡಕಾಂಡಗಳ ಪೆಟ್ಟನ್ನು ತಡೆಯಲಾರದೆ ಇಬ್ಬರೂ ಮೈಮರೆತರು. ಆಗ ಅವರವರ ಸಾರಥಿಗಳು ಅವರನ್ನು ದೂರ ತೆಗೆದುಕೊಂಡು ಹೋದರು. ಭೀಮನು ಮತ್ತೆ ಭಯಂಕರವಾಗಿ ಕುರುಬಲವನ್ನು ನಾಶಗೊಳಿಸುತ್ತಿದ್ದನು. ಅಂದಿನ ಉಭಯಬಲ ದ್ವಂದ್ವ ಯುದ್ಧದಲ್ಲಿ ಅರ್ಬುದ ಸಂಖ್ಯೆಗೆ ಮೀರಿ ನಾಶವಾಗಿ, ಸೂರ್ಯಾಸ್ತಮಾನಕಾಲಕ್ಕೆ ಅಶೇಷರೂ ತಂತಮ್ಮ ಶಿಬಿರಕ್ಕೆ ಹೋಗಿ, ವಿಶ್ರಮಿಸಿಕೊಂಡು ನಿತ್ಯದಂತೆ ಆ ಹೊತ್ತಿನ ಯುದ್ಧ ವೃತ್ತಾಂತಗಳನ್ನು ಒಬ್ಬರಿಗೊಬ್ಬರು ಹೇಳಿಕೊಂಡು,

ಮಲಗಿದರು. ಕಂಕಶ್ವಾಪದಗೋಮಾಯುಗಳೂ ರಾತ್ರಿಂಚರರೂ ಆ ರಣ ರಂಗಕ್ಕೆ ಪ್ರವೇಶಿಸಿ ರುಧಿರಮಾಂಸಾದಿಗಳಿಂದ ಸಂತೋಷಗೊಂಡಿದ್ದರು.

೧೭ ನೆಯ ದಿನ ಬೆಳಗಿನಜಾವದಲ್ಲಿ ದೌವಾರಿಕರು ಹೋಗಿ ಸಕಲ ಸೈನಿಕರನ್ನೂ ಯುದ್ಧಭೂಮಿಗೆ ಹೊರಡಿರಿ—ಎಂದು ಪ್ರೋತ್ಸಾಹಿಸಲು, ಉಭಯಸೈನ್ಯಗಳೂ ಸಂಧಿಸಿ, ಯುದ್ಧಕ್ಕೆ ಆರಂಭಿಸುವಲ್ಲಿ ಅದನ್ನು ನೋಡುವದಕ್ಕಾಗಿ ನಿತ್ಯದಂತೆ ಭೂಚರಖೇಚರರು ನಿಬಿಡವಾಗಿ ಸೇರಿದ್ದರು. ಯುದ್ಧವಿಶಾರದನಾದ ರಾಧೇಯನಿಂದಲೂ, ಶತ್ರುಜನಭಯಂಕರನಾದ ಧೃಷ್ಟದ್ಯುಮ್ನನಿಂದಲೂ, ಬೃಹಸ್ಪತಿಯಿಂದ ಹೇಳಲ್ಪಟ್ಟಿರುವ ರೀತಿಯಲ್ಲಿ ಮಹಾವ್ಯೂಹಗಳು ನಿರ್ಮಿಸಲ್ಪಟ್ಟುವು. ಆಗ ಚತುರಂಗಬಲಸಮೇತರಾಗಿರುವ ರಥಿಕಪ್ರಮುಖರು ಶರಪರಂಪರೆಗಳನ್ನು ಪ್ರಯೋಗಿಸಿ ಆಜಿಯಲ್ಲಿ ಅತಿಶಯವಾದ ಸಾಮರ್ಥ್ಯವನ್ನು ತೋರಿಸುತಲಿದ್ದರು. ಕಿರೀಟವಜ್ರಕವಚ ಮುಂತಾದವುಗಳಿಂದ ಅಲಂಕೃತನಾಗಿ ಅಟ್ಟಹಾಸವನ್ನು ಮಾಡುತಿರುವ ಭೀಮನು, ಸುತಸೋಮನೆಂಬ ತನ್ನ ಮಗನೊಡನೆ ಬಾಣದ ಮಳೆಯನ್ನು ಕರೆಯುತ ಯುದ್ಧದುರ್ಧರರಾಗಿರುವವರಮೇಲೆ ಕವಿದು, ಅವರನ್ನು ಬಲಿ ಹಾಕುತ್ತಿದ್ದನು. ಆಗ ದುರಭಿಮಾನಿಯಾದ ಕರ್ಣನು ಭೀಮನನ್ನು ನೋಡಿ, "ಈ ಹೊತ್ತು ಇವನಿಂದ ನಾನಾದರೂ ನನ್ನಿಂದ ಇವನಾದರೂ, ಯುದ್ಧದಲ್ಲಿ ಹತನಾಗಬೇಕು." ಎಂದು ಹೇಳುತ ಅವನನ್ನು ಕ್ರೂರಬಾಣಗಳಿಂದ ಎಚ್ಚರಿಸಿದನು. ಭೀಮನು ತನ್ನ ಅಣ್ಣನು ನಿರ್ಭಯವಾಗಿರುವಂತೆ ತಕ್ಕ ಏರ್ಪಾಟನ್ನು ಮಾಡಿ ಕರ್ಣನಮೇಲೆ ಕಾಣಿಸಿಕೊಂಡನು. ಆಗ ಕರ್ಣನು ಶಲ್ಯನನ್ನು ಕುರಿತು—ಎಲೈ ಸಾರಥಿಯೇ! ನೀನು ನುಡಿದಂತೆ ಈ ವಾಯುಪುತ್ರನು ದಂಡಧರನಾದ ಯಮನನ್ನಾದರೂ ಎದುರಿಸಬಲ್ಲನು. ನನಗೆ ತಗುಲಿ ಬಿದ್ದಿರುವ ಇವನನ್ನು ನನ್ನ ಸೇನಾಧಿಪತ್ಯಕಾಲದಲ್ಲಿಯಾದರೂ ಕೊಲ್ಲಬೇಕು.—ಎಂದು ಹೇಳಿ ಅವನ ವಕ್ಷಸ್ಥಳದಲ್ಲಿ ಒಂದು ಕ್ರೂರನಾರಾಚವನ್ನು ನಟ್ಟನು. ಭೀಮನು ಸಿಟ್ಟಿನಿಂದ ಸೂತಪುತ್ರನನ್ನು ಸಂಹರಿಸಲೆಣಿಸಿ, ಸಿಡಿಲ ಪೆಟ್ಟಿಗೆ ಸಮಾನವಾದ ಸಾಯಕವನ್ನು ಆಕರ್ಣಾಂತವಾಗಿ ಸೆಳೆದು ಬಿಟ್ಟನು. ಅದು ಕರ್ಣನ ಉರಸ್ಸನ್ನು ಭೇದಿಸಿಕೊಂಡು ಹೋಗಲು, ಅವನು ರಕ್ತಸಿಕ್ತಾಂಗನಾಗಿ ಮೈಮರೆತು ಬಿದ್ದನು. ದುರ್ಭಾಷೆಯನ್ನಾಡು

ತಿದ್ದ ಕರ್ಣನ ನಾಲಿಗೆಯನ್ನು ಕೊಯ್ಯಬೇಕೆಂದು, ಭೀಮನು ಅವನರಥಕ್ಕೆ ಹಾರುತಿರುವಲ್ಲಿ ಶಲ್ಯನು—ಎಲೈ ಜಗತ್ಪ್ರಾಣಪುತ್ರನೇ ! ಪಾರ್ಥನು ಇವನನ್ನು ಕೊಲ್ಲುವೆನೆಂದು ಶಪಥಮಾಡಿರುವದರಿಂದ ನೀನು ಏನನ್ನೂ ಮಾಡಲಾಗದು—ಎಂದನು. ಭೀಮನು—ಎಲೈ ಮಾವನೇ ! ನಾನು ಅದನ್ನು ಅರಿತಿದ್ದರೂ, ಯುದ್ಧದಲ್ಲಿ ಮೂರ್ಛಿತನಾದವನನ್ನು ಹಿಂಸಿಸಬಾರದೆಂಬ ಧರ್ಮವನ್ನೂ ಕೂಡ ಅತಿಕ್ರಮಿಸಬೇಕಾಗಿದೆ. ಏಕೆಂದರೆ:—ಆರ್ಯನಾದ ನನ್ನ ಅಗ್ರಜನನ್ನೂ ಪಾಂಚಾಲಿಯನ್ನೂ ದ್ಯೂತವಾದ ಬಳಿಕ ದೂಷಿಸಿ ಹಾಸ್ಯಮಾಡಿದುದರಿಂದ, ಆಗಲೆ ಇವನ ನಾಲಿಗೆಯನ್ನು ಕತ್ತರಿಸಬೇಕೆಂದು ಒರೆಯಿಂದ ಕತ್ತಿಯನ್ನು ಹಿರಿದು, ಧರ್ಮರಾಯನು ಬೇಡವೆಂದು ಕೈಸನ್ನೆ ಮಾಡಿದುದರಿಂದ ತಡೆದಿದ್ದೆನು. ರೋಗಕಾಲದಲ್ಲಿ ಅಹಿತವಾಗಿದ್ದರೂ ಅನಂತರ ಹಿತವನ್ನು ಆಚರಿಸುವ ಔಷಧೋಪಚಾರದಂತಿರುವ ನಿನ್ನ ವಚನಾಮೃತವನ್ನು ಅಂಗೀಕರಿಸಿದೆನು—ಎಂದು ಸುಮ್ಮನಾದನು. ಶಲ್ಯನು ತನ್ನ ಮನಸ್ಸಿನಲ್ಲಿ ಯಮನಕೈಗೆ ಸಿಕ್ಕಿದವನನ್ನು ಬಿಡಿಸಿದಂತಾಯಿತು—ಎಂದು ಸಂತಸಗೊಂಡು ಯುದ್ಧಭೂಮಿಯಿಂದ ತೊಲಗಿಸಿಕೊಂಡು ಹೋದನು

ಆಗ ದೇವಕುಮಾರಸದೃಶರಾದ ಕುರುಕುಮಾರಕರಲ್ಲಿ ಆರೆಮಂದಿ ಶಸ್ತ್ರಾಸ್ತ್ರಗಳನ್ನು ಹಿಡಿದು ಭೀಮನನ್ನು ಕೊಲ್ಲಬೇಕೆಂದು ಅನೇಕ ಬಾಣಗಳನ್ನು ಕವಿಸಿ ಬೊಬ್ಬಿರಿಯಲು ; ಅವನು ಅವರನ್ನು ಜವರಾಯನ ಬಳಿಗೆ ಕಳುಹಿಸಿದನು. ಮತ್ತೆ ಕರ್ಣನು ಭೀಮನ ರಥಕ್ಕೆದಿರಾಗಿ ತನ್ನ ರಥವನ್ನು ನಿಲ್ಲಿಸಿಕೊಂಡು ಯುದ್ಧಮಾಡಿ, ಭೀಮನ ಸರ್ಪಸಮಾನವಾದ ಬಾಣಗಳು ಅಂಗಾಂಗಗಳಲ್ಲಿಯೂ ನೆಡಲು, ಸಿಡಿಲ ಪೆಟ್ಟಿನಿಂದ ಡೊಂಕಾದ ಹೆಮ್ಮರದಂತಾಗಿ ರಣಪರಾಙ್ಮುಖನಾದನು ! ಆಗ ದೇವತೆಗಳು, ' ಭಾಪು ಭೀಮಸೇನ, ಭಾಪು ' ಎನ್ನುತ್ತಿದ್ದರು. ಅಂದಿನ ರೌದ್ರರಣದಲ್ಲಿ ಭೀಮನ ಗದಾಪ್ರಹಾರಗಳಿಂದ ಕೌರವಯೋಧರು ನೊಂದು, ದಿಕ್ಕಾಪಾಲಾಗಿ ಓಡುತಿದ್ದರು. ಆಗ ಕೌರವೇಂದ್ರನೇ ತನ್ನ ರಥವನ್ನು ವೇಗವಾಗಿ ನಡೆಸಿಕೊಂಡು ಹೋಗಿ, ಭೀಮನು ಅತ್ತಿತ್ತ ಹೋಗದಂತೆ ಅವನನ್ನು ಸುತ್ತುಮುತ್ತಿಕೊಂಡು ದಿವ್ಯಾಸ್ತ್ರಗಳಿಂದ ಹೊಡೆಯಲು ; ಭೀಮನು ಮೂರ್ತೀಭವಿಸಿದ ವೀರರಸದಂತೆ ವಿಜೃಂಭಿಸಿ, ಸಕಲರೂ ದೃಷ್ಟಿಸಿ ನೋಡುತಿರಲು, ಮೀಸೆಯನ್ನು ತಿರುವುತಿರುವ

ದುರ್ಯೋಧನನ ನಿಶಿತ ಶಸ್ತ್ರಾಸ್ತ್ರಗಳನ್ನು ಮಧ್ಯಮಾರ್ಗದಲ್ಲಿಯೇ ಕತ್ತರಿಸಿ,
ತನ್ನ ಪ್ರಚಂಡಕಾಂಡಗಳಿಂದ ನಿಹತಾಶ್ವ ಸಾರಥಿಯಾದ ಆ ಮಂಡಲಾಧಿ
ಪತಿಯು ಮರ್ಮಗಳನ್ನು ನೋಯಿಸಲು, ಅವನು ನಾಲಗೆಯಿಂದ ಕಟವಾ
ಯನ್ನು ಸವರಿಕೊಳ್ಳುತ ಓಡಿದನು. ಭೀಮನು ಹದಿನಾರು ದಿನಗಳಿಂದಲೂ
ಕೌರವರ ಚತುರಂಗಬಲದಲ್ಲಿ ಶೂರರಾದವರನ್ನೇ ಹುಡುಕಿ ಗದಾದಂಡಕ್ಕೆ
ಬಲಿಕೊಟ್ಟು ಹಬ್ಬಮಾಡಿದಂತೆ ಈ ಹೊತ್ತೂ ಆರೀತಿ ಮಾಡಬೇಕೆಂದಿರುವಲ್ಲಿ;
ಯಾರೂ ಅವನ ಕಣ್ಣಿಗೆ ಬೀಳದೆ ಓಡುತಿದ್ದರು. ಅದನ್ನು ನೋಡಿ ಕ್ಷೀಣಾ
ಯುವಾದ ದುಃಶ್ಯಾಸನನು ಪ್ರಬಲರಾದ ಅನೇಕ ಚಕ್ರರಕ್ಷಕರೇ ಮುಂತಾದ
ಸಾಧನಸಂಪತ್ತಿನೊಡನೆ ಭೀಮನ ರಥದ ಹತ್ತಿರಕ್ಕೆ ಹೋಗಿ ಅತಿದಾರುಣ
ವಾದ ಬಾಣಗಳನ್ನು ಪ್ರಯೋಗಿಸಿ, ಅವನ ಕೋದಂಡವನ್ನು ಖಂಡಿಸಿ
ಬೊಬ್ಬಿರಿದನು. ವೈನತೇಯನು ಕ್ರೂರಸರ್ಪವನ್ನು ಹಿಡಿಯುವುದಕ್ಕೆ
ಹಾರುವಹಾಗೆ, ಭೀಮನು ಔದ್ಧತ್ಯದಿಂದಿರುವ ಅವನ ರಥಕ್ಕೆ ಹಾರಿ, ಅವ
ನನ್ನು ಹಿಡಿದು ಕೇಶಾಕೇಶಿಯಿಂದಲೂ ಮುಷ್ಟಾಮುಷ್ಟಿಯಿಂದಲೂ ಕಾದಾಡಿ,
ಕೊನೆಗೆ ದ್ವಂದ್ವಯುದ್ಧವನ್ನು ಮಾಡಿ, ಹದಿಮೂರು ವರ್ಷಗಳ ಕಾಲ ತಾವು
ಪಟ್ಟ ಪಾಡನ್ನೂ ತನ್ನ ಪ್ರತಿಜ್ಞೆಯನ್ನೂ ಸ್ಮರಿಸಿ, ರೌದ್ರಾಕಾರದಿಂದ ಕೂಡಿ,
ಕೌರವರೆಲ್ಲ ಅಸಮರ್ಥರಾಗಿ ನೋಡುತಿರುವಾಗಲೇ, ಆ ಮೂರ್ಖನನ್ನು
ತನ್ನ ಗದಾಯುಧದಿಂದ ಬಲವಾಗಿ ಅಪ್ಪಳಿಸಿ ಕೆಡಹಿದನು ! ಅವನು ರಕ್ತ
ವನ್ನು ಕಾರುತ ಭೂಮಿಯಲ್ಲಿ ಬಿದ್ದನು ! ಹೀಗೆ ದುಃಶ್ಯಾಸನನ ಎದೆಯನ್ನು
ಸೀಳಿ ಕೆಡಹುವುದರಲ್ಲಿ ಉಗ್ರನೃಸಿಂಹನಾದ ಭೀಮಸೇನನು ರಣಕ್ರೀಡೆಯಲ್ಲಿ
ರುತ, ತನಗೆ ಸುತ್ತಲೂ ಬಯಲಾಗುತ್ತಿರುವುದಕ್ಕೆ ತೃಪ್ತನಾಗದೆ, ತನ್ನನ್ನು
ಕೊಲ್ಲಬಂದ ಒಂಬತ್ತು ಮಂದಿ ಕೌರವರನ್ನು ಪರಿಘಾಯುಧದಿಂದ ಬಲವಾಗಿ
ಬಡಿದು ಯಮಪುರಿಗೆ ನೂಕಿದನು. ವೀರಾಧಿವೀರರೂ ಕೂಡ ಭೀಮನ
ಪರಾಕ್ರಮಾದಿಗಳನ್ನು ನೋಡಿ ಭಯಭ್ರಾಂತರಾಗಿ ಕ್ಷೋಭೆಗೊಂಡಿದ್ದರು.
ಆಗ ಅಶ್ವತ್ಥಾಮನು—ಎಲೈ ಕೌರವೇಶ್ವರನೇ ! ಇನ್ನಾದರೂ ಸಕಲ ಪ್ರ
ಜಾಕ್ಷಯಕರವಾದ ಯುದ್ಧವನ್ನು ಪೂರೈಸುವುದಕ್ಕಾಗಿ, ಏಕಗ್ರೀವರಾದ
ಪಾಂಡವರಲ್ಲಿ ವೈರವನ್ನು ತ್ಯಜಿಸಿ, ಪ್ರೀತಿಯಿಂದ ನೋಡು—ಎಂದು ಹೇಳ
ದುದು ಸಾಗಲಿಲ್ಲ. ವಾಚಕಮಹಾಶಯರೇ ! ಪಾಂಡವರಲ್ಲಿ ವಿರೋಧವನ್ನು

ಬಳಲಿಸಿದ ಕೌರವರೆಲ್ಲರೂ ಸಪರಿವಾರ ಹತರಾಗುತ್ತಿದ್ದುದನ್ನು ನೋಡಿದರೆ,—"ಅತ್ಯುತ್ಕಟೈಃ ಪುಣ್ಯಪಾಪೈಃ ಇಹೈವ ಫಲಮಶ್ನುತೆ" ಎಂಬಂತೆ,—ದುಷ್ಟರು ತಂತಮ್ಮ ದುಷ್ಕರ್ಮಗಳಿಗೆ ತಕ್ಕ ಫಲವನ್ನು ಈಗಲೇ ಅನುಭವಿಸುತ್ತೇವೆಂದು ತಿಳಿಯದೆ, ದೈವವನ್ನು ನಿಂದಿಸುವರಲ್ಲವೇ? ಆಗಲೂ ದುರ್ಯೋಧನನು ಅಸದ್ಭಾವದಿಂದ ಯುದ್ಧಾಸಕ್ತಿಯಲ್ಲಿಯೇ ಇದ್ದನು.

ಆಗ ಕರ್ಣಾರ್ಜುನರಿಗೆ ಕೊನೆಯ ಯುದ್ಧವು ಸನ್ನಿಹಿತವಾಯಿತು. ದಿವ್ಯರಥದಮೇಲೆ ಕುಳಿತಿದ್ದ ಕೃಷ್ಣಾರ್ಜುನರು ಕರ್ಣನ ರಥಕ್ಕೆದುರಾದರು. ಕರ್ಣಾರ್ಜುನರಿಬ್ಬರೂ ಘೋರವಾಗಿ ಯುದ್ಧವನ್ನು ಮಾಡುತಿರುವಾಗ, ನಭಸ್ಥಲಸಂಚಾರಿಗಳಾದ ದೇವರ್ಷಿಪಿತೃಯಕ್ಷಗಂಧರ್ವಪ್ರಮುಖರು ವಿಮಾನದಲ್ಲಿ ಕುಳಿತು ನೋಡುತಿದ್ದರು; ಕರ್ಣನು ಅರ್ಜುನನ ಕತ್ತನ್ನು ಕತ್ತರಿಸುವುದಕ್ಕೆ ಸರ್ಪಾಸ್ತ್ರವನ್ನು ಪ್ರಯೋಗಿಸಿ, 'ಪಾರ್ಥನು ಬಿದ್ದನು' ಎನ್ನುತ್ತಿರುವಾಗ ಶ್ರೀಕೃಷ್ಣನು ರಥಚಕ್ರಗಳನ್ನು ಭೂಮಿಯೊಳಕ್ಕೆ ಇಳಿಯುವ ಹಾಗೆ ತುಳಿದನು. ಆ ಸರ್ಪಶರವು ಗುರಿಯನ್ನು ತಪ್ಪಿ ಧನಂಜಯನ ಶಿರಶ್ಛೇದನೆಗೆ ಪ್ರತಿಯಾಗಿ ಅವನ ಕಿರೀಟವನ್ನು ಹಾರಿಸಿತು. ಆಗ ಅರ್ಜುನನು ತಲೆಗೆ ಬಿಳಿಯ ಪಾಗನ್ನು ಸುತ್ತಿಕೊಂಡು ಆ ಸರ್ಪಾಸ್ತ್ರವನ್ನು ಛೇದಿಸಿ, ನಿಶಿತಬಾಣಗಳನ್ನು ಕರ್ಣನಮೇಲೆ ಪ್ರಯೋಗಿಸಿ, ಆತನ ಮರ್ಮಗಳನ್ನು ನೋಯಿಸಿ, ಕವಚಹೀನನನ್ನಾಗಿ ಮಾಡಿ, ರಥಧ್ವಜವನ್ನು ಹಾರಿಸಿ ಬೊಬ್ಬಿರಿದನು. ಆದಾಗ್ಯೂ ಕರ್ಣನು ಧೈರ್ಯಗೆಡದೆ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಲು, ಸವ್ಯಸಾಚಿಯೂ ಬ್ರಹ್ಮಾಸ್ತ್ರದಿಂದಲೇ ಅದನ್ನು ತಡೆದನು. ಸೂರ್ಯಪುತ್ರನು ಪಾಂಡವಮಧ್ಯಮನ ಪ್ರಾಣಾಪಹಾರಕಗಳಾದ ಬಾಣಗಳನ್ನು ಅಥರ್ವಮಂತ್ರಗಳಿಂದ ಅಭಿಮಂತ್ರಿಸಿ, ಧನುಸ್ಸಿನಲ್ಲಿ ತೊಡಲು; ಅವನ ರಥಚಕ್ರಗಳು ಭೂಮಿಯಲ್ಲಿ ಹೂಳಹೋಗಿ, ರಥವು ವ್ಯತ್ಯಸ್ತವಾಗಿ ಗುರಿತಪ್ಪುತಿದ್ದರೂ ಅರ್ಜುನನನ್ನು ನಾನಾವಿಧಾಸ್ತ್ರಗಳಿಂದ ಗಾಯಗೊಳಿಸುತಿದ್ದನು. ಹೀಗೆ ಅವರಿಬ್ಬರೂ ಘೋರವಾದ ಯುದ್ಧದಿಂದ ರಕ್ತಸಿಕ್ತಗಾತ್ರರಾಗಿರಲು;—ದೇವಮಾಯೆಯಿಂದ ಮೋಹಿತನಾದ ಕರ್ಣನು ತನ್ನ ಶರೀರದಲ್ಲಿ ಸಹಜವಾಗಿದ್ದ ಕವಚಕುಂಡಲಗಳನ್ನು ದೇವೇಂದ್ರನಿಗೆ ದಾನವಾಗಿ ಕೊಟ್ಟುದರಿಂದಲೂ, ವಿಪ್ರವೇಷದಿಂದ ಪರಶುರಾಮರ ಬಳಿಗೆ

ಹೋಗಿ, ಅಸ್ತ್ರವಿದ್ಯೆಯನ್ನು ಕಲಿಯುವುದಕ್ಕಾಗಿ ಸುಳ್ಳಾಡಿ ಅಪರ ಅಗ್ರ ಹಕ್ಕೆ ಪಾತ್ರನಾದುದರ ದೆಸೆಯಿಂದ ಸಮರದಲ್ಲಿ ಯುದ್ಧಸಾಮಗ್ರಿಗಳು ನಷ್ಟವಾದುದರಿಂದಲೂ ಒಬ್ಬ ಮುನೀಶ್ವರನ ಹೋಮಧೇನುವನ್ನು ಅಜ್ಞಾನದಿಂದ ಕೊಂದುದಕ್ಕೆ ಆತನಿಂದ--ನೀನು, ಯಾವನನ್ನು ತಿರಸ್ಕರಿಸಿ ನಾನಾ ವಿಧವಾದ ಯತ್ನಗಳನ್ನಾಚರಿಸುವೆಯೋ ಅವು ವಿಫಲವಾಗಿ, ಆತನೊಡನೆ ಯುದ್ಧಮಾಡುವಾಗ ರಥಚಕ್ರಗಳು ಭೂಮಿಯಲ್ಲಿ ಮಗ್ನವಾಗಿ ಆ ಶತ್ರುವಿನಿಂದಲೇ ನಿನ್ನ ಶಿರಸ್ಸು ಖಂಡಿಸಲ್ಪಡಲಿ--ಎಂದು ಶಾಪವನ್ನು ಹೊಂದಿದುದರಿಂದಲೂ, ಶ್ರೀಕೃಷ್ಣನ ನಿಯೋಗಚಾತುರ್ಯದಿಂದಲೂ ಶಲ್ಯನ ಹೀಯಾಳಿಕೆಯಿಂದಲೂ, 'ತೊಟ್ಟಬಾಣವನ್ನು ಮರಳಿ ತೊಡೆನು' ಎಂಬ ಪ್ರತಿಜ್ಞೆಯಿಂದಲೂ,—ಕರ್ಣನು ಧೀರನಾದರೂ ಯುದ್ಧದಲ್ಲಿ ತೇಜೋಭಂಗವನ್ನು ಐದಿದನು. ಆಗ ಪಾರ್ಥನು ಅಂಜಲಿಕವೆಂಬ ಮಹಾಶರದಿಂದ ದಾನಶೌಂಡನಾದ ಕರ್ಣನ ಶಿರಸ್ಸನ್ನು ಖಂಡಿಸಲು, ಆತನ ಆತ್ಮವು ಆದಿತ್ಯಮಂಡಲದಲ್ಲಿ ಸೇರಿತು! ಲೋಕಬಾಂಧವನಾದ ಸೂರ್ಯನು ಅದನ್ನು ನೋಡಲಾರದೆ ಅಸ್ತನಾದನು! ಕೌರವರು ನಾಚಿಕೆಯಿಂದ ತಲೆಯೆತ್ತದೆ ಭೇರೀನಿನಾದಶೂನ್ಯರಾಗಿದ್ದರು. ಭಗ್ನಾಶನಾದ ದುರ್ಯೋಧನನು ತನ್ನ ದುರ್ನಯವನ್ನು ಸ್ಮರಿಸುತ ಕಂಬನಿಗಳನ್ನು ತುಂಬಿ, ನಿಟ್ಟುಸಿರನ್ನು ಬಿಡುತ್ತ, ಬಾರಿಬಾರಿಗೂ ಕರ್ಣನನ್ನು ನೆನೆಯುತ ಚಿಂತಾಪರವಶನಾಗಿ ಏನೂ ತೋರದೆ ಇದ್ದನು. ಏಕೆಂದರೆ :—ಕರ್ಣನು ಸ್ತ್ರೀ ಪುರುಷಗಳಿಗಾದ ಕೌರವನ ಮುಖ್ಯ ಮಂತ್ರಿಯಾಗಿ ಪ್ರಿಯಮಿತ್ರನಾಗಿ ಸಕಲರಾಜ್ಯಕಾರ್ಯಗಳನ್ನೂ ಸಾಧಿಸತಕ್ಕವನಾಗಿ ಪಾಂಡವರೊಡನೆ ಯುದ್ಧಮಾಡುವುದಕ್ಕೆ ಉತ್ಸಾಹಗೊಳಿಸಿ ಸಮರೋತ್ಸಾಹಿಯಾಗಿ, ಲೋಕಪ್ರಖ್ಯಾತನಾಗಬೇಕೆಂದು ಬಗೆದು, ಆ ಉದ್ದೇಶವು ನೆರವೇರುವುದಕ್ಕಾಗಿ ಬೇಕಾದುದನ್ನೆಲ್ಲ ಮಾಡುತಿದ್ದನು. ಶಲ್ಯನು ಆಗ ದುರ್ಯೋಧನನ ಸನ್ನಿಧಾನಕ್ಕೆ ಹೋಗಿ—ಎಲೈ ಸಾರ್ವಭೌಮನೇ! ನಿನಗೆ ಹಿತವನ್ನು ಬಯಸಿ, ಸಕಲ ಭೋಗಗಳನ್ನೂ ಬಂಧುವರ್ಗಗಳನ್ನೂ ಪರಿತ್ಯಜಿಸಿ, ಪ್ರಾಣಗಳಲ್ಲಿಯೂ ಆಶೆಯನ್ನು ಬಿಟ್ಟು ಉತ್ತಮವಾದ ಕೀರ್ತಿಯನ್ನೂ ವೀರಸ್ವರ್ಗವನ್ನೂ ಅಪೇಕ್ಷಿಸಿ, ಕ್ಷತ್ರಧರ್ಮವನ್ನು ಬಿಡದೆ ಯುದ್ಧಮಾಡಿ, ಹತರಾಗಿರುವವರನ್ನು ನೋಡಿ ಮರುಕಗೊಂಡು, ಸೂರ್ಯ

ನೂ ಮರೆಯಾಗಿರುವುದರಿಂದ ಇಂದಿನ ಯುದ್ಧವನ್ನು ಸಾಕುಮಾಡಲು ಅಪ್ಪಣೆಯನ್ನು ದಯಪಾಲಿಸು ; ಪಾಳೆಯಕ್ಕೆ ಹಿಂತಿರುಗೋಣ—ಎಂದನು. ಅದನ್ನಂಗೀಕರಿಸಿ, ಪರಿವಾರಸಹಿತ ಪಾಳಯಕ್ಕೆ ಸೇರಿದ ದುರ್ಯೋಧನನು ಮಿತ್ರನಾದ ಕರ್ಣನನ್ನು ಸ್ಮರಿಸಿ ಹಂಬಲಿಸುತಿದ್ದನು. ಸೈನಿಕರು ಅಂದಿನ ಭೀಮಾರ್ಜುನರ ಜಯವನ್ನೂ ಕರ್ಣದುಶ್ಶಾಸನಾದಿಗಳ ಸಂಹಾರವನ್ನೂ ಮನಸ್ಸಿನಲ್ಲಿ ನೆನೆನೆನೆದು ಹರ್ಷದುಃಖದಿಂದಿದ್ದರು. ಪಾಂಡವರು ತುತೂರಿಯನ್ನೂದಿಸಿಕೊಂಡು, ಜಯಶಬ್ದಪೂರ್ವಕವಾಗಿ ಶಿಬಿರಕ್ಕೆ ಸೇರಿದರು. ‘ಕಾಲವಲ್ಲದ ಕಾಲದಲ್ಲಿ ದುಃಖಿತನಾಗಿಯೇ ಇದ್ದರೆ ಮುಂದಿನ ಕಾರ್ಯವು ಕೆಡುವುದು’ ಎಂದು ದುರ್ಯೋಧನನು ಯೋಚಿಸಿ, ಕಾಲಪ್ರೇರಣೆಯಿಂದ ತಿರಿಗೂ ಯುದ್ಧವನ್ನೇ ಬಯಸಿ, ಶಲ್ಯನನ್ನು ಸಮರಸಭೆಯಲ್ಲಿ ಸೇನಾಧಿಪತಿಯನ್ನಾಗಿ ಮಾಡಿ, “ಲೋಕದಲ್ಲಿ ಆವಾತನು ತನ್ನ ಒಡೆಯನ ಕಾರ್ಯನಿಮಿತ್ತವಾಗಿ ಶರೀರವನ್ನು ಕೊಡುವನೋ ಅವನೇ ಧನ್ಯನು. ಇಹಪರಗಳೆರಡರಲ್ಲಿಯೂ ಅವನಿಗೆ ಸುಖವುಂಟು”—ಎಂದು ಹೇಳುತ, ಭೀಷ್ಮದ್ರೋಣಕರ್ಣರಿಗಾಗಿ ಚಿಂತಿಸದೆ, ನಿದ್ರಾಸಕ್ತನಾದನು.

೧೮ನೆಯ ದಿನ ಸೂರ್ಯೋದಯಕ್ಕೆ ಮುಂಚೆ ಧನುರ್ಮಾಸದ ಕಟ್ಟಳೆಯನ್ನು ತೀರಿಸಿಕೊಂಡು, ಯುದ್ಧಕ್ಕೆ ಉಭಯ ಪಕ್ಷದವರೂ ಹೊರಟರು. ‘ಶಲ್ಯನು ಪಾಂಡವರನ್ನು ಸಂಹರಿಸದೆ ಬಿಡನು’ ಎಂದುಕೊಂಡು, ‘ಅತ್ಯಾಶಾ ಪರಮಂದುಃಖಂ ನೈರಾಶ್ಯಂ ಪರಮಂ ಸುಖಂ’ ಎಂಬಂತಿರದೆ, ದುರ್ಯೋಧನನು ಅಭೇದ್ಯವಾದ ಕವಚವನ್ನು ತೊಟ್ಟು ರಥಾರೋಹಣವನ್ನು ಮಾಡಲು ; ಅವನ ಜತೆಯಲ್ಲಿ ಹತಾವಶಿಷ್ಟವಾದ ಚತುರಂಗಬಲವು ಸುಶಿಕ್ಷಿತವಾಗಿ ವೈಭವದೊಡನೆ ನಡೆಯಲು ; ಪಾಂಡವರು ಜಯಭೇರಿಧ್ವನಿಯನ್ನು ಕೇಳುತ ಹೋರಾಟಕ್ಕೆ ತೊಡಗಿದರು. ಸಂಕುಲಯುದ್ಧಕ್ಕೆ ಮೊದಲಾಗಿ ಭೀಮಾರ್ಜುನರು ತಂತಮ್ಮ ಪೌರುಷವನ್ನು ತೋರುತಿದ್ದರು :—

ಶ್ಲೋ || ಮಾತೃವತ್ಪರದಾರಾಂಶ್ಚ ಪರದ್ರವ್ಯಾಣಿಲೋಷ್ಟವತ್ |
ಆತ್ಮವತ್ಸರ್ವಭೂತಾನಿ ಯಃಪಶ್ಯತಿ ಸಪಂಡಿತಃ ||

ಎಂಬ ನಿಶ್ಚಯದಿಂದ ಸರ್ವಭೂತದಯಾಪರನಾಗಿದ್ದರೂ ಕ್ಷಾತ್ರಧರ್ಮಾನುಸಾರ ಯುದ್ಧದುರ್ಮದನಾದ ನಕುಲನು ಕರ್ಣಪುತ್ರರಾದ ಚಿತ್ರಸೇನ,

ಸತ್ಯಸೇನ, ಸುಶರ್ಮ ಇವರನ್ನು ಎದುರಿಸಿ ಅವರ ಶರಹತಿಗೆ ನೊಂದವನಾದರೂ, ತನ್ನ ಪರಾಕ್ರಮಾತಿಶಯದಿಂದ ಅವರನ್ನು ಕೊಂದನು. ಶಲ್ಯನು ಪಾಂಡವಬಲವನ್ನು ವಧಿಸುತಿರುವಲ್ಲಿ, ಭೀಮನು ಅವನ ಚಕ್ರರಕ್ಷಕರನ್ನು ಗದಾಪ್ರಹಾರಗಳಿಂದ ತರಿದು, ಶತ್ರುವಾಹಿನಿಯನ್ನು ಸಂಹರಿಸುತಿರಲು ; ಶಲ್ಯನು ಕೋಪಗೊಂಡು ತೋಮರಾಯುಧದಿಂದ ಬೀಸಿ ಹೊಡೆದನು. ಅವನು ಅದನ್ನು ತನ್ನ ಕೈಯಲ್ಲಾಂತು ಅದರಿಂದಲೇ ಶಲ್ಯನ ರಥಧ್ವಜವನ್ನೂ ಸಾರಥಿಯನ್ನೂ ಕೆಡಹಿ, ಆರ್ಭಟಿಸಿದನು ಬಳಿಕ ಅವರೀರ್ವರಿಗೂ ಗದಾಯುದ್ಧ ಬದಗಿ, ಬಂದು ಜಾವದವರೆಗೂ ನಡೆಯಿತು. ಗದಾಪ್ರಹಾರಗಳಿಂದ ಇಬ್ಬರೂ ಮೂರ್ಛಿತರಾಗಿ ಬಿದ್ದರು. ಉಭಯ ಸೇನೆಗಳಲ್ಲಿಯೂ ಹಾಹಾಕಾರ ಉಂಟಾಯಿತು. ಭೀಮನು ನಿಮಿಷಮಾತ್ರದಲ್ಲಿ ಮೂರ್ಛೆಯನ್ನು ತಿಳಿದು, ಗದೆಯನ್ನು ತಿರುಗಿಸುತ, ಶಲ್ಯನಿಗೆದುರಾಗಿ ಹೋಗುವಷ್ಟರಲ್ಲಿ ಅವನ ರಥವು ಯುದ್ಧಭೂಮಿಯಲ್ಲಿರಲಿಲ್ಲ. ಭೀಮನು ವೈರಿಸಮೂಹವನ್ನು ಬಾಣದ ಮಳೆಯಿಂದ ಕವಿದು ಕೆಡಹುತಿರಲು ; ಸ್ಥಿರಮನಸ್ಕನಾದ ದುರ್ಯೋಧನನು ಭೀಮನನ್ನು ಎದುರಿಸಿ, ಅವನ ರಥದಲ್ಲಿದ್ದ ಸುವರ್ಣಭೂಷಿತವಾದ ಧ್ವಜವನ್ನು ಭೂಮಿಗೆ ಕೆಡಹಿ, ಗರ್ವಾತಿಶಯದಿಂದ ಮತ್ತೊಂದು ಚಂಡಕಾಂಡವನ್ನು ಪ್ರಯೋಗಿಸಿ, ಆತನ ಧನುಸ್ಸನ್ನೂ ಖಂಡಿಸಿದನು. ಭೀಮನು ಅಗ್ರಹವ್ಯಗ್ರನಾಗಿ ದಿವ್ಯವಾದ ಶಕ್ತ್ಯಾಯುಧದಿಂದ ಅವನ ವಿಶಾಲವಕ್ಷಸ್ಥಲವನ್ನು ಸೀಳಿ, ಮೂರ್ಛಿತನನ್ನಾಗಿ ಮಾಡಿ, ಅವನ ಸಾರಥಿಯನ್ನೂ ವಧಿಸಿದುದರಿಂದ ರಥಾಶ್ವಗಳು ಸಿಕ್ಕಿದ ಕಡೆಗೆ ಆ ರಥವನ್ನು ಎಳೆದುಕೊಂಡು ಹೋಗುತ್ತಿದ್ದವು. ಸಾಗರಮಧ್ಯದಲ್ಲಿರುವ ಹಡಗು ಒಡೆದು ಹೋದಾಗ ಅದರಲ್ಲಿರುವವರು ಪ್ರಾಣಸಂಶಯದಿಂದಿರುವಂತೆ ಕೌರವನ ಪಡೆಯು ದೀನದಶೆಯಲ್ಲಿದ್ದಿತು. ಶಲ್ಯನು ಅದನ್ನು ಕಂಡು ಸೋದರಾಮಾತ್ಯರೊಡನೆ ಧರ್ಮರಾಯನನ್ನು ಇದಿರಿಸಿ, ತನ್ನ ಧನುರ್ವಿದ್ಯಾಕೌಶಲ್ಯವನ್ನು ಮೆರೆಯುಸುತಿರುವಲ್ಲಿ, ಆತನು 'ದಂಡಿನಲ್ಲಿ ಸೋದರಮಾವನೇ' ಎಂಬ ಗಾದೆಯೊಂದು ಹುಟ್ಟುವಂತೆ ವ್ಯಾಮೋಹವನ್ನೂ ಲಜ್ಜೆಯನ್ನೂ ಬಿಟ್ಟು, ತನ್ನನ್ನು ಗಾಯಗೊಳಿಸಿ ಬಹುವಾಗಿ ನೋಯಿಸಿದ ಶಲ್ಯನಕೂಡ ದ್ವಂದ್ವಯುದ್ಧವನ್ನು ಮಾಡುತಲಿದ್ದು, ಮಧ್ಯಾಹ್ನಸಮಯದಲ್ಲಿ ಅವನನ್ನು ಕೊಂದನು.

ಅವನ ಅನುಜರು ಮೇಲೆಬಿದ್ದು ಬರಲು ಅವರನ್ನೂ ಕೊಂದನು. ಭೀಮನು ಸಂರಂಭ ವಿಜೃಂಭಿತನಾಗಿ ತನ್ನ ರಥದಿಂದ ಹಾರಿ ಕೌರವರ ಚತುರಂಗಬಲವನ್ನೂ ಗಂಗಾಪ್ರವಾಹವು ತೀರದಲ್ಲಿರುವ ಮರಗಳನ್ನು ಕೆಡಹುವಂತೆ, ನಾಶಗೊಳಿಸುತಲಿದ್ದನು ಇದೆಲ್ಲವನ್ನೂ ನೋಡಿ ದುರ್ಯೋಧನನು ದುಸ್ಸಹವಾದ ಯುದ್ಧವನ್ನು ಮಾಡುವುದಕ್ಕೆ ಹೊರಟು, ದಿಕ್ಕಾಪಾಲಾಗಿ ಓಡುತಿರುವ ಹತಾಶರಾದ ಕುರುಸೈನ್ಯನಿಕರವನ್ನು ನೋಡಿ, ಅವರನ್ನು ಕುರಿತು— " ಎಲೈ ವೀರಶ್ರೇಷ್ಠರುಗಳಿರಾ ! ಪೌರುಷವನ್ನು ತೊರೆದು ಯುದ್ಧರಂಗದಲ್ಲಿ ಅರಿಗಳಿಗೆ ಬೆನ್ನನ್ನು ತೋರಿಸುತ ಏಕೆ ಓಡುವಿರಿ ' ಆಧಿವ್ಯಾಧಿ ಜರೆ ಮುಂತಾಗವುಗಳಿಂದ ಹಾಸಿಗೆಯಲ್ಲಿ ಬಿದ್ದು ನರಳುತ ಕೊರಗುತ ಮರಣವನ್ನೈದುವುದಕ್ಕಿಂತಲೂ, ಯುದ್ಧೋಪಜೀವಿಗಳಿಗೆ ವಿಹಿತವಾದ ಯುದ್ಧದಲ್ಲಿ ಮರಣಹೊಂದಿದರೆ, ಶಾಶ್ವತಗಳಾದ ಪುಣ್ಯಲೋಕಗಳೂ ಸಕಲಶುಭಗಳೂ ಲಭಿಸುವುದಕ್ಕೆ ಸಂಶಯವಿಲ್ಲ. ಪಾಂಡವರಿಗೆ ನಾವು ನಾನಾವಿಧವಾದ ಅಪರಾಧಗಳನ್ನು ಮಾಡಿ ಅನ್ಯಾಯವಾಗ ಒಪ್ಪಂದದಿಂದ ದೇಶೋಚ್ಚಾಟನಾದಿ ಹಿಂಸೆಗಳನ್ನುಂಟುಮಾಡಿರುವ ನಿಮಿತ್ತ, ಅವರು ನನ್ನನ್ನೂ ನನಗೆ ಸೇರಿದವರನ್ನೂ ಎಲ್ಲಿಗೆ ಹೋಗಿದರೂ ಬೆನ್ನಟ್ಟಿ ಸಂಹರಿಸದೆ ಬಿಡರು. ಸಮವರ್ತಿಯು ಪರಾಕ್ರಮಿಗಳೆಂದೂ ಹೇಡಿಗಳೆಂದೂ ನೋಡದೆ ಎಂದಿದ್ದರೂ ನಿಮಿಷಮಾತ್ರದಲ್ಲಿ ಪ್ರಾಣಗಳನ್ನು ತೆಗೆದುಕೊಂಡು ಹೋಗುವನು. ದೈವಾನುಗ್ರಹವು ತಪ್ಪಿದ ಪ್ರಾಣಿಯು ಎಲ್ಲಿಗೆ ಹೋದರೂ ಆಪತ್ತುಗಳೂ ಪ್ರಾಯಶಃ ಅಲ್ಲಿಯೇ ಬರುವುವು. ಬಹುಕಾಲ ಬಹುಸತ್ಕರ್ಮಗಳನ್ನು ಮಾಡುವುದರಿಂದ ಬರುವ ವಸ್ವಾದಿಲೋಕಗಳೇ ಯುದ್ಧಮಾಡಿ ಮಡಿದವನಿಗೂ ಬರುವುವು ಎಂಬುದನ್ನು ನೀವು ಕೇಳಲಿಲ್ಲವೇ ! ಹಿಡಿದಕಾರ್ಯವನ್ನು ಪೂರ್ತಿಗೊಳಿಸಿ ಫಲವನ್ನಾದರೂ ಪಡೆಯಬೇಕು. ಅಥವಾ ಪ್ರಾಣವನ್ನಾದರೂ ಬಿಡಬೇಕು. ನಾವು ಹೇಡಿಗಳಾಗಬಾರದು. ಗೆದ್ದರೆ ಚಕ್ರಾಧಿಪತ್ಯವೂ, ಬಿದ್ದರೆ ವೀರಸ್ವರ್ಗವೂ, ಕರಗತವಾಗಿಯೇ ಇರುವುದು, ಶತ್ರುಬಲವೂ ಸ್ವಲ್ಪವಾಗಿಯೇ ಇದೆ. ಧೈರ್ಯವನ್ನು ಬಿಡದೆ ಯುದ್ಧಕ್ಕೆ ನಿಂತರೆ, ನಮಗೇ ಜಯವಾಗಬಹುದು"—ಎಂದು ಶೂರವಚನಗಳನ್ನಾಡಲು ; ಸಕಲ ಸೈನಿಕರೂ ಅಭಿನಂದಿಸಿ,ಆಕ್ಷಣ ಯುದ್ಧಕ್ಕೆ ನಡೆದರು. ಧೀರನಾದ ದುರ್ಯೋ

ಧನನೊಬ್ಬನೇ ಪಾಂಡವಯೋಧರನ್ನೆದುರಿಸಿ ನಿಶಿತನಾರಾಚಗಳನ್ನು ಪ್ರಯೋಗಿಸುತಲಿದ್ದನು. ಅತ್ತ ಕಡೆ ಭೀಮನು ದಿಗ್ಗಜಕರೋಪಮಾನವಾದ ತನ್ನ ಧನುಸ್ಸಿನಿಂದ ಕ್ರೂರಬಾಣಗಳನ್ನು ಪ್ರಯೋಗಿಸುತ ಶತ್ರುಪಡೆಗಳನ್ನು ಭಗ್ನವಾಗಿ ಮಾಡಿ ತಣಿಯದೆ, ರಥದಿಂದ ಭೂಮಿಗಿಳಿದು ಗದಾದಂಡದಿಂದ ಕೌರವಗಜಸೈನ್ಯವನ್ನೆಲ್ಲಾ ನಾಶಗೊಳಿಸಿ, ಅವುಗಳ ಶರೀರಗಳನ್ನು ತನ್ನ ಪಾದಗಳಿಂದ ಮೆಟ್ಟಿ ಆಚೆಗೆನೂಕಿ, ದುರ್ಗಮವಾದ ದಾರಿಯನ್ನು ಸುಗಮವಾಗಿ ಮಾಡಿಕೊಂಡು ಕೌರವರಿದ್ದ ತಾಪಿಗೆ ಹೋದನು. ದುರ್ಯೋಧನನ ೧೦ ಮಂದಿ ತಮ್ಮಂದಿರು ಒಟ್ಟಾಗಿ, ಭೀಮನನ್ನು ಕೊಲ್ಲಬೇಕೆಂದು ಮುತ್ತಿಕೊಂಡು ನೂರಾರು ಬಾಣಗಳನ್ನು ಪ್ರಯೋಗಿಸಿದರು. ಅವನು ಅವರ ಬಾಣಗಳನ್ನೆಲ್ಲ ಕತ್ತರಿಸಿ, ತನ್ನ ಕರಲಾಘವವನ್ನು ತೋರಿಸಿ ಅಪ್ರತಿಹತನಾದ ಅರ್ಧಚಂದ್ರಬಾಣಗಳಿಂದ ಆ ೧೦ ಜನರ ಶಿರಸ್ಸುಗಳನ್ನೂ ಕೆಡಹಿದನು! ಶ್ರುತಪರ್ವನೆಂಬ ಮತ್ತೊಬ್ಬ ಕೌರವನು ಭೀಮನ ಧನುಸ್ಸನ್ನು ಖಂಡಿಸಿ ಅವನ ಶರೀರದಲ್ಲಿ ಕ್ರೂರನಾರಾಚಗಳನ್ನು ನೆಟ್ಟು ನೋಯಿಸಲು; ಭೀಮಸೇನನು ಅವನನ್ನು ಅಟ್ಟಿಕೊಂಡು ಹೋಗಿ ಸಂಹರಿಸಿದನು. ಹೀಗೆ ತನ್ನೆದುರುಬಿದ್ದು ಯುದ್ಧಮಾಡಿದ ವೀರರನ್ನೆಲ್ಲ ಸಂಹರಿಸಿ, ಹತಾವಶಿಷ್ಟನಾದ ಸೈನ್ಯಕ್ಕೆ ಧೈರ್ಯವನ್ನುಂಟುಮಾಡುತ ರಣರಂಗದಲ್ಲಿ ದಣಿವಿಲ್ಲದೆ ಇದ್ದನು. ದುಷ್ಟಾತ್ಮನಾದ ಶಕುನಿಯು ಸಹದೇವನನ್ನು ಎದುರಿಸಿ ಅನೇಕ ನಿಶಿತಶರಗಳಿಂದ ಹೊಡೆದು ಅರ್ಭಟಿಸಲು; ಆ ಧೀರನು ಅವುಗಳನ್ನೆಲ್ಲ ಸಹಿಸಿ, ಅಭೇದ್ಯವಾದ ಭಲ್ಲೆಯದಿಂದ ಆ ಶಕುನಿಯನ್ನು ಹೊಡೆದನು. ಅವನು ಕೊರಗುತಲಿರುವ ಪ್ರಾಣದೊಡನೆ ಭೂಮಿಯಲ್ಲಿ ಬಿದ್ದನು! ದುರ್ಯೋಧನನ ಕಿರಿಯ ತಮ್ಮನಾದ ಸುಶರ್ಮನು ಭೀಮನ ಕೂಡ ಯುದ್ಧಮಾಡಿ ಆತನ ತೀಕ್ಷ್ಣಬಾಣಗಳಿಂದ ಮಡಿದನು. ಅರ್ಜುನನು ತ್ರಿಗರ್ತಸಂಶಪ್ತಕಾದಿಗಳನ್ನು ಕೊಂದು ಶತ್ರುಶೇಷವಿಲ್ಲದಹಾಗೆ ಮಾಡುತಲಿದ್ದನು. ಪಾಂಡವರು, ಉಪಪಾಂಡವರು, ಸಾತ್ಯಕಿ, ಧೃಷ್ಟದ್ಯುಮ್ನ ಇವರಿಂದ ಶಕುನಿಯ ಮಗನಾದ ಉಲೂಕನೂ, ಕಾಂಭೋಜರೂ, ಯವನರೂ, ಕಿರಾತರೂ. ಮುಂತಾಗಿ ಕೌರವರಕಡೆ ಸೇರಿದ್ದ ಸೈನಿಕರು ನಿಶ್ಶೇಷವಾಗಿ ಹತರಾಗಲು; ದುರ್ಯೋಧನನು ಏನುಮಾಡುವುದಕ್ಕೂ ತೋ

ರದೆ, ಎಲ್ಲಿ ನೋಡಿ ಕರೆದರೂ ಯಾರೂ ಇಲ್ಲದೆ, ಭೀಮನ ಸಿಂಹನಾದವನ್ನು ಕೇಳಿ, ದೈನ್ಯಪಟ್ಟವನಾಗಿ ನೀತಿಸಂಪನ್ನನಾದ ವಿದುರನು ‘ ಪಾಂಡವರೊಡನೆ ಯುದ್ಧಕ್ಕೆ ಹೋದರೆ, ಜಯವಾಗುವುದಿಲ್ಲ ’ ಎಂದು ಹೇಳಿದ ವಾಕ್ಯವನ್ನು ಸ್ಮರಿಸುತ, ತನ್ನ ಗದಾಯುಧವನ್ನು ಭುಜದಲ್ಲಿಟ್ಟುಕೊಂಡು, ವಿವಿಧಾಯುಧ ಪ್ರಹಾರಗಳಿಂದ ಜರ್ಝರಿತಶರೀರನಾಗಿ, “ ಈಗ ಅಪಜಯವನ್ನು ಹೊಂದಿ ಅಸಹಾಯನಾಗಿರುವ ನಾನು, ಜಯಸಂಪನ್ನರಾಗಿ ಉತ್ಸಾಹಿಗಳಾಗಿರುವ ವೈರಿಗಳಿಗೆ ದೃಗ್ಗೋಚರನಾಗುವುದು ನೀತಿಯಲ್ಲ ” ಎಂದು ಬಗೆದು ಪಾದಚಾರಿಯಾಗಿ ಹೋಗುತ್ತ, ಯುದ್ಧಭೂಮಿಗೆ ಒಂದು ಹರಿದಾರಿ ದೂರದಲ್ಲಿರುವ ಒಂದು ಪೆರ್ಮಡುವನ್ನು ಪ್ರವೇಶಿಸಿ, ಜಲಸ್ತಂಭ ವಿದ್ಯಾಪ್ರಭಾವದಿಂದ ನೀರಿನ ಬಾಧೆಗೆ ಒಳಪಡದೆ ಇದ್ದನು ! ಪಾಂಡವರನ್ನು ಆಶ್ರಯಿಸಿದ್ದ, ಧೃತರಾಷ್ಟ್ರನ ವೈಶ್ಯಪ್ರಿಯಪತ್ನೀಸುತನಾದ ಯುಯುತ್ಸುವು ರಣರಂಗದ ನೋಟದಲ್ಲಿದ್ದ ರಾಜಸ್ತ್ರೀಯರನ್ನು ಕರಿನಗರಿಗೆ ಕರೆದುಕೊಂಡು ಹೋಗಿ ಅಂತಃಪುರದಲ್ಲಿ ಬಿಟ್ಟು, ವಿದುರನಿಗೆ ಆ ಸಂಗತಿಯನ್ನು ಅರಿಕೆಮಾಡಿದನು.

ಆಬಳಿಕ ಶ್ರೀಕೃಷ್ಣಸಹಿತರಾದ ಪಾಂಡವರು ದುರ್ಯೋಧನನು ಯುದ್ಧಭೂಮಿಯಲ್ಲಿಲ್ಲದೆ ಇದ್ದುದಕ್ಕಾಗಿ, ಅವನು ಹೋದದಾರಿಯನ್ನೇ ಹಿಡಿದು ಸ್ಯಮಂತಪಂಚಕದ ಎಲ್ಲಾ ಕಡೆಗಳಲ್ಲಿಯೂ ಹುಡುಕುತ್ತ ಹೋಗಿ ಬೇಟೆಗಾರರಿಂದ ಅವನು ವೈಶಂಪಾಯನ ಸರಸ್ಸಿನಲ್ಲಿ ಮುಳುಗಿರುವುದನ್ನು ಕೇಳಿ ಅಲ್ಲಿಗೆ ನಡೆದು, ಮರ್ಮಭೇದಕವಾಗಿ ನುಡಿಯುತ್ತಿರುವುದನ್ನು ಅವನು ಕೇಳಲಾರದೆ, ಉದಕದದೆಸೆಯಿಂದ ಮೇಲಕ್ಕೆ ಬಂದನು. ಆಗ ಯುಧಿಷ್ಠಿರನು ದುರ್ಯೋಧನನ್ನು ಕುರಿತು—ಎಲೈ ಸಮ್ರಾಜನೆ ! ಹೆದರಬೇಡ. ಏಕಾಂಗಿಯಾದೆನೆಂದೂ, ಯಾರೂ ಸಹಾಯಕರಿಲ್ಲವೆಂದೂ, ಸಂಕಟಪಡಬೇಡ. ಜಯಪರಾಜಯಗಳು ದೈವಾಧೀನವಾಗಿರುವುವು. ಈಗಲೂ ನೀನು ನಮ್ಮ ಐವರಲ್ಲಿ ಒಬ್ಬನಕೂಡವಾದರೂ ಯುದ್ಧವನ್ನು ಮಾಡಿ ಗೆದ್ದರೆ, ಯಥಾಪ್ರಕಾರ ರಾಜಾಧಿರಾಜನಾಗಿಯೇ ಇರಬಹುದು.—ಎಂದು ಮೃದುವಾಗಿ ಪ್ರೀತಿಯಿಂದ ಹೇಳಿದನು. ಕೌರವನು—ಹಾಗೆಯೇ ಆಗಲಿ. ನಾನು ಭೀಮನ ಕೂಡ ಹೋರುವೆನು—ಎಂದು ಹೇಳಿದನು. ವಾಚಕರೇ ! ಕೇಳಿ. ಆಗ ಶ್ರೀಕೃಷ್ಣನು ಹೇಳಿದುದು ಹೀಗೆ.—“ ಧರ್ಮರಾಯನೇ ! ಹಿಂದೆ ಸ್ವಕಾರ್ಯವನ್ನು

ಮರೆತು, ಜೂಜಾಡಿ ಎಲ್ಲವನ್ನೂ ಸೋತು, ನಾನಾವಿಧವಾದ ಶ್ರಮವನ್ನು ಅನುಭವಿಸಿ, ಈಗಲೂ ಕೌರವನ ಕೂಡ ಪೆಚ್ಚಾಗಿ ಮಾತನಾಡಿದೆಯಲ್ಲಾ ! ಒಂದು ಕಬ್ಬಿಣದ ವಿಗ್ರಹವನ್ನು ಮಾಡಿಸಿ, ಅದರೊಡನೆ ೧೩ ವರುಷಗಳಿಂದ ಗದಾಸಾಧನೆಯನ್ನು ಮಾಡಿರುವ ದುರ್ಯೋಧನನಿಗೆ ಶತ್ರುಜನಭಯಂಕರನಾದ ಭೀಮಸೇನನು ಹೊರತು ನೀವು ನಾಲ್ವರೂ ಸರಿಬರಲಾರಿರಿ. ಚತುರನೂ ಬಲವಂತನೂ ಯುದ್ಧದಲ್ಲಿ ಕಲಿತರೆ, ಚತುರನೇ ಗೆಲ್ಲುವನು. ಭೀಮನಾದರೋ ಅವನಷ್ಟು ಯುಕ್ತಿವಂತನಲ್ಲ. 'ಅಂತೂ ಇಂತೂ ಕುಂತೀ ಮಕ್ಕಳಿಗೆ ರಾಜ್ಯವಿಲ್ಲ.' ಎಂದು ಜನರು ಆಡಿಕೊಳ್ಳುವ ಹಾಗೆ ಮಾಡಿದೆಯಲ್ಲಾ ! ದೈವಯೋಗದಿಂದ ದುರ್ಯೋಧನನು ಭೀಮನೊಡನೆಯೇ ಹೋರಾಡುತ್ತೇನೆನ್ನದೆ, ಮಿಗಿಲಾದ ನಿಮ್ಮ ಯಾರನ್ನಾದರೂ ಕುರಿತಿದ್ದರೆ ಇನ್ನೂ ಎಂತಹ ಅನರ್ಥವು ಒದಗುತಿದ್ದಿತು." ಆಗ ಭೀಮಸೇನನು–ಎಲೈ ಮಾನವ ಸಂಜ್ಞಾಧಾರಿಯೇ ! ಏಕೆ ಹೀಗೆ ಹೀಯಾಳಿಸುವೆ. ನೀವೆಲ್ಲ ಸುಮ್ಮನೆ ನೋಡುತ್ತಿದ್ದರೆ ನನ್ನ ಗದಾಪ್ರಹಾರಗಳಿಂದ ಕೌರವನನ್ನು ಕೊಂದು ನಿಮಗೆ ಆನಂದಮಾಡುವೆನು. ಚಿರಕಾಲದಿಂದ ತೊಡರಿಬಂದ ವೈರಕ್ಕೆ ಈಪೊತ್ತು ಪರ್ಯವಸಾನ ಒದಗಿದೆ. ಇದನ್ನೇ ನಿರೀಕ್ಷಿಸುತಲಿದ್ದೆನು–ಎಂದುಹೇಳಿ ವಂದಿಸಿದನು. ಶ್ರೀಕೃಷ್ಣನು–ಎಲೈ ವೃಕೋದರನೆ ! ದುರ್ಜಯನಾದ ದುರ್ಯೋಧನನು ಹೊರತಾಗಿ ಕೌರವರೆಲ್ಲರೂ ನಿನ್ನಿಂದ ಸಮೆದರು. ಆದರೆ ನೀನು ಅವನನ್ನು ನಿಮ್ಮ ಅಣ್ಣನಂತೆ ಎಲ್ಲಿ ಕರುಣದಿಂದ ನೋಡುತ್ತೀಯೋ ಎಂದು ಎಚ್ಚರಿಸಿದೆನು. ನಿನ್ನಂತಹ ಶೂರಸಹೋದರನಿರುವಾಗ ಧರ್ಮರಾಯನಿಗೆ ವಂಶಾನುಗತವಾದ ಚಕ್ರಾಧಿಪತ್ಯ ಉಂಟೆಂಬುದಕ್ಕೆ ಸಂದೇಹವೇನು ! ನಿನ್ನ ಶಪಥಕ್ಕನುಸಾರವಾಗಿ ಕೌರವನನ್ನು ಗದಾಯುದ್ಧದಲ್ಲಿ ವಧಿಸಿದರೆ, ನೀನು ಈ ಭರತವರ್ಷವನ್ನೆಲ್ಲ ಅಗ್ರಜನಿಗೆ ಸಮರ್ಪಿಸಬಹುದು. ಸಾಮರ್ಥ್ಯಾದಿಗಳಲ್ಲಿ ಅತಿಚತುರನಾದ ದುರ್ಯೋಧನನು ಈ ದಿನ ಸಾಯಂಕಾಲದೊಳಗೆ ನಿನ್ನಿಂದ ಹತನಾಗುವನು. ನಿನಗೆ ಮಂಗಳವಾಗಲಿ–ಎಂದು ಹೇಳಿ ಬಹುಮನ್ನಿಸಿದನು.

ಮಾರ್ಗಶಿರ ಬಹುಳ ಅಮಾವಾಸ್ಯೆಯ ದಿನ ಅಪರಾಹ್ಣದಲ್ಲಿ ಗದಾಹಸ್ತನಾದ ಭೀಮಸೇನನು 'ಉಪೇಂದ್ರನು ಬಲೀಂದ್ರನ ಸಮೀಪಕ್ಕೆ ಹೊರ

ಟಂತೆ ' ಗದಾಪಾಣಿಯಾಗಿ ನಿಂತಿರುವ ಕೌರವೇಂದ್ರನ ಹತ್ತಿರಕ್ಕೆ ಹೋಗಿ ವೀರಾಲಾಪವನ್ನು ಮಾಡಿ ಯುದ್ಧಕ್ಕೆ ಸಿದ್ಧನಾದನು. ಆಗ ಬಲರಾಮನು ತೀರ್ಥಯಾತ್ರೆಯನ್ನು ಮುಗಿಸಿಕೊಂಡು, ತನ್ನ ಶಿಷ್ಯರ ಗದಾಯುದ್ಧವನ್ನು ನೋಡುವುದಕ್ಕಾಗಿ ಅಲ್ಲಿಗೈತಂದು, ಶ್ರೀಕೃಷ್ಣ ಯುಧಿಷ್ಠಿರಾದಿಗಳೊಡನೆ ಮಾತನಾಡುತಲಿರಲು ; ಆ ವೀರಶ್ರೇಷ್ಠರಿಬ್ಬರೂ ಒಬ್ಬರಮೇಲೊಬ್ಬರು ಕಾಣಿಸಿಕೊಂಡು, ಅಮರರೂ ಅಭಿನಂದಿಸುವ ಹಾಗೆ ಸಮರಾಂಗಣದಲ್ಲಿ ತಂತಮ್ಮ ಪರಾಕ್ರಮವನ್ನು ಮೆರೆಯಿಸುತಲಿದ್ದರು. ಅವರು ಒಬ್ಬರನ್ನೊಬ್ಬರು ವಂಚಿಸುತ ಅಪ್ಪಳಿಸುತ, ಗದೆಗಳನ್ನು ಬಿರಬಿರನೆ ತಿರುಗಿಸಿ ಹೊಡೆಯುತ, ವಿಚಿತ್ರಗತಿಗಳಿಂದ ಗಾಯಗೊಳಿಸಿ ನೋಯಿಸುತ, ಚಕ್ರಗತಿವಿಶೇಷದಿಂದ ಘೋರವಾಗಿ ಯುದ್ಧವನ್ನು ಮಾಡುತಿರುವಲ್ಲಿ ಶಿಕ್ಷಾಕೌಶಲ್ಯದಿಂದ ಅಧಿಕನಾದ ಸುಯೋಧನನು, ಭೀಮನ ಮೇಲೆ ತನ್ನ ಗದೆಯನ್ನು ತಿರುಗಿಸಿ ಹೊಡೆಯಲು ; ಭಾಗ್ಯವಿಶೇಷದಿಂದ ಭೀಮನು ಆ ಪೆಟ್ಟನ್ನು ಗಣನೆಗೆ ತಾರದೆ, ಶತ್ರುವನ್ನು ಹೊಡೆದು ನೋಯಿಸಿದನು. ಸಿಡಲಿಗೆ ಸಿಡಿಲು ತಾಗುವಂತೆ ಗದೆಗಳು ಒಂದಕ್ಕೊಂದು ಬಡಿದು ಬೆಂಕಿಯ ಕಿಡಿಗಳುಂಟಾಗಿ ಭೂಮಿಗೆ ಬಿದ್ದವು. ಮರಳಿ ಇಬ್ಬರೂ ಗದೆಗಳನ್ನು ತೆಗೆದುಕೊಂಡು ಮಂಡಲಾಕಾರವಾಗಿ ತಿರುಗಿಸಿ ಹೊಡೆಯುತಿದ್ದರು. ಭೀಮನ ತಲೆಗೆ ಬಲವಾಗಿ ಏಟುಬಿದ್ದಿತು. ಆಗ ಅದನ್ನು ಸಹಿಸಿಕೊಂಡು ಸಾಹಸದಿಂದ ತನ್ನ ಗದೆಯನ್ನು ಕೌರವನ ಮೇಲೆ ಬೀಸಿಹಾಕಲು ; ಅವನು ಉಪಾಯದಿಂದ ತಪ್ಪಿಸಿಕೊಂಡನು. ಈ ಪ್ರಕಾರ ಪರಸ್ಪರ ಬಾರಿಬಾರಿಗೂ ಘಾತಪ್ರತಿಘಾತವಾಗುತಿರುವಲ್ಲಿ ಕೌರವನು ಮತ್ತೆ ಭೀಮನ ವಕ್ಷಸ್ಥಳವು ಜಜ್ಜಾಗುವಂತೆ ಹೊಡೆದನು. ವೃಕೋದರನು ಸಿಟ್ಟಿನಿಂದ ದುರ್ಯೋಧನನ ಪಾರ್ಶ್ವಭಾಗದಲ್ಲಿ ಹೊಡೆದ ಗದಾಪ್ರಹಾರವು ಆತನನ್ನು ಭೂಮಿಯಲ್ಲಿ ಬೀಳಿಸಿತು. ಪಾಂಡವರ ಬಲದಲ್ಲಿ ಕೋಲಾಹಲವು ಹೆಚ್ಚಿತು. ರಕ್ತಸಿಕ್ತಾಂಗನಾದ ಸುಯೋಧನನು ಕೂಡಲೆ ಎದ್ದು ಭೀಮನ ಹಣೆಗೆ ಗುರಿಯಿಟ್ಟು ಹೊಡೆದನು. ವಜ್ರಶರೀರಿಯಾದ ಭೀಮನು ಮದಧಾರೆಯಿಂದೊಪ್ಪುವ ಮದದಾನೆಯಂತೆ ರಕ್ತವನ್ನು ಸುರಿಯಿಸುತ,ವೀರಾವೇಶದಿಂದ ಹಲ್ಲುಮುಡಿಯನ್ನು ಕಚ್ಚಿ ಈರ್ಷ್ಯಾಕಟಾಕ್ಷದಿಂದಿರುವ ಶತ್ರುವನ್ನು ತನ್ನಗದಾದಂಡದಿಂದ ಹೊಡೆದನು,

ಆ ಪೆಟ್ಟಿಗೆ ಕೌರವನು ಮೂರ್ಛೆಯನ್ನೈದಿ ಕೂಡಲೆ ಚೇತರಿಸಿಕೊಂಡು ಭೀಮನನ್ನು ಭೂಮಿಯಲ್ಲಿ ಕೆಡಹಿ ಬೊಬ್ಬಿರಿದನು. ಭೀಮಸೇನನು ಎದ್ದು ರೌದ್ರಾಕಾರನಾಗಿ ಯುದ್ಧಮಾಡುತಿದ್ದನು. ಒಬ್ಬರನ್ನೊಬ್ಬರು ಸಂಹರಿಸುವುದಕ್ಕೆ ಹೊಂಚುಹಾಕಿಕೊಂಡಿದ್ದರು. ನಿರ್ಜರರಾದಿಯಾಗಿ ಅವರ ಯುದ್ಧ ಫಲಿತಾಂಶವನ್ನು ಎದುರುನೋಡುತಿದ್ದರು. ಭೀಮಸೇನನು ತನ್ನ ಮಹೋಗ್ರವಾದ ಶಕ್ತಿಗೆ ತಕ್ಕಂತೆ ಸಮರಸಂರಂಭದಲ್ಲಿದ್ದು—ಹಿಂದೆ ಕೌರವನು ರಜಸ್ವಲೆಯಾಗಿದ್ದ ದ್ರೌಪದೀದೇವಿಯನ್ನು ಕುರಿತು, ದುರ್ಭಾಷೆಯನ್ನಾಡಿ ತೊಡೆಯನ್ನು ತೋರಿಸಿದ್ದುದೂ, ಆ ತೊಡೆಯ ಮೇಲೆ ಹೊಡೆದು ಕೊಲ್ಲುತ್ತೇನೆಂದು ತಾನು ಶಪಥಮಾಡಿದ್ದುದೂ ಹೃದಯಾರೂಢವಾಗಲು,—ಯುದ್ಧದಲ್ಲಿ ಕಂಗೆಟ್ಟಿರುವ ದುರ್ಯೋಧನನ ತೊಡೆಯ ಮೇಲೆ, ತನ್ನ ಗದಾಯುಧದಿಂದ ಉತ್ತೇಜಿತನಾಗಿ ಬಡಿಯಲು ; ಅವನು ತೊಡೆಮುರಿದು ಭೂಮಿಯಲ್ಲಿ ಬಿದ್ದನು ! ನೋಟಕರು, ದುರ್ಯೋಧನನು ಬಿದ್ದುದನ್ನು ನೋಡಿ—ಲೋಕದಲ್ಲಿ ಯಾರಿಗೂ ಸುಖದುಃಖಗಳು ಸ್ಥಿರವಲ್ಲ !—ಎಂದು ಹೇಳಿ ಭೀಮನನ್ನು ಹೊಗಳುತ ತಂತಮ್ಮ ಸ್ಥಳಗಳಿಗೆ ಹೋದರು. ಬಲಭದ್ರನು ಮಾತ್ರ ದುರ್ಯೋಧನನಲ್ಲಿ ಪಕ್ಷಪಾತವನ್ನಿಟ್ಟುಕೊಂಡು, ಭೀಮನ ಮೇಲೆ ಯುದ್ಧ ಮಾಡಲು ಹೊರಟನು. ವಾಸುದೇವನು ಅದನ್ನು ಕಂಡು, ಸವಿನುಡಿಗಳಿಂದ ತನ್ನ ಅಣ್ಣನನ್ನು ಸಮಾಧಾನಗೊಳಿಸಿ, ಭೀಮನ ಕಾರ್ಯವನ್ನು ಮೆಚ್ಚಿಕೊಂಡನು ! ವಾಚಕರೇ ! ದೈವಯೋಗದಿಂದ ಸಕಲಭೋಗಭಾಗ್ಯವೂ ಸ್ವಪ್ನವಸ್ಥೆ—ಎಂಬುದು ವ್ಯಕ್ತವಾಗಿದೆ. ಭೀಮನು, ಕೌರವರು ಆಡಿದ ನಿಷ್ಠುರವಾದಮಾತುಗಳನ್ನೇ ಸ್ಮರಿಸಿಕೊಂಡು ಅವರ ಕುಲಕ್ಷಯವನ್ನು ಮಾಡಿದನು. ಅದುಕಾರಣ ಆವನಾದರೂ ಆರನ್ನೂ ಅನ್ಯಾಯವಾಗಿ ಕಠಿನವಾದ ಮಾತುಗಳಿಂದ ನೋಯಿಸಬಾರದು. ಸಿದ್ಧಸಂಕಲ್ಪರಾದ ಪಾಂಡವರು ದ್ವೇಷಕ್ಕೆ ಪಾರವನ್ನು ಕಂಡುದರಿಂದ ಸೈನಿಕರು ಜಯಘೋಷವನ್ನು ಮಾಡುತ, ಮಹಾಮಹಿಮನಾದ ಭೀಮನ ಅಮಾನುಷಪರಾಕ್ರಮಾದಿಗಳಿಗೆ ಆಶ್ಚರ್ಯಗೊಂಡು, ಆತನನ್ನು ಅನೇಕಪ್ರಕಾರವಾಗಿ ಹೊಗಳಿ, 'ಜಯ ಜಯ' ಎಂದು ಕೊಂಡಾಡುತಲಿದ್ದರು. ಜಯಭೇರೀನಿನಾದವು ದಿಕ್ತಟವನ್ನು ಮುಚ್ಚುತ್ತಿದ್ದಿತು ! ಎಲ್ಲಿ ಧರ್ಮವಿರುವುದೋ ಅಲ್ಲಿ ಜಯ ಒದಗುವುದು !

ಆಗ ಅಸಹಾಯಶೂರನಾದ ಭೀಮನು ತನ್ನ ತಮ್ಮಂದಿರನ್ನು ತಬ್ಬಿಕೊಂಡು, ಅಣ್ಣನಿಗೆ ವಂದಿಸಿ, ಕೃತಾಂಜಲಿಯಾಗಿ ನಿಂತು, " ಆರ್ಯನೇ ! ವಂಚನೋಪಾಯಗಳಿಂದ ನಮ್ಮ ರಾಜ್ಯವನ್ನು ಕಿತ್ತುಕೊಂಡು ನಮ್ಮನ್ನು ನಾನಾವಿಧವಾಗಿ ಗೋಳುಗುಟ್ಟಿಸಿದ ದುಷ್ಟದುರ್ಯೋಧನನು ಪುತ್ರಮಿತ್ರಾಮಾತ್ಯಾನುಜಸಹಿತನಾಗಿ ಯುದ್ಧದಲ್ಲಿ ಹತನಾದುದರಿಂದ, ನಮಗೆ ಪಿತೃಸದೃಶನಾಗಿಯೂ, ಜ್ಯೇಷ್ಠಭ್ರಾತೃವಾಗಿಯೂ, ಗುರುವಾಗಿಯೂ, ಒಡೆಯನಾಗಿಯೂ ಇರುವ ಮಹಾತ್ಮನಾದ ನೀನು ಅನನ್ಯಮನಸ್ಕನಾಗಿ, ಶ್ರೀಕೃಷ್ಣಾನುಗ್ರಹದಿಂದ ಒಲಿದು ಬಂದಿರುವ ರಾಜ್ಯಶ್ರೀಯನ್ನು ವರಿಸಿ, ಈ ಭೂಮಂಡಲವನ್ನೆಲ್ಲ ಏಕಚ್ಛತ್ರವಾಗಿ, ಧರ್ಮದಿಂದ ಪರಿಪಾಲಿಸಲು, ಬೇಡುತ್ತೇನೆ " ಎಂದು ವಿನಯದಿಂದುಲ್ಲಾಸವಾಕ್ಯವನ್ನು ವಿಜ್ಞಾಪಿಸಿದನು. ಧರ್ಮರಾಯನು ತನ್ನ ತಮ್ಮನ ಅಂತರವಾದ ಆಕಾಂಕ್ಷೆಗೆ ಮೋದಗೊಂಡು, ಅವನನ್ನು ಆಲಿಂಗಿಸಿ, ಮೈಯನ್ನು ತಡವಿ, ಹರಸಿದನು ! ಆ ಬಳಿಕ ಪಾಂಡವರು ಭವಸಾಗರತಾರಕನಾದ ಶ್ರೀಕೃಷ್ಣನನ್ನು ಹೊಗಳುತ ಆತನ ಆಜ್ಞಾನುಸಾರ ತಮ್ಮ ಶಿಬಿರಕ್ಕೆ ಮಹಾರಾಜವೈಭವದೊಡನೆ ಹೋಗಿ ತಂತಮ್ಮ ರಥಗಳಿಂದಿಳಿದರು. ಒಡನೆ ಧ್ವಜಾಗ್ರದಲ್ಲಿದ್ದ ಕಪಿಶ್ರೇಷ್ಠನು ಅಂತರ್ಧಾನವನ್ನೈದಲು, ಅರ್ಜುನನ ರಥವು ಮಾತ್ರ ಸಾಧನಸಮೇತ ಉರಿದುಹೋಯಿತು. ಪರಿವಾರದೊಡನೆ ಪಾಂಡವರು ಸ್ವಲ್ಪಕಾಲ ವಿನೋದವಾಗಿರುವಲ್ಲಿ, ಕೌರವರ ಪಾಳೆಯವು ಆಟವಾಡಿ ಮುಗಿದ ನಾಟಕಶಾಲೆಯಂತಾಗಿ, ಅನಾಯಕವಾಗಿದ್ದುದನ್ನು ತಿಳಿದು, ಕೌಂತೇಯರು ಶ್ರೀಕೃಷ್ಣನೊಡನೆ ಅಲ್ಲಿಗೆ ಹೋಗಿ, ಅವರ ಬೊಕ್ಕಸ ಭಂಡಾರಾದಿಗಳನ್ನೆಲ್ಲ ತಮ್ಮ ವಶಮಾಡಿಕೊಂಡು ಹಿಂದಿರುಗಿ, ಅಚ್ಯುತನ ಅಣತಿಯಂತೆ ಆರಾತ್ರಿಯನ್ನು ಕಳೆಯಲು, ನದೀತೀರದಲ್ಲಿ ಮತ್ತೊಂದೆಡೆಯಲ್ಲಿ ವಿಶ್ರಮಿಸಿಕೊಳ್ಳುತಲಿದ್ದರು.

ಗೋವಿಂದನು ಪಾಂಡವರ ಪ್ರಾರ್ಥನಾನುಸಾರ ಹಸ್ತಿನಾವತಿಗೆ ಹೋಗಿ ಪುತ್ರಶೋಕದಿಂದ ಕ್ಲೇಶಪಡುತಲಿರುವ ಧೃತರಾಷ್ಟ್ರನನ್ನೂ ಪತಿವ್ರತಾಶಿರೋಮಣಿಯಾದ ಗಾಂಧಾರೀದೇವಿಯನ್ನೂ ತತ್ಕಾಲೋಚಿತವಾದ ಹಿತೋಕ್ತಿಗಳಿಂದ ದುಃಖದಿಂಸಮಾಧಾನಗೊಳಿಸಿ ಹಿಂದಿರುಗಿ ಸಾತ್ಯಕಿಯೊಡನೆ ಇರುವ ಕೌಂತೇಯರನ್ನು ಕಂಡು ವಿಲಾಸದಿಂದಿದ್ದನು. ಕೌರವರ ಕಡೆ

ಸೇರಿದ್ದ ೧೧ ಅಕ್ಷೌಹಿಣೀಸೈನ್ಯವೂ ಹತವಾಗಿ ಕೃಪ, ಅಶ್ವತ್ಥಾಮ, ಕೃತ
ವರ್ಮ, ಎಂಬೀ ಮೂವರು ಮಾತ್ರ ನಾನಾಶರಪೀಡಿತರಾಗಿ, ರಕ್ತಸಿಕ್ತಾಂಗ
ರಾಗಿ ೭ ಗಂಟೆಯವರೆಗೂ ತಮ್ಮ ಪ್ರಭುವಾದ ಕೌರವೇಶ್ವರನನ್ನು ಹುಡುಕಿ
ಕಾಣದೆ, ಕೊನೆಗೆ ವೈಶಂಪಾಯನಸರಸ್ತೀರಕ್ಕೆ ಹೋಗಿ, ಚರಮಾವಸ್ಥೆ
ಯಲ್ಲಿರುವ ದುರ್ಯೋಧನನನ್ನು ಕಂಡು ಆತನ ಶೋಚನೀಯಸ್ಥಿತಿಗೆ ವಿಷಾ
ದಿಸುತಲಿದ್ದರು. ಶಲ್ಯನು ಮಡಿದ ಬಳಿಕ, ಕೌರವೇಂದ್ರನ ಇಷ್ಟಾನುಸಾರ
ಸೇನಾಧ್ಯಕ್ಷನೆನಿಸಿಕೊಂಡಿದ್ದ ಅಶ್ವತ್ಥಾಮನು ಪಿತೃವಿಯೋಗದಿಂದ ಹುಟ್ಟಿದ
ರೋಷಶೋಕಗಳು ಹೆಚ್ಚಿ ಬರಲು ಪಾಂಡವರ ಬಲವನ್ನು ನಿರ್ಮೂಲವಾಗಿ
ಕೊಂದಲ್ಲದೆ ತೊಟ್ಟಿರುವ ಕವಚವನ್ನು ತೆಗೆಯುವುದಿಲ್ಲವೆಂದು ಶಪಥ
ಮಾಡಿ, ಆ ರಾತ್ರಿಯೇ ಪಾಳೆಯದಲ್ಲಿ ಹತಾವಶಿಷ್ಟವಾಗಿರುವ ಪಾಂಡವ
ಬಲವು ನಿದ್ರಾತಿಶಯದಿಂದ ಮೈಮರೆತಿರುವಾಗ ದಿವ್ಯಾಸ್ತ್ರವನ್ನು ಪ್ರಯೋಗಿಸಿ
ನಾಶಗೊಳಿಸಿದನು! ಪಾಂಡವರು ಶ್ರೀಕೃಷ್ಣ ಸಾತ್ಯಕಿಯರೊಡನೆ ತಮ್ಮ
ಶಿಬಿರಕ್ಕೆ ದೂರವಾದ ಗೋಪ್ಯಸ್ಥಳದಲ್ಲಿ ಪವಡಿಸಿದ್ದುದರಿಂದ ಅಪಾಯಕ್ಕೆ
ಸಿಕ್ಕದೆ ಸುಖವಾಗಿದ್ದರು. ದುರ್ಯೋಧನನು ಕುಟುಕು ಜೀವದಿಂದ ನರಳು
ತಿದ್ದರೂ, ಪಾಂಡವಸೇನೆಯು ನಿಶ್ಶೇಷವಾಗಿ ಹತವಾದುದನ್ನು ಕೇಳುವ
ವರೆಗೂ ಕೊರಗುತಿದ್ದು ಬಳಿಕ ಶತ್ರುನಾಶಕ್ಕೆ ಸಂತೋಷಗೊಂಡು ಪ್ರಾಣ
ವನ್ನು ಬಿಟ್ಟನು! ಕೌಂತೇಯರು ಹಾಸಿಗೆಯಿಂದೇಳುತಿರುವಾಗಲೇ ತಮ್ಮ
ಪುತ್ರರಾದ ಉಪಪಾಂಡವರೂ ಧೃಷ್ಟದ್ಯುಮ್ನ ಮುಂತಾದವರೂ ಅಶ್ವತ್ಥಾಮನ
ದಿವ್ಯಾಸ್ತ್ರದಿಂದ ಹತರಾಗಿರುವುದನ್ನು ಕೇಳಿ, ದ್ರೌಪದೀದೇವಿಯನ್ನು ನಕುಲನ
ಮೂಲಕ ತಮ್ಮ ಬಳಿಗೆ ಕರೆಯಿಸಿಕೊಂಡು ಬಹುದುಃಖಿತರಾಗಿದ್ದರು. ಶತ್ರು
ರಾಜಪತ್ನಿಯರ ತಲೆಯುಗಂಟುಗಳನ್ನು ಬಿಚ್ಚಿಸಿ, ದುಶ್ಯಾಸನನಿಂದ ಎಳೆಯ
ಲ್ಪಟ್ಟಿದ್ದ ವೇಣಿಯನ್ನು ಬಂಧಿಸುವೆನೆಂಬ ತನ್ನ ಶಪಥವನ್ನು ಭೀಮಸೇನ
ನಿಂದ ನೆರವೇರಿಸಿಕೊಂಡ ಪಾಂಚಾಲಿಯು ಪುತ್ರಶೋಕಸಂತಪ್ತಳಾಗಿ ನಿದ್ರಾ
ಹಾರಗಳನ್ನು ತೊರೆದು ಹಂಬಲಿಸುತಿದ್ದಳು! ಆ ದುಃಖಸಮಾಧಾನಕ್ಕಾಗಿ
ಅಶ್ವತ್ಥಾಮನ ಶಿರೋರತ್ನವನ್ನು ತಂದುಕೊಡುವುದಾಗಿ ಹೇಳಿದ ಭೀಮಸೇ
ನನು ರಥವನ್ನೇರಿ ಧನುರ್ಬಾಣಗಳನ್ನು ಹಿಡಿದು, ಅವನು ನಡೆಯುತಿರುವ
ಮಾರ್ಗವನ್ನು ಹುಡುಕುತಹೋದನು. ಧರ್ಮರಾಯನು ಶ್ರೀಕೃಷ್ಣಾರ್ಜುನರೊ

ಜನೆ ವೇದವ್ಯಾಸಾಶ್ರಮಕ್ಕೆ ಹೋಗಿ ಭೀಮನನ್ನು ಸಂಧಿಸಿದನು. ಅವನು ಅಲ್ಲಿದ್ದ ದ್ರೋಣಪುತ್ರನಲ್ಲಿ ಪೌರುಷವನ್ನು ತೋರಿಸಿ, ಕೌರವರಿಂದ ಹೊಂದಿರುವ ಸಕಲೈಶ್ವರ್ಯಗಳಿಗಿಂತಲೂ ಶ್ರೇಷ್ಠವೆನಿಸಿದ ಆತನ ಶಿರೋರತ್ನವನ್ನು ಅವನಿಂದಲೇ ಪಡೆದು ಹಿಂದಿರುಗಿ ತಮ್ಮ ಬಿಡಾರಕ್ಕೆ ಬಂದು ಅದನ್ನು ಪಾಂಚಾಲಿಗೆ ಕೊಟ್ಟನು. ಆಕೆಯು ಆ ರತ್ನವನ್ನು ಧರ್ಮರಾಯನಿಗೆ ಕೊಡಲು ; ಆತನು ಅದನ್ನು ತನ್ನ ಶಿರಸ್ಸಿನಲ್ಲಿ ಧರಿಸಿದನು. ವಾಚಕರೇ ! ಹೀಗೆ ಐದುಸಾವಿರ ವರುಷಗಳ ಹಿಂದೆ ಕುರುಕ್ಷೇತ್ರದಲ್ಲಿ ನಡೆದ ಯುದ್ಧಕ್ಕೆ ಕುರುಪಾಂಡವರ ಕಡೆ ಸೇರಿದ್ದ ತ್ರಿಗರ್ತಸಂಶಪ್ತಕಾದಿ ಸೈನ್ಯಗಳಲ್ಲದೆ ೧೮ ಅಕ್ಷೌಹಿಣೀಬಲದಲ್ಲಿ ಹತ್ತುಮಂದಿಮಾತ್ರ ಉಳಿದು, ಮಿಕ್ಕವರೆಲ್ಲ ೧೮ ದಿನಗಳಲ್ಲಿ ಹತರಾದುದನ್ನು ಓದಿ ನೋಡಿದರೆ, ಜನ್ಮಾಂತರದಲ್ಲಿ ಆರ್ಜಿಸಿರುವ ಸುಕೃತವಿರುವವರೆಗೂ ಸಕಲ ಸೌಭಾಗ್ಯವು ಒದಗಿದ್ದು, ಅದು ನಾಶವಾಗಲು, ಸಮಸ್ತವೂ ಅಲ್ಲಲ್ಲಿಯೇ ಮಾಯವಾಗಿ ಹೋಗುವುವು. ಅದರಿಂದ ಹಾನಿವೃದ್ಧಿಗಳಿಗೆ ದೈವವೇ ಮುಖ್ಯಕಾರಣವೆಂದೂ ಕೆಲವುವೇಳೆ ಪೌರುಷವು ಪ್ರಯೋಜನಕಾರಿಯಲ್ಲವೆಂದೂ ತೋರುತ್ತದೆ. ನಾವುತಿಳಿಯಬೇಕಾದ ಮತ್ತೊಂದಂಶವು ಆವುದೆಂದರೆ—ಯುದ್ಧಕಾಲದಲ್ಲಿ ಕುರುಪಾಂಡವರಿಗೆ ೭೧ ವರುಷ ವಯಸ್ಸಾಗಿದ್ದರೂ ಅವರ ಕಾಯಶಕ್ತಿ ಜಿತಮನಸ್ಸು ಮಾನ ಪರಾಕ್ರಮ ಮುಂತಾದ ಗುಣಗಳು ಈಗಿನ ಕಾಲದಂತಿರದೆ ಶ್ಲಾಘ್ಯವಾಗಿದ್ದಿತೆಂಬುದು.

## ಅಧ್ಯಾಯ ೬.

ಸಾಮಂತನರಪತಿಗಳೊಡನೆ ಕೌರವರೆಲ್ಲರೂ ಸಂಹೃತರಾದರೆಂಬ ವಾರ್ತೆಯು ಸಂಜಯನಿಂದ ವೃದ್ಧರಾಜನಿಗೆ ತಿಳಿದು ತಾನು ಕುಳಿತಿದ್ದ ಪೀಠದಿಂದ ಕೆಳಕ್ಕೆ ಬಿದ್ದು ಮೈಮರೆತನು. ಅದಂ ನೋಡಿ ಅಂತಃಪುರದಲ್ಲಿ ವೀರಪತ್ನಿಯರೆಲ್ಲರೂ ಕಡುದುಃಖದಿಂದ ಗೋಳಿಡುತಲಿರುವ ಧ್ವನಿಯು ಆ ಪುರವು ಸೂರೆಹೋಯಿತೋ ಎನ್ನುವಹಾಗೆ ಕೇಳುತಿದ್ದಿತು. ವಿದುರನು ತನ್ನ ಅಣ್ಣನನ್ನು ಶೈತ್ಯೋಪಚಾರದಿಂದುಪಚರಿಸಿ ಪ್ರಕೃತೋಚಿತವಾಕ್ಯ

ಗಳಿಂದ ಎಲ್ಲರನ್ನೂ ಸಂತೈಸಿದನು. ಆಗ ತನ್ನ ಅದೃಷ್ಟವಿಪಾಕವನ್ನರಿತ ಧೃತರಾಷ್ಟ್ರನು ಪರಿವಾರದೊಡನೆ ಯುದ್ಧಭೂಮಿಗೆ ಹೋದನು. ಧರ್ಮರಾಯನು ಶ್ರೀಕೃಷ್ಣನೊಡನೆಯೂ, ಸಹೋದರರೊಡನೆಯೂ, ತನ್ನ ದೊಡ್ಡಪ್ಪನ ಬಳಿಗೆ ಹೋಗಿ ಆ ವೃದ್ಧರಾಜದಂಪತಿಗಳಿಗೆ ವಂದಿಸಿದನು. ಪುತ್ರಶೋಕವೆಂಬ ವಾಯುವಿನಿಂದ ಪ್ರಜ್ವಲಿಸುತಲಿರುವ ಕ್ರೋಧಾಗ್ನಿಯ ಮೂಲಕ ಭೀಮನೆಂಬ ಕಾಂತಾರವನ್ನು ಸುಡಲೆಣಿಸಿದ ಧೃತರಾಷ್ಟ್ರನು–ಕುಮಾರ ಕಂಠೀರವನಾದ ಆ ಭೀಮಸೇನನೆಲ್ಲಿ ?– ಎಂದು ತಡಕುತಲಿದ್ದನು. ಶ್ರೀಕೃಷ್ಣನು ಅವನ ಸುಳಿವನ್ನು ತಿಳಿದು, ಮಿತ್ರನಾದ ಭೀಮಸೇನನನ್ನು ಕಾಪಾಡಬೇಕೆಂದೆಣಿಸಿ, ಕೌರವೇಂದ್ರನು ನಿತ್ಯವೂ ಸಾಧನೆಗಾಗಿ ಮಾಡಿಸಿಟ್ಟುಕೊಂಡಿದ್ದ ದೊಡ್ಡದಾದ ಭೀಮವಿಗ್ರಹವನ್ನು ತಕ್ಕರೀತಿಯಲ್ಲಿ ಶೃಂಗರಿಸಿ ಬೇಗನೆ ಅದನ್ನುತರಿಸಿ ಆ ಅಂಧನೃಪನಮುಂದೆ ನಿಲ್ಲಿಸಲು ; ಆ ದೊರೆಯು ಆ ಪ್ರತಿಮೆಯನ್ನು ತಬ್ಬಿಕೊಂಡು ಭೀಮನೆಂದೆಣಿಸಿ, ಬಾಹುದ್ವಯುಗಳಿಂದಲೂಬಲವಾಗಿ ಹಿಡಿದು, ಆಲಿಂಗನವನ್ನು ಮಾಡುವವನಂತೆ ನಟಿಸಿ ಭೀಮನಂತಿದ್ದ ಅದನ್ನು ಮುರಿದು 'ನಾನು ವೃಕೋದರನನ್ನು ಕೊಂದೆನು' ಎಂದು ಭಾವಿಸಿ, ತಾನೂ ಬಿದ್ದು ಘಾಯವನ್ನು ಹೊಂದಿ 'ಭೀಮಾ ! ಭೀಮಸೇನಾ ? ಏನಾದೆಯೋ ! ' ಎಂದು ರೋದಿಸಿದನು ! ನೋಟಕರು ಅವನ ಕುಟಿಲಬುದ್ಧಿಗೆ ಆಶ್ಚರ್ಯಗೊಂಡರು. ವಾಚಕರೇ ! ದುಷ್ಟರಿಗೆ ಎಷ್ಟು ಸಂಕಟವಿದ್ದರೂ ಸ್ವಭಾವಜನ್ಯವಾದ ದುರ್ವ್ಯಾಪಾರವನ್ನು ಎಂದಿಗೆ ತಾನೇ ಬಿಟ್ಟಾರು! ಆಬಳಿಕ ಪತಿಪರಾಯಣಳಾದ ಗಾಂಧಾರೀದೇವಿಯು ಪಾಂಡವರಬಳಿಯಲ್ಲಿ ನಿಂತು,–" ಎಲೋ, ಭೀಮಾ ! ಗದಾಯುದ್ಧಧರ್ಮವನ್ನು ಮೀರಿ ನನ್ನ ಮಗನನ್ನು ನಾಭಿಯ ಕೆಳಗೆ ಹೊಡೆದು ಕೊಂದೆಯಲ್ಲಾ ! ಉಚಿತವೇ " ಎಂದಳು. ಭೀಮನು ಭಯಭ್ರಾಂತನಾಗಿ, ತನ್ನ ದೊಡ್ಡಮ್ಮನನ್ನು ಕುರಿತು–' ಅಮ್ಮಾ ! ಸತ್ಯವಾದಿನೀ ! ಆತ್ಮಸಂರಕ್ಷಣಕ್ಕಾಗಿ ಧರ್ಮವೋ ಅಧರ್ಮವೋ ನಾನು ಹಾಗೆ ಮಾಡಿದುದುಂಟು. ತಪಸ್ವಿನಿಯಾದ ನೀನು ಮನ್ನಿಸಬೇಕು. ಮೊದಲು ನಿಮ್ಮ ಮಗನು ಮಾಡಿದ ಅಪರಾಧಗಳನ್ನೆಲ್ಲ ಸಹಿಸಿದೆನು. ಆದರೆ ಕೃಷ್ಣೆಗೆ ತೊಡೆಯನ್ನು ತೋರಿಸಿ ಹೇಯವಾದ ನುಡಿಗಳನ್ನು ನುಡಿದುದನ್ನು ಮಾತ್ರ ಸಹಿಸಲಾರದೆ, ಆ ತೊಡೆಯಲ್ಲಿಯೇ ಹೊಡೆದು

ಕೊಲ್ಲುವೆನೆಂದು ಶಪಥಮಾಡಿ ಆಗಲೇ ಕೊಲ್ಲುವುದಕ್ಕೆ ಹೊರಟು ಅಣ್ಣನ ಆಜ್ಞೆಯಿಂದ ಅತಿಕ್ರಮಿಸದೆ ಇದ್ದೆನು. ಮೂರ್ಧಾಭಿಷಿಕ್ತರಾದ ರಾಜರಲ್ಲೆಲ್ಲ ಅಗ್ರಗಣ್ಯನಾದ ಆತನೊಬ್ಬನನ್ನು ಈಗ ನಾನು ಸಂಹರಿಸದಿದ್ದರೆ, ಈ ಭೂಮಂಡಲಾಧಿಪತ್ಯವು ಯುಧಿಷ್ಠಿರನ ಕೈಸೇರುತಿರಲಿಲ್ಲ. ಅದಕ್ಕಾಗಿ ಮೈತ್ರೇಯಮುನೀಶ್ವರನು ನಿಮ್ಮ ಮಗನಿಗೆ ಕೊಟ್ಟಿದ್ದ ಶಾಪಕ್ಕನುಸಾರವಾದ ಬುದ್ಧಿಯೊದಗಿ ಅವನನ್ನು ಸಮರದಲ್ಲಿ ಕೊಂದೆನು.'—ಎಂದು ಮೃದುವಾಗಿ ವಿಜ್ಞಾಪಿಸಿದನು. ಮರಳಿ ಆಕೆಯು—' ಎಲೋ ಭೀಮಸೇನಾ ಯುವರಾಜನಾದ ದುಶ್ಶಾಸನನ ಎದೆಯನ್ನು ಸೀಳಿ ಕ್ರೂರಕರ್ಮವನ್ನಾಚರಿಸಿದೆಯಲ್ಲಾ ! ನ್ಯಾಯವೇ ? ಎಂದಳು. ಭೀಮನು :—ತಾಯಿ ! ನಾನು ಹಾಗೆಮಾಡಬಾರದಾಗಿದ್ದಿತು. ಆದರೆ ರಾಜಮಹಿಷಿಯಾದ ಪಾಂಚಾಲಿಗೆ ದುಶ್ಶಾಸನನು ಅವಮಾನವನ್ನು ಮಾಡಿದಾಗ, ಕೋಪಗೊಂಡ ನಾನು, ' ಯುದ್ಧದಲ್ಲಿ ಅವನನ್ನು ಕೊಂದು ನೆತ್ತರವನ್ನು ಕುಡಿಯುವೆನು.' ಎಂದು ಶಪಥಮಾಡಿದ್ದೆನು. ಕ್ಷತ್ರಿಯರಿಗೆ ಪ್ರತಿಜ್ಞಾಪಾಲನವೇ ಮುಖ್ಯಧರ್ಮವೆಂದು ಹಾಗೆ ಮಾಡಬೇಕಾಯಿತು. ಆದರೆ ಆತನ ರಕ್ತವು ನನ್ನ ತುಟಿಗೂದಂತಗಳಿಗೂ ಸೋಕಿತೇ ಹೊರತು ಪಾನಮಾಡಲಿಲ್ಲ. ನಿರಪರಾಧರಾದ ನಮ್ಮನ್ನು ನಾನಾವಿಧವಾಗಿ ಬಾಧಿಸಿದ ನಿಮ್ಮ ಮಕ್ಕಳನ್ನು ಶಿಕ್ಷಿಸದೆ, ಉಪೇಕ್ಷೆಯಿಂದಿದ್ದು ಈಗ ನಮ್ಮಮೇಲೆ ಅಪರಾಧಗಳನ್ನುಹೊರಿಸಿ ಕೋಪಿಸಬಹುದೇ ? ಅದನ್ನು ಸ್ಮರಿಸಿ ದುಃಖಿಸದೆ ನಮ್ಮ ಮೇಲೆ ನಿಮ್ಮ ಕೃಪಾಕಟಾಕ್ಷವೀಕ್ಷಣವು ಪ್ರಸರಿಸುವ ಹಾಗೆ ಅನುಗ್ರಹಿಸಬೇಕು—ಎಂದು ಅರಿಕೆಮಾಡಿದನು—ಮತ್ತೆ ಆ ರಾಜಮಾತೆಯು ಭೀಮನನ್ನು ಕುರಿತು—ನಮ್ಮ ಪುತ್ರಶತದಲ್ಲಿ ಅಲ್ಪಾಪರಾಧಿಯಾದವನು ಒಬ್ಬನೂ ಇರಲಿಲ್ಲವೇ ? ಅಂಧಕರೂ ವೃದ್ಧರೂ ಆದ ನಮಗೆ ಒಬ್ಬ ಮಗನುಳಿದಿದ್ದರೂ ನಾವು ಕ್ಲೇಶಪಡುತಿರಲಿಲ್ಲವಲ್ಲಾ ! ಅಕಟಾ !! ಎಂದು ಮರುಗಿದಳು. ಆಗ ಧರ್ಮರಾಯನು ನತಶರೀರನಾಗಿ ಮಧುರಭಾಷಣದಿಂದಲೂ, ತತ್ತ್ವಗಳಿಂದಲೂ, ಲೋಕಚರಿತ್ರಗಳಿಂದಲೂ, ಗಾಂಧಾರೀದೇವಿಯ ದುಃಖಸಮಾಧಾನವನ್ನು ಮಾಡಿದನು. ಆಕೆಯ ಆಜ್ಞಾನುಸಾರ ಪಾಂಡವರು ಪುತ್ರವತ್ಸಲಳಾದ ಕುಂತೀದೇವಿಯ ಬಳಿಗೆ ಹೋಗಿ, ಕಣ್ಣೀರೆಂಬ ಪನ್ನೀರಿನಿಂದ ಆಕೆಯ ಪಾದಗಳನ್ನು ತೊಳೆದು, ಭಕ್ತಿಭರಿತರಾಗಿ ಅಭಿ

ವಂದಿಸಲು; ಹದಿಮೂರುವರೆ ವರುಷಗಳಿಂದಲೂ ಪುತ್ರರನ್ನಗಲಿ ದುಃಖಾತಿಶಯದಿಂದ ಕೃಶಾಂಗಿಯಾಗಿ ದೀನಭಾವವನ್ನಾಶ್ರಯಿಸಿದ್ದ ಆ ವೀರಮಾತೆಯು ಬಾರಿಬಾರಿಗೂ ವಂದಿಸುತಲಿರುವ ಪುತ್ರರನ್ನೂ ಸೊಸೆಯಾದ ದ್ರೌಪದಿಯನ್ನೂ ನೋಡಿ ಆನಂದಬಾಷ್ಪಗಳು ಉಕ್ಕಿಬರುತಿರಲು; ವಿನಯವಿನಮಿತಗಾತ್ರರಾದ ತನ್ನ ಮಕ್ಕಳನ್ನು ತಬ್ಬಿಕೊಂಡು, ಯುದ್ಧದಲ್ಲಿ ಗಾಯಗೊಂಡಿರುವ ಅವರ ಶರೀರಗಳನ್ನು ತಡವರಿಸುತ, ಮೊಮ್ಮಕ್ಕಳನ್ನು ನೆನೆದು ಶೋಕಿಸಿ, ಸೊಸೆಯನ್ನು ಆದರಿಸಿದಳು. ಹೀಗೆ ಬಂಧುವರ್ಗವೆಲ್ಲ ಒಟ್ಟಿಗೆ ಸೇರಿ ಗೋಳಿಡುತಿದ್ದು ಕೊನೆಗೆ ಧೈರ್ಯಗೊಂಡು-ಆಗಬೇಕಾದುದು ಆಗಿ ಮುಗಿಯಬೇಕು. ಪ್ರತಿಕ್ರಿಯಾರಹಿತವಾದುದಕ್ಕೆ ಚಿಂತಿಸಿ ಫಲವಿಲ್ಲ—ಎಂದು ನಿಶ್ಚಯಿಸಿದರು. ಆ ಬಳಿಕ ರಾಜಸ್ತ್ರೀಯರು ಲಜ್ಜೆಯಂ ತೊರೆದು ತಂತಮ್ಮ ಪತಿಗಳ ರುಂಡಗಳನ್ನು ಅಪ್ಪಿಕೊಂಡು ನಾನಾವಿಧವಾಗಿ ಹಂಬಲಿಸುತ ನದಿಯಲ್ಲಿ ಮಿಂದು ಸದ್ಗತಿಯಂ ಕಾಣುವವರಾಗಿದ್ದರು! ಯುದ್ಧಭೂಮಿಯನ್ನು ಶೋಧಿಸಿ, ರಣಯಜ್ಞದಲ್ಲಿ ಮಡಿದವರ ಪದವಿಯನ್ನರಿತು ಅವರಿಗೆಲ್ಲರಿಗೂ ಅಗ್ನಿಸಂಸ್ಕಾರಾದಿಕರ್ಮಗಳನ್ನು ಯಥಾವಿಧಿಯಾಗಿ ಮಾಡುವಾಗ ಪರೋಪಕಾರಿಯಾಗಿದ್ದ ಕರ್ಣನು ತಮ್ಮ ಒಡಹುಟ್ಟಿದವನೆಂಬುದು ಕುಂತೀದೇವಿಯಿಂದ ಗೊತ್ತಾಗಲು; ಪಾಂಡವರು, ಕರ್ಣನಿಗೋಸುಗ ಅತಿಯಾಗಿ ಶೋಕಿಸಿ, ಆತನಿಗೂ ಉದಕಕ್ರಿಯಾದಿಗಳನ್ನು ಮಾಡಿ ನಿಷ್ಕಂಟಕರಾಗಿದ್ದರು. ಆಗ ಹಸ್ತಿನಾವತಿಯಲ್ಲಿದ್ದ ಕೋಶಾಧಿಕಾರಿಯೇ ಮುಂತಾದ ದೊಡ್ಡ ಉದ್ಯೋಗಸ್ಥರೆಲ್ಲರೂ ಧರ್ಮರಾಯನ ಸನ್ನಿಧಿಗೆ ಹೋಗಿ ಬೀಗ ಮುದ್ರೆಗಳನ್ನು ಮುಂದಿರಿಸಿ ವಂದಿಸಿ ನಿಂತಿರಲು; ಆತನು ಅವರೆಲ್ಲರಿಗೂ ಅವರವರ ಅಧಿಕಾರದಲ್ಲಿಯೇ ಜಾಗರೂಕತೆಯಿಂದಿರುವಹಾಗೆ ಬೆಸಸಿ ಕಳುಹಿಸಿದನು.

ಇಷ್ಟೆಲ್ಲಾ ಆದರೂ ಪಾಂಡವರು ರಾಜ್ಯಲಕ್ಷ್ಮಿಯನ್ನು ವರಿಸಿ ಭೂಪತಿಗಳಾಗಿರುವುದಕ್ಕೆ ಕಾಲ ಒದಗದೆ ಇದ್ದಿತು. ಏಕೆಂದರೆ—ಧರ್ಮಸ್ವರೂಪನಾದ ಧರ್ಮರಾಯನು ತನ್ನ ಅಣ್ಣತಂಮ್ಮಂದಿರೇ ಮುಂತಾದ ಬಂಧುಗಳನ್ನು ಸಿರಿಯಮೇಲಣ ಆಶೆಯಿಂದ ವಧಿಸಿ ಪಾಪಕ್ಕೆ ಗುರಿಯಾದೆನೆಂದೂ, ರಾಜ್ಯಾಧಿಪತ್ಯವನ್ನು ತೊರೆದು, ಸಂನ್ಯಾಸವನ್ನು ತೆಗೆದುಕೊಂಡು ಮನೋವಾಕ್ಕಾಯಗಳಿಂದ ಭಗವದಾರಾಧನೆಯಲ್ಲಿಯೇ ನಿರತನಾಗಿ ಯಾದವಗೃಹದಲ್ಲಿ ಭಿಕ್ಷ

ಬೇಡಿ, ಮಠದಕೆಳಗೆ ಜೀವಿಸುತ್ತಿದ್ದರೆ ಪಾಪಪರಿಹಾರವಾಗುವುದೆಂದೂ, ಯೋಚಿಸಿ ಕೇವಲವಿರಕ್ತನಾಗಿದ್ದನು. ಆಗ ಭೀಮಸೇನನು ಅತ್ಯಂತ ಕೋಪಾಕ್ರಾಂತನಾಗಿ, ತನ್ನ ರೌದ್ರಾಂಶದ ಮಹಿಮೆಯು ತೋರುವಂತೆ, ವೈರಾಗ್ಯದ ಮಾತುಗಳನ್ನಾಡುತಲಿರುವ ಶೋಕಾಕ್ರಾಂತನಾದ ಅಣ್ಣನನ್ನು ಕುರಿತು “ ಎಲೈ ಸಮ್ರಾಜನೇ ! ಪರಮೇಶ್ವರನು ಪಾಶಬದ್ಧರಾಗಿರುವ ಜೀವಾತ್ಮರನ್ನು ನೋಡಿ ಸತ್ಕರ್ಮಾಚರಣೆಯಿಂದ ತನ್ನನ್ನಾರಾಧಿಸಿ, ಮೋಕ್ಷ ಸುಖವನ್ನು ಪಡೆಯುವುದಕ್ಕಾಗಿ ಜಗತ್ತನ್ನುಂಟುಮಾಡಿ, ಸುಖಸಾಧನೆಗೆ ಬೇಕಾದವುಗಳನ್ನೆಲ್ಲ ಸೃಷ್ಟಿಸಿ, ಯಾಗಾದಿಸತ್ಕರ್ಮಗಳನ್ನು ಮಾಡುವು ದಕ್ಕೆ, ಅನುಕೂಲವಾದ ಗಾರ್ಹಸ್ಥ್ಯವನ್ನು ಉಂಟುಮಾಡಿದನಷ್ಟೆ. ಮುಕ್ತಿ ಸಾಧಕವಾದ ಗೃಹಸ್ಥಾಶ್ರಮವು ದೈವಯೋಗದಿಂದ ಲಭಿಸಿರುವಾಗ ತಪ್ಪು ಬಾರದಂತೆ ನಡೆದು, ದೈನಂದಿನವಾದ ಪಂಚಮಹಾಯಜ್ಞಗಳಿಂದಲೂ, ಪರಲೋಕಸಾಧನೆಗೆ ಬೇಕಾದ ಕರ್ಮಗಳನ್ನು ಮಾಡುವುದರಿಂದಲೂ, ಸಕಲ ಪಾಪಪರಿಹಾರವನ್ನು ಹೊಂದಿ ದೇವೇಂದ್ರನಂತೆ ದಿವ್ಯೈಶ್ವರ್ಯಸಂಪನ್ನ ರಾಗಿ ಪರಮಧರ್ಮದಿಂದ ಪ್ರಜೆಗಳನ್ನು ಪಾಲಿಸಿ, ಲೋಕದ್ವಯದಲ್ಲಿಯೂ ಸೌಖ್ಯವನ್ನನುಭವಿಸಬಹುದಾಗಿದೆ. ಸಂನ್ಯಾಸಿಗಳಿಗೂ ಆಶ್ರಯವಾಗಿರು ವುದು ಗೃಹಸ್ಥಾಶ್ರಮಧರ್ಮವೇ ಅಲ್ಲವೆ ? ದೇವಮುನಿಪಿತೃತಿಥಿಗ ಳಿಗೆ ಮಾಡುವ ಸತ್ಕಾರಾದಿಗಳನ್ನೂ, ರಾಜ್ಯವನ್ನೂ, ಮಡದಿಮಕ್ಕ ಳನ್ನೂ, ಪರಿತ್ಯಜಿಸಿ ಕಪ್ಪರೆಯನ್ನು ಹಿಡಿದು ಹೋದರೆ, ನಗೆಗೀಡಾಗುವು ದಿಲ್ಲವೇ ! ಬಲಿಷ್ಠರಾದ ಹಗೆಗಳನ್ನು ಬವರದಲ್ಲಿ ಪ್ರಹರಿಸಿ, ಸುಖ ಪಡುವ ಕಾಲದಲ್ಲಿ, ಚಿರಕಾಲದಿಂದ ನಮ್ಮನ್ನೇ ನಂಬಿದವರನ್ನು ಅಗಲಿ, ವನಕ್ಕೆ ಹೋಗಬೇಕೆಂದು ಯೋಚಿಸುವುದು ಆರ್ಯನಾದ ನಿನಗೆ ಉಚಿತ ವೆಂದು ಹೇಳಲಾಗುವುದಿಲ್ಲ. ಅಶಕ್ತರಾಡುವ ಇಂತಹ ಮಾತುಗಳನ್ನಾಡಿ ನಮ್ಮ ಮನಸ್ಸನ್ನು ಏಕೆ ನೋಯಿಸುವೆ ? ಈಸಂಸಾರವಿರುವವರೆಗೂ ಜನನಮರಣಗಳು ಪ್ರಸಿದ್ಧಗಳಾಗಿಯೇ ಇರುವುವಲ್ಲವೇ ? ಕಷ್ಟಪಟ್ಟು ಕಾಡಿನಲ್ಲಿ ಆಳವಾದ ಬಾವಿಯೊಂದನ್ನು ತೋಡಿ, ಸೀಯಾದ ತಿಳಿನೀರು ಬರುವ ಸಮಯದಲ್ಲಿ ಪಂಕಿಲಶರೀರಿಯಾಗಿ ಮೇಲಕ್ಕೆ ಹತ್ತಿಬಂದು ಪಿಪಾಸೆ ಯಿಂದ ಪರಿತಪಿಸುವವನಂತೆಯೂ, ಯುದ್ಧದಲ್ಲಿ ಜಯಶೀಲನಾಗಿ ರಾಜ್ಯ

ಲಕ್ಷ್ಮಿಯು ಎದುರಾಗಿ ಬಂದು ವರಮಾಲೆಯನ್ನು ಅರ್ಪಿಸುವಾಗ ತನ್ನ ತಲೆಯನ್ನು ತಾನೇ ಕತ್ತರಿಸಿಕೊಳ್ಳುವವನಂತೆಯೂ, ಲೋಕಾಪವಾದಕ್ಕೆ ಗುರಿಯಾಗಬಹುದೇ ? ಕ್ಷತ್ರಿಯಧರ್ಮಕ್ಕನುಸಾರವಾಗಿ ಯುದ್ಧದಲ್ಲಿ ಎದುರಾದ ಶತ್ರುಗಳನ್ನು ಸಂಹರಿಸಿದ ನಮಗೆ ಪಾಪವು ಹೇಗೆ ಬಂದೀತು ? ಕಾಲವಶದಿಂದ ಇದುವರೆಗೂ ನಿಮ್ಮೊಡನೆ ಬಹುಕ್ಲೇಶಗಳನ್ನು ಅನುಭವಿಸಿದ ನಮ್ಮನ್ನು ತೊರೆಯುವೆಯಾ ? ಬಾಲ್ಯದಿಂದಲೂ ನಮ್ಮನ್ನು ಶಿಕ್ಷಿಸಿ ರಕ್ಷಿಸುತಲಿರುವ ನೀನು ತಿಳಿಯದುದೇನಿರುವುದು. ಜಯಿಸಿದ ದೇಶಗಳನ್ನು ರಕ್ಷಿಸುವುದೇ ಕರ್ತವ್ಯವು. ನಮ್ಮ ಶರೀರ, ಪ್ರಭುತ್ವ, ಪಾಂಡಿತ್ಯ, ಐಶ್ವರ್ಯ, ಮನಸ್ಸು, ಆಯುಸ್ಸು, ಮುಂತಾದ ಸರ್ವಸ್ವವೂ ಪ್ರಜೆಗಳಿಗಲ್ಲದೆ ನಮ್ಮ ಉಪಯೋಗಕ್ಕಲ್ಲ. ನಮ್ಮ ಪ್ರಜೆಗಳನ್ನೂ ವರ್ಣಾಶ್ರಮಧರ್ಮಗಳನ್ನೂ ಚೆನ್ನಾಗಿ ರಕ್ಷಿಸುವುದಕ್ಕೆ, ಪಟ್ಟಾಭಿಷಿಕ್ತನಾಗಿ ಸುಖವಾಗಿರಲು ಮನಸ್ಸುಮಾಡು ” ಎಂದು ಶ್ರುತಪಡಿಸಿದನು. ಹೀಗೆಯೇ ಧರ್ಮರಾಯನ ದುಃಖಧ್ವಂಸವಾಗುವರೀತಿ ಮಿಕ್ಕ ತಮ್ಮಂದಿರೂ, ದ್ರೌಪದೀದೇವಿಯೂ ಬಾದರಾಯಣಾದಿಮುನಿಶ್ರೇಷ್ಠರೂ ಭೀಷ್ಮಾಚಾರ್ಯನೂ, ತತ್ಕಾಲೋಚಿತವಾದ ಧರ್ಮನೀತಿಗಳನ್ನು ತಿಳಿಯಿಸಿದರು. ಆಗ ಶ್ರೀಕೃಷ್ಣನು ಲೋಕಾತೀತವಾದ ಶತರುದ್ರೀಯತತ್ತ್ವವನ್ನು ಹೇಳಿ ಯುಧಿಷ್ಠಿರನ ಕ್ಲೇಶವನ್ನಡಗಿಸಿದನು.

ಆಬಳಿಕ ಸೂನೃತವ್ರತನಾದ ಧರ್ಮರಾಯನು ತನ್ನ ಮನಸ್ಸಿನಲ್ಲಿದ್ದ ವ್ಯಥೆಯನ್ನು ದೂರಮಾಡಿ, ಶ್ರೀಕೃಷ್ಣನು ಮತ್ತು ತನ್ನ ಸಹೋದರರು, ಪತ್ನಿ, ಇವರು ಸಹಿತವಾಗಿ ಕನಕರಥವನ್ನೇರಿ ಪುರಜನಪರಿಜನರೂ ಚತುರಂಗಬಲವೂ ಓಲೈಸಿ ಬರುತಿರಲು ; ಪರಮವೈಭವದಲ್ಲಿ ರಮಣೀಯವಾಗಿದ್ದ ರಾಜಧಾನಿಗೆ ಹೊರಟನು. ಅಮರಾವತಿಯಂತೆ ಅಲಂಕೃತವಾಗಿದ್ದ ಹಸ್ತಿನಾವತಿಯನ್ನು ಶುಭಲಗ್ನವಲ್ಲಿ ಸೇರಿ, ಸ್ವಸ್ತಿವಾಚನಪೂರ್ವಕವಾಗಿ ರಾಜಭವನವನ್ನು ಪ್ರವೇಶಿಸಿದನು. ಮಂಗಳಕಾರ್ಯಾನಂತರ ಇಷ್ಟದೇವರನ್ನಾರಾಧಿಸಿ, ಗುರುಹಿರಿಯರ ಆಶೀರ್ವಾದವನ್ನು ಪಡೆದು ಇಷ್ಟಬಂಧುಗಳೊಡನೆ ಸುಖವಾಗಿರುತಲಿದ್ದನು. ಶೋಕವು ಹಳೆದಾಗುತಬರಲು ; ಯುಧಿಷ್ಠಿರನು ಗುರುಹಿರಿಯರ ವಾಕ್ಯವನ್ನೂ ಭೀಮನ ಕೋರಿಕೆಯನ್ನೂ ಅತಿಕ್ರಮಿಸ

ಲಾಗದೆ ಕ್ರಮಕ್ರಮವಾಗಿ ಮನಸ್ಸ್ಥೈರ್ಯವನ್ನು ಹೊಂದಿ ಆಹಾರಾದಿ
ಕ್ರಿಯೆಗಳಲ್ಲಿ ಪ್ರವರ್ತಿಸಿ, ಯುದ್ಧದಲ್ಲಿ ಮಡಿದವರೆಲ್ಲ ವೀರಸ್ವರ್ಗವನ್ನು
ಹೊಂದಿ ಸುಖವಾಗಿರುವರೆಂಬುದನ್ನು ತಿಳಿದು ಅವರ ಚಿಂತೆಯನ್ನು ಬಿಟ್ಟು,
ನಿಶ್ಚಿಂತನಾಗಿ ಪರಿಜನಪುರಜನರ ಇಷ್ಟಾನುಸಾರ ಲೋಕಹಿತಾರ್ಥವಾಗಿ
ಸಾಮ್ರಾಜ್ಯಾಧಿಪತ್ಯವನ್ನು ವಹಿಸಬೇಕೆಂದಿದ್ದನು. ಭ್ರಾತೃವತ್ಸಲನಾದ
ಭೀಮಸೇನನು ಶ್ರೀಕೃಷ್ಣನ ಅಣತಿಯನ್ನು ಪಡೆದು ದೈವಜ್ಞರಿಂದ ರೇವತೀ
ನಕ್ಷತ್ರಯುಕ್ತವಾದ ಮಾಘ ಶುದ್ಧ ಪಂಚಮೀ ಶುಭದಿನಶುಭಲಗ್ನದಲ್ಲಿ
ಧರ್ಮರಾಯನಿಗೆ ಮೂರ್ಧಾಭಿಷೇಕವಾಗಲು ಗೊತ್ತುಮಾಡಿಸಿದನು. ಆ ಮಹಾ
ಪಟ್ಟಾಭಿಷೇಕಮಹೋತ್ಸವಕ್ಕಾಗಿ ಸಕಲಸಾಮಗ್ರಿಗಳೂ ನೃಪಲಾಂಛನಾದಿ
ವಸ್ತುನಿಚಯಗಳೂ ಸಿದ್ಧವಾಗಿರಬೇಕೆಂದು ಆಜ್ಞಾಪಿಸಿ, ತಾನೂ ಪರಾಮರ್ಶಿ
ಸುತಲಿದ್ದನು. ಆದಿನ ದೇವಸಭೆಯಂತಿದ್ದ ಆಸ್ಥಾನಕ್ಕೆ ಬರಬೇಕಾಗಿದ್ದ ಅಶೇ
ಷರೂ ಬಂದು ಕಾದಿರಲು, ಸಮಸ್ತಮಂಗಳವಾದ್ಯಗಳೂ ಮನೋಹರವಾಗಿ
ಮೊಳಗುತಿರಲು, ಪೂಜ್ಯರಾದ ವೇದವ್ಯಾಸ, ಸುಮನ್ತು, ಜೈಮಿನಿ, ವೈಶಂ
ಪಾಯನಮುಂತಾದ ಋಷಿವರ್ಯರಿಂದ ಕೂಡಿದ ಧೌಮ್ಯಾಚಾರ್ಯನು, ಮಂಗಳ
ಸ್ನಾನಾಹ್ನಿಕವನ್ನು ಮಾಡಿ ದಿವ್ಯವಸ್ತ್ರಾಭರಣಗಳಿಂದ ಅಲಂಕೃತನಾಗಿರುವ
ಧರ್ಮರಾಯನನ್ನು ದ್ರೌಪದೀದೇವಿಯೊಡನೆ, ಶೃಂಗರಿಸಲ್ಪಟ್ಟಿದ್ದ ಮಂಟಪಮ
ಧ್ಯಕ್ಕೆ ಕರೆದುಕೊಂಡು ಹೋಗಿ, ನವರತ್ನಖಚಿತವಾದ ಭದ್ರಾಸನದಲ್ಲಿ ಕುಳ್ಳಿ
ರಿಸಿ, ಗಂಗಾದಿನದ್ಯುದಕಗಳನ್ನೂ ಸಿದ್ಧೌಷಧಿರಸಗಳೇ ಮುಂತಾದ ಅಭಿಷೇಕ
ಸಾಮಗ್ರಿಗಳನ್ನೂ ಮುಂದಿಟ್ಟುಕೊಂಡು, ಶಾಸ್ತ್ರೋಕ್ತಪ್ರಕಾರವಾಗಿ
ಮಾಡಬೇಕಾಗಿದ್ದ ಪುಣ್ಯಾಹಾದಿಗಳನ್ನು ಮಾಡಿಸಿದನು. ಸಕಲರಾಜವಿಭವ
ದಿಂದ ಕೂಡಿ, ಭೂಚರಖೇಚರರೆಲ್ಲ 'ಜಯ ಜಯ' ಎನ್ನುತಿರಲು ; ಧರ್ಮ
ಶಾಸ್ತ್ರಪರಿಜ್ಞಾನಶೀಲನಾದ ಯುಧಿಷ್ಠಿರಚಕ್ರವರ್ತಿಯು, ಅನೇಕಸಾಮ
ನ್ತರ ಸೀಮನ್ತಿನಿಯರಿಂದ ಸೇವಿಸಲ್ಪಡುತಲಿರುವ ಶ್ರೀಮದ್ದ್ರೌಪದೀದೇವಿ
ಯೊಡನೆ ಮಹಾಸಿಂಹಾಸನಾರೋಹಣವನ್ನು ಮಾಡಿದನು ! ಒಡನೆ ಚಕ್ರ
ವರ್ತಿಗಳಿಗೂ ಚಕ್ರವರ್ತಿಯಾದ ಶ್ರೀಕೃಷ್ಣಸ್ವಾಮಿಯು ದಿವ್ಯವಾದ ಬಲ
ಮುರಿಶಂಖದಲ್ಲಿರುವ ಮಂತ್ರಪೂರಿತವಾದ ಮಹಾನದ್ಯುದಕಾದಿಗಳಿಂದ ಧರ್ಮ
ರಾಯನಿಗೆ ಭೂಮಂಡಲಾಧಿಪತ್ಯ ನಿಮಿತ್ತವಾಗಿ ತನ್ನ ದಿವ್ಯಹಸ್ತದಿಂದ ಅವನ

ಮುಡಿಯಲ್ಲಿ ಅಭಿಷೇಕಿಸಿದನು ! ಆಗ ಅಲ್ಲಿ ಪುಷ್ಪವೃಷ್ಟಿಯಾಗಿ, ದೇವದುಂದುಭಿರವವು ದಿಕ್ತಟವನ್ನು ಮುಚ್ಚುತಲಿದ್ದಿತು. ಅನಂತರ ಧೃತರಾಷ್ಟ್ರ ರಾಜಪ್ರಭೃತಿಗಳೆಲ್ಲರೂ ಲೋಕೇಶ್ವರನಾದ ವಾಸುದೇವನಿಗೆ ಹೇಗೋ ಹಾಗೆ ಧರ್ಮರಾಯನಿಗೆ ಕ್ರಮವಾಗಿ ಪಟ್ಟಾಭಿಷೇಕವನ್ನು ಮಾಡಿದರು. ವ್ಯಾಸಮಹರ್ಷಿಯು ಪರಮಸಂತೋಷದಿಂದ ಧೌಮ್ಯಾಚಾರ್ಯನೇ ಮುಂತಾದ ಮುನೀಯರೊಡನೆ ಮಹಾಮಹಿಮನಾದ ಭೀಮಸೇನನಿಗೂ ಅದೇ ಲಗ್ನದಲ್ಲಿ ಯುವರಾಜಪಟ್ಟಾಭಿಷೇಕವನ್ನು ವಿಧಿವತ್ತಾಗಿ ಬಹುಸಂಭ್ರಮದಿಂದ ಆಗಮಾಡಿಸಿ, ಚಂದ್ರಸೂರ್ಯರಂತಿರುವ ಧರ್ಮಭೀಮರನ್ನು ಆಶೀರ್ವದಿಸಿ ಹರಸಿ ಮಂತ್ರಾಕ್ಷತೆಯನ್ನು ತಳಿದರು. ಲಾಜಗಳನ್ನೂ ಪುಷ್ಪಗಳನ್ನೂ ಎರಚಿದರು. ಸಾಮಂತ ನರಪತಿಗಳು ಅವರ ಹತ್ತಿರಕ್ಕೆ ಹೋಗಿ ನಮಿಸಿ, 'ಜಯ, ಜೀಯಾ, ಜಯ ಜಯ, ಪಾಂಡವಕುಲಾಲಂಕಾರಾ ! ಕುರುಕುಲಾಬ್ಧಿ ಚಂದ್ರಾ !' ಎಂದು ಕೊಂಡಾಡಿದರು. ಧನಂಜಯನು ಪರಮಾನಂದಭರಿತನಾಗಿ ಶ್ವೇತಚ್ಛತ್ರವನ್ನು ಹಿಡಿದನು. ನಕುಲಸಹದೇವರು ದಿವ್ಯಚಾಮರದ್ವಯವನ್ನು ಹಿಡಿದು ಡಾಳಿಸುತ ಅಣ್ಣಂದಿರನ್ನು ಓಲೈಸಿದರು. ಸಕಲರಿಗೂ ಆ ದಿನವು ಶ್ರೀರಾಮ ಪಟ್ಟಾಭಿಷೇಕಸಮಯದಂತೆ ಆನಂದಕರವಾಗಿದ್ದಿತು. ಮಂದಮಾರುತವು ಸುಗಂಧಭರಿತವಾಗಿಯೂ, ಸುಖವಾಗಿಯೂ ಬೀಸಿತು. ಆ ಮಹಾರಾಜ ಸಭೆಯಲ್ಲಿ ಸೇರಿದ್ದವರೆಲ್ಲರೂ ವಿತರಣೆಯಿಂದ ರತ್ನಾಭರಣಗಂಧಪುಷ್ಪ ಮಾಲ್ಯತಾಂಬೂಲಾದಿಗಳಿಂದ ಸತ್ಕರಿಸಲ್ಪಟ್ಟರು, ಆದಿನರಾತ್ರಿ ಕೋಟೆ ಕೊತ್ತಲುಗಳಮೇಲೆ ಬೆಳಗುತಿರುವ ದೀಪಾವಳಿಗಳಿಂದ ಆ ಪುರವು ಅಯುತ ಪೂರ್ಣಚಂದ್ರರುದಯಿಸಿದಂತೆಯೂ ತೇಜೋಲೋಕದಂತೆಯೂ ಅತ್ಯಂತ ಪ್ರಕಾಶಮಾನವಾಗಿದ್ದಿತು.

ಸತ್ಯಸ್ವರೂಪನಾದ ವಾಸುದೇವನಿಂದ ರಕ್ಷಿತನಾಗಿರುವ ಧರ್ಮರಾಯನು ತನ್ನ ದೊಡ್ಡಪ್ಪನಾದ ಧೃತರಾಷ್ಟ್ರನಿಗೆ ಸರ್ವಯಾಜಮಾನ್ಯವನ್ನೂ, ಮಹಾತ್ಮನಾದ ವಿದುರನಿಗೆ ಮಹಾಮಂತ್ರಿಪದವಿಯನ್ನೂ, ಷಟ್ಕರ್ಮನಿರತರಾದ ಧೌಮ್ಯಾಚಾರ್ಯರಿಗೆ ಧರ್ಮಾಧಿಕಾರವನ್ನೂ ಧನುರ್ಧರಾಗ್ರೇಸರನಾದ ಧನಂಜಯನಿಗೆ ದಿಗ್ವಿಜಯಕಾರ್ಯವನ್ನೂ, ಮತಿವಂತರೆರೆಯನಾದ ನಕುಲನಿಗೆ ಸರ್ವಸೇನಾಧಿಪತ್ಯವನ್ನೂ, ಖಗೋಳಶಾಸ್ತ್ರಜ್ಞನಾದ ಸಹದೇವನಿಗೆ

ನಿರಂತರದಲ್ಲಿಯೂ ತನ್ನ ಸಮೀಪದಲ್ಲಿ ಸಕಲಕಾರ್ಯಾಧ್ಯಕ್ಷತೆಯನ್ನೂ, ಗುಣಜ್ಞನಾದ ಸಂಜಯನಿಗೆ ರಾಜ್ಯದ ಕೃತ್ಯಾಕೃತ್ಯಗಳನ್ನು ತಿಳಿದು ಹೇಳುವ ಅಧಿಕಾರವನ್ನೂ, ಮತ್ತೆ ಕೆಲವರಿಗೆ ಅವರವರ ಯೋಗ್ಯತಾನುಸಾರವಾದ ಉದ್ಯೋಗಗಳನ್ನೂ ಕೊಟ್ಟು ಅವರ ಮೇಲ್ವಿಚಾರಣೆಗೆ ಯುವರಾಜನಾದ ಭೀಮಸೇನನನ್ನು ನೇಮಿಸಿ, ಪಟ್ಟಾಭಿಷೇಕಾಂಗವಾದ ಉತ್ಸವಗಳನ್ನೆಲ್ಲ ಜರುಗಿಸಿ, ಜಗದ್ಗುರುವಾದ ಮಧುಸೂದನನನ್ನು ಕುರಿತು "ಎಲೈ ಸ್ವಾಮಿಯೇ ! ನಿನ್ನ ಸಿರಿಯಡಿದಾವರೆಗಳ ಅನುಗ್ರಹದಿಂದ ನಾವು ಕೃತಕೃತ್ಯರಾದೆವು. ನಮ್ಮ ಆಳಿಕೆಯಲ್ಲಿ ಪ್ರಜೆಗಳೆಲ್ಲರೂ, ದುರ್ಬುದ್ಧಿಯುಳ್ಳವರಾಗದೆ, ದೀರ್ಘಾಯುರೈಶ್ವರ್ಯಾದಿಗಳಿಂದ ಕೂಡಿ ಸುಖವಾಗಿರುವಂತೆಯೂ, ನಮ್ಮ ಪ್ರಭುತ್ವವು ಪ್ರಜಾಸಮ್ಮತವಾಗಿ ಸಕಲಸೌಖ್ಯಸಮೇತವಾಗಿರುವಂತೆಯೂ ಅನುಗ್ರಹಿಸಬೇಕು "—ಎಂದು ಪ್ರಾರ್ಥಿಸಿ ಪೂಜಿಸಿ, ಆತನಿಂದ ಉಪದೇಶಿಸಲ್ಪಟ್ಟ ರಾಜಧರ್ಮಗಳನ್ನನುಸರಿಸಿ, ಮುಖ್ಯಸ್ಥಳಗಳಲ್ಲಿ ಯಜ್ಞಶಾಲೆಗಳನ್ನೂ ಅನ್ನಸತ್ರಗಳನ್ನೂ ವಿದ್ವತ್ಸಮಾಜಗಳನ್ನೂ ಕೆರೆಕಟ್ಟೆಕೊಳಗಳನ್ನೂ ಅರವಟ್ಟಿಗೆಗಳನ್ನೂ ಮಂಟಪಗಳನ್ನೂ ವೈದ್ಯವಿದ್ಯಾಶಾಲೆಗಳನ್ನೂ ಸ್ಥಾಪಿಸಿ, ರಾಜ್ಯದ ಆಯಕಟ್ಟುಗಳನ್ನೆಲ್ಲ ಕ್ರಮಪಡಿಸಿ ನೀತಿಯಿಂದ ರಾಜ್ಯವನ್ನು ಪರಿಪಾಲಿಸುತಿರಲು ; ಆಗ ಜನರು ಸಪ್ತವ್ಯಸನಗಳಿಗೆ ಸಿಕ್ಕದೆ, ದಯೆ ದಾಕ್ಷಿಣ್ಯ ಸತ್ಯ ಆಚಾರ ಮುಂತಾದ ಸದ್ಗುಣಗಳಿಂದ ಕೂಡಿ ಸ್ವಧರ್ಮನಿರತರಾಗಿ ಸುಖವಾಗಿರುತಲಿದ್ದರು. ಅಂಬುಗಳ ಹಾಸಿಕೆಯಮೇಲೆ ವೀರಶಯನಮಾಡಿದ್ದ ಆತ್ಮಧ್ಯಾನನಿರತನಾದ ಗಾಂಗೇಯನು ವಿನೀತರಾದ ಪಾಂಡವರಿಗೆ ಅನೇಕ ಪ್ರಕಾರವಾದ ರಾಜಧರ್ಮವನ್ನೂ, ಸಮಯವಿಶೇಷಗಳಲ್ಲಿ ಯತ್ನವಿಲ್ಲದೆ ಮಾಡಬೇಕಾದ ಆಪದ್ಧರ್ಮಗಳನ್ನೂ ಮುಮುಕ್ಷುಗಳಿಗೆ ಸಾಧಕವಾದ ಮೋಕ್ಷಧರ್ಮವನ್ನೂ ಶ್ರೀಕೃಷ್ಣ ವ್ಯಾಸ ಧೌಮ್ಯಾದಿಗಳ ಸನ್ನಿಧಿಯಲ್ಲಿ ಹಿತವಾಗಿ ಬೋಧಿಸಿದನು. ಅಬಳಿಕ ಪಾಂಡವರು ಮನಸ್ಸಿನ ಕ್ಲೇಶಗಳನ್ನೆಲ್ಲ ತೊರೆದು ಧರ್ಮಾಧರ್ಮ ವಿಚಾರಗಳನ್ನು ನಿಗದಿಮಾಡಿ ನಿಖಿಲಜನಮನೋರಂಜಕರಾಗಿದ್ದರು. ಕಳನಾಯಕನೆನಿಸಿದ ಧರ್ಮರಾಯನು ಮರಳಿ ತಮ್ಮಂದಿರೊಡನೆ ಶ್ರೀಕೃಷ್ಣನನ್ನು ಮುಂದುಮಾಡಿಕೊಂಡು ಭೀಷ್ಮನಬಳಿಗೆ ಹೋಗಿ ವಂದಿಸಿ ಕುಳಿತಿರಲು ; ಆ ಮಹಾಮಹಿಮನು ಶ್ರೀಕೃಷ್ಣನ ಮಹಾತ್ಮ್ಯಾದಿಗಳನ್ನೂ,

ಉಮಾಮಹೇಶ್ವರಮಹಿಮೆಯನ್ನೂ ಸ್ತವರಾಜವನ್ನೂ, ನಾನಾಪ್ರಕಾರ ವಾದಫಲಪ್ರಾಪ್ತಿವಿಚಾರಗಳನ್ನೂ, ವರ್ಣಾಶ್ರಮಧರ್ಮಗಳನ್ನೂ, ದಾನಪಾತ್ರಾಪಾತ್ರನಿರ್ಣಯವನ್ನೂ, ದಾನಕಲ್ಪಗಳನ್ನೂ, ಗೋಬ್ರಾಹ್ಮಣರ ಮಹತ್ವವನ್ನೂ, ಸತ್ಯದ ಮಹಿಮೆಯನ್ನೂ, ಸಾಧುಜನರ ಮತ್ತು ದುರ್ಜನರ ವರ್ತನಗಳನ್ನೂ, ಅನೇಕ ಪುಣ್ಯಪುರುಷರ ಚರಿತ್ರೆಗಳನ್ನೂ ಉದಾಹರಣಪೂರ್ವಕವಾಗಿ ವಿವರಿಸಿ, ಶ್ರೀವಿಷ್ಣುಸಹಸ್ರನಾಮವನ್ನೂ, ಧರ್ಮವೇ ಶ್ರೇಯಸ್ಕರವೆಂಬುದನ್ನೂ—ಹೇಳಿ ಆನಂದಗೊಳಿಸಿದನು ! ಹೀಗೆ ಪಾಂಡವರು ಭೀಷ್ಮನಲ್ಲಿ ಅನೇಕ ಧರ್ಮಗಳನ್ನು ಕೇಳಿ ಅಪಾರವಾದ ದುಃಖವನ್ನು ಬಿಟ್ಟರು. ವಾಚಕರೇ ! ಹಿತೈಷಿಗಳಾದ ಹಿರಿಯರು ಕಾಲೋಚಿತವಾಗಿ ಮಾಡುವ ಹಿತೋಪದೇಶವನ್ನು ಕೇಳಿ ಅದರಂತೆ ನಡೆಯುವುದರಿಂದ ಲಾಭವುಂಟು.

ಭೀಷ್ಮನು ಶರತಲ್ಪದಲ್ಲಿ ೫೮ ದಿನಗಳಿದ್ದ ಬಳಿಕ ಮಾಘಮಾಸದ ಶುಕ್ಲಪಕ್ಷದ ಅಷ್ಟಮಿಯದಿನ ಶ್ರೀಕೃಷ್ಣನನ್ನು ಕುರಿತು—'ಎಲೈ ಶಂಖಚಕ್ರಗದಾಧರನೇ, ಸೂರ್ಯಮಂಡಲ ಮಧ್ಯವರ್ತಿಯೂ, ವಿರಾಟ್ಪುರುಷನೂ, ಸನಾತನನೂ, ಪರಮಾತ್ಮನೂ ಆದ ನಿನ್ನನ್ನು ವಂದಿಸುತ್ತೇನೆ. ದೇಹಾವಸಾನವನ್ನು ಮಾಡಲು ಅಪ್ಪಣೆಯನ್ನು ಕೊಡು. ನಿನ್ನ ಮಹಾಮಹಿಮೆಯನ್ನು ತಿಳಿಯುವವನೇ ಧನ್ಯನು. ನಾನು ನಿನ್ನ ದೇವತಾಸ್ವರೂಪವನ್ನು ಸ್ವಲ್ಪ ಮಟ್ಟಿಗೆ ಬಲ್ಲೆನು. ನಿರಂತರವಾಗಿ ನಿನ್ನ ಪಾದಪದ್ಮಗಳಲ್ಲಿ ಚಿತ್ತವನ್ನು ನಿಲ್ಲಿಸಿ ನಿನ್ನನ್ನೇ ನಂಬಿರುವ ನನ್ನನ್ನು ಕೃಪಾಕಟಾಕ್ಷದಿಂದ ನೋಡು,—ಎಂದು ನುಡಿದನು. ಶ್ರೀಕೃಷ್ಣನು ಭೀಷ್ಮನಿಗೆ ಸ್ವರ್ಗಾರೋಹಣಕ್ಕೆ ಅಪ್ಪಣೆಯನ್ನೀಯಲು ; ಆತನು ಪಾಂಡವರನ್ನು ನೋಡಿ— ವ್ರತಗಳೊಳಗೆ ಸತ್ಯವ್ರತವೇ ಅತ್ಯುತ್ತಮವಾದುದರಿಂದ ಅದನ್ನು ತಪ್ಪದೆ, ಭೂತದಯಾಪರರಾಗಿರಿ—ಎಂದು ಹೇಳಿ ಸಮಾಹಿತಚಿತ್ತನಾಗಿ ಆತ್ಮಧ್ಯಾನವನ್ನು ಮಾಡುತ, ಪ್ರಾಣಾಯಾಮವನ್ನು ಮಾಡಲು ; ಆತನ ಪ್ರಾಣವು ಶೋಕಾಸ್ಪದವಾದ ಮಾನವಶರೀರವನ್ನು ತ್ಯಜಿಸಿ ದಿವ್ಯಶರೀರದಿಂದ ಅಂತರ್ಧಾನವನ್ನೈದಿತು ! ಧರ್ಮರಾಯನು ಗಾಂಗೇಯನಿಗೆ ದೇಹಸಂಸ್ಕಾರಾದಿಗಳನ್ನು ವಿಧಿವತ್ತಾಗಿ ಮಾಡಿದನು. ಆ ಬಳಿಕ ಅವನು ಭ್ರಾತೃ ಬಾಂಧವ ಸುಹೃಜ್ಜನ ಸಮೇತನಾಗಿ ರಾಜಧಾನಿಗೆ ಹೋಗಿರುವಾಗ, ಭೀಷ್ಮನ ವಿಯೋಗದುಃಖವನ್ನು

ಸಹಿಸಲಾರದೆ, ಖಿನ್ನಮಾನಸನಾಗಿದ್ದನು. ಆಗ ಭೀಮಸೇನನು ತತ್ತ್ವ ವಾಕ್ಯಗಳಿಂದ ಅವನನ್ನು ಸಮಾಧಾನಗೊಳಿಸಿ ಪ್ರಜಾಪಾಲನಂಗೈಯ್ಯು ತ್ತಿರಲು, ಶ್ರೀಕೃಷ್ಣನು ದ್ವಾರಕೆಗೆ ಚಿತ್ತೈಸಿದನು.

ಚಿರಕಾಲದಾರಂಭದಿಂದ ಕುರುವಂಶಪರಂಪರಾಪ್ರಾಪ್ತವಾಗಿ ಬಂದಿರುವ ದಿವ್ಯವಾದ ಮಹಾರಾಜಭವನದಲ್ಲಿ ಧರ್ಮರಾಯನೂ, ದುರ್ಯೋಧನನ ಅರಮನೆಯಲ್ಲಿ ಭೀಮಸೇನನೂ, ದುಶ್ಶಾಸನನ ರಾಜಭವನದಲ್ಲಿ ಕಿರೀಟಿಯೂ, ದುರ್ಮರ್ಷಣನ ದಿವ್ಯಮಂದಿರದಲ್ಲಿ ನಕುಲನೂ, ದುರ್ಮುಖನ ದಿವ್ಯಸೌಧದಲ್ಲಿ ಸಹದೇವನೂ ವಾಸವಾಗಿರುತಲಿದ್ದರೂ ನಿದ್ರಾಕಾಲ ಹೊರತು ಮಿಕ್ಕ ಕಾಲದಲ್ಲೆಲ್ಲ ತಾವೆಲ್ಲರೂ ಒಂದೇಕಡೆ ಸೇರಿ ಸುಖವಾಗಿರುವಲ್ಲಿ, ಧರ್ಮಜನು " ಪ್ರಿಯಭ್ರಾತೃಗಳಿರಾ ! ನನ್ನ ನಿಮಿತ್ತವಾಗಿ ನೀವು ಬಲಹೀನರಂತೆ ಅರಣ್ಯವಾಸ ಮುಂತಾದ ಹಲವುಬಗೆಯ ಕಷ್ಟಗಳನ್ನು ಅನುಭವಿಸಿ ಬಲಿಷ್ಠರಾದ ಹಗೆಗಳೊಡನೆ ಯುದ್ಧಮಾಡಿ ಆಯಾಸಪಟ್ಟಿರಿ. ಇನ್ನು ನಿಮ್ಮ ಮನಸ್ಸುಬಂದಂತೆ ವಿನೋದವಾಗಿದ್ದುಕೊಂಡು ಜಯದ ಫಲವನ್ನು ಅನುಭವಿಸಿರಿ " ಎಂದನು. ಆದರೆ, ಭೀಮಾದಿಗಳು ತಮ್ಮ ಅಣ್ಣನನ್ನು ಒಂದು ನಿಮಿಷವೂ ಬಿಟ್ಟಿರದೆ, ಆತನನ್ನು ನೆಳಲಿನಂತೆ ಅನುಸರಿಸಿಕೊಂಡಿದ್ದರು. ರಾಜಶ್ರೇಷ್ಠನಾದ ಧರ್ಮರಾಯನು ಭೀಮನ ಸಾಹಾಯ್ಯದಿಂದ ರಾಜ್ಯಪರಿಪಾಲನಂಗೈಯುತ, ರಾಜ್ಯಾಂಗಗಳನ್ನು ವೃದ್ಧಿಗೊಳಿಸುತ, ಸಭಾಸಪ್ತಾಂಗಗಳಿಂದಲೂ, ಒಪ್ಪೈಸಿಕೊಳ್ಳುತಿರುವಲ್ಲಿ, ಒಂದುದಿನ ಶಿಷ್ಯಸಮೇತ ವ್ಯಾಸಮುನೀಶ್ವರನು ಪಾಂಡವರನ್ನು ನೋಡಬೇಕೆಂದು ಹಸ್ತಿನಾವತಿಗೆ ಬಂದನು. ಪಾಂಡವರ ದರ್ಶನಾರ್ಥವಾಗಿ ಅನೇಕ ದೇಶಗಳಿಂದ ಬಂದು ಕಾದಿರುವ ಸಾಮಂತರಾಜರಿಂದ ಸಂಕುಲವಾದ ಆರು ಪ್ರಾಕಾರಗಳನ್ನು ದಾಟಿ ಏಳನೆಯ ಪ್ರಾಕಾರದೊಳಗೆ ಆಯುಧಶಾಲೆಯ ಮುಂಭಾಗದಲ್ಲಿ ಪರಿಜನರಿಂದ ಪರಿವೃತನಾಗಿ ತಮ್ಮಂದಿರ ಮಧ್ಯದಲ್ಲಿ ಚಂದ್ರಕಾಂತನಿರ್ಮಿತವಾದ ದಿವ್ಯಾಸನದಲ್ಲಿ ಕುಳಿತು ರಾಜಚಿಹ್ನೆಗಳಿಂದಲೂ, ಗಾಂಭೀರ್ಯದಿಂದಲೂ, ಪ್ರಸಾದದಿಂದಲೂ, ಶೋಭಿಸುತಲಿರುವ ಧರ್ಮರಾಯನನ್ನು ಕೃಷ್ಣಮುನಿಯು ಕಂಡನು. ಧರ್ಮಜನು ಬೇಗನೆ ಎದ್ದು ಅನುಜರೊಡನೆ ಆತನನ್ನು ಅರ್ಘ್ಯಪಾದ್ಯಾದಿಗಳಿಂದ ಪೂಜಿಸಿ, ದರ್ಭಾಸನದಲ್ಲಿ ಕುಳ್ಳಿರಿಸಿ—' ಸ್ವಾಮಿ !

ಜ್ಞಾತಿವಧೆಯಿಂದ ಮಹಾಪಾತಕಕ್ಕೊಳಗಾಗಿ, ನಮ್ಮ ವಿಜಯಾಭಿವೃದ್ಧಿಯು ನ್ನೋಡಿ ಕರುಬುವ ನಂಟರಿಷ್ಟರೂ ಇಲ್ಲದೆ ದುಃಖಿತನಾಗಿದೇನೆ. ನನ ಗೇನೂ ಬೇಕಾಗಿಲ್ಲ. ಸಮರ್ಥನಾದ ನನ್ನ ತಮ್ಮ ಭೀಮಸೇನನಿಗೆ ರಾಜ್ಯವನ್ನು ವಹಿಸಿ, ಸರ್ವಸಂಗ ಪರಿತ್ಯಾಗವನ್ನು ಮಾಡಿ, ವಾನಪ್ರಸ್ಥಾ ಶ್ರಮದಲ್ಲಿದ್ದುಕೊಂಡು ಶುದ್ಧನಾಗಿ ಗತಿಯಂ ಕಾಣುವೆನು—ಎಂದನು. "ಎಲೈ ಭೂಪತಿಯೇ! ಶ್ರೀರಾಮನು ರಾವಣಬ್ರಹ್ಮಹತ್ಯಾದೋಷವನ್ನು ಕಳೆದುಕೊಳ್ಳುವುದಕ್ಕಾಗಿ ಅಶ್ವಮೇಧಯಾಗವನ್ನು ಮಾಡಿದಂತೆ, ನೀನೂ ಅದನ್ನು ಮಾಡು. ಚಿಂತೆಗೆ ವಶನಾಗಬೇಡ" ಎಂದು ಹೇಳಿದ ವ್ಯಾಸ ರೊಡನೆ ಧರ್ಮರಾಯನು,—ಕುರುರಾಜ್ಯಗಳೆಲ್ಲಾ ನೋಡಿ, ವಿಚಾರಿಸಿದರೂ ಸಕಲಪ್ರಜೆಗಳೂ ದುರ್ಯೋಧನನಿಗೆ ೧೦ ವರುಷಗಳ ಕಂದಾಯವನ್ನು ಮುಂಚಿತವಾಗಿಯೇ ಕೊಟ್ಟು ದುಃಖಭಾಜನರಾಗಿರುತ್ತಾರೆ. ಅದರಿಂದ ನಮಗೆ ಧನಸಹಾಯವಿಲ್ಲ. ಯಜ್ಞಾಶ್ವವೆಲ್ಲಿದೆಯೋ ಗೊತ್ತಿಲ್ಲ. ಶ್ರೀಕೃಷ್ಣನೂ ನಮ್ಮ ಬಳಿಯಲ್ಲಿ ಇಲ್ಲ. ಅನುಜರೂ ಯುದ್ಧವನ್ನು ಮಾಡಿ ಮಾಡಿ ದಣಿದಿದ್ದಾರೆ. ಹೀಗಿರುವಲ್ಲಿ ಅಂತಹ ದೊಡ್ಡ ಕಾರ್ಯವನ್ನು ಮಾಡು ವುದು ಸಾಧ್ಯವೇ?—ಎಂದರುಹಲು ; ಆ ಮುನಿಯು—ಅಪರಿಮಿತವಾದ ಧನ ಪ್ರಾಪ್ತಿಗೆ ಮಾರ್ಗವನ್ನೂ, ದಿವ್ಯಾಶ್ವವಿರತಕ್ಕ ನೆಲೆಯನ್ನೂ, ಮುಖಕಾರ್ಯ ಸಾಧನಕ್ಕೆ ಭೀಮಾರ್ಜುನರು ಸಿದ್ಧರಾಗಿಯೇ ಇದಾರೆಂಬುದನ್ನೂ—ತಿಳಿಯಿ ಸಿದನು ಆಗ ಭೀಮನು—ಎಲೈ ಅಗ್ರಜನೇ! ಈ ಮಹಾತ್ಮನು ಬೆಸಸಿ ದಂತೆ ಅಶ್ವಮೇಧವನ್ನು ಆರಂಭಿಸು. ನಾನು ಭದ್ರಾವತಿಗೆ ಹೋಗಿ ಕೂಡಲೆ ಆ ಹಯವನ್ನು ತಂದೊಪ್ಪಿಸುವೆನು.—ಎಂದು ಬಿನ್ನೈಸಲು ; ಧರ್ಮರಾಯನು ಅದಕ್ಕೊಪ್ಪಿ ಮುನಿಯನ್ನು ಬೀಳ್ಕೊಟ್ಟು, ಶ್ರೀ ಕೃಷ್ಣನನ್ನು ಧ್ಯಾನಿಸುತಿರು ವಾಗ, ಆ ಭಗವಂತನು ಅರಮನೆಯ ಹತ್ತಿರ ಬರುತಿದಾನೆಂದು ಕೇಳಿ, ಎದು ರ್ಗೊಂಡು ವಂದನಾದ್ಯುಪಚಾರಗಳನ್ನು ಮಾಡಿ,—ಸ್ವಾಮಿ, ವ್ಯಾಸರು ಹೇಳಿದಂತೆ ಅಧ್ವರಾರಂಭಕ್ಕೆ ಆಜ್ಞೆಯನ್ನಿತ್ತು, ಅದನ್ನು ಆಗಮಾಡಿಸಬೇಕು— ಎಂದು ಬೇಡಿಕೊಂಡನು. ಶ್ರೀ ಕೃಷ್ಣನು ಧರ್ಮರಾಯನಿಗೆ ಅಭಯವನ್ನಿತ್ತು, ಭೀಮನನ್ನು ಹಾಸ್ಯಮಾಡಿ, ಯಜ್ಞಾಶ್ವವನ್ನು ಹಿಡಿದು ತರಲು ಕಳುಹಿಸಿ ದನು. ಅವನು ವೃಷಕೇತು ಮೇಘನಾದರೊಡನೆ ಹೊರಟು ಭದ್ರಾವತಿ

ಯನ್ನು ಸೇರಿ ಆ ಅಶ್ವವನ್ನು ಕಾಣದೆ ಚಿಂತಿಸುತಿರುವಲ್ಲಿ, ಅದು ಚತುರಂಗಬಲದೊಡನೆ ನದಿಗೆ ಹೋಗುತಿರುವಾಗ, ಘಟೋತ್ಕಚಪುತ್ರನು ಮಾಯಾಯುದ್ಧವನ್ನು ಮಾಡಿ ಆ ಅಶ್ವರಕ್ಷಕರನ್ನೆಲ್ಲ ಓಡಿಸಿ ಹಯವನ್ನು ಹಿಡಿದು ಭೀಮನ ವಶಮಾಡಿದನು. ಆಗ ಅಲ್ಲಿನ ದೊರೆಯಾದ ಯೌವನಾಶ್ವನು ಆಗ್ರಹದಿಂದ ಸಮರಕ್ಕೆ ಹೊರಟು, ವೃಷಕೇತುವಿನ ಕೂಡ ಕಾದಾಡಿ ಅವನ ಪರಾಕ್ರಮಕ್ಕೆ ಮೆಚ್ಚಿ ಅವನ ಉದ್ದೇಶಕಾರ್ಯವನ್ನರಿತು, ಭೀಮನೊಡನೆ ಧುರಕ್ಕೆ ನಿಂತಿರುವ ತನ್ನ ಸುತನನ್ನು ಕರೆದು, ಬವರವನ್ನು ನಿಲ್ಲಿಸಿ, ಆ ವಾಯುಪುತ್ರನಿಗೆ ಶರಣಾಗತನಾಗಿ, ತನ್ನ ಅರಮನೆಗೆ ಕರೆದುಕೊಂಡು ಹೋಗಿ ಉಪಚರಿಸಿ, ಯಜ್ಞಾಶ್ವವನ್ನು ರತ್ನಕಾಣಿಕೆಗಳೊಡನೆ ಸಮರ್ಪಿಸಲು ; ಭೀಮನು ' ಆ ತುರಗದೊಡನೆ ಧರ್ಮರಾಯನ ದರ್ಶನಕ್ಕೆ ಹೊರಡಬೇಕು ' ಎಂದು ಹೇಳಿ, ಮುಂಚಿತವಾಗಿ ಅಣ್ಣನ ಬಳಿಗೆ ಹೋಗಿ ನಡೆದ ಸಂಗತಿಯನ್ನೆಲ್ಲ ತಿಳಿಯಿಸಿದನು. ಧರ್ಮರಾಯನು ಯೌವನಾಶ್ವನನ್ನೂ ಆ ವಾಜಿಯನ್ನೂ ಆದರಿಸಿ, ಯಜ್ಞಾರಂಭಕ್ಕೆ ಇನ್ನೂ ಹನ್ನೊಂದು ತಿಂಗಳಕಾಲ ನಿರೀಕ್ಷಿಸಬೇಕೆಂದು ಹೇಳಿದ ಮಹಾಮನಸ್ವಿಯಾದ ಶ್ರೀಕೃಷ್ಣನನ್ನು ಶ್ರೀ ದ್ವಾರಕಾನಗರಕ್ಕೆ ಕಳುಹಿಸಿಕೊಟ್ಟನು. ಯಜ್ಞಾಶ್ವವನ್ನು ಅತಿಜಾಗರೂಕತೆಯಿಂದ ರಕ್ಷಿಸುತ್ತಿದ್ದರು. ಆಗ ಭೀಮನು ' ಚಂದ್ರಮೌಳೀಶ್ವರನನ್ನು ಆರಾಧಿಸಿ ಯಾಗಕ್ಕೆ ಬೇಕಾದಷ್ಟು ಮರುನ್ಮಹಾರಾಜನ ಸಂಬಂಧಿಯಾದ ಧನವನ್ನೆಲ್ಲ ತರಬೇಕು ' ಎಂದು ಹೇಳಲು ; ಧರ್ಮರಾಯನು ಅನುಜಸಮೇತ ಶುಭಲಗ್ನದಲ್ಲಿ ಪ್ರಯಾಣಹೊರಟು, ತಮ್ಮ ಅಧೀನ್ಯಕ್ಕೆ ಸೇರಿದ ರಾಜ್ಯಗಳಲ್ಲಿ ಸಂಚರಿಸಿ, ಅನೇಕಪುಣ್ಯಕ್ಷೇತ್ರಗಳನ್ನು ದಾಟಿ, ಹಿಮವತ್ಪರ್ವತದ ಕೆಳಭಾಗದಲ್ಲಿ ರಾಜಯೋಗ್ಯವಾದ ಬಿಡಾರದಲ್ಲಿಳಿದು, ವ್ಯಾಸವಾಕ್ಯಾನುಸಾರ ವಿಧಿವತ್ತಾಗಿ ಸರ್ವಲೋಕವಿಭುವಾದ ಪರಮೇಶ್ವರನನ್ನು ಆರಾಧಿಸಿ, ಅನುಗೃಹೀತನಾದನು. ಆ ಬಳಿಕ ಪಾಂಡವರು ವ್ಯಾಸಮುನಿಯೊಡನೆ ನಿಧಿ ಇರತಕ್ಕ ತಾಣಕ್ಕೆಹೋಗಿ ಅಗಿಸಿ, ಅಪರಿಮಿತವಾದ ದ್ರವ್ಯವನ್ನು ತೆಗೆಯಿಸಿ, ಆಗಣಿತವಾದ ಗಜೋಷ್ಟ್ರಾಶ್ವಗಳ ಮೇಲೂ ಸುಭಟರ ಮೇಲೂ ಹೇರಿಸಿ ಸಾಗಿಸಿಕೊಂಡು ರಾಜಧಾನಿಗೆ ಬರುತಲಿದ್ದರು.

ಇತ್ತ ಕಡೆ ಕೌಂತೇಯರಿಗೆ ಹಿತವನ್ನು ಬಯಸಿ ಶ್ರೀಕೃಷ್ಣನು ಗಜಪುರಿಗೆ ದಯಮಾಡಿರುವಾಗ, ಉತ್ತರಾದೇವಿಯು ನಿರ್ಜೀವಶಿಶುವನ್ನು ಪ್ರಸವಿಸಿದುದರಿಂದ ಕುಂತೀದ್ರೌಪದೀಸುಭದ್ರಾದೇವಿಯರು ಬಹಳವಾಗಿ ದುಃಖಿಸಿ ವಾಸುದೇವನನ್ನು ಮರೆಹೊಕ್ಕು ಆ ಶಿಶುವಿಗೆ ಪ್ರಾಣದಾನವನ್ನು ಮಾಡಬೇಕೆಂದು ಪ್ರಾರ್ಥಿಸಲು ; ಸಕಲವಿಧಬಾಂಧವನಾಗಿ ಪಾಂಡವರನ್ನು ರಕ್ಷಿಸುತ್ತಿದ್ದ ಶ್ರೀಕೃಷ್ಣನು ತನ್ನ ಮಹಿಮಾತಿಶಯದಿಂದ ಅಶ್ವತ್ಥಾಮನ ಐಷಿಕಾಸ್ತ್ರವನ್ನು ಉಪಸಂಹರಿಸಿ, ಆ ಮಗುವು ಪುನರ್ಜೀವವನ್ನೈದುವಹಾಗೆ ಅನುಗ್ರಹಿಸಿದನು. ಒಡನೆ ಆ ಬಾಲಕನು ತೇಜಸ್ವಿಯಾಗಿ ಸಕಲರಿಗೂ ಆನಂದವಾಗುವಂತೆ ಸಕಲಾಂಗಚೇಷ್ಟೆಯನ್ನೂ ಮಾಡಲು ; ಗೋವಿಂದನು ಆ ಅಭಿಮನ್ಯುಕುಮಾರನಿಗೆ ಜಾತಕರ್ಮಾದಿಗಳನ್ನು ಮಾಡಿಸಿ, ಕುರುವಂಶವು ಪರಿಕ್ಷೀಣವಾಗಿರುವಾಗ ಜನಿಸಿದುದರಿಂದ 'ಪರೀಕ್ಷಿತ್ತು' ಎಂದು ನಾಮನಿರ್ದೇಶವಂಗೈದು ಲೋಕಾಹ್ಲಾದಕರವಾದ ಉತ್ಸವಾದಿಗಳನ್ನು ಮಾಡಿಸುತ್ತಿದ್ದನು. ಆ ಕೂಸು ಹುಟ್ಟಿದ ಒಂದು ಮಾಸಕ್ಕೆ ಪಾಂಡವರು ಸುವರ್ಣರಾಶಿಸಹಿತ ಹಸ್ತಿನಾವತಿಯನ್ನು ಸೇರಿ, ಪರೀಕ್ಷಿದ್ರಾಜನ ಉತ್ಪತ್ತಿಪ್ರಕಾರವನ್ನೂ ಶ್ರೀಕೃಷ್ಣನ ಮಹಿಮಾತಿಶಯವನ್ನೂ ಕೇಳಿ ಆನಂದಗೊಂಡು ಅಚ್ಯುತನನ್ನು ಅನಂತವಾಗಿ ಪೂಜಿಸಿ, ಪರೀಕ್ಷಿತ್ತು ದಿನದಿನಕ್ಕೆ ಶುಕ್ಲಪಕ್ಷದ ಚಂದ್ರನಂತೆ ಬಳೆಯುತಲಿರುವುದನ್ನು ಕಂಡು ಆಹ್ಲಾದಗೊಂಡಿದ್ದರು. ಪಾಂಡವರು ಸಕಲವಸ್ತುಸಂಭಾರಗಳನ್ನೂ ಯಾಗಕ್ಕೆ ಜತೆಗೊಳಿಸಿ, ವ್ಯಾಸಮುನೀಂದ್ರನಿಗೆ ತಿಳುಹಿಸಲು ; ಆತನು—ಚೈತ್ರಶುದ್ಧ ಪೂರ್ಣಿಮಾದಿನ ಶುಭಲಗ್ನದಲ್ಲಿ ದೀಕ್ಷೆಯನ್ನು ಕೈಕೊಳ್ಳಬೇಕೆಂತಲೂ, ನವರತ್ನಾಭರಣಾದಿಗಳಿಂದ ಅಲಂಕೃತವಾದ ಯಜ್ಞಾಶ್ವವು ಭೂಪ್ರದಕ್ಷಿಣಕ್ಕೆ ಹೊರಡುವಾಗ ಅದನ್ನು ರಕ್ಷಿಸುತ ಹಿಂಬಾಲಿಸುವುದಕ್ಕಾಗಿ ವಿಜಯನು ಸಿದ್ಧನಾಗಿರಬೇಕೆಂತಲೂ,—ಪ್ರವಚಿಸಿದನು. ಆಬಳಿಕ ದೀಕ್ಷಾಕಾಲವು ಪ್ರಾಪ್ತವಾಗಲು ; ಕೃಷ್ಣಮುನಿಸಹಿತರಾದ ವಿಪ್ರಶ್ರೇಷ್ಠರು ಧರ್ಮರಾಯನನ್ನು ಅಶ್ವಮೇಧಯಾಗಕ್ಕೆ ವಿಧ್ಯುಕ್ತಪ್ರಕಾರ ದೀಕ್ಷೆಗೊಳಿಸಿದರು. ಆಗ ಚತುರಂಗಬಲಸಹಿತನಾದ ಕಿರೀಟಿಯು ಶ್ರೀಕೃಷ್ಣನ ಮತ್ತು ತನ್ನ ಅಣ್ಣಂದಿರ ಆಜ್ಞೆಯನ್ನು ಪಡೆದು ವಾಜಿಯಕೂಡ ಜೈತ್ರಯಾತ್ರೆಹೊರಟನು. ಆ ಬಳಿಕ

ಶಕ್ತನಾದ ಭೀಮಸೇನನೇ ತನ್ನ ಅಣ್ಣನು ಮಾಡುತಲಿದ್ದ ರಾಜ್ಯಭಾರ ನಿರ್ವಾಹವನ್ನೂ ನೋಡುತ ಲೋಕರಂಜಕನಾಗಿದ್ದನು. ಧರ್ಮರಾಯನು ಯಾಗಮಂಟಪದಲ್ಲಿ ಋತ್ವಿಕ್ಪುರೋಹಿತಾದಿ ಸಭಾಸದರೊಡನೆ ಎರಡನೆಯ ಬ್ರಹ್ಮನಂತೆ ಅಧಿಕವಾದ ತೇಜಸ್ಸಿನಿಂದ ಪ್ರಕಾಶಿಸುತ ಯಜ್ಞಕರ್ಮಾಸಕ್ತನಾಗಿದ್ದನು. ತುರಗದೊಡನೆ ಕ್ಷೇತ್ರಯಾತ್ರೆ ಹೊರಟಾಗ, ಧರ್ಮರಾಯನು ಧನಂಜಯನನ್ನು ಕುರಿತು—ಯುದ್ಧವಾಗದಂತೆ ಕಾರ್ಯಸಂಘಟನಮಾಡಿಕೊಂಡು ಬರಬೇಕು—ಎಂದು ಹೇಳಿ ಕಳುಹಿಸಿದ್ದರೂ, ಕುರುಕ್ಷೇತ್ರದಲ್ಲಿ ನಡೆದ ಯುದ್ಧಕ್ಕೆ ಬಾರದೆ ಕಾರಣಾಂತರಗಳಿಂದ ನಿಂತಿದ್ದ ದೊರೆಗಳು ಅರ್ಜುನನನ್ನು ಎದುರಿಸಿ ಯಜ್ಞಾಶ್ವವನ್ನು ಕಟ್ಟಿ ಯುದ್ಧವನ್ನು ಮಾಡಿದರು ಯಜ್ಞಾಶ್ವವು ಒಂದು ವರ್ಷ ಪರ್ಯಂತ ಸ್ವೇಚ್ಛೆಯಾಗಿ ಸಂಚರಿಸುತ್ತಿರುವಲ್ಲಿ ಅದು ತ್ರಿಗರ್ತದೇಶಕ್ಕೆ ಪ್ರವೇಶಿಸಲು, ಅಲ್ಲಿ ದೊರೆಯಾಗಿದ್ದ ಸುಶರ್ಮನ ಪುತ್ರ ಸೂರ್ಯವರ್ಮನಿಗೂ ಅರ್ಜುನನಿಗೂ ಯುದ್ಧವಾಗಿ ಅನುಜರೊಡನೆ ಅವನು ಸೋತು ಶರಣಾಗತನಾದನು. ಆಬಳಿಕ ವಾಜಿಯು ಮಾಹಿಷ್ಮತಿ ಪಟ್ಟಣದಲ್ಲಿ ನೀಲಧ್ವಜನಿಂದ ಕಟ್ಟಲ್ಪಟ್ಟಿತು. ಅಲ್ಲಿಯ ಭೂಪತಿಗೂ ಅರ್ಜುನನಿಗೂ ಯುದ್ಧವಾಗಿ, ಪರಾಜಿತನಾದ ಆ ದೊರೆಯು ಅಶ್ವವನು ಬಿಡಿಸಿ, ಕಪ್ಪಕಾಣಿಕೆಗಳನ್ನಿತ್ತು ಪಾರ್ಥನನ್ನು ಪ್ರೀತಿಸಿ ಕಳುಹಿಸಿಕೊಟ್ಟನು. ಯಜ್ಞಾಶ್ವದ ಹಣೆಯಲ್ಲಿ ಬರೆದು ಕಟ್ಟಿರುವ ಒಕ್ಕಣೆಯನ್ನು ಓದಿನೋಡಿ ಚಂಪಕದೇಶಾಧಿಪತಿಯಾದ ಹಂಸಧ್ವಜನು ಅದನ್ನು ಬಂಧಿಸಿ, ವಿಷ್ಣುಭಕ್ತನಾದ ತನ್ನ ಹಿರಿಯಮಗ ಸುಧನ್ವನನ್ನು ಯುದ್ಧಕ್ಕೆ ಕಳುಹಿಸಲು ; ಅರ್ಜುನನು ಶ್ರೀಕೃಷ್ಣನ ಸಾಹಾಯ್ಯದಿಂದ ಶೂರಾಗ್ರಣಿಯಾದ ಅವನನ್ನು ನಾಕಕ್ಕೆ ಕಳುಹಿಸಿ, ಅವನ ತಮ್ಮ ಸುರಥನನ್ನೂ ಸಂಹರಿಸಿದನು. ಆಗ ಹಂಸಧ್ವಜನೇ ಆಹವಕ್ಕೆ ಬಂದಿರಲು, ಶ್ರೀಕೃಷ್ಣನು ಅವನಿಗೂ ಪಾರ್ಥನಿಗೂ ಸಖ್ಯವನ್ನುಂಟುಮಾಡಿ ಕುದುರೆಯನ್ನು ಬಿಡಿಸಿ, ಚಿತ್ತೈಸಿದನು. ಅಶ್ವವು ಪ್ರಾಗ್ಜ್ಯೋತಿಷಪಟ್ಟಣಕ್ಕೆ ತಲುಪಿ ವಜ್ರದತ್ತನೆಂಬ ರಾಜನಿಂದ ಬಿಗಿಯಲ್ಪಡಲು ; ಅರ್ಜುನನು ಅವನೊಡನೆ ಯುದ್ಧಮಾಡಿ ಗೆದ್ದು ಅದನ್ನು ಬಿಡಿಸಿಕೊಂಡು 'ಚೈತ್ರಮಾಸಕ್ಕೆ ಯಾಗವನ್ನು ನೋಡಲು ಹಸ್ತಿನಾವತಿಗೆ ಬಾ.' ಎಂದು ಹೇಳಿ ಮುಂದಕ್ಕೆ ಹೊರಟನು. ತುರಗವು ಸಿಂಧುದೇಶದಲ್ಲಿ ಸಿಕ್ಕಿ

ಬಿದ್ದಿತು. ಬೀಭತ್ಸುವು ಅಲ್ಲಿನ ಯೋಧರನ್ನೆಲ್ಲ ಯುದ್ಧದಲ್ಲಿ ಜಯಿಸಿದನು. ಆಗ ಅಲ್ಲಿನ ರಾಣಿಯಾದ ದುಶ್ಶಳೆಯು ಪಾರ್ಥನ ಬಳಿಗೆ ಹೋಗಿ ಉಪಚರಿಸಿ, "ನನ್ನ ಪತಿಯು ಭಾರತಯುದ್ಧದಲ್ಲಿ ನಿನ್ನನ್ನೆದುರಿಸಿ ಹತನಾದನು. ಭೀರುವಾದ ನಮ್ಮ ಪುತ್ರನು ನೀನು ಬರುತಿರುವುದನ್ನು ಕೇಳಿಯೇ ಮೃತನಾದನು. ನನ್ನ ಮೊಮ್ಮಗನನ್ನಾದರೂ ಕಾಪಾಡುತ್ತಿರು" ಎಂದು ಮೊರೆಯಿಟ್ಟಳು. ಅರ್ಜುನನು ಆಕೆಯನ್ನು ಮನ್ನಿಸಿ, 'ಹಸ್ತಿನಾವತಿಗೆ ಅಣ್ಣನು ಮಾಡುವ ಯಾಗಕ್ಕೆ ತೌರುಮನೆಗೆ ಅಗತ್ಯವಾಗಿ ಬರಬೇಕು.' ಎಂದು ಹೇಳಿ ಸಂತೈಸಿದನು. ಹಯವು ನಿಜರೂಪದಿಂದ ಸ್ತ್ರೀಮಳಯಾಳಕ್ಕೆ ಹೋಗಲು, ಅಲ್ಲಿನ ರಾಣಿಯಾದ ಪ್ರಮೀಳೆಗೂ ಅರ್ಜುನನಿಗೂ ಸಂಭಾಷಣೆಯೂ ಯುದ್ಧವೂ ಒದಗಿ, ಕೊನೆಗೆ ಶ್ರೀಕೃಷ್ಣನ ಆಜ್ಞಾನುಸಾರ ಆಕೆಯನ್ನು ಸ್ವೀಕರಿಸುವುದಾಗಿ ಹೇಳಿ, ಆಕೆಯಿಂದ ಪೂಜಿತನಾಗಿ ಅಶ್ವವು ಹೊರಟಕಡೆ ಹೊರಟನು. ಅದು ಪಾಂಡ್ಯದೇಶದ ಮಣಿಪುರ (ಈಗಿನ ಚಾಮರಾಜನಗರದ ಹರಳುಕೋಟೆ) ಕ್ಕೆ ಹೋಗಲು ; ಅಲ್ಲಿನ ದೊರೆಯಾದ ಬಭ್ರುವಾಹನನಿಂದ ಅದು ಬಂಧಿಸಲ್ಪಟ್ಟಿತು. ಆತನ ತಾಯಿಯಾದ ಚಿತ್ರಾಂಗದೆಯು ಅದನ್ನು ತಿಳಿದು ಮಗನನ್ನು ಕುರಿತು—'ಅರ್ಜುನನು ನಿನ್ನ ತಂದೆಯು ; ಇದು ನಿನ್ನ ದೊಡ್ಡಪ್ಪನ ಯಜ್ಞಾಶ್ವವು. ಆದುದರಿಂದ ಅದನ್ನು ಪಾರ್ಥನಿಗೆ ಒಪ್ಪಿಸಿ ವಂದಿಸು—ಎಂದಳು. ಪಾರ್ಥಿಯು ಹಾಗೆ ಮಾಡಿದಾಗ, ಅರ್ಜುನನು—ಎಲೋ ಹೇಡಿ, ಯುದ್ಧಕ್ಕೆ ಬಾ—ಎಂದು ಹೀಯಾಳಿಸಿದನು. ಬಭ್ರುವಾಹನನು ರೋಷಾಕ್ರಾಂತನಾಗಿ ಹಯವನ್ನು ಹಿಂದಕ್ಕೆ ಕಳುಹಿಸಿ, ಧುರಕ್ಕೆ ನಿಂತು ವೃಷಕೇತು ಮುಂತಾದ ಪರಿವಾರದೊಡನೆ ಅರ್ಜುನನನ್ನು ಸೋಲಿಸಿ, ಕ್ರೂರವಾದ ಬಾಣದಿಂದ ಮೂರ್ಛೆಗೊಳಿಸಿದನು ! ವಾಲ್ಮೀಕಿಮಹರ್ಷಿಯ ಆಶ್ರಮದಲ್ಲಿದ್ದ ಕುಶಲವರು ಯಜ್ಞಾಶ್ವವನ್ನು ಕಟ್ಟಿ, ಶ್ರೀರಾಮನಕೂಡ ಯುದ್ಧಕ್ಕೆ ನಿಂತು ತಮ್ಮ ಪರಾಕ್ರಮವನ್ನು ತೋರಿಸಿದಂತಾಯಿತು ! ಆಗ ಅರ್ಜುನನು ಮೈಮರೆತು ಬಿದ್ದಿರುವುದನ್ನು ನೋಡಿ, ಚಿತ್ರಾಂಗದೆಯೂ ಬಭ್ರುವಾಹನನೂ, ಬಹುವಾಗಿ ಹಂಬಲಿಸುತಿರಲು ; ಸರ್ವಾಂತರ್ಯಾಮಿಯಾದ ಶ್ರೀಕೃಷ್ಣನು ಭೀಮಸೇನನೊಡನೆ ಗರುಡಾರೂಢನಾಗಿ ಅಲ್ಲಿಗೆ ಹೋಗುವಷ್ಟರಲ್ಲಿ, ಅರ್ಜುನನ ಪ್ರಿಯಪತ್ನಿಯಾದ ಉಲೂಪಿಯು ಸಂಜೀವಕರಣಿ ಎಂಬ

ದಿವ್ಯ ಮಣಿಯನ್ನು ಒಪ್ಪಿಸಲು ; ವಾಸುದೇವನು ಅದನ್ನು ಅರ್ಜುನನಿಗೂ ವೃಷಕೇತುವಿಗೂ ಸ್ಪರ್ಶಿಸಿ, ಅವರನ್ನು ಬದುಕಿಸಿ ' ಗಂಗಾದೇವಿಯ ಶಾಪದಿಂದ ಹೀಗಾಯಿತು ' ಎಂದು ಹೇಳಿ ಆದರಿಸಿದನು. ಆಗ ಎಲ್ಲರಿಗೂ ಆನಂದವಾಯಿತು ಆದರೆ ಬಭ್ರುವಾಹನನು ಮಾತ್ರ ತಂದೆಯನ್ನು ಹಿಂಸಿಸಿದ ಪಾಪಕ್ಕೆ ಪಶ್ಚಾತ್ತಾಪಗೊಂಡು ಗೋಳಿಡುತಿರುವಲ್ಲಿ ಭೀಮಸೇನನು-" ಎಲೈ ಬಾಲಕನೇ ! ಕ್ಲೇಶವನ್ನು ಬಿಡು. ಶ್ರೀಕೃಷ್ಣನನ್ನು ಭಜಿಸುವವರಿಗೆ ಪಾಪವೆಲ್ಲಿರುವುದು ? ಸೂರ್ಯನಿದ್ದ ಬಳಿಯಲ್ಲಿ ಕತ್ತಲೆ ಇರುವುದೇ ? ಸಂಸಾರಸಾಗರದಿಂದ ಕಡೆಹಾಯಿಸುವ ಶ್ರೀಕೃಷ್ಣನ ಪವಿತ್ರನಾಮಗಳು ಯಾರ ನಾಲಗೆಯಲ್ಲಿ ವರ್ಣಾಶ್ರಮ ಧರ್ಮೋಚಿತವಾಗಿ ಬರುತ್ತಿರುವುವೋ ಆತನಿಗೆ ಸಕಲ ಪಾಪಗಳೂ ಪರಿಹಾರವಾಗುತ್ತೆಂಬಲ್ಲಿ, ಅಂತಹ ಪರಮಾತ್ಮನೇ ಪ್ರತ್ಯಕ್ಷವಾಗಿರಲು, ಪಾಪವಿಲ್ಲವು "—ಎಂದು ಹೇಳಿದನು. ಶ್ರೀಕೃಷ್ಣಭೀಮರು ಪೂಜಿತರಾಗಿ ಹಸ್ತಿನಾವತಿಗೆ ಬಂದರು. ಅರ್ಜುನನು ಪತ್ನೀಪುತ್ರರನ್ನು ಆದರಿಸಿ ಅವರಿಂದ ಬೀಳ್ಕೊಂಡು ಯಜ್ಞಾಶ್ವವನ್ನು ಹಿಂಬಾಲಿಸಿದನು.

ಅದು ಮಯೂರಧ್ವಜನೆಂಬ ರಾಜನ ಸಂಸ್ಥಾನಕ್ಕೆ ಪ್ರವೇಶಿಸಿ, ರತ್ನಪುರಿಯಲ್ಲಿ ಕಟ್ಟಲ್ಪಟ್ಟಿತು. ಕೂಡಲೆ ಯುವರಾಜನಾದ ತಾಮ್ರಧ್ವಜನು ಅರ್ಜುನನನ್ನು ಯುದ್ಧದಲ್ಲಿ ಸೋಲಿಸಿದನು. ಅದನ್ನು ತಿಳಿದ ವಾಸುದೇವನು ಅಲ್ಲಿಗೆ ಹೋಗಿ, ಅವನನ್ನು ಜಯಿಸುವ ಉಪಾಯವನ್ನು ಚಿಂತಿಸಿ, ವಿಪ್ರವೇಷದಿಂದ ರಾಜನಬಳಿಗೆ ಹೋಗಿ ' ಎಲೈ ಮಯೂರಧ್ವಜನೇ ! ನಮ್ಮ ಪುತ್ರನು ಒಂದು ಸಿಂಹದ ನಿರ್ಬಂಧಕ್ಕೆ ಸಿಕ್ಕಿ ಕ್ಲೇಶಪಡುತಿರುವುದರಿಂದ, ಆ ಬಾಲಕನ ಶರೀರಕ್ಕೆ ಬದುಲಾಗಿ ನಿನ್ನ ಉತ್ತಮ ದೇಹದಲ್ಲಿ ಅರ್ಧಭಾಗವನ್ನು ಕೊಟ್ಟರೆ, ಆ ಸಿಂಹವು ಅಪೇಕ್ಷಿಸಿರುವಂತೆ ನಿನ್ನ ಕೋಮಲವಾದ ಶರೀರಾರ್ಧವನ್ನು ಅದಕ್ಕೆ ಕೊಟ್ಟು, ನಮ್ಮ ಮಗುವನ್ನು ಬಿಡಿಸಿಕೊಳ್ಳುವೆವು ' ಎಂದು ಯಾಚಿಸಲು ; ಆ ರಾಜನು ಅದಕ್ಕೆ ಒಪ್ಪಿ ತನ್ನ ಶರೀರವನ್ನು ಕುಯಿದು ಕೊಡುವಾಗ, ಅವನ ಎಡದ ಕಣ್ಣಿನಲ್ಲಿ ಒಂದುಹನಿ ನೀರು ಬರಲು, ಅದನ್ನು ಕಂಡ ಶ್ರೀಕೃಷ್ಣನು ಪರೀಕ್ಷಾರ್ಥವಾಗಿ ' ಎಲೈ ರಾಜೇಂದ್ರನೇ ! ಅಳುತ್ತ ದಾನವನ್ನು ಕೊಡುವೆ, ಅದು ನನಗೆ ಬೇಡ ' ಎಂದನು. ರಾಜನು ತನ್ನ ಶರೀರವನ್ನು ಕೂಡಿಸಿ ಹಿಡಿದುಕೊಳ್ಳುವಂತೆ ಕುಮುದ್ವತಿ ಎಂಬ ಪತ್ನಿಗೆ

ಹೇಳಿ,—ಎಲೈ ವಿಪ್ರನೇ ! ನನ್ನ ದೇಹದ ಬಲಭಾಗವು ಶ್ರೀಕೃಷ್ಣಾರ್ಪಿತವಾದಂತೆ, ಎಡದ ಭಾಗವು ಸಾರ್ಥಕವಾಗಲಿಲ್ಲವಲ್ಲಾ ! ಎಂಬ ದುಃಖದಿಂದ ಆ ಕಣ್ಣಿನಲ್ಲಿ ನೀರು ಬಂದಿತು ! ನಾನು ನಿರ್ಮಲಚಿತ್ತನಾಗಿಯೇ ಇದೇನೆ,— ಎಂದನು. ಆಗ ಶ್ರೀಕೃಷ್ಣನು ಆತನ ಸತ್ಯಕ್ಕೆ ಮೆಚ್ಚಿ, ತನ್ನ ನಿಜರೂಪವನ್ನು ತೋರಿಸಿ, ಸೀಳಿದ್ದ ಶರೀರವನ್ನು ಹಿಡಿದು ನೇವರಿಸಿ ಹರಸಲು ; ಮಯೂರಧ್ವಜನು ತನುಕಾಂತಿಯೊಡನೆ ಕೂಡಿ—ಶ್ರೀಕೃಷ್ಣಸ್ವಾಮಿಯೇ ! ಪ್ರಾರ್ಥನೀಯವಾದ ನಿನ್ನ ಚರಣದರ್ಶನವು ಆದಬಳಿಕ ನಾನು ಇನ್ನು ಯಾಗವನ್ನು ಮಾಡಲೇಕೆ ?—ಎಂದು ಬಿನ್ನವಿಸಿ ಉಭಯಪಾರ್ಶ್ವಗಳನ್ನೂ ಒಪ್ಪಿಸಿ, ಪೂಜಿಸಿ ಕಳುಹಿಸಿಕೊಟ್ಟನು. ಆಬಳಿಕ ಕುದುರೆಯು ಸೌರಾಷ್ಟ್ರದೇಶಕ್ಕೆ ನುಗ್ಗಿ, ಸಾರಸ್ವತಪುರದ ವೀರವರ್ಮನೆಂಬ ರಾಜನಿಂದ ಕಟ್ಟಲ್ಪಟ್ಟಿತು. ಅರ್ಜುನನು ಅವನ ಕೂಡ, ಕಾಳಗವಾಡಿ, ಶ್ರೀಕೃಷ್ಣ ಪ್ರೇರಣೆಯಿಂದ ಅವನಲ್ಲಿ ಸ್ನೇಹವನ್ನು ಬಳೆಯಿಸಿ, ಮುಂದಕ್ಕೆ ಹೊರಟನು. ಹಯವು ಹೇಮಂತಋತುವಿನಲ್ಲಿ ತುಂಗಭದ್ರಾತೀರದಲ್ಲಿರುವ ಕುಂತಳ (ಈಗಿನ ಶಿವಮೊಗ್ಗ) ದೇಶಕ್ಕೆ ಹೋಗಲು ; ಅಲ್ಲಿ ದೊರೆಯಾಗಿದ್ದ ಚಂದ್ರಹಾಸನ ಮಕ್ಕಳು ಅದರ ಹಣೆಯಲ್ಲಿ ಕಟ್ಟಿರುವ ಪಟ್ಟಿಯ ಬರೆಹವನ್ನು ಓದಿ ನೋಡಿ, ಅದನ್ನು ಕಟ್ಟಿಸಿ ಆ ಸಂಗತಿಯನ್ನು ತಮ್ಮ ತಂದೆಗೆ ತಿಳಯಿಸಿದರು. ಆ ಮಹಾತ್ಮನು— ಅಪ್ಪಾ ! ನಾನು ಬಾಲ್ಯದಿಂದ ಇದುವರೆಗೂ ಯಾವ ಪರಮಾತ್ಮನನ್ನು ಧ್ಯಾನಿಸುತ್ತಿರುವೆನೋ ಆ ಭಗವಂತನು ಪಾರ್ಥನಿಗೆ ಸಹಾಯನಾಗಿ ಚಿತ್ತೈಸುತ್ತಿದ್ದಾನೆ. ನಮಗೆ, ಸಕಲ ವೇದಶಾಸ್ತ್ರಪ್ರತಿಪಾದ್ಯನಾದ ಶ್ರೀಕೃಷ್ಣನ ದರ್ಶನವೇ ಸಾಕು.—ಎಂದು ಹೇಳಿ, ಚತುರಂಗಬಲಸಮೇತನಾಗಿ ಹೊರಟು ನರನಾರಾಯಣರನ್ನು ಎದುರುಗೊಂಡನು. ಶ್ರೀಕೃಷ್ಣನು ಭಕ್ತನಾದ ಚಂದ್ರಹಾಸನನ್ನು ಆಲಿಂಗಿಸಿ, ಆತನ ವಂದನಾದ್ಯುಪಚಾರವನ್ನು ಸ್ವೀಕರಿಸಿ, ಹರಸಿ, ಅರ್ಜುನನ ಕಡೆಗೆ ತಿರುಗಿ—ಈತನು ಹರಿಭಕ್ತನು, ಧಾರ್ಮಿಕನು, ವಿದ್ಯಾವಂತನು, ಧ್ರುವರಾಯನಂತೆ ಕೀರ್ತಿಶಾಲಿಯು,—ಎಂದು ಹೇಳಿ ಮನ್ನಿಸಿ, ಅವನಿಂದ ಬೀಳ್ಕೊಂಡು ಹಸ್ತಿನಾವತಿಗೆ ಹೋದನು, ಆ ಬಳಿಕ ಅಶ್ವವು ಪ್ರವೇಶಿಸಿದ ಮಗಧದೇಶದ ಮೇಘನಂದಿಯನ್ನೂ, ಚೇದಿದೇಶದ ಶರಭನನ್ನೂ, ವದಾನ್ಯದೇಶದ ಚಿತ್ರಾಂಗದನನ್ನೂ, ನಿಷಧದೇಶದ ರಾಜ

ಸನ್ನೂ, ಗಾಂಧಾರದೇಶದ ದೊರೆಯನ್ನೂ, ಅರ್ಜುನನು ಜಯಿಸಿ ಕುದುರೆ ಯನ್ನು ಬಿಡಿಸಿಕೊಂಡು, ಗಜಪುರಿಗೆ ಹೊರಟನು.

ಅಣ್ಣನಿಗೆ ಪ್ರತಿಯಾಗಿ ರಾಜ್ಯವನ್ನಾಳುತ್ತಿರುವ ಭೀಮಸೇನನು, ವಾಜಿಯೊಡನೆ ತನ್ನ ತಮ್ಮನು ಜಯಶೀಲನಾಗಿ ಬರುತ್ತಿರುವ ಸುದ್ದಿಯನ್ನು ಕೇಳಿ ಯಾಗಕ್ಕಾಗಿ ಸಮಸ್ತಭೂಪಾಲಕರನ್ನು ಕರೆಯುವುದಕ್ಕೆ ತಕ್ಕವ ರನ್ನು ಕಳುಹಿಸಿ, ಅವರೆಲ್ಲರೂ ಬಂದು ಇಳಿಯುವುದಕ್ಕೆ ಸರ್ವೋಪಕರಣ ಯುಕ್ತವಾದ ಬೀಡಾರಗಳನ್ನು ನಿರ್ಮಿಸುವಂತೆ ಆಜ್ಞಾಪಿಸಿ, ಯಾಗಶಾಲೆ ಯನ್ನು ತೋರಣಾದಿಗಳಿಂದ ಅಲಂಕೃತವನ್ನಾಗಿ ಮಾಡಿಸಿ, ಬಂದವರನ್ನೆಲ್ಲ ರಾಜಯೋಗ್ಯವಾದ ಉಪಚಾರಗಳಿಂದ ಆದರಿಸುತಿರುವುದಕ್ಕೆ ನಕುಲನನ್ನು ನಿಯಮಿಸಿ, ಸಕಲಸನ್ನಾಹವನ್ನೂ ಮಾಡಿಕೊಂಡಿದ್ದನು. ಆಗ ವಿಜಯನು ಯಜ್ಞಾಶ್ವದೊಡನೆ ಮಹಾವೈಭವದಿಂದ ಗೋಧೂಳೀಲಗ್ನದಲ್ಲಿ ಹಸ್ತಿನಾ ವತಿಯನ್ನು ಸೇರಿ, ಧರ್ಮರಾಯನ ಬಳಿಗೆ ಹೋಗಿ ವಂದಿಸಿ ಆನಂದಗೊಳಿ ಸಿದನು. ಆಗ ಆ ಊರಿಗೆ ಬರುತ್ತಿದ್ದ ನಾನಾದೇಶದ ಜನರ ಗುಂಪೂ ಅಲ್ಲಿ ನಡೆಯುತ್ತಿರುವ ಉತ್ಸವಾದಿಸಂಭ್ರಮಗಳೂ ನೋಡುವುದಕ್ಕೆ ಮನೋಹರವಾಗಿದ್ದುವು. ಸಕಲಭುವನೈಕಗುರುವಾದ ಶ್ರೀಕೃಷ್ಣನು— ಎಲೈ ಧರ್ಮರಾಯನೆ! ನಿನ್ನಲ್ಲಿ ವಿಶ್ವಾಸವನ್ನಿಟ್ಟು ಅಧ್ವರಕ್ಕೆ ಬಂದಿರುವ ಸಪರಿವಾರರಾದ ಸಾಮಂತ ನರಪತಿಗಳಿರುವುದಕ್ಕೆ ಈ ಭೂಮಿಯು ಸಾಕಾ ಗದೆಯೂ, ಬದಗಿರುವ ಧನಕನಕಾದಿಗಳಿಗೆ ಮೇರುಪರ್ವತವು ಸಮವಲ್ಲ ದೆಯೂ ಇದೆ. ಮಹರ್ಷಿಗಳೇ ಮುಂತಾದ ಮಹನೀಯರೆಲ್ಲ ಬಂದಿದಾರೆ. ಭೀಮಸೇನನು ಸಕಲಸಾಮಗ್ರಿಗಳನ್ನೂ ಸಿದ್ಧಪಡಿಸಿದಾನೆ. ಇಗೋ, ಹಂಸಧ್ವಜಾದಿಮಹಾರಾಜರುಗಳೆಲ್ಲ ಬಂದು ನಿನ್ನನ್ನೇ ಓಲೈಸುತಿದಾರೆ. ಯಜ್ಞವನ್ನಾರಂಭಿಸು—ಎಂದು ಹೇಳಿದನು. ಬಳಿಕ ಧರ್ಮರಾಯನು ವಾಸು ದೇವನಿಗೆ ವಂದಿಸಿ, ಶಾಸ್ತ್ರಾನುಸಾರವಾಗಿ ಇಷ್ಟಕಾಚಯನ ಮುಂತಾದವನ್ನು ಮಾಡಿಸಿ, ಬಕದಾಲ್ಭ್ಯಮುನಿಗೆ ಬ್ರಹ್ಮತ್ವವಂ ಕೊಟ್ಟು, ವೇದವ್ಯಾಸಮುನಿ ಯನ್ನು ಆಚಾರ್ಯನನ್ನಾಗಿ ವರಿಸಿ, ವಾಮದೇವಾದಿಬ್ರಹ್ಮರ್ಷಿಗಳನ್ನು ಋತ್ವಿಜರನ್ನಾಗಿಟ್ಟುಕೊಂಡು, ಮಹನೀಯರಾದ ವಿಪ್ರಶ್ರೇಷ್ಠರನ್ನು ಸದಸ್ಯ ರನ್ನಾಗಿ ಮಾಡಿ, ಯಜ್ಞಕ್ಕೆ ಆರಂಭಿಸಿದನು। ಆಗ ಅಧ್ವರಶಾಲೆಯಲ್ಲಿ

ಸೇರಿದ್ದ ಋಷಿಗಳಲ್ಲಿ ಕೆಲರು ಸ್ತುತಿಪ್ರಧಾನವಾದ ವೇದಋಕ್ಕುಗಳನ್ನೂ ಕೆಲರು ಜ್ಯೋತಿಷ್ಟೋಮಾದಿ ಯಜ್ಞವಿಚಾರಗಳನ್ನು ಬೋಧಿಸುವ ಮಂತ್ರಗಳನ್ನೂ ಮತ್ತೆ ಕೆಲವರು ಭಗವಂತನ ಗುಣಗಳನ್ನು ಹೊಗಳುವ ಸಾಮಗಳನ್ನೂ ಪಠಿಸುತ್ತ ಇನ್ನು ಕೆಲವರು ಶ್ರೌತಸ್ಮಾರ್ತಜಪತಪೋಯೋಗನ್ಯಾಯಮೀಮಾಂಸಾದಿದರ್ಶನಗಳ ವಿಚಾರವಾಗಿ ಒಬ್ಬರಿಗೊಬ್ಬರು ಪ್ರಶ್ನೆಗಳನ್ನು ಹಾಕಿ ವಿಚಾರಮಾಡುತ ನೋಟಕರಿಗೂ ಶ್ರೋತೃಗಳಿಗೂ ಪರಮಾನಂದವನ್ನು ಉಂಟುಮಾಡುತಿದ್ದುದರಿಂದ ಅದು ಬ್ರಹ್ಮಸಭೆಯಂತಿದ್ದಿತು. ಆಗಿನ ಕಾಲದಲ್ಲಿ ಸರ್ವರೂ ಗೀರ್ವಾಣಭಾಷೆಯಿಂದಲೇ ಪರಸ್ಪರ ಮಾತನಾಡುತಿದ್ದರು. ಶ್ರೀಮತಿಯಾದ ದ್ರೌಪದೀದೇವಿಯೊಡಗೂಡಿದ ಧರ್ಮರಾಯನು ಅಭಿಷಿಕ್ತನಾಗಿ ಯಾವ ವಿಧವಾದ ಲೋಪವೂ ಬಾರದಂತೆ ಋಷಿಗಳ ಅನುಮತಿಯಿಂದ ಯಜ್ಞವನ್ನು ಕ್ರಮವಾಗಿ ನಡೆಯಿಸುತ್ತಾ ಬಂದನು. ಯಜ್ಞಸ್ವರೂಪನೂ ಯಜ್ಞಪತಿಯೂ ಆದ ಶ್ರೀಕೃಷ್ಣಸ್ವಾಮಿಯು ಇದಿರಿಗೆ ಇರುವಲ್ಲಿ ಧರ್ಮರಾಯನು ಮಾಡುವ ಯಜ್ಞವು ಸಾಂಗವಾಗಿ ತೃಪ್ತಿಕರವಾಗಿ ನಡೆಯುವುದಕ್ಕೆ ಏನೊಂದು ಅಡ್ಡಿಯೂ ಇರಲಿಲ್ಲ. ಭೀಮಸೇನನು ಅರ್ಜುನನಕೂಡ ಸಕಲಪ್ರಧಾನಕಾರ್ಯಗಳನ್ನೂ ತಾನೇ ನಿಂತು ನೋಡಿಕೊಳ್ಳುತ್ತ, ಸರ್ವರನ್ನೂ ಆದರಮಮತೆಗಳಿಂದ ಸಂತೋಷಗೊಳಿಸುತ್ತಿದ್ದನು! ಯೂಪಸ್ತಂಭದಲ್ಲಿ ಕಟ್ಟಿದ್ದ ಅಶ್ವವು ಮಹಾಮಂತ್ರಗಳಿಂದ ಪವಿತ್ರವಾಗಿ ಸಾಯುಜ್ಯವನ್ನು ಪಡೆಯಿತು. ಆಚಾರ್ಯನು ತತ್ತತ್ಕಾಲದಲ್ಲಿ ಆಹ್ವಾನಮಾಡುವ ಇಂದ್ರಾದಿದೇವತೆಗಳೆಲ್ಲ ಪ್ರತ್ಯಕ್ಷರಾಗಿ ಬಂದು ಹವಿರ್ಭಾಗವನ್ನು ಹೊಂದಿ ತೃಪ್ತರಾಗುತಿದ್ದರು. ಋತ್ವಿಜರು ಸೋಮಪಾನವನ್ನು ಮಾಡಿ ಪುರೋಡಾಶವಂ ಸೇವಿಸಿದರು. ದಿಙ್ಮಂಡಲವು ಮಂಗಳಧ್ವನಿಗಳಿಂದ ಪರಿಪೂರಿತವಾಗಿದ್ದಿತು. ಅಷ್ಟೈಶ್ವರ್ಯಸಂಪನ್ನನಾದ ಧರ್ಮರಾಯನು ಸಾಂಗವಾಗಿ ಯಜ್ಞವನ್ನು ಮಾಡಿದ ಬಳಿಕ ಐದನೆಯದಿನ ಅನುಜರೊಡನೆ ಅವಭೃಥಸ್ನಾನವನ್ನು ಮಾಡಿದನು. ವಿಪ್ರಸಮೂಹಕ್ಕೆ ಅನೇಕಗ್ರಾಮಗಳನ್ನೂ ಗೋಧನಕನಕವಸ್ತುವಾಹನಾದಿಗಳನ್ನೂ ಮಿತಿಮೀರಿದ ಸ್ವರ್ಣದಕ್ಷಿಣೆಯೊಡನೆ ಕೊಟ್ಟು, ಪರಿಜನಕ್ಕೆ ಪರಿಪರಿಯ ಪಾರಿತೋಷಕಂಗಳನಿತ್ತು, ಅದನ್ನು ನೋಡುವುದಕ್ಕಾಗಿ ಬಂದಿದ್ದ ನಾನಾಜಾತಿಯ ಜನ

ರನ್ನೂ ಪ್ರತಿದಿನವೂ ಭೂರಿಭೋಜನಾದಿಗಳಿಂದ ತೃಪ್ತಿಪಡಿಸಿದರು. ಅಧ್ವರಕ್ಕಾಗಿ ಬಂದಿದ್ದ ಭೂಪತಿಗಳನ್ನೆಲ್ಲ ತಾರತಮ್ಯಾನುಸಾರವಾಗಿ ಪೂಜಿಸುವುದಕ್ಕೆ ಮುಂಚೆ, ರಾಜನೀತಿಯನ್ನನುಸರಿಸಿ ಧರ್ಮರಾಯನು ಶ್ರೀಕೃಷ್ಣನಿಗೆ ಅಗ್ರಪೂಜೆಯನ್ನು ಮಾಡಿ, ಅಶ್ವಮೇಧ ಯಜ್ಞಕಾರ್ಯವನ್ನೆಲ್ಲಾ ಶ್ರೀಕೃಷ್ಣಾರ್ಪಣವನ್ನಾಗಿ ಮಾಡಲು ; ಸರ್ವರೂ 'ಜಯ ಜಯ' ಎಂದು ಶ್ಲಾಘಿಸುತ್ತಿದ್ದರು. ತುಂಬುರನಾರದರು ನೃತ್ಯಗೀತಾದಿಗಳಿಂದ ಸಂತೋಷಗೊಳಿಸಿದರು. ಅಶ್ವಿನ್ಯಾದಿನಕ್ಷತ್ರಗಳೊಡನೆ ಕೂಡಿರುವ ಗ್ರಹಗಳಂತೆ ಸಕಲ ಸಾಮಂತರಿಂದಲೂ ಪರಿವೇಷ್ಟಿತರಾದ ಪಾಂಡವರೈವರೂ ಅರ್ಥಿಗಳಿಗೆ ಬೇಕು ಬೇಕಾದುದನ್ನೆಲ್ಲ ಕೊಟ್ಟು ಕೃತಾರ್ಥರಾಗಿ, ಯಾಗವನ್ನು ಸಮಾಪ್ತಿಮಾಡಿಕೊಂಡು ರಾಜಧಾನಿಗೆ ಅತ್ಯಂತವೈಭವದೊಡನೆ ಉತ್ಸವಪೂರ್ವಕವಾಗಿ ಹೋಗಿ ಸೇರಿ, ಶ್ರೀಕೃಷ್ಣನಿಂದ ವೈಷ್ಣವಧರ್ಮವನ್ನು ಕೇಳಿ ಆತನಿಗೆ ಷೋಡಶೋಪಚಾರಪೂಜೆಯನ್ನು ಸಂಭ್ರಮವಾಗಿ ಮಾಡಿ, ಆತನನ್ನು ದ್ವಾರಕೆಗೆ ಮಹಾವೈಭವದಿಂದ ಕಳುಹಿಸಿಕೊಟ್ಟು ಬಂದು, ನ್ಯಾಯನೀತಿಗಳೊಡನೆ ಹಿಂದೆ ಆಳಿದ ರಾಜರುಗಳೆಲ್ಲರಿಗಿಂತಲೂ ಅತ್ಯುತ್ತಮವಾಗಿ ಆಲಸ್ಯವಿಲ್ಲದೆ ರಾಜ್ಯವನ್ನಾಳುತ ಸಮಸ್ತರನ್ನೂ ಆನಂದಗೊಳಿಸುತ್ತಿದ್ದರು.

ಪಾಠಕಮಹಾಶಯರೇ ! ಪಾಂಡವರು ಜ್ಯೇಷ್ಠಾನುಕ್ರಮವಾಗಿ ವಯಸ್ಸಿನಲ್ಲಿ ಒಂದೊಂದು ವರುಷ ವ್ಯತ್ಯಾಸವುಳ್ಳವರೆಂದು ಹಿಂದೆ ತಿಳುಹಿಸಿದ್ದೇವಷ್ಟೆ. ಭೀಮಸೇನನ ೧೦೭ ವರುಷಗಳ ಆಯುಃಪರಿಮಿತಿಯಲ್ಲಿ ಈ ಕೆಳಗೆ ಸೂಚಿಸಿರುವ ಹಾಗೆ ನಡೆದಿರುವುದೆಂದು ಗೊತ್ತಾಗಿದೆ—

| | | ವರುಷ-ತಿಂಗಳು |
|---|---|---|
| ೧. | ಭೀಮನು-ಜನನಾರಂಭದಿಂದ ಶತಶೃಂಗಪರ್ವತದಲ್ಲಿದ್ದುದು | ೧೪-೦ |
| ೨. | ಗಜಪುರಿಯಲ್ಲಿ ಅಸ್ತ್ರವಿದ್ಯೆಯನ್ನು ಕಲಿಯುತ್ತಿದ್ದುದು | ೧೨-೦ |
| ೩. | ದ್ವಾರಕೆಯಲ್ಲಿ ಯುದ್ಧಸಾಧನೆಯಲ್ಲಿದ್ದುದು ... | ೧-೦ |
| ೪. | ವಾರಣಾವತದ ಜತುಗೃಹದಲ್ಲಿದ್ದುದು ... | ೦-೬ |
| ೫. | ಹಿಡಿಂಬಿಯಸಂಗದಲ್ಲಿದ್ದುದು ... ... | ೦-೬ |

೬. ಏಕಚಕ್ರಪುರದಲ್ಲಿದ್ದುದು ... ... ೦-೬

೭. ಪಾಂಚಾಲಪಟ್ಟಣದಲ್ಲಿದ್ದುದು ... ... ೧-೦

೮. ಮರಳಿ ಗಜಪುರಿಗೆ ಹೋಗಿ ಅಲ್ಲಿದ್ದುದು ... ೫-೦

೯. ಇಂದ್ರಪ್ರಸ್ಥದಲ್ಲಿ ಆಳುತಿದ್ದುದು ... ... ೨೩-೦

೧೦. ಅರಣ್ಯವಾಸದಲ್ಲಿದ್ದುದು ... ... ೧೨-೦

೧೧. ಅಜ್ಞಾತವಾಸದಲ್ಲಿದ್ದುದು ... ... ೧-೦

೧೨. ಉಪಪ್ಲಾವ್ಯದಲ್ಲಿ ಸಂಧಿಕಾರ್ಯಸೇನಾರಚನೆಗಳಲ್ಲಿದ್ದುದು ೦-೬

೧೩. ಅಖಂಡಭೂಮಂಡಲಾಧಿಪತ್ಯದಲ್ಲಿದ್ದುದು ... ೩೬-೦

ಸ್ಮರಣಮಾತ್ರದಿಂದ ದುಸ್ವಪ್ನಾನಾರೋಗ್ಯಾದಿಗಳನ್ನು ಹೋಗಲಾಡಿಸಿ, ಲೋಕಕ್ಕೆ ಆನಂದಗೊಳಿಸುವ ಪುಣ್ಯಶ್ಲೋಕನಾದ ಭೀಮಸೇನನು ಅಣ್ಣನಿಗೆ ನೆರವಾಗಿ ಧರ್ಮದಿಂದ ರಾಜ್ಯಭಾರಂಗೈಯುತ್ತಿದ್ದುದರಿಂದ, ಭೂಲೋಕಕ್ಕವತರಿಸಿದ ಸ್ವರ್ಗವೋ ಎಂಬಂತೆ ಭರತಭೂಮಿ ಯಾವತ್ತೂ ಸಕಲಸೌಭಾಗ್ಯಗಳಿಂದ ಯುಕ್ತವಾಗಿ ನಿರ್ಭಯತೆಯಿಂದಿದ್ದಿತು ಹೀಗೆ ಲೋಕಹಿತವಾದ ಕಾರ್ಯಗಳಲ್ಲಿ ಮಗ್ನನಾಗಿದ್ದ ಭೀಮಸೇನನು ಪೃಥ್ವೀಪತಿಯಾದರೂ ರಾಜನೆಂಬ ಬಿರುದನ್ನು ವಹಿಸದೆ, ಭ್ರಾತೃಸನ್ಮಾನನಿರತನಾಗಿದ್ದುದು ಲೋಕಕ್ಕೆ ಧರ್ಮಬೋಧಕವಾದುದು. ಆತನು ವೀರಾಗ್ರಣಿಯಾದರೂ ಧರ್ಮಪರನಾಗಿ, ಮಹಾಸಮರ್ಥನಾದರೂ ಸಕಲಜನಪ್ರೇಮಪಾತ್ರನಾಗಿ, ಇದ್ದುದು ಮಾತ್ರವೇ ಅಲ್ಲ. ಆತನ ಗಾರ್ಹಸ್ಥ್ಯವು ಅತ್ಯಂತ ರಮಣೀಯವಾಗಿ ಸಕಲರಿಗೂ ಉಪದೇಶಪ್ರದವಾಗಿದ್ದಿತು. ಆತನು ಸಕಲ ಸಾಮ್ರಾಜ್ಯಭೋಗಭಾಗ್ಯಗಳನ್ನು ಚೆನ್ನಾಗಿ ಅನುಭವಿಸಿ, ಸಕಲದಾನ ಧರ್ಮಗಳನ್ನೂ ಮಾಡಿ, ಕೆಲವು ಕಾಲದನಂತರ ಪರೀಕ್ಷಿದ್ರಾಜನಿಗೆ ಪಟ್ಟವನ್ನು ಕಟ್ಟಿಸಿ, ವೈರಾಗ್ಯವನ್ನು ತಾಳಿ ಅಣ್ಣ ತಮ್ಮಂದಿರೊಡನೆಯೂ ದ್ರೌಪದೀದೇವಿಯೊಡನೆಯೂ ವನಕ್ಕೆ ಹೋಗಿ, ಅಲ್ಲಿ ಜಗದೀಶ್ವರನನ್ನು

ಧ್ಯಾನಿಸುತ ಜೀರ್ಣವಾದ ಮಾನವಶರೀರವನ್ನು ತ್ಯಜಿಸಿ, ನಿರರ್ಗಳವಾದ ಶಾಶ್ವತವಾದ ಬ್ರಹ್ಮಾನಂದದಲ್ಲಿ ಮುಳುಗಿದ್ದನು.

—ಭೀಮಮಹಿಮಾದರ್ಶ ಭಾರತಚರಿತ್ರವು ಸಮಾಪ್ತವಾದುದು—

ಪ॥ ಷ॥ ಸಿರಿಪತಿಯುಂಶವಿಳಾಪತಿ ಯೆನುತಂ | ಪಿರಿಯರ ನಲ್ನುಡಿ
ಮೆರೆದಪುದದರಿಂ | ಪಿರಿದೆನೆ ಭಾರತದಿಂದೀ ಚರಿತಮನೊಲವಿಂ ರಚಿಸಿದೆನು ||
ಹರಿಪುರಹರಕಂಜಜರುಂ ಸಿರಿಯುಂ | ಗಿರಿವರಸುತೆಯುಂ ವಾಗ್ಭಾರತಿ
ಯುಂ | ನೆರದಿವರೆಲ್ಲ ಪೊರೆಗೆನ್ನೀವಚನಕೃತಿಯನಾವಗಮುಂ ||

ವಾ॥ ಷ॥ ಈವಸುಧೆಯೊಳ್ಶಾಲಿವಾಹ ಶಕ ದೃಗ್ಗಣಾ |
ಶಾವಿಧೂದಿತಸಂಖ್ಯೆಯೆಸೆವ ಸೌಮ್ಯಾಬ್ದದೋಳ್ |
ಶ್ರೀವತ್ಸಗೋತ್ರ ಋಕ್ಶಾಖಿಯೆಂದೆನಿಪ ನಂಜುಂಡಶಾಸ್ತ್ರಿಯ
ಕೋವಿದಾರಾಧಕಂ ಚಂದ್ರಶೇಖರ ಶರ್ಮ | [ತನೂಜಂ ||
ನಾವಿಪುಲ ಭಾರತಮನೋದಿ ಸಂಗ್ರಹಿಸಿದೀ |
ಭೂವಿನುತ ಭೀಮಮಹಿಮಾದರ್ಶಮೆಂಬ ಕೃತಿಯಂ
[ಕೊಳ್ಗೆ ವಿಬುಧರೊಲಿದು ||

## By the Same Author.

1. ಆಂಗ್ಲೇಯ ಚರಿತ್ರಸಂಗ್ರಹ—History of England in Kanarese (2 ನೆಯ ಮುದ್ರಣ) ಸರ್ಕಾರದವರು ಅಪ್ಪರ್‌ಸೆಕೆಂಡರಿ ಪರೀಕ್ಷೆಗೆ ಗೊತ್ತುಮಾಡಿರುವರು, ... ... ...ಬೆಲೆ 0 12 0
2. ತತ್ವದರ್ಪಣ—ಆರ್ಯಮತಸಿದ್ಧಾಂತಗಳನ್ನೂ ಮತಸ್ಥಾಪಕರ ಚರಿತ್ರೆಯನ್ನೂ ಬೋಧಿಸುತ್ತದೆ, ಆಸ್ತಿಕರು ಅಗತ್ಯ ಓದಬೇಕಾದುದು ... 0 4 0
3. ಭೀಮಮಹಿಮಾದರ್ಶ ... ... ... 0 12 0
4. ಚಾಮರಾಜೇಂದ್ರ ರಾಜ್ಯವಿಲಾಸ (ಲೇಟ್ ಮಹಾರಾಜರವರ ಜೀವಿತಚರಿತ್ರೆ) 0 12 0
5. ಜಾರ್ಜ್ ಸಾರ್ವಭೌಮರ ಚರಿತ್ರೆ (Life of H. M. King George.) 0 10 0
6. ಭಾರತಮುಖ್ಯಪ್ರಶ್ನಮಂಜರಿ .. ... 0 6 0
7. ನಾಲ್ವಡಿ ಶ್ರೀಕೃಷ್ಣರಾಜ ವಂಶರತ್ನಾಕರವು ... .. [illegible]
8. 1 ಬಾಲ್ಯಾಭ್ಯಾಸ, 2 ಆಚಾರ, 3 ಕನ್ನಡವಚನ ಶಿವಕವಚ, 4 ಏಕಮತ್ಯವು, 5 ಕಾರ್ಯಸಾಧನೆಯು, 6 ಪತ್ರಿಕೆಯ ಪ್ರಯೋಜನವು—ಎಂಬ 6 ಪ್ರಬಂಧಗಳುಳ್ಳ ಪುಸ್ತಕವು .. ... ... 0 6 0

ನಮ್ಮ ವಿಳಾಸ :— ಎಂ. ವಿ. ಚಂದ್ರಶೇಖರಶಾಸ್ತ್ರಿ,
ನಂ. 491, ದೇವೀರಮ್ಮಣ್ಣಿ ಅಗ್ರಹಾರ

ಮೈಸೂರು ಹಳ್ಳದಕೇರಿಯಲ್ಲಿರುವ ಕೊಲೇಜಿಯೆಟ್ ಹೈಸ್ಕೂಲ್ ಪಂಡಿತರು ವೇ|| ಬ್ರ|| ಶ್ರೀ|| ಸೀತಾರಾಮಶಾಸ್ತ್ರಿಗಳವರಿಂದ ಪ್ರಕಟಿಸಲ್ಪಟ್ಟಿರುವ 3ನೆಯ ಮುದ್ರಣದ ಭಕ್ತವಿಜಯವು. ... ...